ಅಧ್ಯಕ್ಷರು : ಇಲ್ಲಿ ತೆಗೆದುಕೊಳ್ಳುವುದು ಒಳ್ಳೆಯ ಪದ್ಧತಿ ಅಲ್ಲ. ತಾವು ಇಲ್ಲಿ ಅನೌನ್ಸ್ ಮಾಡಿ, ನಂತರ ಅಲ್ಲಿ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ತಾವು ದಯವಿಟ್ಟು ಅಲ್ಲಿಗೆ ದಯಮಾಡಿಸಿ, ನಾನು ಕೊಡುತ್ತೇನೆ.

ಅಧ್ಯಕ್ಷರು : ನಾವು ಬರುತ್ತೇವೆ.

(ಈ ಹಂತದಲ್ಲಿ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

## ವಿತ್ತೀಯ ಕಾರ್ಯಕಲಾಪಗಳು

### 1999 2000ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಛೇರ್ಮನ್‌ರವರೇ, ಈಗಾಗಲೇ ನಾನು ಕೆಲವು ಬೇಡಿಕೆಗಳ ಮೇಲೆ ನನ್ನ ಮಾತುಗಳನ್ನು ಪ್ರಾರಂಭ ಮಾಡಿದ್ದೆ. ಕೇವಲ ಐದಾರು ನಿಮಿಷದಲ್ಲಿ ಹೇಳಿಬಿಟ್ಟು ಮುಗಿಸಿದ್ದೆ. ಇವತ್ತು ಪ್ರಾರಂಭ ಮಾಡಿ ಎಂದು ತಾವು ಅಪ್ಪಣೆ ಕೊಟ್ಟ ಮೇಲೆ ನಾನು ಪ್ರಾರಂಭ ಮಾಡುತ್ತಿದ್ದೇನೆ. ಇವತ್ತು ಸದನಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬರಬೇಕಾಗಿತ್ತು. ಏಕೆಂದರೆ ಅವರಿಗೆ ಸಂಬಂಧಪಟ್ಟ ಕೆಲವು ವಿಷಯಗಳು ಇಲ್ಲಿ ಇವೆ. ನೀರಾವರಿಗೆ ಸಂಬಂಧಪಟ್ಟ ಕೆಲವು ವಿಷಯಗಳಿವೆ, ಹಾಗೂ ಪೋಲೀಸರಿಗೆ ಸಂಬಂಧಪಟ್ಟ ಕೆಲವು ವಿಷಯಗಳಿವೆ. ಅವೆಲ್ಲವುಗಳನ್ನೂ ನಾವು ಇಲ್ಲಿ ಹೇಳಬೇಕಾದ ಸಂದರ್ಭದಲ್ಲಿ ಅವರು ಇಲ್ಲಿ ಇರದೇ ಇದ್ದರೆ ಏನು ಪ್ರಯೋಜನವೂ ಆಗುವುದಿಲ್ಲ. ಹೀಗೆ ಇದ್ದರೆ ನಾವು ಯಾರಿಗೆ ಹೇಳಬೇಕು, ಖಾಲಿ ಖುರ್ಚಿಗೆ ಹೇಳಲೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರಿಗೆ ಆರೋಗ್ಯ ಚೆನ್ನಾಗಿಲ್ಲದಿದ್ದರೆ ಕನಿಷ್ಟಪಕ್ಷ ಮಾನ್ಯ ಉಪಮುಖ್ಯಮಂತ್ರಿಯವರಾದರೂ ಇರಬೇಕಾಗಿತ್ತು. ಈಗ ಅವರು ಯಾರಿಗೆ ಹೇಳಬೇಕು?

ಶ್ರೀ ಎಂ.ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಕೌನ್ಸಿಲ್‌ನಲ್ಲಿದ್ದಾರೆ. ಎಲೆಕ್ಟ್ರಿಸಿಟಿ ಬಿಲ್ ಬಗ್ಗೆ ಚರ್ಚೆ ನಡೆದಿರುವುದರಿಂದ ಅಲ್ಲಿ ಇದ್ದಾರೆ. ಅದು ಮುಗಿದ ತಕ್ಷಣ ಇಲ್ಲಿಗೆ ಬರುತ್ತಾರೆ. ಮಾನ್ಯ ಉಪಮುಖ್ಯಮಂತ್ರಿಯವರೂ ಕೂಡ ಅಲ್ಲೇ ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಬ್ಬರೂ ಒಮ್ಮೆಯೇ ಉತ್ತರ ಕೊಡುತ್ತಾರೆಯೇ? ಯಾರಿಗೋ ಒಬ್ಬರಿಗೆ ಸಂಬಂಧ ಇರುತ್ತದೆ. ಎಲ್ಲರೂ ಅಲ್ಲಿದ್ದಾರೆ ಎಂದು ಹೇಳಿದರೆ ಹೇಗೆ? ಇವರು ಇನ್ನೂ 15 ದಿವಸವೋ ಅಥವಾ ಎಷ್ಟು ದಿವಸ ಇರುತ್ತಾರೋ ಗೊತ್ತಿಲ್ಲ. ನಾನು ಡಿಮ್ಯಾಂಡ್ ಮೇಲೆ ಮಾತನಾಡಿದರೆ, ಈ ಅವಧಿಯಲ್ಲಿ ಅದರ ಮೇಲೆ ಗಮನ ಕೊಡಬಹುದು ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ. ಎರಡನೆಯದಾಗಿ, ನಿಮಗೇ ಗೊತ್ತಿದೆ, ಐದು ವರ್ಷದಿಂದ ನಾವು ಎಷ್ಟೇ ಮಾತನಾಡಿದರೂ ಯಾವ ಪ್ರಯೋಜನ ಕೂಡ ಆಗಿಲ್ಲ. ಮೂರನೆಯದು, ನಾವು ಎಷ್ಟೇ ಸಲಹೆ, ಸಹಕಾರ ಕೊಟ್ಟರೂ ಈ

ಸರ್ಕಾರ ತಿದ್ದುಕೊಳ್ಳುವುದೂ ಇಲ್ಲ, ತನ್ನ ಮಾತಿನ ಪ್ರಕಾರ ನಡೆದುಕೊಳ್ಳುವುದೂ ಇಲ್ಲ. ಆದ್ದರಿಂದ ರಾಜ್ಯದ ಜನತೆಯ ಗಮನಕ್ಕೆ ತರಬೇಕು ಎಂದು ನಾನು ಮಾತನಾಡುತ್ತಿದ್ದೇನೆಯೇ ಹೊರತಾಗಿ ಇವರನ್ನು ನಂಬಿಕೊಂಡು ಅಥವಾ ಇದರಿಂದ ಇದರಲ್ಲಿ ಏನಾದರೂ ಸುಧಾರಣೆಯಾಗುತ್ತದೆ ಎಂದು ನಾನು ಭಾವಿಸಿಲ್ಲ. ಉಳಿದ ಮಾನ್ಯ ಮಂತ್ರಿಗಳಾದರೂ ಕೂಡ ಇದನ್ನು ಕೇಳಿ ಇದಕ್ಕೆ ಸ್ಪಂದಿಸಿದರೆ ಒಳ್ಳೆಯದಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರೂ ಇಲ್ಲ, ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲ, ಮಾನ್ಯ ಗೃಹ ಸಚಿವರೂ ಇಲ್ಲ, ಮಾನ್ಯ ನೀರಾವರಿ ಸಚಿವರೂ ಇಲ್ಲ ಎಂದರೆ ನಾನು ಮಾತನಾಡುವುದು ಹೇಗೆ? ನಾನು ಮುಖ್ಯವಾದ ವಿಷಯಗಳ ಬಗ್ಗೆ ಇಲ್ಲಿ ಮತನಾಡುತ್ತೇನೆ. ಉಳಿದ ಎಲ್ಲಾ ವಿಷಯಗಳ ಮೇಲೆ ಅನೇಕ ಜನ ಮಾತನಾಡಿದ್ದಾರೆ. ಈ ರೂರಲ್ ಡೆವೆಲಪ್‌ಮೆಂಟ್ ಮೇಲೆ ಮಾತನಾಡಿದ್ದಾರೆ, ರೆವಿನ್ಯೂ ಮೇಲೆ ಮಾತನಾಡಿದ್ದಾರೆ, ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಮೇಲೆ ಮಾತನಾಡಿದ್ದಾರೆ, ಯೂತ್ ಸರ್ವೀಸಸ್ ಮೇಲೆ ಮಾತನಾಡಿದ್ದಾರೆ. ಹೋಂ, ಇರಿಗೇಷನ್ ಇಂಥ ಕೆಲವು ಪ್ರಮುಖವಾದಂಥ ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದು ನಿಂತಿದ್ದೇನೆ. ಇಂತಹ ಸಂದರ್ಭದಲ್ಲಿ ಅವರೆಲ್ಲರೂ ಈ ಸದನದಲ್ಲಿ ಇಲ್ಲದಿರುವುದು ನನಗೆ ಸರಿ ಕಾಣಿಸುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ಇರಲೇಬೇಕು, ಇದು ಈ ಸದನದ ಸಂಪ್ರದಾಯ. ಮಾನ್ಯ ಮುಖ್ಯಮಂತ್ರಿಯವರಿಗೆ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಮಾನ್ಯ ಉಪ ಮುಖ್ಯಮಂತ್ರಿಯವರಾದರೂ ಇಲ್ಲಿ ಇರಬೇಕು.

ಶ್ರೀ ಎಂ.ಎಸ್. ಪಾಟೀಲ್ : ಆಗಲೇ ಹೇಳಿದೆನಲ್ಲಾ, ಅವರು ಕೌನ್ಸಿಲ್‌ನಲ್ಲಿದ್ದಾರೆಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಕೌನ್ಸಿಲ್‌ನಲ್ಲಿದ್ದಾರೆಂದು ಹೇಳಿದಿರಿ. ಮಾನ್ಯ ಉಪ ಮುಖ್ಯಮಂತ್ರಿಯವರು ಮತ್ತು ಇತರ ಜೂನಿಯರ್ ಮಂತ್ರಿಗಳು ಎಲ್ಲಿದ್ದಾರೆ? ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಮಾತನಾಡುತ್ತಿದ್ದರೆ ಅದಕ್ಕೆ ಲೆಕ್ಕವಿಲ್ಲವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಬೇರೆ ಯಾರಾದರೂ ಉತ್ತರ ಕೊಡಬಹುದು. ಅದು ಇಲ್ಲವೆಂದು, ಸಂಬಂಧಪಟ್ಟ ಬೇರೆ ಮಂತ್ರಿಗಳಾದರೂ ಇರಬೇಕಲ್ಲಾ.

ಛೇರ್ಮನ್ : ಈಗ ತಾನೇ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಈ ವಿಚಾರವನ್ನು ನಾವು ಸದನ ಪ್ರಾರಂಭವಾದಾಗಿಲಿಂದ ಪ್ರಸ್ತಾಪ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಲ್ಲ, ಮಂತ್ರಿಗಳಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಅವರು ಅದನ್ನು ಅರ್ಥಮಾಡಿಕೊಳ್ಳಲಿಲ್ಲ. ಎರಡನೆಯದಾಗಿ ತಾವು, ಅವರು ಕೇಳದಿದ್ದರೂ ಚಿಂತೆ ಇಲ್ಲ, ಜನತೆಯ ಗಮನಕ್ಕೆ ಹೋಗಲಿ ಎಂದಾದರೂ ಮಾತನಾಡಬೇಕು ಎಂದು ಹೇಳಿದಿರಿ. ಆ ದೃಷ್ಟಿಯಿಂದ ತಾವು ಮಾತನಾಡಿ. ತಾವೇ ಹೇಳಿದ ಹಾಗೆ, ಅದು ಜನರ ಗಮನಕ್ಕಾದರೂ ಹೋಗಲಿ, ತಾವು ಪ್ರಸ್ತಾಪ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳಿಲ್ಲ, ಬೇರೆ ಮಂತ್ರಿಗಳಿಲ್ಲ ಎಂದರೆ ಈ ರಾಜ್ಯದ ಆರಂಭ ನಡೆಯುವುದು ಹೇಗೆ?

ಛೇರ್ಮನ್ : ಯಾರೂ ಎಲ್ಲೂ ಹೋಗಿಲ್ಲ. ಎಲ್ಲರೂ ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ನಿನ್ನೆ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಅವರು ಇದ್ದರು, ಇಲ್ಲ ಎಂದು ಹೇಳಲಿಲ್ಲ. ಆದರೆ ಇವತ್ತು ನಾನು ಮಾತನಾಡುತ್ತೇನೆ ಎಂದು ಗೊತ್ತಿದ್ದರೂ ಕೂಡ .........

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ ಇಲಾಖೆಗಳ ಮುಖ್ಯಸ್ಥರು ಯಾರೂ ಬಂದಿಲ್ಲ, ಅಫಿಷಿಯಲ್ ಗ್ಯಾಲರಿಯಲ್ಲಿ, ನೋಟ್ ಮಾಡಿಕೊಳ್ಳುವವರು ಯಾರು? ಉತ್ತರ ಕೊಡುವವರು ಯಾರು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಂಬಂಧಪಟ್ಟ ಮಂತ್ರಿಗಳನ್ನಾದರೂ ಕರೆಸಬೇಕಲ್ಲಾ ಅಥವಾ ಆ ಇಲಾಖೆಗೆ ಸಂಬಂಧಪಟ್ಟಂಥ ಸೆಕ್ರೆಟರಿಗಳು ಇರಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ರಾಜನೂ ಇಲ್ಲ, ಮಂತ್ರಿಯೂ ಇಲ್ಲ, ಒಂದು ಕತ್ತಿ ಇಟ್ಟುಕೊಂಡು ಆಡಳಿತ ಮಾಡಿದ ಹಾಗೆ ಆಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಪ್ರಸ್ತಾಪ ಮಾಡಲಿ, ನಾನು ಬರೆದುಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇರಬೇಕು ಎಂದು ಒಂದು ಸತ್‌ಸಂಪ್ರದಾಯವಿದೆ ಮಾನ್ಯ ಬಚ್ಚೇಗೌಡರೇ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಸದನದಲ್ಲಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದರು, ಅವರು ಬರುತ್ತಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ನೀರಾವರಿ, ಹೋಮ್ ಮುಂತಾದ ಇಲಾಖೆಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳಾದರೂ ನೋಟ್ ಮಾಡಿಕೊಳ್ಳಲು ಇರಬೇಕಲ್ಲಾ, ಇಲ್ಲಿ ಬಂದಿರುವುದು ಮಾನ್ಯ ಮುಖ್ಯಮಂತ್ರಿಗಳೊಬ್ಬರ ಪ್ರಶ್ನೆ ಅಲ್ಲ. ಇಲಾಖಾ ಮುಖ್ಯಸ್ಥರು, ಅಧಿಕಾರಿಗಳಾದರೂ ಇರಬೇಕಲ್ಲಾ.

ಶ್ರೀ ಬಿ.ಎ. ಮೊಯಿದ್ದೀನ್ : ಹೋಂ ಡಿಪಾರ್ಟ್‌ಮೆಂಟಿನವರೂ ಅಲ್ಲೇ ಇದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಒಂದು ಕೆಲಸ ಮಾಡಿ, ಅವರು ಬರುವವರೆಗೆ ಸದನವನ್ನು ಮುಂದೂಡಿ. ಪ್ರತಿ ದಿವಸ ಪರಿಸ್ಥಿತಿ ಇದೇ ಸಮಸ್ಯೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಅತಿಯಾಯಿತು. ಈ ರೀತಿ ಅವರು ನಡೆದುಕೊಳ್ಳಬಾರದು. ಅದಕ್ಕಾಗಿಯೇ ನಾನು, ಈ ಸದನವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದು ಬೇಡ, ಇಂದೇ ಕ್ಲೋಸ್ ಮಾಡಿ, ಬೇಡಿಕೆಗಳನ್ನು ಮತಕ್ಕೆ ಹಾಕಿ ಎಂದು ಕೇಳಿಕೊಂಡೆ. ಆದರೆ ಸುಮ್ಮನೆ ಮತ್ತೆ ಸೋಮವಾರ ಮತ್ತು ಮಂಗಳವಾರ ಇಟ್ಟುಕೊಂಡಿದ್ದೀರಿ.

ಶ್ರೀ ಬಿ.ಎ. ಮೊಯಿದ್ದೀನ್ : ಏಕಕಾಲದಲ್ಲಿ ಎರಡೂ ಮನೆಗಳು ನಡೆಯುತ್ತಿರುವುದರಿಂದ, ಕೆಲವು ಪ್ರಮುಖವಾದ ವಿಚಾರಗಳು ಇರುವುದರಿಂದ ಅವರು ಅಲ್ಲಿ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಪ್ರಮುಖವಲ್ಲವೇ? Primarily you are responsible here. This House is supreme. I am not saying that the other House is not important. But this House has got direct responsibility.

Sri. B.A. MOHIDEEN : I know that. Not that we are not aware of it. We are fully aware of it. But the Chief Minister, ಅವರಿಗೆ ಸಂಬಂಧಪಟ್ಟ ಬಿಲ್ ಅಲ್ಲಿ ಇರುವುದರಿಂದ, ಅದನ್ನು ಅವರೇ ಪೈಲಟ್ ಮಾಡಿರುವುದರಿಂದ ಅರು ಮೇಲ್ಮನೆಯಲ್ಲಿದ್ದಾರೆ. ಬೇರೆ ಮಂತ್ರಿಗಳನ್ನು ಕೂಡಲೇ ಕರೆಸುತ್ತೇವೆ.

(ಈ ಹಂತದಲ್ಲಿ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ, ಜನತಾದಳದ ಅನೇಕ ಮುಖಂಡರು ಒಟ್ಟಾಗಿ ಈ ರಾಜ್ಯದಲ್ಲಿ ತಿರುಗಿ, ಕೃಷ್ಣಾ, ಕಾವೇರಿ ಮೇಲೆ ಆಣೆ ಇಟ್ಟುಕೊಂಡು, ನಮ್ಮ ಸಾಧನೆಗಳಿಗೆ ನಿಮ್ಮ ಮನ್ನಣೆ ಕೊಡಿ ಮತ್ತು 'ಕರ್ನಾಟಕದ ನವ ನಿರ್ಮಾಣ, ನಮ್ಮ ಸಾಧನೆಗಳೇ ಪ್ರಮಾಣ' ಎಂದು ಹೇಳಿಕೊಂಡು ಬಂದರು. 'ಸ್ವಾಭಿಮಾನಿ, ಸಮೃದ್ಧ ಕರ್ನಾಟಕಕ್ಕಾಗಿ ನಮಗೆ ಓಟು ಕೊಡಿ' ಎಂದು ಕೇಳಿಕೊಂಡರು, 'ಕಾಲಬದ್ಧ ನೀರಾವರಿ ಯೋಜನೆಗಳಿಗಾಗಿ ನಮಗೆ ಮತ ನೀಡಿ' ಎಂದು ಜನರನ್ನು ಕೇಳಿಕೊಂಡರು. 'ನೈಜ ಗ್ರಾಮರಾಜ್ಯ ಸ್ಥಾಪನೆಗಾಗಿ ನಮಗೆ ಮತ ಕೊಡಿ' ಎಂದು ಕೇಳಿಕೊಂಡರು. ಈ ರಾಜ್ಯದ ರೈತರಿಗೆ ಸುಲಭ ಬಡ್ಡಿ ದರದಲ್ಲಿ ಸಾಲ ನೀಡಲಿಕ್ಕಾಗಿ ನಮಗೆ ಮತ ನೀಡಿ ಎಂದು ನೀವು ಕೇಳಿಕೊಂಡಿರಿ. ಕನ್ನಡದ ನೆಲ, ಜಲ, ಭಾಷೆ, ಸೊಗಡು-ಸೋಗುಗಳು, ಸಂಸ್ಕೃತಿಗಳ ಸಂಪೂರ್ಣ ಸಂರಕ್ಷಣೆಗಾಗಿ ನಮಗೆ ಮತ ಕೊಡಿ ಎಂದು ನೀವು ಕೇಳಿಕೊಂಡಿರಿ. ಸಾಮಾಜಿಕ ನ್ಯಾಯ ಸಾಧನೆಗಾಗಿ, ಕರ್ನಾಟಕದ ಆಡಳಿತ ಕರ್ನಾಟಕದಿಂದಲೇ ನಡೆಯುವುದಕ್ಕಾಗಿ, ಸರ್ವಧರ್ಮಗಳ ಸಮಾನ ಗೌರವಕ್ಕಾಗಿ, ನಿರುದ್ಯೋಗ ನಿವಾರಣೆ ದಿಕ್ಕಿನಲ್ಲಿ ಉದ್ಯೋಗನಿಧಿ ಸ್ಥಾಪನೆಗಾಗಿ, ಮಹಿಳೆಯರ ಸಮಗ್ರ ಕಲ್ಯಾಣದ 'ಮನೆ ಬೆಳಕು' ಕಾರ್ಯಕ್ರಮಕ್ಕಾಗಿ, 'ಗಂಗಾ ಕಲ್ಯಾಣ' 'ಅಂತ್ಯೋದಯ','ಹಳ್ಳಿ ಹೆದ್ದಾರಿ' 'ಸೇತು-ಬಂಧನ', 'ಹಸಿರು ಕಾರ್ಡು' ಮೊದಲಾದ ಹಿಂದಿನ ಜನತಾ ಸರ್ಕಾರದ ಕಾರ್ಯಕ್ರಮಗಳ ಪುನಶ್ಚೇತನಕ್ಕಾಗಿ ಜನನಿಷ್ಠ, ಜವಾಬ್ದಾರಿ ಸರ್ಕಾರಕ್ಕಾಗಿ ನಿಮ್ಮ ಮತ ಕೊಡಿ ಎಂದು ನೀವು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ

ಕೇಳಿಕೊಂಡಿದ್ದಿರಿ. ಈ ಚುನಾವಣಾ ಪ್ರಣಾಳಿಕೆಯನ್ನು ನೀವು ಜನರ ಮುಂದಿಟ್ಟು ಐದು ವರ್ಷದಲ್ಲಿ ನಾವು ಈ ಮಾತುಗಳನ್ನು ನಮ್ಮ ಆಡಳಿತದಲ್ಲಿ ಅಳವಡಿಸಿಕೊಂಡು ಜನರ ಕಲ್ಯಾಣವನ್ನು ಮಾಡುತ್ತೇವೆ ಎಂದು ಹೇಳಿ ಜನರ ಮುಂದೆ, ಈ ರಾಜ್ಯದ ಐದು ಕೋಟಿ ಜನತೆಯ ಮುಂದೆ, ಮೂರು ಕೋಟಿ ಏಳು ಲಕ್ಷ ಮತದಾರರ ಮುಂದೆ ಈ ಆಣೆಯನ್ನು, ಪ್ರಮಾಣವನ್ನು ತೆಗೆದುಕೊಂಡು ನೀವು ಅಧಿಕಾರಕ್ಕೆ ಬಂದಿರಿ. ನೀವು ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದಿರಿ? ಅಧಿಕಾರಾವಧಿ ಪ್ರಾರಂಭದಲ್ಲೇ ನೀವು ಒಬ್ಬರಿಗೊಬ್ಬರು ಚಿವುಟುವುದಕ್ಕೆ ಪ್ರಾರಂಭ ಮಾಡಿದಿರಿ. ಇನ್ನೂ ಅಧಿಕಾರ ವಹಿಸಿಕೊಳ್ಳುವ ಮುಂಚೆಯೇ ಈ ರಾಜ್ಯದ ಮುಖ್ಯಮಂತ್ರಿಗಳು ಯಾರಾಗಬೇಕು ಎಂಬ ವಿಷಯಕ್ಕಾಗಿ ಹೊಡೆದಾಟವಾಯಿತು. ಅದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಪತ್ರಿಕೆಗಳಲ್ಲೂ ಕೂಡ ಅದು ವರದಿಯಾಗಿದೆ. ಈ ವಿಚಾರವಂತೂ ಸದನದ ಎಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿದೆ. ಯಾವ ರೀತಿಯಾಗಿ ಮುಖ್ಯಮಂತ್ರಿಗಳ ಆಯ್ಕೆ ಆಯಿತು? ಯಾವ ರೀತಿಯಲ್ಲಿ ಇದಕ್ಕಾಗಿ ಜಟಾಪಟಿ ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ನಮ್ಮನ್ನು ಬೈದು ಬೈದೂ ನೀವು ಅಧಿಕಾರಕ್ಕೆ ಬಂದಿರಿ. ನಮ್ಮ ಫೋಟೋಗಳನ್ನು ಇಟ್ಟುಕೊಂಡು ನೀವು ಅಧಿಕಾರಕ್ಕೆ ಬಂದಿರಾ? ನಮ್ಮ ಫೋಟೋಗಳನ್ನು ಇಟ್ಟುಕೊಂಡು, ನಮ್ಮನ್ನು ಆದರ್ಶವಾದಿಗಳು ಎಂದು ತಿಳಿದುಕೊಂಡು ನೀವು ಅಧಿಕಾರಕ್ಕೆ ಬಂದಿರಾ? ಇಲ್ಲ. ನಮ್ಮನ್ನು ನೀವು ಕೆಟ್ಟದಾಗಿ ಬೈದು, ನಮ್ಮನ್ನು ಹೀಯಾಳಿಸಿ, ನಮ್ಮ ಆಡಳಿತ ಸರಿಯಿಲ್ಲವೆಂದು ಹೇಳಿ, ನಮ್ಮಲ್ಲಿ ಲೋಪದೋಷಗಳಿವೆ ಎಂದು ಹೇಳಿಕೊಂಡು, ನೀವು ಊರೂರು ಎಲ್ಲಾ ತಿರುಗಾಡಿ ಅಪಪ್ರಚಾರ ಮಾಡಿ ಅಧಿಕಾರಕ್ಕೆ ಬಂದಿರಿ. ಹಗರಣ ಮುಕ್ತ ಸರ್ಕಾರವನ್ನು ನಾವು ಕೊಡುತ್ತೇವೆ ಎಂದು ಭರವಸೆ ನೀಡಿ ನೀವು ಅಧಿಕಾರಕ್ಕೆ ಬಂದಿರಿ. ನಾವೇನೋ ಬಹಳ ಹಗರಣಗಳನ್ನು ಮಾಡಿದ್ದೇವೆ ಎಂದು ಅಪಪ್ರಚಾರ ಮಾಡಿ ನಮ್ಮನ್ನು ಶೂಲೆಗೇರಿಸಿ ನಮ್ಮ ಎಲ್ಲಾ ಹಗರಣಗಳನ್ನು ಬಯಲಿಗಿಟ್ಟು ನೀವು ಅಧಿಕಾರಕ್ಕೆ ಬಂದಿರಿ. ನೀವು ಅಧಿಕಾರಕ್ಕೆ ಬಂದ ಮೇಲೆ ಮಾಡಿದ್ದೇನು? ಪ್ರಾರಂಭದಲ್ಲೇ ಜಗಳ ಆರಂಭಿಸಿದಿರಿ. ಜಗಳದಲ್ಲಿ ಅನೇಕರ ಷರ್ಟುಗಳು ಹರಿದವು, ಕೆಲವು ಜನ ಬಾತ್‌ರೂಮಿನಲ್ಲಿ ಅಡಗಿಕೊಂಡರು, ಹೊಡೆದಾಟಗಳು ನಡೆದವು. ಈ ಜಗಳ ಮಧ್ಯದಲ್ಲಿ ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿಯಾಗಿ ಆಯ್ಕೆ ಆಗಿ ಅವರು ಅಧಿಕಾರ ವಹಿಸಿಕೊಂಡರು. ಕೃಷ್ಣಾ - ಕಾವೇರಿಯ ಮೇಲಾಣೆ, ನಮ್ಮ ಸಾಧನೆಗಳಿಗೆ ನಿಮ್ಮ ಮನ್ನಣೆ ಎಂಬ ಘೋಷಣೆಯೊಂದಿಗೆ ನೀವು ಅಧಿಕಾರಕ್ಕೆ ಬಂದಿರಿ. ಏನು ನಿಮ್ಮ ಸಾಧನೆ? ಕೃಷ್ಣಾ ನದಿಯ ನಮ್ಮ ಪಾಲಿನ ನೀರನ್ನು ಎರಡು ಸಾವಿರ ಇಸವಿಯೊಳಗಾಗಿ ಬಳಸಿಕೊಳ್ಳುತ್ತೇವೆ ಎಂದು ನೀವು ಭರವಸೆ ಕೊಟ್ಟಿದ್ದಿರಿ. ಈಗ ಏನಾಯಿತು? ಆಲಮಟ್ಟಿ ಡ್ಯಾಮ್ ಅನ್ನು 524 ಮೀಟರ್‌ಗೆ ಎತ್ತರಿಸತಕ್ಕಂಥದ್ದು, 173 ಟಿಎಂಸಿ ನೀರು ಅದರಲ್ಲಿ ಸಂಗ್ರಹಣೆ ಮಾಡತಕ್ಕಂಥದ್ದು, ಮತ್ತು ಕೃಷ್ಣಾ ನದಿ ಬೇಸಿನ್‌ನಲ್ಲಿ ಇರತಕ್ಕಂಥ ಎಲ್ಲಾ ಅಪ್ರೂವ್ಡ್ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡತಕ್ಕ ಕೆಲಸಗಳನ್ನು ನೀವು ಭರವಸೆ ನೀಡಿದಂತೆ ಕಾರ್ಯಗತಗೊಳಿಸಲಿಲ್ಲ. ಗೇಟ್ ಹಾಕುವುದಕ್ಕಿಂತ ಮುಂಚೆಯೇ ನಾವು ಗೇಟು ಹಾಕಿದ್ದೇವೆ ಎಂದು ನೀವು ಹೇಳಿಕೊಂಡಿರಿ. 26 ಗೇಟ್‌ಗಳಲ್ಲಿ 7 ಗೇಟ್‌ಗಳನ್ನು ಈಗಾಗಲೇ ನಾವು ಫಿಕ್ಸ್ ಮಾಡಿದ್ದೇವೆ ಎಂದು ಹೇಳಿ ದೊಡ್ಡದಾಗಿ ಮಾನ್ಯ ನೀರಾವರಿ ಸಚಿವರು ಸ್ಟೇಟ್‌ಮೆಂಟ್ ಕೊಟ್ಟ ತಕ್ಷಣ ಆ ಬಗ್ಗೆ ಆಂಧ್ರಪ್ರದೇಶದವರು ಸುಪ್ರೀಂಕೋರ್ಟಿಗೆ ಹೋಗಿ ಸ್ಟೇ ತಂದರು. ಇವತ್ತಿಗೂ ಅದು ಹಾಗೇ ಇದೆ.

ಕೃಷ್ಣಾ ಜಲ ಭಾಗ ನಿಗಮದ ಹೆಸರಿನಲ್ಲಿ ಶೇಕಡ 21ರಷ್ಟು ಬಡ್ಡಿ ನೀಡುತ್ತೇವೆ ಎಂದು ಹೇಳಿ ಕೋಟ್ಯಾಂತರ ರೂ.ಗಳನ್ನು ನೀವು ಸಂಗ್ರಹಣೆ ಮಾಡಿದಿರಿ. ಆ ಹಣವನ್ನು ನೀವು ಯಾವ ರೀತಿಯಾಗಿ ಖರ್ಚು ಮಾಡಿದಿರಿ? ಆ ಪ್ರಶ್ನೆಗೆ ನಾನು ಉತ್ತರಿಸುವುದಿಲ್ಲ. ಆ ಪ್ರಶ್ನೆಗೆ ಸಿಎಜಿ ರಿಪೋರ್ಟ್ ಉತ್ತರಿಸಿದೆ. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್‌ರವರ ರಿಪೋರ್ಟ್‌ನಲ್ಲಿ 753 ಕೋಟಿ ರೂ.ಗಳಲ್ಲಿ 73 ಕೋಟಿ ರೂ.ಗಳನ್ನು ನೀವು ಎಕ್ಸೆಸ್ ಪೇಮೆಂಟ್ ಮಾಡಿದ್ದೀರಿ, ಅನೇಕ ಕಡೆ ಅವ್ಯವಹಾರವಾಗಿದೆ ಎಂದು ಹೇಳಲಾಗಿದೆ. ನಾವು ಪ್ರತಿ ಬಾರಿ ಆರೋಪ ಮಾಡಿದಾಗಲೂ ನೀವು ಸಾಕ್ಷಿ ಕೇಳುತ್ತಿದ್ದಿರಿ. ಇದಕ್ಕಿಂತಲೂ ದೊಡ್ಡ ಸಾಕ್ಷಿ ನಿಮಗೆ ಬೇರೆ ಯಾವುದು ಬೇಕು? ಈ ಸಿಎಜಿ ರಿಪೋರ್ಟ್ ಸರ್ಕಾರದ ಸಾಧನೆ ಅಳತೆಗೋಲು ಮಾಡತಕ್ಕ ಒಂದು ಪುಸ್ತಕವಾಗಿದೆ. ಹಿಂದೆ 1981ರಲ್ಲಿ 20 ಕೋಟಿ ರೂ.ಗಳ ಸಿಮೆಂಟ್ ಹಗರಣದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ರಿಪೋರ್ಟ್ ಕೊಟ್ಟಿತ್ತು. ಈ ಹೌಸ್‌ನಲ್ಲಿ ಅದು ಚರ್ಚೆಗೆ ಬಂದಾಗ ಆ ರಿಪೋರ್ಟ್ ರಿಜೆಕ್ಟ್ ಆಗಿತ್ತು, ಆಗೆಲ್ಲಾ ಅದರ ಮೇಲೆ ಅನೇಕ ಕಾಮೆಂಟ್ಸ್ ಆದವು, ಎಲ್ಲಾ ಕಡೆ ಭಾಷಣಗಳಲ್ಲಿ ಅದರ ಬಗ್ಗೆಯೂ ಹೇಳಲಾಗುತ್ತಿತ್ತು. ಆದರೆ ಇಲ್ಲಿ 100 ಕೋಟಿ ರೂ.ಗಳ ಹಗರಣ ಬೆಳಕಿಗೆ ಬಂದರೂ ಕೂಡ ನಿಮಗೆ ಸ್ವಲ್ಪವೂ ಕೂಡ ಅದರ ಬಗ್ಗೆ ಕಾಳಜಿ ಇಲ್ಲ. ಇದರಿಂದ ನಮಗೆ ನಾಚಿಕೆಯಾಗುತ್ತಿದೆಯೇ ಹೊರತಾಗಿ ನಿಮಗಂತೂ ಏನೂ ಅನಿಸುತ್ತಲೇ ಇಲ್ಲ. ಇಷ್ಟಿದ್ದರೂ ನಮಗೆ ಪದೇ ಪದೇ ನಿಮ್ಮ ಆರೋಪದ ಬಗ್ಗೆ ಎಲ್ಲಿ ಪ್ರೂಫ್ ಇದೆ ಎಂದು ಕೇಳುತ್ತೀರಿ? ಈ ಸಿಎಜಿ ರಿಪೋರ್ಟ್ ಆಧಾರದ ಮೇಲೆ ಹಗರಣವನ್ನು ಸಿಬಿಐ ಗೆ ತನಿಖೆಗಾಗಿ ವಹಿಸಿಕೊಡಲು ನಿಮಗೇನು ತೊಂದರೆ ಇದೆ? ಯಾವ ರೀತಿಯಾಗಿ ಹಣದ ದುರುಪಯೋಗವಾಗಿದೆ ಎಂದು ನಾನೇನೂ ಹೇಳಿಲ್ಲ, ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇಷ್ಟೊಂದು ಅಥೆಂಟಿಕ್ ಆದ ಡಾಕ್ಯುಮೆಂಟ್ಸ್ ಇದ್ದರೂ ಕೂಡ ನೀವೇಕೆ ಇದನ್ನು ಸಿಬಿಐ ತನಿಖೆಗೆ ವಹಿಸುತ್ತಿಲ್ಲ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ನೀವು ಕೃಷ್ಣಾ ಕಾವೇರಿಯರ ಮೇಲೆ ಆಣೆ ಇಟ್ಟು, ನಾವು ಜವಾಬ್ದಾರಿಯುತವಾದ ಜನರಿದ್ದೇವೆ, ನಾವು ಸಾಕಷ್ಟು ಆಸಕ್ತಿ ವಹಿಸಿ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದೀರಿ. ನೀವು ಏನು ಕೆಲಸ ಮಾಡಿದಿರಿ? ನೀವು ಕೇವಲ ಮಾತನಾಡಿದ್ದೇ ಆಡಿದ್ದು, ಕೆಲಸವನ್ನಂತೂ ಮಾಡಲಿಲ್ಲ. ಕೃತಿಯಲ್ಲಿ ನಿಮ್ಮ ಸಾಧನೆ ಕಾಣಲಿಲ್ಲ. ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಏನು ಎಂದು ನಾನು ಇವತ್ತು ನಿಮ್ಮನ್ನು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದೆರಡು ವಿಷಯಗಳನ್ನು ತರಬಯಸುತ್ತೇನೆ. ನಾನು ಈಗ ಉಲ್ಲೇಖಿಸುತ್ತಿರುವುದು, 'ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿ ವರದಿ - ಜೂನ್ 99'. ಇದು ಲೇಟೆಸ್ಟ್ ಮಾಹಿತಿ ಒಳಗೊಂಡಿದೆ. ಇದನ್ನು ನಾನು ತಯಾರು ಮಾಡಿದ್ದಲ್ಲ. ಡೈರೆಕ್ಟರ್ (ತಾಂತ್ರಿಕ), ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ ಇವರು ಈ ವರದಿಯನ್ನು ತಯಾರಿಸಿದ್ದಾರೆ. ಈ ವರದಿಯಲ್ಲಿ ಈ ರೀತಿ ಹೇಳಲಾಗಿದೆ.

'ಗೇಟುಗಳನ್ನು ಕೂಡಿಸುವುದು - 26 ಸಂಖ್ಯೆ - ಪ್ರಗತಿ ಸಾಧಿಸಿದ್ದು ಏನೆಂದರೆ, ಗೇಟುಗಳನ್ನು ಕೂಡಿಸುವ ಕಾರ್ಯ ಪ್ರಗತಿಯಲ್ಲಿದೆ, ಸ್ಕಿನ್ ಪ್ಲೇಟ್ ಹೊರತುಪಡಿಸಿ'. ಈ ಸ್ಕಿನ್ ಪ್ಲೇಟ್ ಹಾಕದಿದ್ದಲ್ಲಿ ನೀರೇ ನಿಲ್ಲುವುದಿಲ್ಲ. 'ಸ್ಕಿನ್ ಪ್ಲೇಟ್ ಹೊರತುಪಡಿಸಿ' ಉಳಿದ ಕೆಲಸ ನಡೆಯುತ್ತಿದೆ ಎಂದರೆ ಅದರ ಅರ್ಥ 'ನೀರು ಹಾಗೆಯೇ ಹೋಗುತ್ತಾ ಇರಬೇಕು' ಆದರೆ ಸರ್ಕಾರ ಕೆಲಸ ಪ್ರಗತಿಯಲ್ಲಿದೆ ಎಂದು

ಹೇಳುತ್ತಿದೆ. ನಿಮ್ಮ ರಿಪೋರ್ಟ್‌ನಲ್ಲಿ ಇರುವುದನ್ನೇ ನಾನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಜೇವರ್ಗಿ ಶಾಖಾ ಕಾಲುವೆಯನ್ನು 85 ಕಿ.ಮೀ. ಉದ್ದದಷ್ಟು ನೀವು ತೋಡಬೇಕಾಗಿತ್ತು. ಆದರೆ ನಿಮ್ಮ ಪ್ರಗತಿ ಏನೆಂದರೆ, ಇಲ್ಲಿಯವರೆಗೆ 71 ಕಿ.ಮೀ. ವರೆಗೆ ಮಾತ್ರ ನೀವು ಟ್ಯಾಕಲ್ ಮಾಡಿದ್ದೀರಿ, ಉಳಿದ ಕಾಮಗಾರಿಗಳಿಗೆ ನೀವು ಇನ್ನೂ ಕೆಲಸವನ್ನೇ ವಹಿಸಿಕೊಟ್ಟಿಲ್ಲ. 71 ಕಿ.ಮೀ. ನಿಂದ 86 ಕಿ.ಮೀ. ವರೆಗಿನ ಕಾಮಗಾರಿಗಳನ್ನು 'ಇನ್ನೂ ವಹಿಸಿಕೊಡಲಾಗುವುದು' ಎಂದು ವರದಿಯಲ್ಲಿ ಹೇಳಲಾಗಿದೆ. ಇದು ನಿಮ್ಮ ಸಾಧನೆಯೇ? 57,100 ಹೆಕ್ಟೇರ್‌ಗಳಷ್ಟು ಭೂಮಿಗೆ ನೀವು ನೀರಾವರಿ ಸೌಕರ್ಯ ಒದಗಿಸಬೇಕಾಗಿತ್ತು. ಆದರೆ ನೀವು ಕೇವಲ 1,823 ಹೆಕ್ಟೇರ್‌ಗಳಿಗೆ ಮಾತ್ರ ನೀವು ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿದ್ದೀರಿ. ಇದು ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಆಗಿದೆ. ವಿತರಣಾ ಕಾಲುವೆ ಒಟ್ಟು ಸಂಖ್ಯೆ 18 ಇದೆ. ಇದರಲ್ಲಿ 1-4ರವರೆಗಿನ ನಾಲೆಗಳ ಕೆಲಸಗಳು ಮುಗಿದಿವೆ. 5-12ರವರೆಗಿನ ನಾಲೆಗಳ ಕೆಲಸಗಳು ಪ್ರಗತಿಯಲ್ಲಿದ್ದು, ವಿತರಣಾ ನಾಲೆ - 12ರ ಕೆಲಸವನ್ನು ವಹಿಸಿಕೊಡಲಾಗುವುದು ಎಂದು ವರದಿಯಲ್ಲಿ ಹೇಳಲಾಗಿದೆ. ಅಂದರೆ ನೀವು ಇನ್ನೂ ಕೆಲಸ ವಹಿಸಿಕೊಡುವುದರಲ್ಲೇ ಇದ್ದೀರಿ. 1999ನೇ ಇಸವಿ ಇನ್ನೇನು ಮುಗಿಯುತ್ತಾ ಬಂದಿದೆ, ಮಾನ್ಯ ನಾಗೇಗೌಡರು ಈಗತಾನೇ ಸದನಕ್ಕೆ ಆಗಮಿಸಿದ್ದಾರೆ. ನಾನು ಈ ಹಿಂದೆ ಸ್ಕಿನ್ ಪ್ಲೇಟ್ ಬಗ್ಗೆ ಹೇಳಿದ್ದನ್ನು ಮತ್ತೊಮ್ಮೆ ಹೇಳಿಬಿಡುತ್ತೇನೆ. ನೀರಾವರಿ ಇಲಾಖೆಯ 'ಯೋಜನಾ ಕೆಲಸಗಳ ಟಿಪ್ಪಣಿ' ಶೀರ್ಷಿಕೆ ಅಡಿಯಲ್ಲಿ ಕೊಟ್ಟಂತಹ ಅಂಕಿ ಅಂಶಗಳಲ್ಲಿ 26ಗೇಟುಗಳನ್ನು ಕೂಡಿಸಬೇಕಾಗಿದೆ ಎಂದು ಹೇಳಲಾಗಿದೆ. ಅದಕ್ಕೆ 'ಸ್ಟೇ' ಇರುವುದರಿಂದ ಇನ್ನೂ ಗೇಟುಗಳನ್ನು ಕೂಡಿಸಿಲ್ಲ. ಇಲಾಖೆಯ ಟಿಪ್ಪಣಿಯಲ್ಲಿ ಗೇಟುಗಳನ್ನು ಕೂಡಿಸುವ ಕಾರ್ಯ ಪ್ರಗತಿಯಲ್ಲಿದೆ ಸ್ಕಿನ್ ಪ್ಲೇಟ್ ಹೊರತುಪಡಿಸಿ ಎಂದು ಹೇಳಲಾಗಿದೆ. ನೀರು ನಿಲ್ಲಿಸಬಾರದು ಎಂಬ ದೃಷ್ಟಿಯಿಂದ ಸ್ಕಿನ್ ಪ್ಲೇಟ್ ಹಾಕಿಲ್ಲ.

ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಕೃಷ್ಣ ಮತ್ತು ಕಾವೇರಿ ಮೇಲೆಲ್ಲಾ ಆಣೆ ಇಟ್ಟು ಹೇಳಿದಂಥ ಜನ ಇವತ್ತು ಈ ರೀತಿಯಾದ ಸಾಧನೆ ಮಾಡಿದ್ದಾರೆ. ಜೇವರ್ಗಿ ಶಾಖಾ ಕಾಲುವೆ ಬಗ್ಗೆ ಕೂಡ ಹೇಳಿದ್ದೀರಿ ಹಾಗೂ ಇಂಡಿ ಶಾಖಾಗೆ ಕಾಲುವೆಯ ಉದ್ದ 170 ಕಿ.ಮೀ ಮಾಡಬೇಕಾಗಿತ್ತು. ಆದರೆ, 150 ಕಿ.ಮೀ. ವರೆಗೆ ಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ವರದಿಯಲ್ಲಿ ಕೊಟ್ಟಿದ್ದೀರಿ. ಅಂದರೆ, ಇನ್ನೂ ಸುಮಾರು 22 ಕಿ.ಮೀ ನಷ್ಟು ಕಾಮಗಾರಿ ಕೆಲಸವನ್ನು ಪ್ರಾರಂಭವೇ ಮಾಡಿಲ್ಲ. ಇಷ್ಟಾದರೂ ಬಾಕಿ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳುತ್ತೀರಿ. 2000 ಇಸವಿಯೊಳಗೆ ಈ ಎಲ್ಲಾ ಕೆಲಸ ಮುಗಿಸುವುದಕ್ಕಾಗುತ್ತದೆಯೇ ಎಂಬುದನ್ನು ತಾವೇ ಹೇಳಬೇಕು. ಇವೆಲ್ಲಾ ಇವರು ಮಾಡಿರತಕ್ಕಂಥ ಸಾಧನೆಗಳು. ನಾರಾಯಣಪುರ ಬಲದಂಡೆ ಕಾಲುವೆಯ ನಿರ್ಮಾಣದಿಂದ ರಾಯಚೂರು ಭಾಗಕ್ಕೆ ನೀರಿನ ಅನುಕೂಲ ಮಾಡುವುದಕ್ಕೋಸ್ಕರ ಈ ಕೆಲಸವನ್ನು ಪ್ರಾರಂಭ ಮಾಡಲಾಗಿದೆ. ಆದರೆ ಇಲ್ಲಿ 1 ರಿಂದ 80 ಕಿ.ಮೀ. ವರೆಗೆ ಕೆಲಸಗಳು ಪ್ರಗತಿಯಲ್ಲಿವೆ ಎಂದು ಹೇಳಿದ್ದೀರಿ. ಹಾಗೆಯೇ, 81 ರಿಂದ 85 ಕಿ.ಮೀ.ವರೆಗಿನ ಕೆಲಸವನ್ನು ವಹಿಸಿಕೊಡಲಾಗುವುದು ಮತ್ತು 86 ರಿಂದ 90 ಕಿ.ಮೀ.ವರೆಗೆ ಟೆಂಡರ್‌ಗಳನ್ನು ಕರೆಯಲಾಗಿದೆ ಎಂದು ತಿಳಿಸಿದ್ದೀರಿ. ಅಂದರೆ, ಈ ಕೆಲಸಗಳು ಇನ್ನೂ ಕೂಡ ಪ್ರಾರಂಭವಾಗಿಲ್ಲ.

ಕೇವಲ 71 ಕಿ.ಮೀ. ನಷ್ಟು ಕೆಲಸ ಪ್ರಾರಂಭವಾಗಿದೆ ಎನ್ನತಕ್ಕಂಥಾದ್ದು ಇದರಿಂದ ಗೊತ್ತಾಗುತ್ತದೆ. 2000 ಇಸವಿಯೊಳಗೆ ಮುಗಿಸಬೇಕೆಂಬ ಮಾತನ್ನು 5 ವರ್ಷದಿಂದ ಪದೇ ಪದೇ ಹೇಳಿದರೂ ಕೂಡ ತಾವು ಈ ಕೆಲಸ ನಿರ್ವಹಿಸುವುದರಲ್ಲಿ ವಿಫಲರಾಗಿದ್ದೀರಿ. 90 ಕಿ.ಮೀ. ನಷ್ಟು ಕಾಲುವೆಯನ್ನು ಸಂಪೂರ್ಣವಾಗಿ ನಿರ್ಮಾಣ ಮಾಡತಕ್ಕಂಥ ಕೆಲಸ ನಿಮ್ಮ ಕೈಯಿಂದ ಆಗಲಿಲ್ಲ ಮತ್ತು ಸುಮಾರು 20 ಕಿ.ಮೀ. ನಷ್ಟು ಕಾಲುವೆ ಕಾಮಗಾರಿಗಳಿಗೆ ಇನ್ನೂ ಟೆಂಡರ್ ಕಾಲ್‌ಫರ್ ಮಾಡುವುದರೊಳಗೆ ಇದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ 84 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಮಾಡಬೇಕೆಂದು ನಿಮ್ಮ ಟಾರ್ಗೆಟ್ ಇತ್ತು. ಆದರೆ ಅಚೀವ್‌ಮೆಂಟ್ ಮಾಡಿದ್ದು ಕೇವಲ 2394 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ. ನಾಲೆ 7ಕ್ಕೆ ಕೆಲಸಗಳು ಪ್ರಗತಿಯಲ್ಲಿವೆ, ವಿತರಣೆ ನಾಲೆ 7ರಿಂದ 12 ರವರೆಗೆ ಟೆಂಡರ್‌ಗಳನ್ನು ಕರೆಯಲಾಗಿದೆ ಮತ್ತು ನಾಲೆ 13, 14 ಮತ್ತು 17ರವರೆಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಶೀಘ್ರದಲ್ಲಿಯೇ ಟೆಂಡರ್‌ಗಳನ್ನು ಕರೆಯಲಾಗುವುದೆಂದು ತಿಳಿಸಿದ್ದೀರಿ.

ಈ ಎಲ್ಲಾ ಕೆಲಸಗಳನ್ನು 2000 ಇಸವಿಯೊಳಗೆ ನಾವು ಮುಗಿಸುತ್ತೇವೆಂದು ಹೇಳುವುದು ಇವರ ಐದು ವರ್ಷಗಳ ಸಾಧನೆ. ಇನ್ನು ಆಲಮಟ್ಟಿ ಎಡದಂಡೆ ಕಾಲುವೆ ಬಗ್ಗೆ ಹೇಳುವುದಾದರೆ 103 ಕಿ.ಮೀ. ಕಾಲುವೆಯ ಮುಖ್ಯ ಸ್ಥಾವರ ಕೆಲಸ ಹಾಗೂ ಕಾಲುವೆ ಕೆಲಸ 27 ಕಿ.ಮೀ. ವರೆಗೆ ಪ್ರಗತಿಯಲ್ಲಿದೆ, 28 ಕಿ.ಮೀ ನಿಂದ 30 ಕಿ.ಮೀ ವರೆಗೆ ಕೆಲಸವನ್ನು ವಹಿಸಕೊಡಲಾಗಿದೆ ಮತ್ತು 31 ರಿಂದ 40 ಕಿ.ಮೀ ವರೆಗಿನ ಕೆಲಸಕ್ಕೆ ಆದೇಶ ನೀಡಬೇಕಾಗಿದೆ ಹಾಗೂ 41 ರಿಂದ 50 ಕಿ.ಮೀ. ವರೆಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಹಾಗೂ 51 ರಿಂದ 70 ಕಿ.ಮೀ. ವರೆಗೆ ಸರ್ವೆ ಕೆಲಸ ಪ್ರಗತಿಯಲ್ಲಿದೆ ಎಂದು ವರದಿಯಲ್ಲಿ ಕೊಟ್ಟಿದ್ದೀರಿ. ಇದರ ಅರ್ಥ 50 ರಿಂದ 70 ಕಿ.ಮೀ.ವರೆಗೆ ಸರ್ವೆ ಆಗಿಲ್ಲ ಮತ್ತು 41 ರಿಂದ 50 ರವರೆಗೆ ಅಂದಾಜು ಪಟ್ಟಿ ತಯಾರು ಈಗ ನಡೆದಿದೆ ಎಂದೂ ಮತ್ತು 31ರಿಂದ 41 ಕಿ.ಮೀ., ಅಂದರೆ 10 ಕಿ.ಮೀ. ನಷ್ಟು ಈಗ ಕೆಲಸ ಕೊಡಲಾಗುವುದು ಎಂದು 103 ಕಿ.ಮೀ.ನಲ್ಲಿ ಇವರು ಟ್ಯಾಕಲ್ ಮಾಡಿದ್ದು ಕೇವಲ 28 ಕಿ.ಮೀ. ಮಾತ್ರ. ಉಳಿದ ಸುಮಾರು 76 ರಿಂದ 77 ಕಿ.ಮೀ. ವರೆಗೆ ಇನ್ನೂ ಕೆಲಸ ಪ್ರಾರಂಭವಾಗಬೇಕಾಗಿದೆ. ಆದರೂ ಸಹ ನಾವು ಪ್ರಗತಿಯಲ್ಲಿದ್ದೇವೆ, ನಮ್ಮ ಸಾಧನೆ ನೋಡಿ ಓಟು ಕೊಡಿ ಎಂದು ಹೇಳಿದ್ದೇ ಹೇಳಿದ್ದು. ನಿಮ್ಮ ಸಾಧನೆಗಳ ವರದಿಯನ್ನು ನಾನು ತಯಾರು ಮಾಡಿದ್ದಲ್ಲ. ಇದು ಜೂನ್ ತಿಂಗಳ ನಿಮ್ಮ ಸ್ಟೇಟಸ್ ರಿಪೋರ್ಟ್, ಇದು ನಿಮಗೆ ಮಾತ್ರ ಕಳುಹಿಸಿದಂಥ ರಿಪೋರ್ಟ್ ಆಗಿದೆ. ಬಿಜಾಪುರದಲ್ಲಿ ಬರಗಾಲ ಪ್ರದೇಶಗಳಿಗೆ ಅನುಕೂಲವಾಗಲೆಂದು ಮುಳವಾಡ ಏತ ನೀರಾವರಿ ಯೋಜನೆಗೆ ಸಾಕಷ್ಟು ಜನರು ಇದಕ್ಕಾಗಿ ಹೋರಾಟ ಮಾಡಿ, ಯಾರೇ ಮಂತ್ರಿಗಳಿರಲಿ ಅಥವಾ ಸರ್ಕಾರವಿರಲಿ, ಅನೇಕ ಸಲ ಎಚ್ಚರಿಸತಕ್ಕಂಥ ಕೆಲಸವನ್ನು ಬಿಜಾಪುರದ ಜನತೆ ಮಾಡಿದ್ದಾರೆ. ಬಿಜಾಪುರದ ಜನತೆಯ ಮಾತಿಗೆ ಮನ್ನಣೆ ಕೊಟ್ಟಿದ್ದೀರಿ ಮತ್ತು ಇಂಡಿ ಮತ್ತು ಸಿಂಧಗಿ ಭಾಗಗಳಲ್ಲಿ ಈ ನೀರಾವರಿಯಿಂದ ಸ್ವಲ್ಪಮಟ್ಟಿಗೆ ಅನುಕೂಲವಾಗಲೆಂದು ಸುಮಾರು 128 ಕಿ.ಮೀ. ಉದ್ದದ ಈ ಮುಳವಾಡ ಏತ ನೀರಾವರಿ ಮಂಜೂರಾಗಿದೆ. ಈ ಕಾಲುವೆ ನಿರ್ಮಾಣದಲ್ಲಿ ಎಷ್ಟು ಕೆಲಸ ಪ್ರಾರಂಭ ಮಾಡಲಾಗಿದೆ ಎಂಬುದನ್ನು ಹೇಳಿ ಇದರಲ್ಲಿ ಮುಖ್ಯ ಸ್ಥಾವರ ಕೆಲಸಗಳು ಪ್ರಗತಿಯಲ್ಲಿವೆ ಮತ್ತು ಲೀಡ್ ಕಾಲುವೆ ಹಾಗೂ ಎರಡನೇ ಜಾಕ್‌ವೆಲ್‌ಗಳಿಗೆ ಟೆಂಡರ್‌ಗಳನ್ನು

ಸ್ವೀಕರಿಸಿದ್ದು ಇನ್ನು ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ, ಮೂರು ಕಾಲುವೆಗಳಿವೆ ಮೊದಲು 10 ಕಿ.ಮೀ.ನಷ್ಟು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಮತ್ತು ಪಶ್ಚಿಮ ಕಾಲುವೆಯಲ್ಲಿ ಮೊದಲು 20 ಕಿ.ಮೀ. ನಷ್ಟು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ ಹಾಗೂ 21 ರಿಂದ 50 ಕಿ.ಮೀ. ವರೆಗೆ ಸರ್ವೆ ಕಾರ್ಯ ಮುಗಿದಿದೆ ಎಂದು ಹೇಳಿದ್ದೀರಿ. ತಮ್ಮ ಈ ಎಲ್ಲಾ ಪ್ರಗತಿಯಿಂದ ಇವತ್ತು ಕೆಲಸ ಎಷ್ಟರಮಟ್ಟಿಗೆ ನಿಧಾನವಾಗಿ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ನಾನು ಇವತ್ತು ಎಲ್ಲವನ್ನು ಕೂಡ ಇಲ್ಲಿ ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಎಲ್ಲಾ ಕಡೆ ನೀರಾವರಿ ಕಾಮಗಾರಿ ಕೆಲಸಗಳಿಗೆ ಇನ್ನೂ ಅಂದಾಜು ತಯಾರಿಸುವ ಹಂತದಲ್ಲಿಯೇ ತಾವು ಇದ್ದೀರಿ. ಹಿಂಡಿ ಏತ ನೀರಾವರಿ 96 ಕಿ.ಮೀ. ಉದ್ದ ಇದೆ. ಇದರಲ್ಲಿಯೂ ಕೂಡ 25 ಕಿ.ಮೀ. ವರೆಗೆ ಸರ್ವೆ ಕೆಲಸ ಮುಗಿದಿದೆ, ಅಂದಾಜು ಪಟ್ಟಿಯನ್ನು ತಯಾರಿಸಬೇಗಾಗಿದೆ, ಹಾಗೆಯೇ ರಾಮಪುರ ಏತ ನೀರಾವರಿ ಕಾಮಗಾರಿಯಲ್ಲಿ 37 ಕಿ.ಮೀ.ನಲ್ಲಿ 10 ಕಿ.ಮೀ.ನಷ್ಟು ಲೀಡ್ ಕಾಲುವೆ ಕೆಲಸ ಮುಗಿದಿದೆ, ಉಳಿದ 27 ಕಿ.ಮೀ. ಕೆಲಸ ಮುಗಿದಿಲ್ಲ ಎಂದು ಹೇಳಿದ್ದೀರಿ. ಈ ರೀತಿಯಾಗಿ ನಿಮ್ಮ ಪ್ರಗತಿ, ನಿಮ್ಮ ಸ್ಟೇಟಸ್ ರಿಪೋರ್ಟ್ ಇವತ್ತು ಅಪ್ಪರ್ ಕೃಷ್ಣ ಬಗ್ಗೆ ಇದೆ. ಇವತ್ತು ಬಹಳ ವೇಗದಿಂದ, ತೀವ್ರಗತಿಯಲ್ಲಿ ಕೆಲಸ ನಡೆದಿದೆ, 2000 ಇಸವಿಯೊಳಗೆ ನಾವು ಈ ಕೆಲಸವನ್ನು ಮುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಪದೇ ಪದೇ ನಮಗೆ ಹೇಳುತ್ತಾ ಬಂದಿದ್ದೀರಿ. ತಾವು ಎಲ್ಲಿಯವರೆಗೆ ಕೆಲಸ ಮಾಡಿದ್ದೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನಿಮ್ಮ ಟಾರ್ಗೆಟ್ ಮತ್ತು ಖರ್ಚು ಮಾಡತಕ್ಕಂಥ ಹಣಕ್ಕೆ ಹೋಲಿಸಿದಾಗ ನಿಮ್ಮ ಸಾಧನೆ ಎಷ್ಟು ಎಂಬುದನ್ನು ಹಾಗೂ ಸಿಎಜಿ ರಿಪೋರ್ಟ್ ನಿಮ್ಮ ಕಣ್ಣು ಮುಂದೆ ಇದ್ದರೂ ಕೂಡ ಕುರುಡರ ಹಾಗೆ ಇದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಅನೇಕ ಸಲ ಮಾನ್ಯ ವಿರೋಧಪಕ್ಷದ ನಾಯಕರಾದ ಖರ್ಗೆಯವರಿಗೆ ಕಣ್ಣಿಲ್ಲ, ಆದ್ದರಿಂದ ಅವರಿಗೆ ನಮ್ಮ ಪ್ರಗತಿ ಕಾಣುವುದಿಲ್ಲವೆಂದು ಹೇಳುತ್ತಾರೆ. ಹಾಗೆಯೇ ನಾವು ಏನೂ ಸಾಧನೆ ಮಾಡಿಲ್ಲವೆಂದು ಹೇಳುತ್ತಾರೆ, ಆದ್ದರಿಂದ ಅವರೇ ಹೋಗಿ ಕೆಲಸಗಳನ್ನು ನೋಡಲಿ ಎಂದು ಯಾವಾಗಲೂ ಇದೇ ಮಾತನ್ನು ಹೇಳುತ್ತಾರೆ. ನಾನು ಹೇಳುತ್ತಿರುವುದು ಸುಳ್ಳು ರಿಪೋರ್ಟ್ ಎಂದು ತಾವು ಹೇಳಬಹುದು. ಇದನ್ನು ನಿಮ್ಮ ಅಧಿಕಾರಿಗಳು ಮತ್ತು ನೀವು ಈ ಸದನಕ್ಕೆ ಕೊಟ್ಟಿರತಕ್ಕಂಥ ಮಾಹಿತಿ. ನಾನು ಇದರ ಮೇಲೆ ಹಕ್ಕುಚ್ಯುತಿ ತರಬೇಕಾಗಿದೆ. ಇವತ್ತು ಈ ಎಲ್ಲಾ ಮಾಹಿತಿಗಳು ಸುಳ್ಳು ಆಗಿದ್ದರೆ, ಅವರು ಹೇಳತಕ್ಕಂಥಾದ್ದನ್ನು ಒಪ್ಪಿಕೊಳ್ಳಲೇ ಅಥವಾ ಇದನ್ನು ಒಪ್ಪಿಕೊಳ್ಳಲೆ ನೀವೇ ಹೇಳಬೇಕು.

ಶ್ರೀ ಎಸ್. ಎಸ್. ಪಾಟೀಲ್ : ನೀವು 50 ವರ್ಷದಿಂದ ಏನು ಮಾಡಿದ್ದೀರಿ ಎಂಬುದನ್ನು ಮತ್ತು ನಾವು 5 ವರ್ಷದಿಂದ ಏನು ಮಾಡಿದ್ದೇವೆ ಎಂಬುದನ್ನು ನೀವು ದಯವಿಟ್ಟು ನೋಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಇವರು 50 ವರ್ಷದ ಹಿಂದಿನ ಕೆಲಸಕ್ಕೆ ಬಂದಿದ್ದಾರೆ. ಅವರ ಮುಖಕ್ಕೆ ನೇರವಾಗಿ ಹೇಳುತ್ತೇನೆ, ಈ ಪುಸ್ತಕವನ್ನು ನೀವು ಕೊಟ್ಟಿರುವುದು, ನಾನು ಪ್ರಿಂಟ್ ಮಾಡಿದ್ದಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖರ್ಗೆಯವರೆ, ಒಂದು ನಿಮಿಷ ಯೀಲ್ಡ್ ಆಗಿ.

ಅಧ್ಯಕ್ಷರು : ಮಾನ್ಯ ನಾಗೇಗೌಡರಿಗೆ ಮನವರಿಕೆ ಮಾಡಿ ಯೀಲ್ಡ್ ಮಾಡತಕ್ಕಂಥ ಅನುಭವ ಬಹಳ ಇದೆ. ಇದು ಬಹಳಷ್ಟು ಜನರಿಗೆ ಗೊತ್ತಿಲ್ಲ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿರತಕ್ಕಂಥ ರಾಮಪುರ ಮತ್ತು ಮುಳವಾಡ ಹಾಗೂ ಎಡ ಹಾಗೂ ಬಲ ಆಲಮಟ್ಟಿ ಕಾಲುವೆ ಕೆಲಸಗಳು ನಮ್ಮ ಸರ್ಕಾರ ಮಾಡಿದ್ದು ತಮಗೂ ಗೊತ್ತಿದೆ. ನೀವು ಇರಿಗೇಷನ್‌ಗೆ ಪ್ರತ್ಯೇಕ ಇಲಾಖೆ ಮಾಡಿಕೊಂಡು ಮುಳವಾಡ ಏತ ನೀರಾವರಿಗೋಸ್ಕರ ಸ್ವಾಮಿಗಳು ಮುಷ್ಕರ ಮಾಡಿ 1995ರವರೆಗೂ ಅದು ಇತ್ಯರ್ಥವಾಗಿರಲಿಲ್ಲ. ಆದರೆ ಇವತ್ತು ನಾವು ಮುಖ್ಯ ಸ್ಥಾವರದ ಕೆಲಸವನ್ನು ಮಾಡಿಸಿದ್ದೇವೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಏನೂ ಮಾಡಿಲ್ಲವೆಂದು ಅಲ್ಲಿ ನಾಲೆ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ಇದನ್ನು ಮೊದಲು ನಾಲೆ ಮಾಡಿರುವುದರಿಂದ ಟೆಂಡರ್‌ಗೆ ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ಏತ ನೀರಾವರಿಗೆ ಸಂಬಂಧಪಟ್ಟ ಹಾಗೆ ನಾಲ್ಕು ಕೆಲಸಗಳನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದ್ದು, ಇವತ್ತು ಮುಖ್ಯಸ್ಥಾವರದ ಕೆಲಸ ಮಾಡಿದ್ದೇವೆ, ನಂತರ ನಾಲೆ ಮಾಡುತ್ತೇವೆ.

12.30 ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈ ನೀರಾವರಿ ಕೆಲಸವು ಮುಂದುವರಿದುಕೊಂಡು ಬಂದಿದೆ. ಹೇಮಾವತಿ, ಹಾರಂಗಿ, ನಾರಾಯಣಪುರ ಡ್ಯಾಂ, ಮಲಪ್ರಭಾ ಮತ್ತು ಘಟಪ್ರಭಾ ಕಾಮಗಾರಿ ಕೆಲಸಗಳನ್ನು ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಪ್ರಾರಂಭ ಮಾಡಿರುವುದು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ರಾಂಪುರ, ಮಳವಾಡ, ಆಲಮಟ್ಟಿ ಎಡ ಹಾಗೂ ಬಲದಂಡೆ ಕೆಲಸಗಳನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ, ಕಳೆದ ಐದು ವರ್ಷಗಳಲ್ಲಿ ತಮ್ಮ ಸರ್ಕಾರ ಸಾಧನೆಯನ್ನು ಮಾಡುವ ಬಗ್ಗೆ ಪ್ರಣಾಳಿಕೆಯನ್ನು ಕೊಟ್ಟಿದ್ದೀರಿ. ಇದರ ಪ್ರಕಾರ ತಮ್ಮ ಸರ್ಕಾರ ನಡೆದುಕೊಂಡಿಲ್ಲ ಎಂಬುದು ನನ್ನ ವಾದವಾಗಿದೆ.

ಅಧ್ಯಕ್ಷರು : ಹಳೆಯ ಸಿನಿಮಾ ಒಂದರಲ್ಲಿ ಇಬ್ಬರು ವ್ಯಕ್ತಿಗಳು ಆಸ್ತಿಯ ಬಗ್ಗೆ ಜಗಳ ಮಾಡುತ್ತಾ ನನ್ನ ಆಸ್ತಿ ಇಷ್ಟಿದೆ ನಿನ್ನ ಆಸ್ತಿ ಎಷ್ಟಿದೆ ಎಂದು ಜಗಳವನ್ನು ಆಡುತ್ತಾ ಇರುವ ವೇಳೆಗೆ ಒಬ್ಬ ನನ್ನ ಹತ್ತಿರ ಬಸ್ ಇದೆ, ಕಾರ್ ಇದೆ ಎಂದು ಹೇಳುತ್ತಾನೆ. ನಂತರ ಇನ್ನೊಬ್ಬ ಲಾರಿ ಇದೆ, ಟ್ರ್ಯಾಕ್ಟರ್ ಇದೆ ಎಂದು ಹೇಳುತ್ತಾನೆ. ಮತ್ತೆ ಇವನಿಗೆ ಸಿಟ್ಟು ಬಂದು ನಮ್ಮ ಹತ್ತಿರ ರೈಲುಗಳು ಇವೆ ಎಂದು ಹೇಳುತ್ತಾನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಡಳಿತ ಪಕ್ಷದವರು ಈಗ ರೈಲನ್ನೇ ಬಿಡುತ್ತಿರುವುದು.

ಅಧ್ಯಕ್ಷರು : ಯಾರು ಬಿಡುತ್ತಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕರ್ನಾಟಕ ಸರ್ಕಾರ, ನೀರಾವರಿ ಇಲಾಖೆ, ಇರಿಗೇಷನ್ ಇನ್ ಕರ್ನಾಟಕ 1998-99 ಈ ಪುಸ್ತಕವನ್ನು ಅವರು ನಮಗೆ ಕೊಟ್ಟಿರುವುದು. ಮಾನ್ಯ ಎಸ್.ಎಸ್. ಪಾಟೀಲರೆ, ಸ್ವಲ್ಪ ಕೇಳಿ, ಮೊದಲನೇ ಪ್ಲಾನ್‌ನಲ್ಲಿ ಈ ರಾಜ್ಯದಲ್ಲಿ planwise, financial and potential progress of major and medium irrigation ಎಷ್ಟು ಇತ್ತೆಂದರೆ 1951-56ರವರೆಗೆ 2 ಲಕ್ಷದ 63 ಸಾವಿರ ಹೆಕ್ಟೇರ್ ಇತ್ತು. ಆದರೆ 1994-95ರಲ್ಲಿ 15 ಲಕ್ಷದ 28 ಸಾವಿರ ಹೆಕ್ಟೇರ್ ಅಂದರೆ ಸುಮಾರು 13 ಲಕ್ಷ ಹೆಕ್ಟೇರ್‌ಗಳು ಕಾಂಗ್ರೆಸ್ ಪಕ್ಷದವರೇ ಮಾಡಿದ್ದಾರೆಯೇ ಹೊರತು ಇದನ್ನು ತಾವು ಮಾಡಿದ್ದಲ್ಲ. ಈ ಪುಸ್ತಕವು ನಿಮ್ಮ ಸರ್ಕಾರದವರು ಹೊರಡಿಸಿರುವುದಲ್ಲವೆ, ಸುಮ್ಮನೆ ತಾವು ಅದನ್ನೂ ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೀರಿ. ಕಳೆದ ಐದು ವರ್ಷಗಳಲ್ಲಿ ಸರ್ಕಾರ ಸಾಧನೆಯನ್ನು ಮಾಡಿರುವುದು ಎಷ್ಟೆಂದರೆ ಕೇವಲ ಕ್ಯುಮಲೇಟಿವ್ 1 ಲಕ್ಷದ 36 ಸಾವಿರ ಹೆಕ್ಟೇರ್‌ಗಳು ಮಾತ್ರ.

ಅಧ್ಯಕ್ಷರು : ತಮ್ಮ ಕಾಂಗ್ರೆಸ್ ಪಕ್ಷದವರು ಅಷ್ಟು ಸಾಧನೆಯನ್ನು ಮಾಡಿದ್ದೀರಿ, ಆಗ ಮಾನ್ಯ ನಾಗೇಗೌಡರು ತಮ್ಮ ಪಕ್ಷದಲ್ಲಿದ್ದರು ಅದರಲ್ಲಿ ಅವರಿಗೆ ಷೇರು ಇಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಷೇರನ್ನು ತೆಗೆದುಕೊಳ್ಳಲಿ. ಏಕೆಂದರೆ ಇವರು ಪದೇಪದೇ ಕಾಂಗ್ರೆಸ್ ಪಕ್ಷದವರು ನೀರಾವರಿ ಏನೂ ಮಾಡಿಲ್ಲವೆಂದು ನಾವೇ ಹೆಚ್ಚು ಮಾಡಿರುವುದು ಎಂದು ಹೇಳುತ್ತಿರುವುದರಲ್ಲಿ ನಿಮ್ಮ ಐದು ವರ್ಷದ ಸಾಧನೆಯಲ್ಲಿ ಕೇವಲ 1 ಲಕ್ಷದ 76 ಸಾವಿರ ಎಕರೆ ಮಾತ್ರ ಅದು ಹೆಕ್ಟೇರ್ ಸಹ ಅಲ್ಲ. ಈ ಪುಸ್ತಕವನ್ನು ತಾವು ಓದಿದರೆ ಗೊತ್ತಾಗುತ್ತದೆ. ದಯವಿಟ್ಟು ನಾವು ಎಲ್ಲವನ್ನು ಮಾಡಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಹೋಗಬೇಡಿ. ತಮ್ಮ ಸರ್ಕಾರ ಐದು ವರ್ಷಗಳಲ್ಲಿ ಜನರಿಗೆ ಮೋಸ, ವಂಚನೆ, ಒಳಜಗಳ, ದುರಾಡಳಿತ ಇದರಿಂದ ಕೂಡಿದೆಯೇ ಹೊರತಾಗಿ ತಮ್ಮ ಸರ್ಕಾರ ಯಾವ ಸಾಧನೆಯನ್ನು ಮಾಡಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಮ್ಮ ಸರ್ಕಾರ ಮಾಡಿರುವ ಸಾಧನೆಯ ಬಗ್ಗೆ ಜನರಿಗೆ ಹೇಳಿದರೆ ಜನರು ನಂಬುವುದಿಲ್ಲವೆಂದು ಅವರಿಗೆ ಗೊತ್ತಿದೆ. ಅದಕ್ಕೋಸ್ಕರ ಕಾಂಗ್ರೆಸ್ ಪಕ್ಷವನ್ನು ಸೇರಲೋ, ಲೋಕಶಕ್ತಿಯನ್ನು ಸೇರಲೋ ಬಿಜೆಪಿ ಪಕ್ಷವನ್ನು ಸೇರೋಣವೇ ಎಂದು ಪ್ರತಿ ದಿವಸ ಅದರ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ತಮ್ಮ ಪಕ್ಷದಿಂದ ಚುನಾವಣೆಗೆ ನಿಂತರೆ ಯಾರೂ ಓಟನ್ನು ಹಾಕುವುದಿಲ್ಲವೆಂದು ಅವರಿಗೆ ಗೊತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಪಕ್ಷಕ್ಕೆ ಎಷ್ಟು ಅರ್ಜಿ ಬಂದಿವೆ?

ಶ್ರೀ ಎಸ್. ಕೃಷ್ಣಪ್ಪ : ತಮ್ಮ ಪಕ್ಷದವರು ಹೋದರೆ ನಮಗೆ ಓಟನ್ನು ಕೊಡುವುದಿಲ್ಲವೆಂದು ನಮ್ಮ ಪಕ್ಷದವರನ್ನು ಅವರು ಕರೆಯುತ್ತಿದ್ದಾರೆ. ಅವರ ಸಾಧನೆಯ ಮೇಲೆ ನಮಗೆ ಓಟನ್ನು ಕೊಡುವುದಿಲ್ಲ. ಆದ್ದರಿಂದ ದಯವಿಟ್ಟು ತಾವು ನಮ್ಮ ಕಡೆಗೆ ಬನ್ನಿರಿ ಎಂದು ಕರೆಯುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಕಾವೇರಿಯ ಬಗ್ಗೆ ರಾಜ್ಯದಲ್ಲಿ 110 ವರ್ಷಗಳಿಂದ ನಡೆದುಕೊಂಡು ಬಂದಿದ್ದಂತಹ ವ್ಯಾಜ್ಯಕ್ಕೆ ಅಂತಿಮ ತೀರ್ಮಾನವನ್ನು ಕೊಟ್ಟಿದ್ದೇವೆಂದು ಒಂದು ಕಡೆ ಹೇಳುತ್ತಾರೆ, ಮತ್ತೊಂದು ಕಡೆ ಕೃಷ್ಣಾದ ಬಗ್ಗೆ ಇವತ್ತು ಮಾತನಾಡಿ ಆ ವಿವಾದವನ್ನು ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಇದು ಏನಾಯಿತು? ಕೃಷ್ಣಾದ ಬಗ್ಗೆ ಇನ್ನೂ ಪ್ರಾಬ್ಲಮ್ಸ್, ಕ್ರಿಯೇಟಾಗಿದೆಯೇ ಹೊರತು ಬೇರೆ ಏನೂ ಇಲ್ಲ. ಇದರ ಬಗ್ಗೆ ನಾನು ಅನೇಕ ಸಾರಿ ಹೇಳಿದ್ದೇನೆ. ನಮ್ಮ ಅನಿಸಿಕೆಯಿಂದ, ನಮ್ಮ ಮಾತಿನಿಂದ ನಾವು ಇವತ್ತು ತೊಂದರೆಗೆ ಈಡಾಗಿದ್ದೇವೆಯೇ ಹೊರತು ಅದರಿಂದ ಪರಿಹಾರವನ್ನು ಇನ್ನೂ ಕಂಡುಹಿಡಿದಿಲ್ಲ. 250 ಟಿಎಂಸಿ ಕಾವೇರಿಯ ನದಿ ನೀರಿನ ಬಗ್ಗೆ ಒಪ್ಪಿಕೊಳ್ಳುವುದಾದರೆ 11 ಲಕ್ಷದ 2 ಸಾವಿರ ಎಕರೆಗೆ ನೀವು ಸೀಮಿತವಾಗಿದ್ದರೆ ಅವತ್ತೇ ಒಪ್ಪಿಕೊಳ್ಳಬೇಕಾಗಿತ್ತು. ಈ ಸದನದಲ್ಲಿ ಸರ್ವಾನುಮತದಿಂದ ಒಂದು ರೆಸಲ್ಯೂಷನ್ ಅನ್ನು ಪಾಸು ಮಾಡಿಸಿ, ಆರ್ಡಿನೆನ್ಸನ್ನು ಇಷ್ಯೂ ಮಾಡಿಸಿ, ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ನೀವು ಹೀಗೆ ನೋಡಿಕೊಳ್ಳಬೇಕೆಂದು ಹೇಳಿ ನಾವೆಲ್ಲರೂ ಒಗ್ಗಟ್ಟಾಗಿ ಹೇಳಿದ ಮಾತಿಗೆ ಇವತ್ತು ನೀವು ನಡೆದುಕೊಳ್ಳಲಿಲ್ಲ. ಏಕೆಂದರೆ ನಿಮಗೆ ಅದು ಬೇಕಾಗಿತ್ತು. ಇವತ್ತು ಅಲ್ಲಿ ಒಪ್ಪಿಕೊಂಡು ಬಂದ ಮೇಲೆ 110 ವರ್ಷಗಳಷ್ಟು ಹಳೆಯದಾದ ವ್ಯಾಜ್ಯಕ್ಕೆ ತೀರ್ಮಾನವನ್ನು ಮಾಡಿಕೊಂಡು ಬಂದಿದ್ದೇವೆ, ಇದು ಒಂದು ಐತಿಹಾಸಿಕ ಸಂಗತಿ ಎಂದು ಹೇಳುತ್ತಿದ್ದೀರಿ. ತಮ್ಮ ಸರ್ಕಾರ ಮಾಡಿದಾಗ ಇದು ಐತಿಹಾಸಿಕ. ಬೇರೆಯವರು ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿದರೆ ಅದು ಐತಿಹಾಸಿಕ ಅಲ್ಲ. ರಾಷ್ಟ್ರೀಯ ಜಲನೀತಿಯನ್ನು ರೂಪಿಸುವವರೆಗೆ ನೀವು ಒಪ್ಪಬೇಡಿ ಎಂಬ ಮಾತನ್ನು ಇವರೇ ಹೇಳಿದವರು. ರೆಸಲ್ಯೂಷನ್ ಅನ್ನು ಎಲ್ಲರೂ ಸೇರಿಕೊಂಡು ಮಾಡಿದವರು ಅವರೇ ಅದಕ್ಕೆ ಬೆಲೆ ಕೊಡಲಿಲ್ಲ. ನಾವು ಕಾವೇರಿ ನೀರನ್ನು ರಕ್ಷಣೆ ಮಾಡಿದ್ದೇವೆ, ಕೃಷ್ಣಾ ನೀರನ್ನು ರಕ್ಷಣೆ ಮಾಡಿದ್ದೇವೆ, ಎಂದು ಹೇಳುತ್ತೀರಿ, ತಾವು ಎಲ್ಲಿ ಮಾಡಿದ್ದೀರಿ? ನಿಮಗೆ ಅನುಕೂಲವಿದ್ದಾಗ ಹೇಳಿಕೊಂಡು ಅದರ ಬಗ್ಗೆ ಇಲ್ಲಿ ಭಾಷಣವನ್ನು ಮಾಡಿಕೊಂಡು ಹೋಗುವುದು. ಬೇರೆ ಸರ್ಕಾರಗಳು ಅಧಿಕಾರದಲ್ಲಿದ್ದಾಗ ಅದರ ಬಗ್ಗೆ ಟೀಕೆಯನ್ನು ಮಾಡಿಕೊಂಡು ಹೋಗುವುದು. ಇದು ನ್ಯಾಷನಲ್ ವಾಟರ್ ಪಾಲಿಸಿ ಆಗಿಲ್ಲವೆಂದು ಹೇಳುವುದು. ಇಂತಹ ಒಂದು ಧೋರಣೆಯನ್ನು ತಾಳಿ ಜನರಿಗೆ ಮೋಸವನ್ನು ಮಾಡುವುದಕ್ಕಾಗುವುದಿಲ್ಲ, ಜನರು ಬೆಲೆಯನ್ನು ಕೇಳುತ್ತಾರೆ, ಅದಕ್ಕೆ ತಾವು ಬೆಲೆಯನ್ನು ಕೊಡಬೇಕಾಗುತ್ತದೆ. ಈಗ ಬರುವ ಚುನಾವಣೆಯಲ್ಲಿ ತಮಗೆಲ್ಲಾ ಗೊತ್ತಾಗುತ್ತದೆ. ಈಗಾಗಲೇ ತಮಗೆ ಗೊತ್ತಾಗಿದೆ, ಪುನಃ ನಾನು ಇದರ ಬಗ್ಗೆ ಮಾತನಾಡಿ ತಮ್ಮ ಮನಸ್ಸನ್ನು ನೋಯಿಸಲು ತಯಾರಿಲ್ಲ. ಈಗಲೇ ತಾವು ಸೋತು ಸೊರಗಿ ಹೋಗಿದ್ದೀರಿ, ಈಗ ತಾವು ಕರಗುತ್ತಿದ್ದೀರಿ, ಈಗ ಕರಗುತ್ತಿರುವಂಥವರಿಗೆ, ಏನಾಗಿದೆ ಎಂದರೆ ನೀರಿನಲ್ಲಿ ಸಕ್ಕರೆ ಬಿದ್ದ ಹಾಗೆ ಆಗಿದೆ. ಮತ್ತೆ ಅವರಿಗೆ ತೊಂದರೆ ಕೊಡುವುದು, ಮನಸ್ಸನ್ನು ನೋಯಿಸುವುದನ್ನು ಮಾಡುವುದಿಲ್ಲ, ನೀವು ಬಂದು ಇನ್ನೆರಡು ಆರ್ಡಿನೆನ್ಸನ್ನು ತನ್ನಿ. ನಾಮಿನೇಷನನ್ನು ಮಾಡುವುದು, ಹೇಳುವುದೊಂದು ಮಾಡುವುದೊಂದು. ಬಸವಣ್ಣನವರ ವಚನವನ್ನು ಇನ್ನೊಂದು ನಾಲ್ಕು ಬಾರಿ ಕೇಳಲು ಅವಕಾಶ ಸಿಗುತ್ತದೆ.

ಅಧ್ಯಕ್ಷರು : ನಾನು ಈಗ ಏನು ಹೇಳುತ್ತಿದ್ದೇನೆಂದರೆ, ಮುಂದೆ ಸನ್ನಿವೇಶ ಹೇಗೇಗೆಬರುತ್ತದೆ ಎಂಬುದು ಗೊತ್ತಿಲ್ಲ, ಆದ್ದರಿಂದ ನಿಮ್ಮ ನಿಮ್ಮ ಹುಷಾರಿನಲ್ಲಿ ನೀವು ಇದ್ದರೆ ಒಳ್ಳೆಯದು, ಹೀಗೆ ಹೇಳುತ್ತೇನೆಂದು ತಾವು ಯಾರೂ ತಪ್ಪು ತಿಳಿದುಕೊಳ್ಳಬೇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಎಲ್ಲಿಯವರೆಗೆ ಆ ಸ್ಥಾನದಲ್ಲಿರುತ್ತೀರೋ ಆ ಕೆಲಸವನ್ನೇ ತಾವು ಮಾಡಬೇಕು. ನಾನು ಈ ಸ್ಥಾನದಲ್ಲಿದ್ದಾಗ ಇದನ್ನೇ ಮಾಡಬೇಕು. ಅದರಲ್ಲಿ ಸ್ವಲ್ಪ ವ್ಯತ್ಯಾಸವಾದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಗಾಡಿಯನ್ನು ಹಿಂತಿರುಗಿಸಿಕೊಳ್ಳುವುದಕ್ಕೆ ಸ್ವಲ್ಪ ಜಾಗವನ್ನಾದರೂ ಇಟ್ಟುಕೊಳ್ಳಿ ಎನ್ನುವುದೇ ನನ್ನ ಉದ್ದೇಶ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನನಗೆ ಇರತಕ್ಕ ಸಂಶಯವೇನೆಂದರೆ, ಅನೇಕ ಸಾರಿ ಅಲ್ಲಿರತಕ್ಕಂತಹ ಶಾಸಕರುಗಳು, ಮಂತ್ರಿಗಳು ಇವರಲ್ಲಿ ಕೆಲವರು ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕೆಂದು ನಿನ್ನೆ ದಿನ ವಾದ ಮಾಡಿದರು. ಇನ್ನು ಕೆಲವು ಜನರು ಲೋಕಶಕ್ತಿಗೆ ಸೇರಬೇಕೆಂಬ ಬಗ್ಗೆ ವಾದವನ್ನು ಮಾಡಿದ್ದಾರೆ. ಅದರಲ್ಲಿ ಶ್ರೀ ಎಂ.ಎಸ್. ಪಾಟೀಲರು ಸ್ಪೋಕ್ಸ್‌ಮನ್, ಇದರಲ್ಲಿ ಶ್ರೀ ನಾಗೇಗೌಡರು ಅಡ್ವೈಸರು, ಕನ್‌ವೀನರ್ ಶ್ರೀ ಸಿ. ಬೈರೇಗೌಡರು ಸಮಾನ ಮನಸ್ಕರ ಸಮಿತಿಗೆ ಕನ್‌ವೀನರ್ ಶ್ರೀ ಬೈರೇಗೌಡರು, ಅಡ್ವೈಸರ್ ಶ್ರೀ ನಾಗೇಗೌಡರು , ಸ್ಪೋಕ್ಸ್‌ಮನ್ ಶ್ರೀ ಎಂ.ಎಸ್. ಪಾಟೀಲರು. ಈ ಪಕ್ಷಕ್ಕೆ ಸೇರಬೇಕೇ, ಆ ಪಕ್ಷಕ್ಕೆ ಸೇರಬೇಕೇ, ಯಾರ ಜೊತೆ ಸೇರಿ ಅಲಿಯೆನ್ಸ್ ಮಾಡಬೇಕೆಂಬುದರ ಬಗ್ಗೆ ಈಗಾಗಲೇ ಚರ್ಚೆ ನಡೆದಿದೆ. ಕೆಲವು ಜನರು ಕಾಂಗ್ರೆಸ್ ಪಕ್ಷವನ್ನು ಸೇರುವುದು ಬೇಡ, ಮಾನ್ಯ ಸಿದ್ದರಾಮಯ್ಯನವರು ಸೋನಿಯಾ ಗಾಂಧಿಯವರು ಕಾಂಗ್ರೆಸ್ ಪಕ್ಷದಲ್ಲಿರುವವರೆಗೆ ನಾವುಗಳು ಕಾಂಗ್ರೆಸ್ ಪಕ್ಷವನ್ನು ಸೇರುವುದು ಬೇಡವೆಂದು ಹೇಳಿದ್ದಾರೆ. ಇವರಲ್ಲಿ ಕೆಲವು ಮಿತ್ರರುಗಳು ಇಲ್ಲ ನಾವು ಕಾಂಗ್ರೆಸ್ ಪಕ್ಷಕ್ಕೆ ಹೋಗಬೇಕು ಎಂದು ಮತ್ತೆ ಕೆಲವರು ಲೋಕಶಕ್ತಿ ಪಕ್ಷಕ್ಕೆ ಹೋಗಬೇಕೆಂದು ಇದ್ದಾರೆ. ಈಗಾಗಲೇ ಇದನ್ನು ಮುಚ್ಚಿಡುವ ಅವಶ್ಯಕತೆ ಇಲ್ಲ, ಮಾತುಕತೆ ಎಲ್ಲಾ ಆಗಿದೆ, ಈ ವಿಚಾರ ಗುಟ್ಟಾಗಿಲ್ಲ. ಅದಕ್ಕಾಗಿ ತಾವು ಎಲ್ಲೇ ಹೋಗಿ ಲೋಕಶಕ್ತಿ ಎಂದರೆ ನಿಮ್ಮ ಕಡೆಗೆ ಬರುತ್ತಾರೆ. ಏಕೆಂದರೆ ಇದು ಚಲಿತೋ ಚಲಿ ನಹಿ ತೋ ಮಹಮದ್ ಆಲಿ, ನಹಿ ಚಲಿತೋ ಥ್ರೂ ಉಸ್ಮಾನಲಿ ಅಂದ ಹಾಗೆ ಅವರಿಗೆ ಡೈರಕ್ಟಾಗಿ ಹೋಗುವುದಕ್ಕಾಗುವುದಿಲ್ಲ. ಬಿಜೆಪಿ ಜೊತೆ ದೋಸ್ತಿ ಮಾಡಬೇಕಾದರೆ ಥ್ರೂ ಲೋಶಶಕ್ತಿಯ ಜೊತೆ ಸೇರಬೇಕೆಂದು ಆ ಒಂದು ಗುಂಪು ಇದೆ. ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆಂದು ಹೇಳಿದವರು ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದಕ್ಕೆ ಬದ್ಧರಾಗಿದ್ದೇವೆ ಎಂದು ಹೇಳುವವರು, ಲೋಹಿಯಾ ತತ್ವವನ್ನು ಮಾಡನಾಡುವವರು, ಹೋಗಿ ಲೋಕಶಕ್ತಿಯ ಕೊರಳಿಗೆ ಬಿದ್ದು ಬಿಜೆಪಿ ಜೊತೆಯಲ್ಲಿ ನಾವು ಲಗ್ನವನ್ನು ಮಾಡಿಕೊಳ್ಳುತ್ತೇವೆಂದು ಹೇಳುತ್ತಾರಲ್ಲಾ ಇದು ಯಾವ ನ್ಯಾಯ ನೀವೇ ಹೇಳಿ. ಅವರ ಸ್ಥಿತಿಗತಿಯನ್ನು ನೋಡಿ, ನಿಜವಾಗಲೂ ನಾನು ಬಹಳ ಸಂಯಮದಿಂದ ಇದ್ದೇನೆ, ಕಾವೇರಿ ಮತ್ತು ಕೃಷ್ಣಾದ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಅದರ ಬಗ್ಗೆ ನಾನು ಅನೇಕ ಸಾರಿ ಪ್ರಸ್ತಾಪ ಮಾಡಿ ಹೇಳಿದ್ದೇನೆ. ಯಾವ ದಿಕ್ಕಿನಲ್ಲಿ, ಯಾವ ಸ್ಪೀಡ್‌ನಲ್ಲಿ ಅಲ್ಲಿ ಕೆಲಸ ನಡೆಯಬೇಕಾಗಿತ್ತೋ ಅದು ನಡೆದಿಲ್ಲವೆಂದು ನಾನು ಇಷ್ಟು ಮಾತ್ರ ಹೇಳುತ್ತೇನೆ. ತಾವೇ ಪ್ರಾರಂಭ ಮಾಡಿದ್ದೇನೆಂದು ಹೇಳಬಹುದು. ಆದರೆ ಪ್ರಾರಂಭ ಮಾಡಿ, ಕಂಪ್ಲೀಟ್ ಮಾಡಬೇಕೆಂಬ ಜವಾಬ್ದಾರಿ ಐದು ವರ್ಷಗಳಲ್ಲಿ ನಿಮಗೆ ಇತ್ತು, 2000ನೇ ಇಸವಿಯೊಳಗೆ ಮಾಡಬೇಕೆಂಬ ಬಗ್ಗೆ ಒಂದು ಗಡುವು ಇದೆ. 729 ಟಿಎಂಸಿ ನೀರನ್ನು ನಾವು ಸಂಪೂರ್ಣವಾಗಿ ಬಳಸಿಕೊಳ್ಳಬೇಕು, ಆ ಜವಾಬ್ದಾರಿ ನಮ್ಮ ಮೇಲಿತ್ತು, ಆ ಜವಾಬ್ದಾರಿಯನ್ನು ತಾವು

ನಿರ್ವಹಿಸಿಲ್ಲವೆನ್ನತಕ್ಕದ್ದು ನಮ್ಮೆಲ್ಲರ ಕೊರಗು. ಅದಕ್ಕಾಗಿ ಆ ನೀರನ್ನು ಮುಂದೆ ಯಾವ ರೀತಿ ಬಳಸಿಕೊಳ್ಳಬೇಕು ಎಂಬ ಬಗ್ಗೆ ಒಂದು ಹಾದಿ ಹಾಕಬೇಕಾಗುತ್ತದೆ. ಅಥವಾ ಈಗಾಗಲೇ ಅದಕ್ಕೆ ದಿಕ್ಕನ್ನು ದಿಸೆಯನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಅದರ ಬಗ್ಗೆ ಕೂಡ ಬಹಳ ಗಂಭೀರವಾಗಿ ತಾವು ಯೋಚನೆಯನ್ನು ಇವತ್ತು ಮಾಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : 2000ದ ಇಸವಿಯೊಳಗೆ ಮಾಡಬೇಕೆಂದು ಹೇಳಿ ಎಷ್ಟು ವರ್ಷಗಳಾಯಿತು? ನಾವು ಮಾಡುವುದಕ್ಕೆ ಹತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಅಧಿಕಾರಕ್ಕೆ ಬಂದು ಎಷ್ಟು ವರ್ಷಗಳಾಯಿತು? 8 ವರ್ಷಗಳಿಂದ ನೀವೇನು ಮಾಡಿದ್ದೀರಿ? ನೀವು ಏನೂ ಮಾಡುವುದಕ್ಕಾಗಿಲ್ಲ, ಬರೀ ನಾಮಿನೇಷನ್ ಮಾಡುವುದನ್ನು ಬಿಟ್ಟರೆ, ಹಿಪ್ಪರಗಿ ಬ್ಯಾರೇಜ್ ಮತ್ತು ಆಲಮಟ್ಟಿಯದ್ದು.

ಅಧ್ಯಕ್ಷರು : ಎಲ್ಲರನ್ನೂ ಬಿಟ್ಟು ಅವರನ್ನು ಏಕೆ ಹಿಡಿದುಕೊಳ್ಳುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಿಪ್ಪರಗಿ ಬ್ಯಾರೇಜ್ ಮತ್ತು ಆಲಮಟ್ಟಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರನ್ನು ಕೂಡ.

ಶ್ರೀ ಕೆ.ಎನ್. ನಾಗೇಗೌಡ : ಬೇರೆ ಪಾರ್ಟಿಯವರ ವಿಚಾರ ಮಾತನಾಡುವುದಕ್ಕಿಂತ ನಿನ್ನೆ ದಿವಸ ಶ್ರೀ ರಾಜಶೇಖರಮೂರ್ತಿಯವರ ಮನೆಯಲ್ಲಿ ಸಭೆ ಸೇರಿ ಇಡೀ ಲಿಂಗಾಯಿತ ಸಮುದಾಯಕ್ಕೆ ಕಾಂಗ್ರೆಸ್ ಪಾರ್ಟಿಯಿಂದ ಅನ್ಯಾಯವಾಗಿದೆ. ಆ ಸಮುದಾಯದ ಜೊತೆಯಲ್ಲಿರಬಾರದು ಎಂದು ಹೇಳುತ್ತಿದ್ದಾರಲ್ಲಾ, ಅದನ್ನು ನೋಡಿಕೊಳ್ಳಿ, ಬೇರೆ ಪಾರ್ಟಿಯವರನ್ನು ನೋಡುವುದು ಬೇಡ ನೀವು. ಮೊದಲು ಶ್ರೀ ರಾಜಶೇಖರಮೂರ್ತಿಯವರನ್ನು ನೋಡಿಕೊಂಡು ಆಮೇಲೆ ಬೇರೆಯವರಿಗೆ ಅಡ್ವೈಸ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀ ರಾಜಶೇಖರಮೂರ್ತಿಯವರು ನಮ್ಮ ಪಕ್ಷದ ಹಿರಿಯ ನಾಯಕರು, ನಮ್ಮಲ್ಲೇ ಇರತಕ್ಕವರು, ಎಲ್ಲರೂ ಕೇಳುತ್ತಾರೆ, ಅನೇಕ ಸಾರಿ ಒಕ್ಕಲಿಗರಿಗೆ ಅನ್ಯಾಯವಾದಾಗ ಬೀದಿಗೆ ಮೊದಲು ಶ್ರೀ ನಾಗೇಗೌಡರೇ ಬರುತ್ತಾರೆ. ಹಾಗೆ ಎಲ್ಲರದ್ದೂ ಇರುತ್ತದೆ. ಆ ಮಂದಿಗೆ ಏಕೆ ಹೇಳುತ್ತೀರಿ ಅನ್ನುವುದಿಲ್ಲ. ನಾನು ಮಾನ್ಯ ಜೆ.ಹೆಚ್. ಪಟೇಲರಿಗೆ 40 ವರ್ಷ ಅವರು ಸೋಷಿಯಲಿಸ್ಟ್ ಪಾರ್ಟಿಯಲ್ಲಿ ಇಲ್ಲದೇ ಹೋಗಿದ್ದರೆ ನಾನು ಈ ಮಾತು ಕೇಳುತ್ತಿರಲಿಲ್ಲ. ನಿಮ್ಮಂತಹವರಿಗೆ ಕೇಳುತ್ತೇನೆಯೇ, ಶ್ರೀ ನಾಗೇಗೌಡರಿಗೆ ಕೇಳುತ್ತೇನೆಯೇ? 40 ವರ್ಷ ಈ ದೇಶದಲ್ಲಿ ಸಮಾಜವಾದದ ಹೆಸರು ಹೇಳಿಕೊಂಡು ಲೋಹಿಯಾರವರ ಹೆಸರು ಹೇಳಿಕೊಂಡು ಅನೇಕ ಯುವಕರಿಗೆ ಹುರಿದುಂಬಿಸಿ ಮಾತನಾಡಿದ್ದು ಎಲ್ಲಿ ಹೋಯಿತು ಎಂದು ಅವರಿಗೆ ಕೇಳುತ್ತಿದ್ದೇನೆ. ಸಾಮಾಜಿಕ ಸಮಾನತೆಯದ್ದು, ದುರ್ಬಲವರ್ಗದ ಬಗ್ಗೆ ಕಾಳಜಿ ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡತಕ್ಕದ್ದು ಎಲ್ಲಿ ಹೋಯಿತು ಸ್ವಾಮಿ ಎಂದು ಅವರಿಗೆ ಕೇಳುವುದಕ್ಕೆ ನನಗೆ ಹಕ್ಕಿದೆ ಅವರಿಗೆ ಕೇಳುತ್ತೇನೆ. ನಿಮಗೆ ಕೇಳುವುದಕ್ಕೆ ಹಕ್ಕೇ ಇಲ್ಲ. ಏಕೆಂದರೆ ಯಾರು ಮೊದಲಿನಿಂದಲೇ ಜಾತೀಯತೆಯನ್ನು ಬೆಳಸಬೇಕೆಂದು ಹುಟ್ಟಿದ್ದಾರೆ ಅವರಿಗೆ ಏಕೆ ಹೇಳಲಿಕ್ಕೆ ಹೋಗಲಿ?

ಒಂದು ಕೊಟೇಷನ್ ಹೇಳಲಾ? ಸಂದರ್ಭಕ್ಕೆ ತಕ್ಕ ಹಾಗೆ ತಾವು ಆ ವಿಚಾರ ತೆಗೆದಿದ್ದೀರಿ, ಅದಕ್ಕೆ ಹೇಳುತ್ತೇನೆ. ಜಾತಿ ಬಗ್ಗೆ ಡಾ|| ಅಂಬೇಡ್ಕರ್‌ರವರು ಒಂದು ಮಾತು ಹೇಳಿದ್ದಾರೆ, ಏಕೆಂದರೆ ಪದೇ ಪದೇ ನನ್ನನ್ನು ಕೆಣಕಲಿಕ್ಕೆ ಹತ್ತಿದ್ದೀರಿ, ಅದಕ್ಕೆ ನಾನು ಹೇಳಬೇಕಾಗಿದೆ. ಯಾವುದೇ ಒಂದು ಪ್ರಜಾಪ್ರಭುತ್ವದಲ್ಲಿ ಒಂದು ಜಾತಿಯಿಂದ ಯಾರೂ ರಾಜ್ಯವನ್ನು ಆಳುವುದಕ್ಕೆ ಆಗುವುದಿಲ್ಲ. ಒಂದು ಜಾತಿಯಿಂದ ಯಾರೂ ರಾಜ್ಯವನ್ನು ಕಟ್ಟಲಿಕ್ಕೆ ಸಹ ಆಗುವುದಿಲ್ಲ. ಮತ್ತು ಚುನಾಯಿಸಿ ಬರಲಿಕ್ಕೂ ಆಗುವುದಿಲ್ಲ. ಎಲ್ಲರ ಸಹಾನುಭೂತಿ ಮತ್ತು ಸಪೋರ್ಟ್ ಇದ್ದರೆ ಅಂತಹ ಒಂದು ವಾತಾವರಣ ಇದ್ದರೆ, ಒಂದು ಕಟ್ ಇದ್ದರೆ ಒಂದು ಐಡಿಯಾಲಜಿ ಇದ್ದರೆ ಇನ್ನು ಮೇಲೆ ಬರುತ್ತೇವೆ. ಕೆಲವು ಕಡೆ ಇರಬಹುದು. ಕೆಲವು ಕ್ಷೇತ್ರಗಳು ಇರುತ್ತವೆ. ಇಡೀ ದೇಶವನ್ನು ಸ್ಪಂದಿಸತಕ್ಕದ್ದು ರಾಜ್ಯವನ್ನು ಸ್ಪಂದಿಸತಕ್ಕದ್ದು ಜಾತಿಗಳಲ್ಲ. ಅವರು ತಮ್ಮ ಸ್ವಾರ್ಥಕ್ಕಾಗಿ ಇದನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಅದಕ್ಕೆ ಡಾ|| ಅಂಬೇಡ್ಕರ್‌ರವರು ಒಂದು ಕಡೆ ಹೇಳುತ್ತಾರೆ. ಈ ದೇಶ ಹೇಗಿದೆ ಅಂದರೆ;

"Caste has killed public spirit. Caste has made public opinion impossible. A Hindu's public is his caste. His loyalty is restricted only to his caste. Virtue has become caste ridden and morality has become caste bound. There is no sympathy to the deserving. There is no appreciation of meritorious. There is no charity to the needy. Suffering as such, cause for no response. There is charity but it begins with the caste and ends with the caste. There is sympathy but not for men of other castes. Would a Hindu acknowledges and follow the leadership of a great and good? There is appreciation of virtue but only when the man is a fellow caste. The whole morality is as bad as tribal morality. My castemen right or wrong, my castemen good or bad, it is not a case of standing by the caste. Have not Hindus committed treason..........." ಹೀಗೆ ಎಲ್ಲಾ ಜಾತಿಯವರು ಒಳ್ಳೆಯ ಗುಣ ಅವರಲ್ಲಿದ್ದರೆ ಅದನ್ನು ಅಪ್ರೀಷಿಯೇಟ್ ಮಾಡುವುದು.

ಅಧ್ಯಕ್ಷರು : ಇದೇ ಅನಾಲೀಸಸನ್ನು ಸ್ವಲ್ಪ ಮಾಡಿಫೈ ಮಾಡಿ ಶ್ರೀ ಲೋಹಿಯಾರವರು ಹೇಳಿದಾಗ Communists took an objection. It should be class-basis not Caste-Basis.

SRI MALLIKARJUNA KHARGE : I do agree. But unfortunately........

ಅಧ್ಯಕ್ಷರು : ಅದಕ್ಕೆ ಶ್ರೀ ಲೋಹಿಯಾದವರದು ಒಂದು ಕೊಟೇಷನ್ ಇದೆ. Caste in Indian context. "Caste is an immobile class. Class is a mobile Caste" ಎಂದು virtually it comes to that.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ some castes resembles with class only. ಏಕೆಂದರೆ ಅವರ ಜಾತಿಯ ಹೆಸರು ತೆಗೆದೆಕೊಂಡ ಕೂಡಲೇ ಇಂತಹ ಕ್ಯಾಸ್ಟ್ ಇಂತಹ ಕ್ಲಾಸ್ ಅಂತೆ. ಬೇರೆ ಕ್ಯಾಸ್ಟ್‌ನಲ್ಲೂ ಆ ಕ್ಲಾಸ್ ಇರಬಹುದು. ಆದರೆ ಕಡಿಮೆ.

ಅಧ್ಯಕ್ಷರು : ಟ್ರಾನ್ಸ್‌ಫರ್ಮೇಷನ್ ಎಲ್ಲಿಗೆ ಬಂದಿದೆ ಅಂದರೆ, ಒರಿಜನಲಿ, ವರ್ಣಾಶ್ರಮ ಧರ್ಮದ ಪ್ರಕಾರ ನಾಲ್ಕು ಪಂಗಡಗಳಿದ್ದವು. ಈಗ ಇತ್ತೀಚೆಗೆ ಹೊಸದೊಂದು ಸೇರಿಕೊಂಡಿದೆ. ನಿಯೋರಿಚ್ ಇದ್ದಾರಲ್ಲಾ, ಇವರೊಬ್ಬರು ಸೇರಿಕೊಂಡಿದ್ದಾರೆ. ಅಲ್ಲಿ ಆಲ್ ಕ್ಯಾಸ್ಟ್ಸ್ ಇದ್ದಾರೆ. Those who have become rich overnight they are a separate caste and class by themselves. They are called "Neo-rich".

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಅವರಿಗೆ ಅಂದರೆ ಸ್ವಲ್ಪ 40-45ವರ್ಷ ಅನುಭವವಿದೆಯೆಂದು ನಾವು ಪದೇ ಪದೇ ಅವರಿಗೆ ಹೇಳುತ್ತಿದ್ದೇವೆ. ಇಲ್ಲದಿದ್ದರೆ ಅವರಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಬೇರೆಯವರು ಯಾರು ಇದ್ದರು ಎಂಬುದನ್ನು ನಾವು ಹೇಳುವುದಿಲ್ಲ. ನೀವು ದಯವಿಟ್ಟು ಅವರ ಜೊತೆಯಲ್ಲಿ ಈಕ್ವಲ್ ಮಾಡಿಕೊಳ್ಳಲಿಕ್ಕೆ ಹೋಗಬೇಡಿ. ಏಕೆಂದರೆ ಅವರಿಗೆ ಸ್ವಲ್ಪ ಇರಬಹುದು. ನಾಗೇಗೌಡರೇ, ನಿಮ್ಮಂತಹವರ ಮಾತನ್ನು ಕೇಳಿದರೆ ಒಳ್ಳೆಯ ಆಡಳಿತ ಎಲ್ಲಿ ಸಿಗುತ್ತದೆ? ಏಕೆಂದರೆ ಆ ಎನ್‌ವೈರನ್‌ಮೆಂಟ್ ಹಾಗೆ ಇರುತ್ತದೆ.

ಅಧ್ಯಕ್ಷರು : ಶ್ರೀ ಬಸವಣ್ಣಪ್ಪನವರು ಸೋಷಿಯಲಿಸ್ಟ್ ಪಾರ್ಟಿಯಲ್ಲಿದ್ದರಲ್ಲಾ!

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀ ಬಸವಣ್ಣಪ್ಪನವರು ಹಾಗೆ ಇಲ್ಲ. ಇದಕ್ಕೆ ಅಸರ್ಟ್ ಮಾಡುವುದು ಬೇಕಾಗಿಲ್ಲ. ಅಕ್ಕಪಕ್ಕದಲ್ಲಿ ಒತ್ತಡ ಮತ್ತು ಆ ವಿಚಾರಧಾರೆಯ ಜನ ಹೆಚ್ಚಿನ ರೂಪದಲ್ಲಿ ಇದ್ದಾಗ ಆ ಪ್ರಭಾವ ಬೀರತಕ್ಕವರು ಅಕ್ಕಪಕ್ಕದಲ್ಲಿದ್ದರೆ ಆ ದಿಕ್ಕನ್ನು ಬದಲಾಯಿಸಬಹುದು.

ಅಧ್ಯಕ್ಷರು : ಸುಮಾರು ಜನ ಇದ್ದಾರಲ್ಲಾ, ಅವರು ಸೋಷಿಯಲಿಸ್ಟ್ ಪಾರ್ಟಿಯವರು. ಶ್ರೀ ನಾಗೇಗೌಡರು ಕಾಂಗ್ರೆಸ್ ಪಾರ್ಟಿಯವರು, ಶ್ರೀ ಬೈರೇಗೌಡರು ಮಾರ್ಕ್ಸಿಸ್ಟ್ ಪಾರ್ಟಿಯಲ್ಲಿದ್ದರು. ಎಲ್ಲಾ ಇಲ್ಲಿ ಅವರ ಜೊತೆಗೆ ಇದ್ದಾರಲ್ಲಾ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರದು ಕಾಂಗ್ರೆಸ್ ಪಾರ್ಟಿ ಅಲ್ಲ, ಪ್ರಾರಂಭದಲ್ಲಿ ಅವರು ರಿಪಬ್ಲಿಕನ್ ಪಾರ್ಟಿಯಲ್ಲಿದ್ದರು. ಹೌದು ಮೊದಲು ಶ್ರೀ ಆರ್ಮುಗಂ ಪಾರ್ಟಿಯಲ್ಲಿದ್ದರು. ಆಮೇಲೆ ಅಲ್ಲಿಂದ ಕಾಂಗ್ರೆಸ್ ಪಾರ್ಟಿಗೆ ಬಂದಿದ್ದು. ಬೇಕಾದರೆ ಅವರನ್ನೇ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು 28 ವರ್ಷಕ್ಕೆ ಗುಲ್ಬರ್ಗ ಸಿಟಿ ಕಾಂಗ್ರೆಸ್ ಕಮಿಟಿ ಅಧ್ಯಕ್ಷವಾಗಿದ್ದೆ. ಅದಕ್ಕಿಂದ ಮುಂಚೆ ರಿಪಬ್ಲಿಕನ್ ಪಕ್ಷದ ಸ್ಟೂಡೆಂಟ್ ಪ್ರೆಸಿಡೆಂಟ್ ಆಗಿದ್ದೆ, ಆಮೇಲೆ ಜನರಲ್ ಸೆಕ್ರೆಟರಿಯಾಗಿ ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಬೆಂಗಳೂರಿನಲ್ಲಿ ಎಲೆಕ್ಟ್ ಆಗಿದ್ದೆ. ಸ್ವಲ್ಪ ಅಲ್ಲಿ ಹೋಗಿ ಎಲೆಕ್ಟ್ ಆಗಿ ನೋಡಿ ಗೊತ್ತಾಗುತ್ತದೆ. ಜನರಲ್ ಸೆಕ್ರೆಟರಿ, ಸ್ಟೂಡೆಂಟ್ ಯೂನಿಯನ್‌ದ್ದು ಹೇಳುತ್ತಿದ್ದೇನೆ. ಕನ್ಸೂಮರ್ ಸೊಸೈಟಿ ಅದೆಲ್ಲಾ ಅಲ್ಲ. ನಾಮಿನೇಟೆಡ್

ಅದು ಆಗಬಹುದು. ಏಕೆಂದರೆ ಎಲ್ಲಿ ಸಾವಿರಾರು ವಿದ್ಯಾರ್ಥಿಗಳು ಎಲ್ಲಾ ಸಮಾಜದ ಎಲ್ಲಾ ಧರ್ಮದ ಜಾತಿಯ ಜನರು ಇರುತ್ತಾರಲ್ಲಾ ಅದರಲ್ಲಿ ಆಯ್ಕೆಯಾಗಿ ಬಂದರೆ ಸ್ವಲ್ಪ ಗೊತ್ತಾಗುತ್ತದೆ.

HON. SPEAKER : Any leader is at his best only when he is provoked. You are at your best today.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವಿರೋಧಪಕ್ಷದ ನಾಯಕರೇ, ಏಕೆ ನೀವು ಬೇಸರ ಮಾಡಿಕೊಳ್ಳುತ್ತೀರಿ, ಅಲ್ಲ ನೀವು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿದ್ದರೆ, ನಾನು ಆಂಧ್ರ, ಮದ್ರಾಸ್, ತಮಿಳುನಾಡು, ದೆಹಲಿಯವರು ಅಂತಹ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷನಾಗಿ ಐದು ವರ್ಷ ಇದ್ದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಕೆಪ್ಯಾಸಿಟಿಗೆ ಅದೂ ಕೂಡ ಕಡಿಮೆಯಾಯಿತು. ಇಂಟರ್‌ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಪ್ರೆಸಿಡೆಂಟ್ ಆಗಬೇಕಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಿಮಗೆ ನಾನು ನಾಮಿನೇಟ್ ಮಾಡಿಸಿಕೊಡುತ್ತೇನೆ. ಆಲ್ ಇಂಡಿಯಾದ್ದು ಒಂದು ಫಾರ್ಮರ್ಸ್ ಅಸೋಸಿಯೇಷನ್‌ಗೆ ನಿಮ್ಮನ್ನು ನಾಮಿನೇಟ್ ಮಾಡಿಸಿಕೊಡುತ್ತೇನೆ ಕಿಸಾನ್ ಸೆಲ್‌ನ ಅಧ್ಯಕ್ಷರಾಗಿ. ಅದು ಹೋಗಿಲಿ ಬಿಡಿ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಚಿತಾವಣಿ ಮಾಡಿ ಎಲ್ಲರನ್ನೂ ಎಕ್ಸ್‌ರೇ ಹಿಡಿಯುತ್ತಾ ಇದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಹೋಗಲಿ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಕೊನೆಯಪಕ್ಷ ಅಧಿಕಾರಕ್ಕೆ ಬಂದಮೇಲೆ ನಾವೇನು ಮಾಡಬಹುದು? ನಮ್ಮ ವಿಚಾರಧಾರೆಗಳು ಕೆಲವನ್ನಾದರೂ ಎಲ್ಲವನ್ನೂ ಕೂಡ ಒಬ್ಬ ವ್ಯಕ್ತಿ ಸಂಪೂರ್ಣವಾಗಿ ಆಚರಣೆಗೆ ತರುತ್ತಾನೆಂಬ ಬಗ್ಗೆ ನಂಬಿಕೆ ನನಗಿಲ್ಲ. ಏಕೆಂದರೆ ನಾನು ಸರ್ಕಾರದಲ್ಲಿದ್ದೆ. ಸರ್ಕಾರದಲ್ಲಿದ್ದು ಕೆಲಸ ಮಾಡಿದ್ದೇನೆ. ಎಲ್ಲವನ್ನೂ ಕೂಡ ಎಲ್ಲರಿಗೂ ಮಾಡುವುದಕ್ಕಾಗುವುದಿಲ್ಲ. ಆದರೆ ಕೆಲವೊಂದು ಆದರೂ ಕೂಡ ನಿಮ್ಮ ಅನಿಸಿಕೆಗಳನ್ನು ಇವತ್ತು ಹೇಳಿ, ಅವರಿಂದ ಜನತಾದಳ ಸರ್ಕಾರದ ಮೇಲೆ ಪರಿಣಾಮ ಬೀರತಕ್ಕ ಯಾವ ತತ್ವ, ಯಾವ ನೀತಿಗಳು ಆಚರಣೆಯಲ್ಲಿ ಬಂದಿದೆ? ಆಡಳಿತದಲ್ಲಿ ಯಾವುದು ಬಂದಿದೆ ಎಂಬುದನ್ನು ನನಗೆ ಹೇಳಿ? ಅಂಥಾದ್ದು ಆಗಿದೆಯೆಂದು ನನಗೆ ಹೇಳಿ. ಈಗ ಶ್ರೀ ದೇವರಾಜ ಅರಸು ಅವರದ್ದು ಹೇಳಬಹುದು. ಇಂತಿಂಥ ಕೆಲಸಗಳನ್ನು ಮಾಡಿದರು ಎನ್ನತಕ್ಕದ್ದನ್ನು ಹೇಳಬಹುದು. ಬ್ಯಾಕ್‌ವರ್ಡ್ ಕ್ಲಾಸಸ್ ಇಂಪ್ಲಿಮೆಂಟೇಷನ್ ಇರಬಹುದು, ಲ್ಯಾಂಡ್ ರಿಫಾರ್ಮ್ಸ್ ಇರಬಹುದು, ಡೆತ್‌ರಿಲೀಫ್ ಇರಬಹುದು, ಬಡವರಿಗೆ ಮನೆ ಕಟ್ಟಿಸತಕ್ಕದ್ದು ಇರಬಹುದು, ಶ್ರೀಮತಿ ಇಂದಿರಾ ಗಾಂಧೀಜಿಯವರು ಕೊಟ್ಟಿದ್ದ ಕಾರ್ಯಕ್ರಮದ ಜೊತೆಯಲ್ಲಿ ಅವರ ಒಂದು ಕಮಿಟ್‌ಮೆಂಟನ್ನೂ ಕೂಡ ಅವರು ಮಾಡಿ ತೋರಿಸಿಕೊಟ್ಟರು. ನಿಮ್ಮದೇನಿದೆ ಹೇಳಿ ನೋಡೋಣ? ನಿಮ್ಮದೇನಾದರೂ ಬೇಕಲ್ಲಾ. ನಿಮ್ಮದು ಒಂದಾದರೂ ಗುರುತು ಇದೆ ಎಂದರೆ ಯಾವುದೂ ಇಲ್ಲ. ನಿಮ್ಮದು 'ಖುರ್ಚಿ ಬಚಾವೋ' ಒಂದು

ಆಂಧೋಳನ, ಆ ಖರ್ಚಿಯನ್ನು ಹೇಗೆ ಭದ್ರವಾಗಿ ಇಟ್ಟುಕೊಳ್ಳಬೇಕು, ಅದಕ್ಕೆ ಏನೇನು ಬೇಕು ಎಂದು ಆ ತಂತ್ರವನ್ನೇ ಮೂರೂವರೆ ವರ್ಷಗಳಿಂದ ಮಾಡಿದಿರೇ ಹೊರತಾಗಿ ಉಳಿದಿದ್ದು ನೀವು ಏನು ಮಾಡಿದ್ದೀರಿ? ಕೆಲವು ಸಲ ಅವರ ಮಂತ್ರಿಗಳೇ ಉಳಿಸಿದರು, ಕೆಲವು ಸಲ ಶಾಸಕರು ಜಾತಿ ಆಧಾರದ ಮೇಲೆ ಉಳಿಸಿದರು. ಕೆಲವು ಸಲ ಇಲ್ಲಿ ಏನಾದರೂ ಬಿಕ್ಕಟ್ಟು ಬಂದಾಗ ನೀವು ಗಂಟೆಬಾರಿಸಿ ಅದನ್ನು ಸಮಾಧನಾ ಪಡಿಸಿದಿರಿ.

ಅಧ್ಯಕ್ಷರು : ಐದು ವರ್ಷಗಳಿಂದ ನಾನು ಗಂಟೆಯನ್ನು ಮುಟ್ಟಿಯೇ ಇಲ್ಲ. ನನ್ನ ಮೇಲೆ ಏಕೆ ಆಪಾದನೆ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಪಾದನೆ ಅಲ್ಲ. ನಾವು ಧರಣಿ ಮಾಡುವಾಗ, ವಾಕ್‌ಔಟ್ ಮಾಡುವಾಗ, ಅಥವಾ ಯಾವುದೋ ಒಂದು ಕೋಪದಲ್ಲಿದ್ದಾಗ, ತಾಪದಲ್ಲಿದ್ದಾಗ ಅಥವಾ ನಾವು ನಮ್ಮ ಬೇಡಿಕೆಯನ್ನು ಇಟ್ಟು ಇಲ್ಲಿ ಸ್ಟ್ರೈಕ್ ಮಾಡುವಾಗ ಅದಕ್ಕೆ ಸಮಾಧಾನ ಮಾಡಿ ಹೇಳಿಕೊಂಡು ಕೇಳಿಕೊಂಡುಹೋಗಿ, ಅವರ ಗಾಡಿ ಚಲ್ತಿಕಾ ನಾಮ್ ಗಾಡಿ ಹಾಗೆ ಇಲ್ಲಿ ನಡೆದಿದೆ. ಆದರೆ ಇದು ಸಮಾಜಕ್ಕೂ ಸರಿಯಲ್ಲ. ಮತ್ತು ರಾಜ್ಯದ ಜನತೆಗೂ ಸರಿಯಲ್ಲ. ಜನರಿಗೆ ಯಾವುದಾದರೂ ಒಳ್ಳೆಯದಾಗಬೇಕು ಎಂದರೆ ಅದು ಸರಿಯೆಂದು ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಐದು ವರ್ಷಗಳಲ್ಲಿ ಇವರಿಗೆ ಸಂಪೂರ್ಣವಾಗಿ ಅವಕಾಶ ಸಿಕ್ಕಿದರೂ ಕೂಡ ಅದರ ಸದುಪಯೋಗವನ್ನು ಇವರು ಮಾಡಿಕೊಂಡಿಲ್ಲ ಎನ್ನತಕ್ಕದ್ದು ವ್ಯಥೆ ನನಗೆ. ಅದಲ್ಲದೆ ಇವತ್ತಿನದಿವಸ ಒಂದು ಮಾತನ್ನು ನಾನು ಹೇಳಬೇಕಾಗಿದೆ. ಆಮೇಲೆ ಸಮೃದ್ಧ ಕರ್ನಾಟಕಕ್ಕಾಗಿ ನಾವು ಕೆಲಸ ಮಾಡುತ್ತೇವೆ ಎಂದು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದಿರಿ. ಆದರೆ ಮಾನ್ಯ ಆರ್ಥಿಕ ಮಂತ್ರಿಗಳು ಇಲ್ಲಿ ಇಲ್ಲ. ಬಹುಶಃ ಶ್ರೀ ನಾಗೇಗೌಡರು ಇಲ್ಲಿ ಹರಟೆ ಹೊಡೆಯುತ್ತಿದ್ದಾರೆ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಾದರೂ ಇದ್ದಿದ್ದರೆ ಚೆನ್ನಾಗಿತ್ತು. ನಾನು ಕೆಲವು ಡಾಕ್ಯೂಮೆಂಟ್ಸ್, ಫಿಗರ್ಸ್ ಕೊಡುತ್ತಿದ್ದೇನೆ. ಐದು ವರ್ಷದಲ್ಲಿ ಕೊನೆಯ ಪಕ್ಷ ಅವರ ಕಣ್ಣು ತರೆದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸುಮ್ಮನೆ ಹೀಗೆ ಕಾಮ್ ಚಲಾವೋ ಎಂದು ಉತ್ತರ ಕೊಟ್ಟರೆ ಅದು ಬೇರೆ. ಅಥವಾ ಕಾಮ್ ಚಲಾವೋ ಸರ್ಕಾರ ಎಂದು ನಡೆಸಿದರೆ ಅದೂ ಸಹ ಬೇರೆ. ಆದರೆ ಇದರಲ್ಲಿ ರಾಜ್ಯಸ್ವದ ಕೊರತೆ ಎಷ್ಟು ಇದೆ? ಸಮೃದ್ಧ ಕರ್ನಾಟಕ ಎಂದರೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇರಬೇಕು. ಸಾಲ ಕಡಿಮೆ ಇದ್ದು ಆಸ್ತಿ ಜಾಸ್ತಿ ಇರಬೇಕು. ಕೊಟ್ಟಂಥ ಆಶ್ವಾಸನೆಗಳನ್ನು ಪೂರ್ತಿಯಾಗಿ ಅನುಷ್ಠಾನಕ್ಕೆ ತರಬೇಕು. ಅದು ಏನಾದರೂ ಎರಡು ಅಥವಾ ಮೂರು ಪರ್ಸೆಂಟ್ ನಷ್ಟ ವ್ಯತ್ಯಾಸ ಇದ್ದರೆ ಪರವಾಗಿಲ್ಲ. ಕೊನೆಗೆ ಐದು ಪರ್ಸೆಂಟ್ ವ್ಯತ್ಯಾಸ ಇದ್ದರೂ ಕೂಡ ನಾನು ಒಪ್ಪುತ್ತೇನೆ. ಆದರೆ ಈ ರಾಜ್ಯಸ್ವ ಹೇಗಿದೆ ಎಂದರೆ 1995-96ರಲ್ಲಿ 200ಕೋಟಿ ರೂಪಾಯಿಗಳ ಕೊರತೆ ಇತ್ತು. 1996-97ರಲ್ಲಿ 462 ಕೋಟಿ ರೂಪಾಯಿಗಳನ್ನು ಸೇಲ್ಸ್ ಟ್ಯಾಕ್ಸ್, ಎಕ್ಸೈಸ್ ಬೇರೆ ಎಲ್ಲಾ ವಸೂಲಿಯಾಗತಕ್ಕಂಥಾದ್ದು. ಇವರು ಏನು ಟಾರ್ಗೆಟ್ ಫಿಕ್ಸ್ ಮಾಡಿದ್ದರು, ಅದಕ್ಕಿಂತಲೂ ಕಡಿಮೆ ಮಾಡಿದ್ದಾರೆ. ಅಂದರೆ 462ಕೋಟಿ ರೂಪಾಯಿಗಳು ಕಡಿಮೆಯಾಗಿದೆ. 1997-98ರಲ್ಲಿ 415 ಕೋಟಿ ರೂಪಾಯಿಗಳು ಕೊರತೆಯಿದೆ. 1998-99ರಲ್ಲಿ 1396 ಕೋಟಿ ರೂಪಾಯಿಗಳ ಕೊರತೆ ಇದೆ. ಆಮೇಲೆ 1999-2000ನೇ ಇಸವಿಗೆ ಅಂದಾಜು ಮಾಡಿರುವುದು 1399ಕೋಟಿ ರೂಪಾಯಿಗಳು

ಆಗಬಹುದು ಎನ್ನತಕ್ಕಂಥಾದ್ದು ಇದೆ. ಇದು ಇಷ್ಟು ರೆವಿನ್ಯೂ ಡಿಫಿಸಿಟ್ ಇರತಕ್ಕಂಥಾದ್ದು. ಆಮೇಲೆ ಒಟ್ಟು ಆರ್ಥಿಕ ಕೊರತೆ. 1990-91ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಿನದ್ದೂ ನಾನು ಹೇಳುತ್ತೇನೆ. ಇಲ್ಲದಿದ್ದರೆ ಮತ್ತೆ ಅವರು ನಮ್ಮನ್ನು ಕೇಳಬಹುದು. 1990-91ರಲ್ಲಿ ಕೊರತೆ ಇದ್ದದ್ದು 23.68 ಕೋಟಿ ರೂಪಾಯಿಗಳು. 1991-92ರಲ್ಲಿ 58 ಕೋಟಿ ರೂಪಾಯಿಗಳು. 1992-93ರಲ್ಲಿ 5 ಕೋಟಿ ರೂಪಾಯಿಗಳು ಮತ್ತು 1993-94ರಲ್ಲಿ 2 ಕೋಟಿ ರೂಪಾಯಿಗಳು, 1994-95ರಲ್ಲಿ 27 ಕೋಟಿ ರೂಪಾಯಿಗಳು. ಇವರದ್ದು 1995-96ರಲ್ಲಿ 82 ಕೋಟಿ ರೂಪಾಯಿಗಳು, 1996-97ರಲ್ಲಿ 132 ಕೋಟಿ ರೂಪಾಯಿಗಳು. 1997-98ರಲ್ಲಿ 96 ಕೋಟಿ ರೂಪಾಯಿಗಳು. 1998-99ರಲ್ಲಿ 196 ಕೋಟಿ ರೂಪಾಯಿಗಳು ಈ ವರ್ಷದ್ದು ಈಗ ನಿರೀಕ್ಷೆ ಮಾಡಿರುವುದು 124 ಕೋಟಿ ರೂಪಾಯಿಗಳು. ಅಂದರೆ ಯಾವ ರೀತಿಯಾಗಿ ಇವರು ಸಮೃದ್ಧ ಕರ್ನಾಟಕ ಮಾಡುವುದಕ್ಕೆ ಎಷ್ಟೊಂದು ಹಣ ಸಂಗ್ರಹಿಸಿದ್ದಾರೆ, ಎಷ್ಟು ಕೊರತೆ ಇದೆ ಎನ್ನುವುದಕ್ಕೆ ಇದು ಆಡಿಟೆಡ್ ಫಿಗರ್ಸ್ ನಮ್ಮದಲ್ಲ. ಮತ್ತೆ ನೀವು ಕೇಳಬಹುದು, ಏಕೆ ಇವನ್ನು ಹುಟ್ಟಿಸಿಕೊಂಡು ಹೇಳುತ್ತಿದ್ದೀರಿ ಎಂದು ಇದು ನಾವು ಹುಟ್ಟಿಸಿದ್ದು ಅಲ್ಲ. ಇದೆಲ್ಲವೂ ಪುಸ್ತಕವನ್ನು ಗಿಟ್ಟಿಸಿಕೊಂಡು ಹೇಳುವಂಥಾದ್ದು. ಇದು ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಅವರ ಅಂಕಿಅಂಶಗಳು. ಆಮೇಲೆ ಇವರು ಮಾನ್ಯ ಖರ್ಗೆಯವರು ಭಾಷಣ ಮಾಡುವಾಗ ಪದೇ ಪದೇ ಹೀಗೆ ಹೇಳುತ್ತಾರೆ ಎಂದು ಹೇಳುತ್ತಾರೆ. ಇದು ಆಸ್ತಿಗಿಂತಲೂ ಲಯಾಬಿಲಿಟೀಸ್ ಜಾಸ್ತಿ. ಇದೆಲ್ಲವೂ ಸರ್ಕಾರವೇ ಮಾಡಿದ್ದು ಎಂದು ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾವ ಸರ್ಕಾರ ಇದ್ದರೂ ಕೂಡ ಆಸ್ತಿಗಿಂತಲೂ ಲಯಾಬಿಲಿಟೀಸ್ ಜಾಸ್ತಿ ಮಾಡಿಲ್ಲ. ಬೇಕಾದರೆ ಹಿಂದಿನ ನಲವತ್ತು ವರ್ಷಗಳ ಇತಿಹಾಸವನ್ನು ತೆಗೆದುಕೊಳ್ಳಿ. ಇವತ್ತು ಏನಾಗಿದೆ ಎಂದರೆ ನಮ್ಮ ಆಸ್ತಿಗಿಂತಲೂ ಲಯಾಬಿಲಿಟೀಸ್ ಜಾಸ್ತಿಯಾಗಿದೆ. ನಮ್ಮ ಆಸ್ತಿ ಇವತ್ತು ಸುಮಾರು 19314 ಕೋಟಿ ಇದ್ದರೆ.

ಅಧ್ಯಕ್ಷರು : ಜನರಲ್ ಲೋನಿಂಗ್ ಪ್ಯಾಟರ್ನ್ ಹೇಗೆ ಎಂದರೆ ನೂರು ರೂಪಾಯಿಗಳ ಆಸ್ತಿ ಇದ್ದರೆ 30-40 ರೂಪಾಯಿಗಳ ಸಾಲ ಕೊಡುತ್ತಾರೆ. ನೂರು ರೂಪಾಯಿಗಳ ಆಸ್ತಿ ಇದ್ದು, ಇನ್ನೂರು ರೂಪಾಯಿಗಳ ಸಾಲ ತೆಗೆದುಕೊಳ್ಳಬೇಕಾದರೆ ಕ್ರೆಡಿಬಿಲಿಟಿ ಇದೆಯೆಂದು ಆಯಿತಲ್ಲಾ!

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆದರೆ ನಿಮ್ಮ ದಿವಾಳಿತನ ಯಾವಾಗ ಗೊತ್ತಾಗುತ್ತದೆ ಎಂದರೆ, ನೀವು ಮನೆಗೆ ಹೋದಾಗ ಗೊತ್ತಾಗುತ್ತದೆ. ನೀವು ಒಳಗಿಂದೊಳಗೆ ಸಾಲಮಾಡಿ, ಮಜಾಮಾಡಿ, ಇಸ್ಪೀಟ್ ಆಟ ಆಡಿ ಕಳೆದು ಬರುತ್ತೀರಿ. ಆದರೆ ಅಲ್ಲಿ ಮನೆಗೆ ಹೋದಾಗ ಆಕ್ಚುಯಲ್ ಆಗಿ ನಿಮಗೆ ಅದು ಗೊತ್ತಾಗುತ್ತದೆ. ನಾಳೆ ಮನೆ ಹರಾಜಿಗೆ ಬರುತ್ತದೆ ನೋಡಿ, ಆಗ ನಿಮಗೆ ಅದು ಗೊತ್ತಾಗುತ್ತದೆ.

ಅಧ್ಯಕ್ಷರು : ಅಂದರೆ ಇದು ಕ್ರೆಡಿಬಿಲಿಟಿ ಅಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿದ್ದಾರೆ ಎಂದು ನಾನು ಹೇಳುತ್ತೇನೆ. 1992-93ರಲ್ಲಿ ನಮ್ಮ ಆಸ್ತಿ ಇದ್ದದ್ದು 8485 ಕೋಟಿ ರೂಪಾಯಿಗಳಷ್ಟು. ನಮ್ಮ ಸಾಲ ಇರತಕ್ಕದ್ದು 7828 ಕೋಟಿ ರೂಪಾಯಿಗಳಷ್ಟು ಅಂದರೆ ಒಂದು ಸಾವಿರ ರೂಪಾಯಿಗಳಷ್ಟು ಹೆಚ್ಚಿಗೆ ಇತ್ತು. ಈಗ ನಿಮಗೆ ಗೊತ್ತಿದೆ, 1999-2000ನೇ ಸಾಲಿನಲ್ಲಿ 19314 ಕೋಟಿ ರೂಪಾಯಿಗಳ ಆಸ್ತಿ ಇದ್ದರೆ, ಸಾಲ ಇರುವುದು

21,748 ಕೋಟಿ ರೂಪಾಯಿಗಳಷ್ಟು ಅಂದರೆ 2434 ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಇದೆ. ಮೊದಲು ಸಾಲಕ್ಕಿಂತಲೂ, ಆಸ್ತಿ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಇತ್ತು. ಈಗ ಸಾಲ ಹೆಚ್ಚಾಗಿದೆ. ರಾಜ್ಯದ ಆಡಿಟರ್ ಜನರಲ್‌ರವರು ಯಾವಾಗಲೂ ಹೇಳುತ್ತಾರೆ, ಲಯಾಬಿಲಿಟೀಸ್ 1:2:1 ರೇಷಿಯೋದಲ್ಲಿ ಇರಬೇಕು ಎಂದು. ಹಾಗಿದ್ದರೆ ಅದು ರಾಜ್ಯದ ತೃಪ್ತಿಕರವಾದ ಆರ್ಥಿಕ ಪರಿಸ್ಥಿತಿ ಎನ್ನಿಸಿಕೊಳ್ಳುತ್ತದೆ. ಇದು ಆಡಿಟರ್ ಜನರಲ್ ಅವರ ರಿಪೋರ್ಟಿನಲ್ಲಿ ಇರುವಂಥಾದ್ದು. ಒಂದು ರೂಪಾಯಿಗಳ ಆಸ್ತಿ ಇದ್ದರೆ, ಒಂದು ರೂಪಾಯಿ ಸಾಲ. ಆದರೆ ಈಗ ನಾವು ಎಲ್ಲಿಗೆ ಬಂದಿದ್ದೇವೆ? ಈ ರೂಪಾಯಿ ಬೆಲೆ 87 ಪೈಸೆಯಾಗಿದೆ. ಅಂದಮೇಲೆ ನಿಮ್ಮ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ. ಮತ್ತೆ ಯಾವ ಭಾಷೆಯಲ್ಲಿ ನಿಮಗೆ ಹೇಳಬೇಕು? ನಾವು ಅಂಕಿ ಅಂಶಗಳನ್ನು ನಿಮಗೆ ಕೊಟ್ಟರೂ ನೀವು ಅದನ್ನು ಒಪ್ಪುವುದಿಲ್ಲ. ಆಡಿಟರ್ ಜನರಲ್ ರವರ ರಿಪೋರ್ಟನ್ನೂ ಒಪ್ಪುವುದಿಲ್ಲ, ಆಯಿತು. ನೀವೇ ಪ್ರಿಂಟ್ ಮಾಡಿದಂಥ ನಿಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಏನಿದೆ, ಅದನ್ನು ಹೇಳಿದರೂ ಕೂಡ ನೀವು ಒಪ್ಪುವುದಿಲ್ಲ. ಇವತ್ತು ಏನು ಪರಿಸ್ಥಿತಿ ಬಂದಿದೆ ಎಂದರೆ ಆಸ್ತಿ ಇವತ್ತು ಏನಿದೆ, ಅದಕ್ಕಿಂತ ಹೆಚ್ಚು ಸಾಲದ ಹೊರೆಯನ್ನು ಮಾಡಿದ್ದೇವೆ. ಆಸ್ತಿ ಮತ್ತು ಸಾಲದ ಅಂತರವನ್ನು ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳವರೆಗೆ ನಾವು ಮಾಡಿದ್ದೇವೆ. ಇದು ಒಂದು ಕಡೆ ಇರಲಿ. ಆಮೇಲೆ ಪ್ಲಾನ್ ಸ್ಕೀಮ್ ಆದರೂ ಸರಿಯಾಗಿ ಇಂಪ್ಲಿಮೆಂಟೇಷನ್ ಮಾಡಿದ್ದೀರಾ? ಪ್ಲಾನ್ ಸ್ಕೀಮ್ಸ್‌ನಲ್ಲಿ ಕೂಡ 1995-96ರಲ್ಲಿ ನಿಮ್ಮ ಪರಿಷ್ಕೃತ ಮೊಬಲಗು 3575 ಕೋಟಿ ರೂ. ಇದ್ದರೆ ಸಾಧನೆ ಮಾಡಿದ್ದು 3100 ಕೋಟಿ ರೂಪಾಯಿಗಳಷ್ಟು ಅಂದರೆ 475 ಕೋಟಿ ರೂಪಾಯಿಗಳನ್ನು ಹಣ ಇರಲಾರದ್ದಕ್ಕೆ ಕಡಿತಗೊಳಿಸಿದಿರಿ. ಇಷ್ಟು ಸಾಲದ ಹೊರೆ ಇದ್ದರೂ ಕೂಡ ಇವತ್ತು ನೀವು ಪ್ಲಾನ್ ಸ್ಕೀಮ್ಸ್‌ನ್ನು ಕೂಡ ಇಂಪ್ಲಿಮೆಂಟೇಷನ್ ಮಾಡುವುದಕ್ಕೆ ಆಗಿಲ್ಲ. ಅದರ ನಂತರ 1998-99ರಲ್ಲಿ 222 ಕೋಟಿ ರೂಪಾಯಿ ಅದೇ ರೀತಿಯಾಗಿ 1996-97ರಲ್ಲಿ 660 ಕೋಟಿ ರೂ. ಖೋತಾ. ಹೀಗೆ ಎಲ್ಲಿ ಹೋದರೂ ಬರೇ ಖೋತಾ ಖೋತಾ ಹೊರತಾಗಿ ಸರ್‌ಪ್ಲಸ್ ಎನ್ನುವುದು ಇಲ್ಲವೇ ಇಲ್ಲ. ಅದು ಸರಿಸಮಾನವಾಗಿ ಕೂಡ ಇಲ್ಲ. ಏನೋ 5-10 ಪರ್ಸೆಂಟ್ ವ್ಯತ್ಯಾಸ ಇದ್ದರೆ ಪರವಾಗಿಲ್ಲ. ಅದು ಕೂಡ ಇಲ್ಲ. ಅಂದಮೇಲೆ ನಿಮ್ಮ ಆರ್ಥಿಕ ಪರಿಸ್ಥಿತಿ ಹೇಗೆ ಇದೆ ಎನ್ನುವುದಕ್ಕೆ ಇದೇ ಸಾಕು. ನಾವು ಹೇಳಿದಾಗಲೆಲ್ಲಾ ನಾವು ಸಾಲ ಮಾಡಿ ಹೋಳಿಗೆ ತಿನ್ನುತ್ತೇವೆ ಎಂದು ಹೇಳಿದರೆ ಇದನ್ನು ಉತ್ತರ ಎಂದು ಹೇಳಬೇಕೇ? ನೀವು ಏನು ಮಾಡಿದಿರಿ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಟ್ಟು ಉತ್ತರ ಕೊಡಬೇಕು. ನಾವು ಸಿ ಅಂಡ್ ಎ.ಜಿ ಅವರ ರಿಪೋರ್ಟ್ ಏನಿದೆ ಅದರ ಆಧಾರದ ಮೇಲೆ ಹೇಳುತ್ತೇವೆ. ಅದರ ಮೇಲೆ ಆರ್ಥಿಕ ಪರಿಸ್ಥಿತಿ ಸರಿಯಿದೆಯೋ, ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದೆಯೋ ಎಂದು ಹೇಳಬೇಕೇ ಹೊರತು ಬೇರೆ ಯಾವುದೂ ಕೂಡ ಹೇಳತಕ್ಕಂಥಾದ್ದು ಅಲ್ಲ ಎನ್ನತಕ್ಕಂಥ ಮಾತನ್ನು ಇವತ್ತು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

1.00 ಪಿ.ಎಂ

ಆಮೇಲೆ ಈ ರೂರಲ್ ಡೆವಲಪ್‌ಮೆಂಟ್ ಬಗ್ಗೆ ಸಾಕಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು

ಮಾತು ಹೇಳುತ್ತೇನೆ. ಹಿಂದೆ ನಮ್ಮ ರೂರಲ್ ಡೆವಲಪ್‌ಮೆಂಟ್ ಆಕ್ಟ್‌ನಲ್ಲಿ ಏನಿತ್ತು ಎಂದರೆ, proportionate to the population of SCs/STs ಎನ್ನತಕ್ಕ ಪದ ಇತ್ತು. ಇವತ್ತು ಏನು ಮಾಡಿದ್ದಾರೆಂದರೆ, ಅದನ್ನು ತೆಗೆದುಹಾಕಿ, ಹಿಂದೆ 80,627 ಸದಸ್ಯರು ಇದ್ದರೆ, ಈಗ 35,305 ಸದಸ್ಯರಿದ್ದಾರೆ, ಅಂದರೆ 43 ಪರ್ಸೆಂಟ್ ಮಹಿಳೆಯರು ಇದರಲ್ಲಿ ಬಂದಿದ್ದಾರೆ. ಆಮೇಲೆ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು 17,918 ಅಂದರೆ 22 ಪರ್ಸೆಂಟ್, ಆಮೇಲೆ 9 ಪರ್ಸೆಂಟ್ ಟ್ರೈಬ್‌ನವರು ಬಂದಿದ್ದಾರೆ. ಹಿಂದುಳಿದ ವರ್ಗದವರು 35 ಪರ್ಸೆಂಟ್, ಸಾಮಾನ್ಯ ವರ್ಗದವರು 35 ಪರ್ಸೆಂಟ್. ಇವರು ತಿದ್ದುಪಡಿ ತಂದಿದ್ದರಿಂದ ಏನಾಗಿದೆ ಎಂದರೆ, ಈ ವೀಕರ್ ಸೆಕ್ಷನ್ಸ್, ಎಸ್‌ಸಿ-ಎಸ್‌ಟಿಯವರಿಗೆ ಹೆಚ್ಚು ಸ್ಥಾನಮಾನ ಹೋಗುತ್ತಾ ಇದೆ, ಹಿಂದುಳಿದವರಿಗೆ ಹೆಚ್ಚಿನ ಸ್ಥಾನ ಹೋಗುತ್ತಾ ಇದೆ, ಇದನ್ನು ಹೇಗೆ ಕಡಿತಗೊಳಿಸಬೇಕು ಎಂಬ ದೃಷ್ಟಿಯಿಂದ ಮೊನ್ನೆ ತಿದ್ದುಪಡಿ ತಂದು ಅದಕ್ಕೆ ಲಿಮಿಟ್ ಹಾಕಿದರು. In proportion to the population ಎನ್ನತಕ್ಕ ಪದ ತೆಗೆದು ಯಾವ ಯಾವ ಜಿಲ್ಲೆಯಲ್ಲಿ ಏನು ಜನಸಂಖ್ಯೆ ಇದೆ, ಅದಕ್ಕೆ 15 ಪರ್ಸೆಂಟ್, 3 ಪರ್ಸೆಂಟ್ ಎನ್ನತಕ್ಕ ಕಡಿವಾಣ ಹಾಕಿ ಇವತ್ತು ರೆಡ್ಯೂಸ್ ಮಾಡಿದರು. ತಮಗೆ ಗೊತ್ತಿದೆ, 1988ರಲ್ಲಿ ಸಿನಾನಿಮಸ್ ಚೇಂಜ್ ಆಯಿತು. ಸೆನ್ಸಸ್ ಬರತಕ್ಕಂಥಾದ್ದೇ 1991ರಲ್ಲಿ ಬಂತು. 1981ಕ್ಕೆ ಅದು ಕಂಪ್ಲೀಟ್ ಆಗಲಿಲ್ಲ. ಏಕೆಂದರೆ 1979ರಲ್ಲಿ ಪ್ರೆಸಿಡೆಂಟ್ ಆಫ್ ಇಂಡಿಯಾ ಅಸೆಂಟ್ ಬಂತು, 1981ರಲ್ಲಿ ಯಾವ ಸೆನ್ಸಸ್ ಕೂಡ ಬರಲಿಲ್ಲ. 1991ರಲ್ಲಿ ಎಸ್‌ಸಿ/ಎಸ್‌ಟಿಗಳ ಸರಿಯಾದ ಜನಸಂಖ್ಯೆ ಸಿಗತಕ್ಕಂತಾದಕ್ಕೆ ಅವಕಾಶ ಆಯಿತು. ಆದರೆ, ಅದು ಯಾವುದನ್ನೂ ನೀವು ಗಣನೆಗೆ ತೆಗೆದುಕೊಂಡಿಲ್ಲ. ಆ ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಪ್ರಕಾರ ಇವತ್ತು 23 ಪರ್ಸೆಂಟ್ ಇದ್ದಾರೆ. ಅಂದರೆ ನೀವು 23 ಪರ್ಸೆಂಟ್ ರಿಸರ್ವೇಷನ್ ಕೊಡುವುದಿಲ್ಲ. ಇವತ್ತು ನೀವು ರಿಸ್ಟ್ರಿಕ್ಟ್ ಮಾಡಿದ್ದು 18 ಪರ್ಸೆಂಟ್ ಅಂದಾಗ, ಇದು ನೀವು ಸಂವಿಧಾನಕ್ಕೆ ಬಗೆದಂತಹ ದ್ರೋಹ ಅಲ್ಲವೇ? ಏಕೆಂದರೆ ಸಂವಿಧಾನದಲ್ಲಿ ಮತ್ತು Peoples Representation Act ಎಂದು ಏನಿದೆ ಈ ಆಕ್ಟ್‌ನಲ್ಲಿ proportionate to the population ಎನ್ನತಕ್ಕಂಥ ಪದ ಇದ್ದು ಆ ಜನಸಂಖ್ಯೆಗೆ ಅನುಗುಣವಾಗಿ ರಿಸರ್ವೇಷನ್ ಕೊಡಬೇಕೆಂದು ಇದ್ದುದ್ದನ್ನು ತೆಗೆದು ಹಾಕಿದರು. ಇದು ನಿಮ್ಮ ಸಾಮಾಜಿಕ ಕಳಕಳಿ. ಈ ಸಮಾಜದ ಬಗ್ಗೆ ದೊಡ್ಡ ಮಾತು. ಹಿಂದಿನ ಸರ್ಕಾರಗಳು ಏನು ಮಾಡಿವೆ, ಅಷ್ಟನ್ನಾದರೂ ಉಳಿಸಿದರೆ ಸಾಕು, ನಿಮ್ಮ ಕೈಯಿಂದ ಹೊಸದು ಮಾಡುವುದು ಬೇಡ. ಈ ಬಗ್ಗೆ ರೋಸ್ಟರ್ ಸಿಸ್ಟಂ ಮಾಡಿದಿರಿ, ಇದ್ದುದ್ದನ್ನೇ ಕಸಿದುಕೊಂಡಿರಿ. Proportionate to the population ಅಂತ ಏನು ಇತ್ತು ಅದನ್ನು ತೆಗೆದುಹಾಕಿ, ಈ ರೀತಿಯಾಗಿ ನಿಗದಿ ಮಾಡಿ, ಅವರಿಗೆ ಸಿಗತಕ್ಕ ಸೌಲಭ್ಯಗಳು ಇಲ್ಲದಂತಾಗಿದೆ. ಏನು ಇನ್ನೂ 2 ಪರ್ಸೆಂಟ್ ಹೆಚ್ಚಿಗೆಯಾಗಿದ್ದರೆ ನಿಮಗೆ ತೊಂದರೆಯಾಗುತ್ತಿತ್ತೇ? ಸಾವಿರಾರು ವರ್ಷಗಳ ಕಾಲ ಆಳಿದಿರಿ, ಇನ್ನೂ ನಿಮಗೆ ಅಧಿಕಾರ ದಾಹ ಇದೆ. ಪಾಪ, ಅವರೇನೋ ಈಗ ಕಣ್ಣು ತೆರದು ಮುಂದಕ್ಕೆ ಬಂದರೆ ಅವರಿಗೆ ಸೌಲಭ್ಯಗಳನ್ನು ಕೊಡುತ್ತಿಲ್ಲ. ಈ ಆಕ್ಟ್ ಬಂದೇ ಬಹಳ ಎಂದರೆ 10 ವರ್ಷಗಳಾಯಿತು. 1986ರಲ್ಲಿ ಇದು ಇರಲಿಲ್ಲ. ಮೊನ್ನೆ ಮಾನ್ಯ ಘೋರ್ಪಡೆಯವರು ಮಾಡಿದಂಥ ಭಾಷಣದ ಸಮಯದಲ್ಲಿ ನಾವು ಇದನ್ನು ಸೇರಿಸಿದೆವು. 10 ವರ್ಷ ಕೂಡ ನೀವು ತಾಳುವುದಕ್ಕೆ ತಯಾರಿಲ್ಲ. ನಿಮ್ಮ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರವನ್ನು ಬೇರೆಯವರು ಯಾವ ರೀತಿ ತಾಳಬೇಕು? ನಾವು ಇದನ್ನು ಯಾರಿಗೆ ಹೇಳಿಕೊಳ್ಳೋಣ? ನಮ್ಮ ಪರ

ಮಾತನಾಡುವವರು ಸರ್ಕಾರದಲ್ಲಿ ಯಾರೂ ಇಲ್ಲ ಮಾನ್ಯ ಮುಖ್ಯಮಂತ್ರಿಯವರಿಗೆ ಏನಾದರೂ ಈ ಬಗ್ಗೆ ವಿಚಾರ ಚಿಂತನೆ ಇದೆಯೆಂದರೆ ಅವರು ಇದೆಲ್ಲವನ್ನೂ ಮರೆತು, ಕುರ್ಚಿ ಉಳಿಸಿಕೊಳ್ಳುವ ಆಂಧೋಳನದಲ್ಲಿ ಉಳಿದುಕೊಂಡಿದ್ದಾರೆ. ಅಂದಾಗ ನಾವು ಹೇಳುವುದು ಯಾರಿಗೆ? ನಾವು ಜನರಿಗೆ ಪ್ರಚೋದನೆ ಮಾಡಿಕೊಂಡು ಅಡ್ಡಾಡಬೇಕೇ? ಇದೇ ಮಾತನ್ನು ಹೇಳಿ ಈ ಸಮಾಜದಲ್ಲಿ ಘರ್ಷಣೆ ಮಾಡೋಣವೇ? ಈ ಸಮಾಜದಲ್ಲಿ ಘರ್ಷಣೆಯಾಗಬಾರದು, ಈ ಮಾತಿಗೆ ನಾವು ಹೆಚ್ಚಿನ ಪ್ರೋತ್ಸಾಹ ನೀಡಿ, ಪ್ರತಿಯೊಂದು ಕಡೆ ಪ್ರತಿಭಟನೆ ಆಗಬಾರದು ಎನ್ನುವ ದೃಷ್ಟಿಯಿಂದಲೇ ನಾವು ಈ ಸದನದಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ನೀವು ಕಾಳಜಿ ಇಟ್ಟು ಅದರ ಬಗ್ಗೆ ಕೆಲಸ ಮಾಡಿದ್ದರೆ, ಏನಾದರೂ ಬದಲಾವಣೆ ಆಗುತ್ತಿತ್ತು. ಆದರೆ ನೀವು ಪ್ರತಿಯೊಂದಕ್ಕೂ ಕೂಡ ಬೇರೆ ದೃಷ್ಟಿಯಿಂದ ನೋಡಿದರೆ ಸಾಮಾಜಿಕ ನ್ಯಾಯ ಕೊಡತಕ್ಕ ದೃಷ್ಟಿಕೋನ ನಿಮ್ಮದಲ್ಲ. ಸಾಮಾಜಿಕ ನ್ಯಾಯ ಕೊಡುವುದರಲ್ಲೂ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎನ್ನುವುದಕ್ಕೆ ಇದೊಂದೇ ಉದಾಹರಣೆ ಸಾಕು. ಎಲ್ಲಿ ಜನಪ್ರತಿನಿಧಿಗಳು, ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು ಅವರಿಗೆ ಇರತಕ್ಕ ಹಕ್ಕುಗಳನ್ನು ಮೊಟಕುಗೊಳಿಸತಕ್ಕ ಎಲ್ಲಾ ಪ್ರಯತ್ನವನ್ನು ನೀವು ನಡೆಸಿದಿರಿ. ಜನ ಇವತ್ತು ಅದನ್ನೂ ಕೂಡ ಅರ್ಥ ಮಾಡಿಕೊಂಡಿದ್ದಾರೆನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ. ಇದಕ್ಕೆ ಉತ್ತರ ಏನು ಸಿಗುತ್ತದೆಂಬುದು ನನಗೆ ಗೊತ್ತಿದೆ. ಉತ್ತರ, ನ್ಯಾಚುರಲಿ ಯಥಾಪ್ರಕಾರ ನಾಲ್ಕು ಸ್ಲೋಗನ್ ಹೇಳಿ ಮುಗಿಸುತ್ತಾರೆ. ಅವರೂ ನಿನ್ನೆ ಯಾವುದೋ ಒಂದು ಬುಕ್ ಹಿಡಿದುಕೊಂಡು ಕುಳಿತಿದ್ದರು. ಬಹುಶಃ ಅದರಲ್ಲಿ ಇದ್ದುದ್ದನ್ನೇ ಕೋಟ್ ಮಾಡಬಹುದು. ಅದು ಅಲ್ಲಿಗೇ ಮುಕ್ತಾಯವಾಗುತ್ತದೆ. ಆದರೆ, ಈ ದೇಶದ ಜನ, ರಾಜ್ಯದ ಜನ ಮತ್ತು ಬಡವರು - ಇವರ ಬಗ್ಗೆ ಹಿಂದೆ ಏನು ಗೌರವ ಇತ್ತು ಅದನ್ನು ತಿಳಿದುಕೊಳ್ಳುತ್ತಾರೆ. ನಾವು ಇವರನ್ನು ಸಮೀಪದಿಂದ ನೋಡಿದಾಗ, ಅಧಿಕಾರ ಕೊಟ್ಟಾಗ ಇವರ ಗುಣ ಗೊತ್ತಾಯಿತು ಎನ್ನತಕ್ಕಂಥಾದ್ದು ಬಹಿರಂಗವಾಗುತ್ತದೆ. ಆಮೇಲೆ, ಅವರ ಉಳಿದಂಥ ಸಾಧನೆ ಜವಹರ ರೋಜ್‌ಗಾರ್ ಯೋಜನೆ ಇರಬಹುದು ಅಥವಾ ದಶಲಕ್ಷ ಬಾವಿ ಯೋಜನೆ ಇರಬಹುದು, ಇವುಗಳ ಬಗ್ಗೆ ನಾನು ಹೋಗುವುದಿಲ್ಲ. ಏಕೆಂದರೆ ಇವುಗಳ ಮೇಲೆ ಮಾನ್ಯ ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ಆದರೆ ಎಸ್.ಸಿ.ಪಿ ಬಗ್ಗೆ ಮಾತ್ರ ನಾನು ಒಂದು ಮಾತು ಹೇಳುತ್ತೇನೆ. ಈ ಎಸ್.ಸಿ.ಪಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ 1995-96ರಿಂದ 1998-99ರ ವರೆಗೆ 1,544ಕೋಟಿ ರೂಪಾಯಿಗಳಷ್ಟು ಬಿಡುಗಡೆಯಾಗಿದೆ.

Mr. SPEAKER : This is not to disturb you. ಈಗ proclaimed philisophy ಇರತಕ್ಕಂಥ ಪೊಲಿಟಿಕಲ್ ಪಾರ್ಟೀಸ್ ಇವೆ. ಈಗ ಮಾರ್ಕ್ಸಿಸ್ಟ್ ಪಾರ್ಟಿ ಇದೆ. ಅವರದೊಂದು ಫಿಲಾಸಫಿ ಇದ್ದರೆ ಆ ಪಾರ್ಟಿಯಲ್ಲಿರತಕ್ಕಂಥ ಲಾಸ್ಟ್ ಮೆಂಬರ್‌ವರೆಗೆ, they should all be committed to that philosophy. ವ್ಯತ್ಯಾಸ ಏನಾದರೂ ಇದ್ದರೆ ಒಳಗೇ ಚರ್ಚೆ ಮಾಡಿಕೊಳ್ಳಬೇಕು. Ultimately, philosophy is accepted by all. To some extent, in Rightist parties ಭಾರತೀಯ ಜನತಾ ಪಾರ್ಟಿಯವರು ಎಲ್ಲೋ ಅಲ್ಲೊಂದು ಚೂರು ಇಲ್ಲೊಂದು ಚೂರು ಬಂದರೂ, generally they stand committed to a particular philosophy, ಈ ಸೆಂಟ್ರಿಸ್ಟ್

ಪಾರ್ಟೀಸ್‌ನಲ್ಲಿ ಏನಾಗುತ್ತದೆ, whether it is Janatadal or Congress, every leader has his own philosophy. By chance, it is only accident of events. When progressive minded persons come to power and they get particular department, it will be geared up. The same department takes a backward trend when it goes to a person with retrogressive approach. ಈ ಸ್ಪೆಸಿಫೈಡ್ ಫಿಲಾಸಫಿ ಇಲ್ಲದೇ ಇರುವ ಕಾರಣದಿಂದ, ಪಾರ್ಟಿಯೊಳಗೆ ಇದ್ದು ಅಧಿಕಾರಕ್ಕೆ ಬರತಕ್ಕಂಥವರೆಲ್ಲರಿಗೂ ಕೂಡ ಒಂದು ಫಿಲಾಸಫಿ ವಿಚಾರದಲ್ಲಿ ಕಮಿಟ್‌ಮೆಂಟ್ ಇಲ್ಲದೇ ಇರುವುದರಿಂದ, ನೀವೇನು ಸಂವಿಧಾನದ ಪ್ರಾವಿಷನ್‌ಗೆ ಅಪಚಾರ ಬಗೆದಿದ್ದೀರಿ ಎಂದು ಹೇಳಿದಿರಿ these things happen. Many a times, the progressive actions of some leaders, whether it is in Congress or Janata Dal, they are on account of individuals. Party's contribution is neither positive nor negative. Do you agree with me honestly?

SRI MALLIKARJUNA KHARGE : I agree. At the same time, we must have guts to refuse sometimes. ಉದಾಹರಣೆಗೆ ಭೂಸುಧಾರಣೆ ಕಾನೂನು ಇದರ ಬಗ್ಗೆ ಕೆಲವು ತಿದ್ದುಪಡಿಗಳನ್ನು ನಾವು ಸಲಹೆ ಮಾಡಿದೆವು. But life long, land to the tillers ಎನ್ನತಕ್ಕ ಫಿಲಾಸಫಿ ಹಾಗೂ ಲ್ಯಾಂಡ್ ಸೀಲಿಂಗ್‌ಗೆ ಮಾನ್ಯ ಮುಖ್ಯಮಂತ್ರಿಗಳು ಅಂಟಿಕೊಂಡು ಬಂದಿದ್ದರೋ ಇಲ್ಲವೋ? Ideology is different. But these are programmes.

MR. SPEAKER : You have raised a very good issue. ನಾನು ಬಹಳ ದಿವಸದಿಂದ ತಿಳಿದುಕೊಂಡಿದ್ದೆ. ಶ್ರೀ ದೇವರಾಜ ಅರಸು ಇದನ್ನು ಪೊಲಿಟಿಕಲ್ ಅಡ್ವಾಂಟೇಜ್‌ಗೋಸ್ಕರ ತಂದರು ಎಂದು. ಆದರೆ, ಇದೇ ಹೌಸ್‌ನಲ್ಲಿ 1969ರಲ್ಲಿ ಕಾಂಗ್ರೆಸ್ ಸ್ಪ್ಲಿಟ್ ಆದದ್ದು, 1968ರಲ್ಲಿ ಲ್ಯಾಂಡ್ ರೆವಿನ್ಯೂ ವಿಚಾರ, ಲ್ಯಾಂಡ್ ರಿಫಾರಮ್ಸ್ ವಿಚಾರ ಮಾತನಾಡಬೇಕಾಗಿದ್ದರೆ, ಶ್ರೀ ದೇವರಾಜ ಅರಸ್‌ರವರು, he had taken a very firm stand three years prior to Congress split. ಆಮೇಲೆ ಅವರು ಕಾಂಗ್ರೆಸ್ ಪ್ರೆಸಿಡೆಂಟ್ ಆದದ್ದು, ಈ ರಾಜ್ಯದ ಮಾನ್ಯ ಚೀಫ್ ಮಿನಿಸ್ಟರ್ ಆಗಿದ್ದು, ಲ್ಯಾಂಡ್ ರಿಫಾರಮ್ಸನ್ನು ಜಾರಿಗೆ ತಂದಿದ್ದು. That means to say it was his individual commitment. And he gave a shape to it by virtue of his office. Unfortunately, Sri Kedar Pandey was the Chief Minister of Congress Party in Bihar and I think, Mr. Ganshyam Oza was Chief Minister of Congress Party in Gujarat. At the same time, Smt Nandini Sathpathy was the Chief Minister of Congress Party in Orissa. They did not do it. Only it is Sri Devaraj Urs who did it. It was not the philosophy of the Congress Party. But Sri Devaraj Urs took advantage of it.

SRI D.R. PATIL : Land Reforms was an accepted philosophy of the Congress Party. But it was not implemented. ನಾನು ಅದನ್ನು ಒಪ್ಪುತ್ತೇನೆ. Policy was there. ಶ್ರೀಮತಿ ಇಂದಿರಾಗಾಂಧಿಯವರು ಅಲ್ಲಿ ಅಧಿಕಾರಕ್ಕೆ ಬಂದ ಮೇಲೆ ಇಂಪ್ಲಿಮೆಂಟ್ ಆಯಿತು. ಅದನ್ನು ನಾನು ಒಪ್ಪುತ್ತೇನೆ. But, it was an accepted philosophy of the Congress Party.

ಅಧ್ಯಕ್ಷರು : ನಾನು ಏನು ಹೇಳುತ್ತೇನೆ ಅಂದರೆ ಇದರಲ್ಲಿ ಯಾರೂ ಸೆನ್ಸಿಟೀವ್ ಆಗುವುದು ಬೇಕಾಗಿಲ್ಲ. ಈಗ ಮಾನ್ಯ ಬಸವಲಿಂಗಪ್ಪನವರು ಇದ್ದರು. ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿದರು. It was that man's commitment. He has become an integral part of this history. You can remove his photo. You can remove his name. But cannot remove him from being a part of history. Many a things are like that. Hitler is a part of history. Whatever Hitler has done is to the detriment of the mankind. But, he has become a part of the history. ನಾನು ಏನು ಹೇಳುತ್ತೇನೆ ಅಂದರೆ ಸೆಂಟರಿಸ್ಟ್ ಪಾರ್ಟಿಸ್‌ನಲ್ಲಿ ಸೆವರಲ್ ಟೈಮ್ಸ್ ಈ ತರಹ ಆಗತಕ್ಕಂಥಾದ್ದು ಇದೆ, I know. your leader of the Opposition, ಅವರು ಮೊದಲು ಮಿನಿಸ್ಟರ್ ಆಫ್ ಸ್ಟೇಟ್ ಆಗಿದ್ದಾಗಗಿ, ಆಮೇಲೆ ಕ್ಯಾಬಿನೆಟ್ ಮಂತ್ರಿಯಾಗಿದ್ದಾಗ, ರೆವಿನ್ಯೂ ಖಾತೆಯಲ್ಲಿದ್ದಾಗ ಸಹಕಾರಿ ಖಾತೆಗೆ ಬಂದಾಗ several progressive measures, he has initiated. I know. ಅದಕ್ಕೆ ಅವರದ್ದೇ ಆದ ಕಾರಣ ಇದೆ, ಕಮಿಟ್‌ಮೆಂಟ್ ಇದೆ. I don't expect all others who had come into that portfolio could do the same job.

SRI MALLIKARJUNA KHARGE : That is why I said. I never expect these things from others. I am expecting only from him. He should have directed like Sri Devaraj Urs. ನೋಡಪ್ಪ ನಾನು ಇದಕ್ಕಾಗಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ನೀವೆಲ್ಲರೂ ನನಗೆ ಸಹಕಾರ ಕೊಡಿ. ಇಲ್ಲ ಅಂದರೆ ಸರಿ ಇಲ್ಲ ಎಂದು ಹೇಳಿ, ಕನ್‌ವಿನ್ಸ್ ಮಾಡತಕ್ಕಂಥಾದ್ದು, ಈಗ ತಾವು ದೇವರಾಜ ಅರಸು ಅವರ ಮಾತು ಹೇಳಿದಿರಿ..........

MR. SPEAKER : Devaraj Urs was an accident of history. Accidents do not take place frequently.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಹೇಳುವುದೇನೆಂದರೆ, ನಿಮ್ಮಲ್ಲಿ ಆ ಕಮಿಟ್‌ಮೆಂಟ್ ಇದ್ದರೆ, ಆ ಕಾಳಜಿ ಇದ್ದರೆ, ಆ ಕಳಕಳಿ ಇದ್ದರೆ ನೀವು ನಿಮ್ಮ ಜನರನ್ನು ಕರೆದು ಹೇಳಿ, ನಿಮ್ಮ ಮಂತ್ರಿಗಳಿಗೆ ಆಗಲಿ, ನಿಮ್ಮ ಶಾಸಕರುಗಳಿಗೆ ಆಗಲಿ ತಯಾರು ಮಾಡಬೇಕು. ನೋಡಪ್ಪ, ನಿಮ್ಮ ವಿಚಾರಧಾರೆ ಇದು ಇದೆ, ಈ ವಿಚಾರ ದಾರೆಯಂತೆ ನಾವು ಹೋಗಬೇಕು, ಇದರಿಂದ ಸಮಾಜದ ಏಳಿಗೆಯಗುತ್ತದೆ. ಇದರಿಂದ ಬಡವರ ಕಲ್ಯಾಣವಾಗುತ್ತದೆ. ಇದರಿಂದ ಅತ್ಯಂತ

ಕೆಳಗೆ ಬಿದ್ದಂತಹ ಜನರನ್ನು ಮೇಲೆ ತರುವುದಕ್ಕೆ ಅವಕಾಶವಾಗುತ್ತದೆ. ನೀವು ಸಹಾಯ ಮಾಡಿ, ನಾನು ಇದಕ್ಕಾಗಿಯೇ ಇದುವರೆಗೂ ಹೋರಾಟ ಮಾಡಿಕೊಂಡು ಬಂದಿದ್ದೇನೆ ಎಂದು ಹೇಳಿ ಅವರನ್ನು ಆ ದಿಶೆಯಲ್ಲಿ ತಯಾರು ಮಾಡತಕ್ಕಂಥಾದ್ದು ಕ್ಯಾಪ್ಟನ್ ಕೆಲಸ. ಈ ಕ್ಯಾಪ್ಟನ್ ಹೋಗಿ ನೀವು ಹೇಳಿದಂತೆ ನಾನು ಹಿಟ್ಲರ್ ಆಗುವುದು ಬೇಡ ಎಂದು ಅವರಿಗೆ ಹೇಳಿಯೇ, ಹೇಳುತ್ತೇನೆ. ಆ್ಯಟ್ಲಿ ಆದರೂ ಆಗಬೇಕಾ, ಅದೂ ಇಲ್ಲ. ಚರ್ಚಿಲ್ ಆಗುವುದು ಬೇಡ. ಲೇಬರ್ ಲೀಡರ್ ಆದರೂ ಆಗಿರಿ ಕೊನೆಗೆ. ಅದೂ ಇಲ್ಲ, ಇದೂ ಇಲ್ಲ, ಅಂದರೆ ಹೇಗೆ? ಅದಕ್ಕೆ ದಯವಿಟ್ಟು ನಾನು ಏನು ಹೇಳುತ್ತೇನೆಂದರೆ, ಸ್ವಲ್ಪ ನಾವು ಅಪೇಕ್ಷೆಪಟ್ಟಿದ್ದೆವು. ಬೇರೆಯವರಿಂದ ಈ ಅಪೇಕ್ಷೆ ಇರಲಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಏಕೆಂದರೆ ಒಬ್ಬರಿಗೆ ಮೂರೂವರೆ ವರ್ಷ ಸತತವಾಗಿ ಅವಕಾಶ ಇತ್ತು. ಎಲ್ಲೋ ಆರು ತಿಂಗಳು, ಮೂರು ತಿಂಗಳು ಒಂದು ವರ್ಷ ಅವಕಾಶ ಎಂದು ಇಲ್ಲ. ಆ ಮೂರೂವರೆ ವರ್ಷ ಕುರ್ಚಿ ಸರಿಪಡಿಸುವುದರಲ್ಲಿಯೇ ಮುಗಿದು ಹೋದರೆ ಹೇಗೆ? ಏಕೆಂದರೆ ಅಭಿವೃದ್ಧಿ ಕೆಲಸಗಳೂ ಇಲ್ಲ. ಆಮೇಲೆ ಅದರ ಬಗ್ಗೆ ರಿವ್ಯೂ ಮಾಡತಕ್ಕಂಥಾದ್ದು ಸಹ ಇಲ್ಲ. ಆ ಬಡವರ ಬಗ್ಗೆ ಕಾಳಜಿ ಇಲ್ಲ. ಲ್ಯಾಂಡ್ ರಿಫಾರಮ್ಸ್ ಬಗ್ಗೆ ನಮ್ಮ ಪ್ರಧಾನ ಮಂತ್ರಿಗಳಾದ ನರಸಿಂಹರಾವ್ ಅವರು ಹೇಳಿದರೂ ನಾನು ಕೇಳಲಿಲ್ಲ. ನಾನು ಪ್ರತಿಭಟನೆ ಮಾಡಿದೆ, ನನ್ನನ್ನು ಕರೆದು ಕೇಳಿದರು. ಏನಪ್ಪ, ದೇವೇಗೌಡ ಒಂದು ಕಾನೂನು ತರುತ್ತಿದ್ದಾರೆ, ತಾವು ಏಕೆ ಪ್ರತಿಭಟನೆ ಮಾಡುತ್ತಿದ್ದೀರಿ ಎಂದು ನನ್ನನ್ನು ಕರೆದು ಅಲ್ಲಿ ಕೇಳಿದರು. ಮಾನ್ಯ ರಾಜ್ಯಪಾಲರು ಕರೆದು ಕೇಳಿದರು. ನೀವು ಏಕೆ ಈ ರೀತಿ ಮಾಡುತ್ತಿದ್ದೀರಿ ಎಂದು ಕರೆದು ಕೇಳಿದರು. ಅದಕ್ಕೆ ನಾವು ಹೇಳಿದೆವು, ಸಾರ್ ನಾವು ಇದಕ್ಕೋಸ್ಕರ ಹೋರಾಟ ಮಾಡಿದ್ದೇವೆ, 1972ನೇ ಇಸವಿಯಲ್ಲಿಯೂ ಕೂಡ ನಾವು ಹೋರಾಟ ಮಾಡಿ ಇದನ್ನು ತಂದಿದ್ದೇವೆ. ಇದನ್ನು ನೀವು ಡೈಲೂಟ್ ಮಾಡುವುದಕ್ಕೆ ಹೋಗಬೇಡಿ, ಇಂಡಸ್ಟ್ರೀಗಳನ್ನು ಮಾಡಬೇಕಾದರೆ ನೀವು ಕೆ.ಐ.ಎ.ಡಿ.ಬಿಯಿಂದ ಲ್ಯಾಂಡನ್ನು ಅಕ್ವೈರ್ ಮಾಡಿಕೊಂಡು ಬೇಕಾದರೆ ನೂರಾರು ಎಕರೆ ಸಾವಿರಾರು ಎಕರೆ ಕೊಡಿ ಸ್ಪೆಸಿಫಿಕ್ ಪರ್‌ಪಸ್‌ಗೆ ಕೊಡಿ. Because for specific purpose there is an Act. Land Acquisition Act is there, KIADB is there to develop the industries.

ಅಧ್ಯಕ್ಷರು : ನಾನೇ ನಿಮ್ಮಲ್ಲಿ ಕನ್‌ಫೆಸ್ ಮಾಡಿಕೊಂಡೆ, with lot of pain, I had to do it. I was not myself willing.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದಿರಿ, ನಾನು ಕೇಳಿದೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇಂತಾದ್ದನ್ನು ನಾವು ರೆಸಿಸ್ಟ್ ಮಾಡಬಹುದು. ನಮಗೆ ಗೊತ್ತಿತ್ತು. ಒಂದು ವೇಳೆ ನಾವು ನಮ್ಮ ಪ್ರಧಾನ ಮಂತ್ರಿಗಳ ಮಾತು ಕೇಳದಿದ್ದರೆ ನಮಗೆ ಏನು ಅಂತಾರೆ ಅಂತ. ಮಾನ್ಯ ರಾಜ್ಯಪಾಲರ ಮಾತು ಕೇಳದಿದ್ದರೆ ಏನು ಅಂತಾರೆ ಅಂತ. ಇದ್ದರೂ ಕೂಡ ನಾವು ಇಲ್ಲಿ ಧರಣಿ ಮಾಡಿದೆವು. ಹೊರಗಡೆ ಕುಳಿತೆವು. ಜಗಳ ಮಾಡಿದೆವು. ಅವರಿಗೂ ಹೋಗಿ ಇದು ಸರಿ ಇಲ್ಲ ಎಂದು ಹೇಳಿದ್ದೇವೆ.

ಅಧ್ಯಕ್ಷರು : ಅದನ್ನೇ ನಾನು ಹೇಳುವುದು ಈ ಮಿಡ್ಲ್ ಕ್ಲಾಸ್ ಸ್ಪೆಷಾಲಿಟಿ ಆ ದಿವಸ ನೀವು ಎಷ್ಟು ವೆಹಿಮೆಂಟ್ ಆಗಿ ಮಾಡಿದಿರಿ, ಎಷ್ಟು ಎಮೋಷನ್ ಆಗಿ ಇದ್ದಿರಿ ಎನ್ನುವುದನ್ನು ನಾನು

ಇವತ್ತೂ ಕೂಡ ಇಮ್ಯಾಜಿನ್ ಮಾಡಬಲ್ಲೆ. ಆ ಬಿಲ್ಲನ್ನು ಇಲ್ಲಿ ಇನ್‌ಷಿಯೇಟ್ ಮಾಡಿದವರು ಮಾನ್ಯ ಜಾಲಪ್ಪನವರು. ಅವತ್ತು ಅದನ್ನು ಫ್ಲಾರಿಕಲ್ಚರ್‌ಗೋಸ್ಕರ, ಇನ್ನೊಂದಕೋಸ್ಕರ ಅಷ್ಟೊಂದು ತೀವ್ರವಾಗಿ ಸಮರ್ಥನೆ ಮಾಡಿಕೊಂಡವರು ಅವರು. You had to oppose that Bill, and today the situation is different. This is exactly the bane of middle class parties, centrist parties. This cannot happen in a rightist party, in a leftist party. This is exactly what I was referring.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಇರಬಹುದು. ಅದು ಒಂದು ಪಕ್ಷದ ತತ್ವದ ಆಧಾರದ ಮೇಲೆ.....

MR. SPEAKER : Let us hear, because we are taking an academic turn. I will allow you any amount of time. You have come to a very good issue. It is academic interest.

ಶ್ರೀ ಎನ್. ಯೋಗಿಶ್ ಭಟ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರ ಬಗ್ಗೆ ತಾವು ಇಲ್ಲಿ ಉಲ್ಲೇಖ ಮಾಡಿದಿರಿ. ಮಾನ್ಯ ಬಸವಲಿಂಗಪ್ಪನವರು ಯಾವ ಒಂದು ಮಲವನ್ನು ತಲೆಯ ಮೇಲೆ ಹೊರುವ ಪದ್ಧತಿಯನ್ನು ಈ ತಮ್ಮ ಕರ್ನಾಟಕ ರಾಜ್ಯದಲ್ಲಿ ನಿರ್ಮೂಲನ ಮಾಡಿದರು ಅದರ ಪ್ರೇರಣೆಯನ್ನು ತೆಗೆದುಕೊಂಡಿದ್ದು ಉಡುಪಿ ಮುನಿಸಿಪಾಲಿಟಿಯಲ್ಲಿ ತೆಗೆದುಕೊಂಡಂತಹ ನಿರ್ಣಯದಿಂದ. ಮಾನ್ಯ ಡಾ||ವಿ.ಎಸ್. ಆಚಾರ್ಯರವರು ಉಡುಪಿ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಾಗ ಈ ಒಂದು ನಿರ್ಣಯವನ್ನು ತೆಗೆದುಕೊಂಡರು, ಅದು ಅಲ್ಲಿಂದ ಪ್ರಾರಂಭವಾಯಿತು. ಆದ್ದರಿಂದ ಅದರ ಇಡೀ ಕ್ರೆಡಿಟ್ ಅವರಿಗೆ ಸಲ್ಲಬೇಕಾಗುತ್ತದೆ.

ಅಧ್ಯಕ್ಷರು : ಇರಬಹುದು. ಅನೇಕ ವಿಚಾರಗಳಲ್ಲಿ ಮಾನ್ಯ ಬಸವಲಿಂಗಪ್ಪನವರು, he was an institution by himself, on many issues. Those who knew him intimately, they knew it.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಮೊದಲೇ ಒಪ್ಪಿಕೊಂಡೆ. ಪಕ್ಷದ ಬಗ್ಗೆ ನಾನು ಅದಕ್ಕೆ ಮಾತನಾಡಲಿಲ್ಲ. ನಾನು ಏನು ಹೇಳಿದೆ, ಒಬ್ಬ ವ್ಯಕ್ತಿಗೆ ಅವಕಾಶ ಸಿಕ್ಕಿದಾಗ ಆ ಅವಕಾಶವನ್ನು ತನ್ನ ಫಿಲಾಸಫಿಗಳನ್ನು ಆಚರಣೆಗೆ ತರುವುದಕ್ಕೆ ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ಅದಕ್ಕೆ ಆ ವಾತಾವರಣವನ್ನು ತಯಾರು ಮಾಡಬಹುದಾಗಿತ್ತು. ಅದಕ್ಕೆ ತನ್ನ ಸಂಘಟಿತರನ್ನು, ತನ್ನ ವ್ಯಾಸ್ ಅನ್ನು ತನ್ನ ವಿಚಾರಧಾರೆಯಲ್ಲಿ ತರತಕ್ಕಂಥ ಪ್ರಯತ್ನ ಮಾಡಬಹುದಾಗಿತ್ತು. ಅವು ಯಾವುದೂ ಪ್ರಯತ್ನ ಕೂಡ ನಡೆದಿಲ್ಲ. ಇಲ್ಲಿ ಭದ್ರವಾಗಿ ಕುರ್ಚಿ ಉಳಿಸಿಕೊಳ್ಳತಕ್ಕಂಥ ಪ್ರಯತ್ನ ಮತ್ತು ಆ ಪ್ಲಾನ್ ಮಾತ್ರ ನಡೆದವು ಎನ್ನತಕ್ಕಂಥ ಮಾತು ಇದೆ, ಈ ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು : ರೈಟ್.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದನ್ನು ಮಾನ್ಯ ದೇವೇಗೌಡರಿಂದ ಮಾಡಲು ಸಾಧ್ಯವಿಲ್ಲ. ಏಕೆಂದರೆ ಪಾಪ, ಅವರದ್ದೇ ಒಂದು ವಿಚಾರಧಾರೆ ಇದೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಆಡಳಿತ ಪಕ್ಷದವರು ಇಲ್ಲಿ ಕುರ್ಚಿ ಉಳಿಸಿಕೊಳ್ಳುವ ನಿರ್ಧಾರ ಮಾಡಿದರು ಎಂದು ಹೇಳಿದ್ದಕ್ಕೆ ತಾವು ಹೌದು ಎಂದು ಹೇಳಿದಿರಿ. ಅದು ಸರಿಯೇ ?

ಅಧ್ಯಕ್ಷರು : ನಾನು ಬಹಳ ವಿಚಾರಗಳಿಗೆ ಹೌದು ಎಂದು ಹೇಳುತ್ತಿರುತ್ತೇನೆ. ನಾನು ಬಸವಣ್ಣ ಅಲ್ಲ, ಎಲ್ಲದ್ದಕ್ಕೂ ತಲೆ ಅಲ್ಲಾಡಿಸುವುದಕ್ಕೆ ನಾನು ಬಸವಣ್ಣ ಅಲ್ಲ. I agree with that philosophy. Whatever political analysis he has made, I agree.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅದಕ್ಕೆ ಬಸವಣ್ಣ ಅನ್ನಬೇಡಿ, ಕೌಲೆತ್ತು ಅನ್ನಿ. ಬಸವಣ್ಣ ಅಂದರೆ ರೆಕಾರ್ಡ್‌ನಲ್ಲಿ ಬಸವಣ್ಣ ಎಂದು ಹೋಗುತ್ತದೆ. ಎಲ್ಲದ್ದಕ್ಕೂ ತಲೆ ಅಲ್ಲಾಡಿಸುವುದು ಕೌಲೆತ್ತು, ಬಸವಣ್ಣ ಅಲ್ಲ. ಮತ್ತೆ ಅದು ಆ ಬಸವಣ್ಣನವರಿಗೆ ಹೋಗುತ್ತದೆ.

ಅಧ್ಯಕ್ಷರು : ಆಗಬಹುದು, ನೀವು ಹೇಳಿದ ಹಾಗೆ ಕೌಲೆತ್ತು. ನಮ್ಮ ಕಡೆ ಬಸವಣ್ಣ ಎಂದು ಹೇಳುತ್ತಾರೆ. ಹುರುಳಿ ತಿನ್ನುತ್ತೀಯಾ ಅಂದರೆ ಹೂ, ಉದ್ದು ತಿನ್ನುತ್ತೀಯ ಅಂದರೆ - ಹೂ, ಅದಕ್ಕೆ ಬಸವ ಎಂದು ಹೇಳುತ್ತೇವೆ. ಆಯಿತು, ಅದಕ್ಕೆ ಬೇರೆ ಅರ್ಥ ಬರುವುದಾದರೆ ಕೌಲೆತ್ತು ಎಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಮಾತಿಗೆ ಬಂದೆ ಅಂದರೆ, ಸಾಮಾಜಿಕ ಕಳಕಳಿ ಇದ್ದರೆ ಆ ಬಗ್ಗೆ ಕಾಳಜಿ ಇದ್ದರೆ, ಆ ದಿಶೆಯಲ್ಲಿ ಮನುಷ್ಯ ಸ್ವಲ್ಪ ಪ್ರಯತ್ನ ಮಾಡುತ್ತಾನೆ. ನೀವು ಪ್ರಯತ್ನ ಮಾಡಿ ಫೈಲಾಗಿದ್ದರೆ ಅದನ್ನು ನನಗೆ ಹೇಳಿ. ಆಗ ಆ ವಾತಾವರಣ ಹಾಗಿತ್ತು, ಅವರ ಪಾರ್ಟಿಯಲ್ಲಿ ಜನ ಹಾಗಿದ್ದರು ಅಂದರೆ ಅದು ಒಂದು ತರಹ. ನೀವು ಪ್ರಯತ್ನವನ್ನೇ ಮಾಡಲಿಲ್ಲ. ಆ ಬಗ್ಗೆ ಪ್ರಯತ್ನ ಮಾಡಿ, ಎಫರ್ಟ್ಸ್ ಮಾಡಿ, ನಾವು ಫೈಲಾದರೆ ಆಗ ಏನಪ್ಪ, ನಾನು ಇಷ್ಟು ಪ್ರಯತ್ನ ಮಾಡಿದೆ ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಪಟ್ಟೆ, ನನ್ನ ಜನರನ್ನು ನಾನು ನನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕೆನ್ನುವ ಪ್ರಯತ್ನ ಮಾಡಿದೆ, ಅದರಲ್ಲಿ ನಾನು ವಿಫಲನಾದೆ ಅಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆ ವಿಚಾರದಲ್ಲಿ ಪ್ರಯತ್ನ ಮಾಡದೇ ಎಲ್ಲವೂ ಆಗಬೇಕೆಂದರೆ ಹೇಗೆ ಸಾಧ್ಯವಿದೆ? ನಿಮ್ಮ ವಿಚಾರ ನಿಮ್ಮ ತಲೆಯಲ್ಲಿ ನಿಮ್ಮ ಧ್ಯಾನ ಕುರ್ಚಿ ಮೇಲೆ. ಅಂದಾಗ ಇದು ಹೇಗೆ ಸಾಧ್ಯ? ಇದಕ್ಕೆ ಪಾರ್ಟಿ ತತ್ವ ಬೇಕೇ ಮಾನ್ಯ ಅಧ್ಯಕ್ಷರೇ. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ 1544 ಕೋಟಿ ರೂಪಾಯಿಗಳು 1995-96, 1996-97, 1997-98ರವರೆಗೆ ಬಿಡುಗಡೆಯಾದ ಹಣ ಏನಿದೆ ಅದರಲ್ಲಿ ಖರ್ಚು ಮಾಡಿದ್ದು ಎಷ್ಟು ಹಣ ಅಂದರೆ 1291 ಕೋಟಿ ರೂಪಾಯಿಗಳು ಮಾತ್ರ. ಖರ್ಚು ಮಾಡದೇ ಹಾಗೆಯೇ ಉಳಿದಿದ್ದು 253 ಕೋಟಿ ರೂಪಾಯಿಗಳು. ಇದಕ್ಕೆ ಯಾವ ಮನಸ್ಸು ಬೇಕು,

ಯಾವ ತತ್ವ ಬೇಕು? ಆಮೇಲೆ ಈ ಗಿರಿಜನರಿಗಾಗಿ ಸಂಗ್ರಹ ಮಾಡಿದಂತಹ ಹಣ ಈ 5 ವರ್ಷದಲ್ಲಿ 283 ಕೋಟಿ ರೂಪಾಯಿಗಳು, ಆ ಬಗ್ಗೆ ಖರ್ಚು ಮಾಡಿದ್ದು ಎಷ್ಟು ಹಣ ಅಂದರೆ 216 ಕೋಟಿ ರೂಪಾಯಿ ಉಳಿತಾಯವಾಗಿದ್ದು 66 ಕೋಟಿ ರೂಪಾಯಿಗಳು. ನಾನು 1999ರ ಮಾರ್ಚಿವರೆಗೆ ಅಂಕಿ ಅಂಶಗಳನ್ನು ಮಾತ್ರ ಹೇಳುತ್ತಿದ್ದೇನೆ. ನೀವು ಬರೇ ಈ ಒಂದು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸುಮಾರು 325 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಬೇಕಂದರೆ ಎಷ್ಟರ ಮಟ್ಟಿಗೆ ನಿಮಗೆ ಈ ಸಮಾಜದ ಬಗ್ಗೆ ಕಾಳಜಿ ಇದೆ? ಇದು ಯಾವ ತತ್ವ? ಇದಕ್ಕೆ ಮನಸ್ಸಿಟ್ಟು ಕೆಲಸ ಮಾಡತಕ್ಕಂಥಾದ್ದು ಇದೆ. ಸುಮ್ಮನೆ ಅಲ್ಲಿರತಕ್ಕ ಗುಮಾಸ್ತರಿಗೆ ಹೇಳಿದರೂ ಅವರು ಅದನ್ನು ಮಾಡುತ್ತಾರೆ. ಆದರೆ ಅವು ಇಂಪ್ಲಿಮೆಂಟ್ ಆಗಿದೆಯೋ ಇಲ್ಲವೋ ಎನ್ನುವುದನ್ನು ನೋಡುವಷ್ಟು ಕಾಳಜಿ ಸಹ ನಿಮಗೆ ಇಲ್ಲ.

ಈ 325 ಕೋಟಿ ರೂಪಾಯಿಗಳಷ್ಟು ಬಡವರಿಗೆಂದು ತಲುಪಿಸಬೇಕಾದ ಹಣವು ಸಮಾಜಕಲ್ಯಾಣ ಇಲಾಖೆಯಲ್ಲಿ ಖರ್ಚಾಗಿಲ್ಲವೆಂದರೆ ನಾವು ಅದಕ್ಕೆ ಏನು ಹೇಳೋಣ? ಆಮೇಲೆ ವಿಶೇಷ ಘಟಕ ಯೋಜನೆಯಲ್ಲಿ 1998-99ರಲ್ಲಿ 110 ಕೋಟಿ ರೂಪಾಯಿಗಳೆಂದು ನಿಗಧಿಮಾಡಿದ್ದರು, ಅದರಲ್ಲಿ ಖರ್ಚಾಗಿದ್ದು 76 ಕೋಟಿ ರೂಪಾಯಿಗಳು, ಬಾಕಿ ಉಳಿದಿದ್ದು 34 ಕೋಟಿ ರೂಪಾಯಿಗಳು, ಇದು ಬಡವರ ಬಗ್ಗೆ ಹರಿಜನ-ಗಿರಿಜನರ ಬಗ್ಗೆ ಇರುವಂತಹ ಕಾಳಜಿ ಈ ಸರ್ಕಾರಕ್ಕೆ ಇದಕ್ಕೆ ಯಾವ ಕಾನೂನು ಅಡ್ಡ ಇಲ್ಲ, ಯಾವ ತತ್ವ ನೀತಿ ಬೇಕಾಗಿಲ್ಲ, ಒಂದೇ ಒಂದು ಬೇಕು ಅದು ಏನೆಂದರೆ ಆಡಳಿತದಲ್ಲಿ ಮನಸಿಟ್ಟು ಕೆಲಸ ಮಾಡಬೇಕು ಎಂಬುದು. ಆಮೇಲೆ ಈ ನಿರುದ್ಯೋಗ ಸಮಸ್ಯೆ, ಇದರ ಬಗ್ಗೆ ಕೂಡ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾವು ಈ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಸರ್ಕಾರದವರು ಸಹ ಹೇಳಿದ್ದಾರೆ. ಇವತ್ತು ವೃತ್ತಿ ಶಿಕ್ಷಣದಲ್ಲೇ ತರಬೇತಿ ಆದವರನ್ನು ಈ ರಾಜ್ಯದಲ್ಲಿ ಸುಮಾರು 18.50 ಲಕ್ಷ ಮಂದಿ ಇದ್ದಾರೆ.

MR. SPEAKER : Don't go by the statistics at all. They don't bother to enrol the unskilled labour, the illiterate labour. The concept of employment of a Government.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುತ್ತಿರುವುದು ಈ ತರಬೇತಿ ಪಡೆದಂಥ ಜನರಿಗಾದರೂ ಕೆಲಸ ಕೊಡಲು ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಇಷ್ಟೊಂದು ಜನ ಎಂಪ್ಲಾಯ್ಮೆಂಟ್ ಡೈರೆಕ್ಟರೇಟ್‌ನಲ್ಲಿದ್ದಾರೆ, ಇವರೆಲ್ಲಾ ಟೆಕ್ನಿಕಲ್ ಪ್ರೊಫೆಷನಲ್ ಕೋರ್ಸ್ ಮಾಡಿದವರು, ಕಂಪ್ಯೂಟರ್ ಇಂಜಿನಿಯರ್ಸ್ ಇರಬಹುದು, ಡಾಕ್ಟರಿರಬಹುದು, ಇವರಿಗಾಗಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನಿಮ್ಮ ಪ್ರಣಾಳಿಕೆಯಲ್ಲಿ ಹೇಳುತ್ತೀರಿ ಅದಷ್ಟು ಕೆಲಸಗಳನ್ನು ನಾವು ಅವರಿಗೆ ಒದಗಿಸಿಕೊಡುತ್ತೇವೆ ಎಂದು ಆದರೆ ಇವತ್ತು ಈ ರಾಜ್ಯದಲ್ಲಿ ಇರತಕ್ಕಂತಹ ಒಟ್ಟು 5.60 ಲಕ್ಷ ಹುದ್ದೆಗಳಲ್ಲಿ 1.6 ಲಕ್ಷ ಸರ್ಕಾರಿ ಹುದ್ದೆಗಳೇ ಖಾಲಿ ಇವೆ.

MR. SPEAKER : Sri Nage Gowda, he has been making very serious observatios about the functioning of your Government. Unfortunately,

ಸಿಎಂ ಕಚೇರಿಗೆ ಸಂಬಂಧಿಸಿದ ಅಧಿಕಾರಿಗಳು ಯಾರೂ ಇಲ್ಲಿ ಕಾಣಲಿಲ್ಲ, ನೀವು ಯಾರು ಅವರು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. He has been making very serious observations. I think you need to reply to them.

ಶ್ರೀ ಕೆ.ಎನ್. ನಾಗೇಗೌಡ : ಈ ಬಗ್ಗೆ ಪ್ಲಾನಿಂಗ್ ಸೆಕ್ರೆಟರಿಯುವರು ನೋಟ್ ಮಾಡಿಕೊಳ್ಳುತ್ತಿದ್ದಾರೆ. Yes, Sir. I will note down.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಹೇಳುವುದನ್ನು ಹೇಳುತ್ತೇವೆ. ಸರ್ಕಾರದಲ್ಲೇ 1.06 ಲಕ್ಷ ಹುದ್ದೆಗಳು ಖಾಲಿ ಇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರು ಹೇಳಿದರು, ಪ್ಲಾನಿಂಗ್ ಸೆಕ್ರೆಟರಿಯವರು ನೋಟ್ ಮಾಡಿಕೊಳ್ಳುತ್ತಿದ್ದಾರೆ ಎಂದು. ಅವರು ಮಾತನಾಡುತ್ತಾ ಕುಳಿತಿದ್ದಾರೆ.

MR. SPEAKER : No, no. Our planning Secretary is a competent person. Please do not talk like that. Our Planning Secretary has put in sufficient number of years of service and whatever responsibility is given. Planning Secretary has discharged very well. Don't worry about that. I have the confidence in Planning Secretary.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ನಮ್ಮ ದುರ್ದೈವ, ಆದರೂ ನಾವು ಹೇಳಬೇಕಲ್ಲಾ, ಈ ಇಲಾಖೆಯಲ್ಲಿ ಎಲ್ಲಿ ಅವಶ್ಯಕತೆಯಿದೆ ಅಲ್ಲಿ ಆ ಹುದ್ದೆಗಳನ್ನು ಇವತ್ತು ತುಂಬುತ್ತಾ ಇಲ್ಲ. ಅದರಲ್ಲಿ 5 ಪರ್ಸೆಂಟ್ ಕಟ್ ಮಾಡಬೇಕಂತೆ, ಎಲ್ಲಿ ಕಟ್ ಮಾಡುವುದು? ಈಗಾಗಲೇ ಸಂಬಳಕ್ಕೆ ಹೆಚ್ಚು ಹಣ ಹೋಗುತ್ತಿದೆ ಎಂದು ಎಲ್ಲರ ಕೂಗಿದೆ. ಒಂದು ಕಡೆ ಹೊಸ ಕೈಗಾರಿಕೆಗಳನ್ನು ತೆರೆಯುತ್ತಿಲ್ಲ ಮತ್ತು ಇವರಿಗೆ ಯಾವ ನೌಕರಿಯನ್ನೂ ಕೊಡುತ್ತಿಲ್ಲ, ಇನ್ನೊಂದು ಕಡೆ 1.06 ಲಕ್ಷ ಹುದ್ದೆಗಳು ಖಾಲಿ ಇದ್ದರೂ ಅವನ್ನು ಭರ್ತಿ ಮಾಡುತ್ತಿಲ್ಲ. ಅಂದರೆ ಆ ಹಣ ಎಲ್ಲಿ ಹೋಯಿತು? ಕೇವಲ 4 ಲಕ್ಷ ಜನರಿಗೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವುದಾದರೆ ನೀವೇನು ಕಣ್ಮುಚ್ಚಿ ಕುಳಿತಿದ್ದೀರೋ ಅಥವಾ ವಿಚಾರ ಮಾಡುತ್ತಿದ್ದೀರೋ? ಇವತ್ತು ಯಾರು, ಲೇಬರ್ ಮಿನಿಸ್ಟರೋ, ಎಂಪ್ಲಾಯ್‌ಮೆಂಟ್ ಮಿನಿಸ್ಟರ್ ನೋಡ್ತಾರೋ, ಇದರ ಬಗ್ಗೆ ನನಗೆ ಗೊತ್ತಿಲ್ಲ. ಇಂಥ ಪರಿಸ್ಥಿತಿ ಇವತ್ತು ಬಂದಿದೆ. ಆಮೇಲೆ ಈ ಸಣ್ಣ ಕೈಗಾರಿಕೆಗಳು, ಇದರಲ್ಲಿ 1,88,839 ಸಣ್ಣ ಕೈಗಾರಿಕೆಗಳಿವೆ. ಇದರಲ್ಲಿ ಈಗಾಗಲೇ ಅರ್ಧ ಸಣ್ಣ ಕೈಗಾರಿಕೆಗಳು ಮುಚ್ಚಿಹೋಗಿವೆ, ಏಕೆ? ಇವರು ಅನುಸರಿಸತಕ್ಕ ನೀತಿಯಿಂದ ಈ ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ ಎಂದು ನಾನು ಹೇಳುವುದಿಲ್ಲ. ಇವರು ಅವುಗಳನ್ನು ರಿವ್ಯೂ ಮಾಡುವುದಿಲ್ಲ, ದೊಡ್ಡ ಇಂಡಸ್ಟ್ರೀಗಳಿಗೆ ಲಿಬರಲೈಸ್ ಮಾಡಿ ಸಹಾಯ ಕೊಡುತ್ತಿದ್ದೀರಿ, ಇವರ ಬಗ್ಗೆ ಕಾಳಜಿ ವಹಿಸಿ ಯಾವ ರೀತಿ ಸಹಾಯ ಮಾಡಬೇಕು? ಹಣದ ಕೊರತೇನಾ, ಅಥವಾ ಸಬ್ಸಿಡೀನಾ ಅಥವಾ ಮಾರ್ಕೆಟಿಂಗೋ ಎನ್ನುವುದರ ಬಗ್ಗೆ ಒಂದು ಸೆಮಿನಾರ್ ಮಾಡಿ ಅಥವಾ ಇದರಲ್ಲಿ ನುರಿತ ಯಾರನ್ನಾದರೂ ಕರೆಸಿ, ಇವರ ಸಮಸ್ಯೆಗಳೇನು ಎಂದು ಎಂದಾದರೂ ಕಂಡುಹಿಡಿದಿದ್ದಾರೆಯೇ ಅದರ ಬಗ್ಗೇನೂ ಯಾವುದೇ

ಕಾಳಜಿ ಇಲ್ಲ. ಅಂದರೆ ಅವರಿಗೆ ಕಾಳಜಿ ಯಾವುದರ ಬಗ್ಗೆ ಇದೆ? ಸಣ್ಣ ಕೈಗಾರಿಕೆಗಳಲ್ಲಿಲ್ಲ, ಸಮಾಜಕಲ್ಯಾಣದ ಬಗ್ಗೆ ಇಲ್ಲ, ಒಂದರ ಬಗ್ಗೇನೂ ಕಾಳಜಿ ಇಲ್ಲ ಅಂದರೆ ನಾನು ಇವತ್ತು ಕೇಳುತ್ತೇನೆ, ಈ ಸರ್ಕಾರ ಇಲ್ಲಿ ಏಕಿರಬೇಕು? ಐದು ವರ್ಷ ಟೈಮಿತ್ತಲ್ಲಾ, ಊಟ ಮಾಡಿ ನಿದ್ರೆ ಮಾಡುವುದಕ್ಕೇನು? ಅಥವಾ ಇಷ್ಟೊಂದು ಸೌಲಭ್ಯಗಳನ್ನು ಕೊಟ್ಟು ಈ ಅಸೆಂಬ್ಲಿಗೆ ಬರದೇ ಇರುವುದಕ್ಕೇನು? ನಾವು ಮಾತನಾಡುವುದಕ್ಕೆ ನೀವು ಏತಕ್ಕೆ ಸ್ಪಂದಿಸುವುದಿಲ್ಲ? ಯಾವುದಕ್ಕೆ ನೀವು ಬಂದಿದ್ದೀರಿ? ಇದು ಏನು ತಮಾಷೇನಾ? ಎಷ್ಟು ಲಘುವಾಗಿ ಇವರು ಈ ಸದನವನ್ನು ತೆಗೆದುಕೊಂಡಿದ್ದಾರೆ ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಹೇಳುವುದನ್ನು ಕೇಳುವ ಸೌಜನ್ಯ ಕೂಡ ಅವರಿಗೆ ಇಲ್ಲ. ಯಾರ್‍ಯಾರು ಏನೇನು ಡಿಮಾಂಡ್ ಮೂವ್ ಮಾಡುತ್ತಾರೆ, ಇವತ್ತು ಯಾರ್‍ಯಾರು ಇಲ್ಲಿ ಹಾಜರಿದ್ದು ನಮ್ಮ ಇಲಾಖೆಯ ಬೇಡಿಕೆ ಬಗ್ಗೆ ಏನು ಮಾತನಾಡುತ್ತಾರೆ ಎಂದು ವಿಚಾರ ಮಾಡುವ ಜನ ಇಲ್ಲ ಅಂದರೆ ಇಂತಹ ಕೆಟ್ಟ ಸರ್ಕಾರವನ್ನು ಈ 28 ವರ್ಷದಲ್ಲಿ ನಾನು ನೋಡೇ ಇಲ್ಲ. ಇಂಥ ಸರ್ಕಾರ ಇನ್ನು ಮುಂದೆ ಬರುವುದೂ ಇಲ್ಲ. ನಾವು ಅದಕ್ಕಾಗಿ ಈ ರಾಜ್ಯದ ಜನರಿಗೆ ಪ್ರಾರ್ಥನೆ ಮಾಡುತ್ತೇವೆ, ಇಂತಹ ಜನರಿಗೆ ಇನ್ನೊಮ್ಮೆ ಇಲ್ಲಿಗೆ ಆರಿಸಿ ಕಳುಹಿಸಬೇಡಿ. ಅವರು ಇಲ್ಲಿ ಕೂರುವುದಕ್ಕೆ ಲಾಯಕ್ಕಿಲ್ಲ ಎಂದು.

ಶ್ರೀ ಕೆ.ಎನ್. ನಾಗೇಗೌಡ : ಜನರನ್ನು ಕಾಂಟ್ರಾಕ್ಟ್ ತೆಗೆದುಕೊಂಡ ಹಾಗೆ, ಜನರೆಲ್ಲಾ ನಮಗೇ ವೋಟ್ ಕೊಟ್ಟು ಬಿಡುತ್ತಾರೆ ಎಂದು ಹೇಳುತ್ತಾ ನಮಗೆ ಶಾಪ ಹಾಕುತ್ತಿದ್ದೀರಲ್ಲಾ ಜನ ಯಾರಿಗೆ ಶಾಪ ಹಾಕುತ್ತಾರೆ ಎಂಬುದನ್ನು ನಾವು ಕಾದು ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊದಲು ಶಾಪ ತಟ್ಟುವುದೇ ನಿಮಗೆ. ಆಮೇಲೆ ಈ ಕೆಇಬಿ ವಿಚಾರವನ್ನು ಅಂತೂ ಹೇಳಲೇಬೇಕಾಗಿಲ್ಲ ಈ ಬಗ್ಗೆ ಅನೇಕ ಸಾರಿ ಇಲ್ಲಿ ಚರ್ಚೆಯಾಗಿದೆ. ಮೂರು ವರ್ಷದಲ್ಲಿ ಮೂರು ಸಾರಿ ವಿದ್ಯುತ್ ದರಗಳನ್ನು ಹೆಚ್ಚಿಸಿದರು, ಜೊತೆಗೆ ಇವರು ಹೇಳಿದರು ಎಂದರೆ, ರೈತರ ಬಗ್ಗೆ ತಮಗೆ ಕಾಳಜಿ ಇದೆ, ಎಲ್ಲಾ ಚರ್ಚೆ ಮಾಡುತ್ತಿದ್ದೇವೆ ಎಂದು. ಆ ರೈತರಿಗೇ ಮೊದಲು ಬರೆ ಹಾಕಿದ್ದು ಇವರು. ರೈತರಿಗೆ ಎಷ್ಟು ತೊಂದರೆ ಕೊಡಬೇಕೋ ಅದನ್ನೆಲ್ಲಾ ಇವತ್ತು ಮಾಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಇವರು ಗೆಜ್ಜಲಗೆರೆಯಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿ ನೂರಾರು ಜನರನ್ನು ಸಾಯಿಸಿದರು, ಇವರು ನಮಗೆ ಹೇಳುತ್ತಾರೆ! ತಮ್ಮ ಈ ನಾಲ್ಕು ವರ್ಷಗಳಲ್ಲಿ ಗೋಲಿಬಾರ್ ಮಾಡಿರುವುದನ್ನು ತೋರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಶಿರಾಕ್ಕೆ ಹೋಗಿ ಅಲ್ಲಿ ಈ ಕಲ್ಪನೆ ಮಾಡಿದಿರೇನು? 5 ಜನ ಸತ್ತರಲ್ರೀ, ಇಲ್ಲೇ ಪಕ್ಕದಲ್ಲೇ ಇತ್ತು ಅಲ್ಲಿಗೆ ನಿಮಗೆ ಬೇಗನೇ ಹೋಗುವುದಕ್ಕಾಗಲಿಲ್ಲ ಅಲ್ಲಿ ಎಸ್‌ಪಿ, ಡಿಸಿಗಳನ್ನು ಟ್ರಾನ್ಸ್‌ಫರ್ ಮಾಡುತ್ತೇವೆಂದು ಹೇಳಿ ಎಸ್‌ಪಿ ಒಬ್ಬರನ್ನೇ ವರ್ಗ ಮಾಡಿ ಜಿಲ್ಲಾಧಿಕಾರಿಯನ್ನು ಅಲ್ಲೇ ಇಟ್ಟುಕೊಂಡಿರಿ. ಯಾಕೆ? ಅಲ್ಲಿನ ಎಂಎಲ್‌ಎಗಳ, ಸಚಿವರ ಒತ್ತಡ ಇತ್ತು. ಅಂದರೆ ಯಾವ ಅಧಿಕಾರಿಗೆ ಸಪೋರ್ಟ್ ಇರುವುದಿಲ್ಲ ಅವನನ್ನು ಎಲ್ಲಿ ಬೇಕಾದರೂ ಅಲ್ಲಿಗೆ ಬಿಸಾಕುವುದು, ಯಾರಿಗೆ ಸಪೋರ್ಟ್ ಇರುತ್ತದೆ ಅವನು ನೂರು ತಪ್ಪು ಮಾಡಿದರೂ ಜಿಲ್ಲಾ ಮ್ಯಾಜಿಸ್ಟ್ರೇಟಾಗಿ ಸುಖವಾಗಿರಬಹುದು. ಶಿರಾದಲ್ಲಿ ಗೋಲಿಬಾರಾದಾಗ ಇದೇ ಸದನದಲ್ಲಿ ನಾವು ಆ

ವಿಚಾರವನ್ನು ಎತ್ತಿದೆವು, ಈ ಸದನದ ಸಮಿತಿ ಅಲ್ಲಿಗೆ ಹೋಗಿತ್ತು. ಡಿಸಿ, ಎಸ್‌ಪಿಗಳನ್ನು ವರ್ಗ ಮಾಡಬೇಕೆಂದು ವರದಿ ಬಂತು, ಅದನ್ನು ಮಾಡಿದಿರಾ? ಇದೇನಾ ನಿಮ್ಮ ರೈತರ ಬಗ್ಗೆ ಕಾಳಜಿ. ಆ ವರದಿಯನ್ನು ನಾವು ಕೊಟ್ಟಿದ್ದಲ್ಲ, ಈ ಸದನದ ಮಾನ್ಯ ಸದಸ್ಯರು ಕೊಟ್ಟಿದ್ದು, ಅದಕ್ಕೆ ನೀವು ಏನು ಗೌರವ ಕೊಟ್ಟಿರಿ? ಶಾಸ್ತ್ರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಅನ್ನುವ ರೀತಿಯಲ್ಲಿ

1.30 ಪಿ.ಎಂ

ಇಂಥವರೆಲ್ಲಾ ಇಲ್ಲಿ ಬರೀ ಶಾಸ್ತ್ರ ಹೇಳುವುದು ನಾನು ಇವತ್ತು ಇಲ್ಲಿ ಅವರನ್ನು ಕೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಅಲ್ಲಿ ಒಂದು ಕಾಲದಲ್ಲಿ ಗೋಲಿಬಾರ್ ಆಯಿತು. ಗೋಲಿಬಾರ್ ಮಾಡದೆ ಒಂದು ಕಾಲದಲ್ಲಿ ಜನರು ಸಾಯುವ ಹಾಗೆ ಮಾಡಿದಿರಿ. ಅದು ಎರಡು ತರಹ. ಈ ಬಗ್ಗೆ ತಾವು ಮಧ್ಯೆ ಪ್ರವೇಶ ಮಾಡಿ ಈ ರೈತರಿಗೆ ಒಂದು ಅನುಕೂಲ ಮಾಡಿಕೊಡಬೇಕು. ಬೆಂಗಳೂರಿನಲ್ಲಿ ಆ ರೈತರಿಗೆ ಒಂದು ಹುಚ್ಚಾಸ್ಪತ್ರೆ ಕಟ್ಟಿಸಿ. ಅದರಲ್ಲಿ ಆಲೂಗಡ್ಡೆ ಬೆಳೆದವರ ವಾರ್ಡ್, ಈರುಳ್ಳಿ ಬೆಳೆದವರ ವಾರ್ಡ್ ಮೆಣಸಿನಕಾಯಿ ಬೆಳೆದವರಿಗೊಂದು ವಾರ್ಡ್, ಹೆಸರುಕಾಳು ಬೆಳೆದವರಿಗೊಂದು ವಾರ್ಡ್, ಈ ಎಲ್ಲಾ ಬೆಳೆದು ನಾಶವಾಗಿದ್ದಾನಲ್ಲಾ ಅವನಿಗೆ ವಿಐಪಿ ವಾರ್ಡ್. ಈ ರೀತಿ ದಯವಿಟ್ಟು ತಾವು ಮಧ್ಯೆ ಪ್ರವೇಶ ಮಾಡಿ ಆಸ್ಪತ್ರೆಯನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಒಂದು ವೇಳೆ, ನಾನೇ ಈ ಸರ್ಕಾರ ನಡೆಸುವಂಥ ಸನ್ನಿವೇಶ ಬಂದರೆ, ಇದರ ಪೂರ್ಣ ಉಸ್ತುವಾರಿಯನ್ನು ನಿಮಗೇ ವಹಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನು ಉಸ್ತುವಾರಿಯನ್ನೇ ವಹಿಸಿಕೊಳ್ಳುವುದಿಲ್ಲವಲ್ಲಾ. ಆ ತರಹಕ್ಕೆ ರೈತರನ್ನು ತೆಗೆದುಕೊಂಡೇ ಹೋಗುವುದಿಲ್ಲವಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೆಇಬಿಯವರು ಸುಮಾರು ಈ ನಾಲ್ಕು ವರ್ಷಗಳಲ್ಲಿ ಶೇಕಡ 11.5 ರಿಂದ 200 ಪರ್‌ಸೆಂಟ್‌ವರೆಗೆ ಕರೆಂಟು ಚಾರ್ಜನ್ನು ಎನ್‌ಹ್ಯಾನ್ಸ್ ಮಾಡಿದ್ದಾರೆ. ಈ ಬಗ್ಗೆ ವಿವರ ಬೇಕಾದರೆ ಓದು ಎಂದರೆ ನಾನು ಓದುತ್ತೇನೆ. ಈ ಗೃಹಬಳಕೆಯಿಂದ ಹಿಡಿದು ಏತ ನೀರಾವರಿಯವರೆಗೆ ಎಲ್ಲವನ್ನೂ ಇಲ್ಲಿ ಹೇಳಬಹುದು ಆದರೆ ಸ್ವಲ್ಪ ವಿವರ ಮಾತ್ರ ಹೇಳುತ್ತೇನೆ. ಶೇ. 11.5 ರಿಂದ 200 ಪರ್‌ಸೆಂಟ್‌ವರೆಗೂ ಕರೆಂಟ್ ಚಾರ್ಜಸ್ ಎನ್‌ಹ್ಯಾನ್ಸ್ ಆಗಿದೆ. ಇವತ್ತು ಹಾಗೆ ಎನ್‌ಹ್ಯಾನ್ಸ್‌ಮೆಂಟ್ ಆದರೂ ಕೂಡ ಈ ಕೆಇಬಿ ಪ್ರಾಫಿಟ್‌ನಲ್ಲಿ ನಡೆಯುತ್ತಾ ಇಲ್ಲ ಎಂದು ಹೇಳಿ, ಅದನ್ನು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದಾರೆ. ರೆಗ್ಯುಲೇಟರಿ ಆಕ್ಟ್ ತೆಗೆದುಕೊಂಡು ಬಂದು ಪ್ರೈವೇಟೈಜ್ ಮಾಡೋಣ ಎಂದು ಹೊರಟಿದ್ದಾರೆ. ನಮ್ಮ ಸಮಾಜವಾದಿ ಮಾನ್ಯ ಮುಖ್ಯಮಂತ್ರಿಯವರು ಪ್ರೈವೇಟ್ ಅಂಡರ್‌ಟೇಕಿಂಗ್‌ನಲ್ಲಿ ನಂಬಿಕೆ ಇರತಕ್ಕಂಥವರು ಈ ದೇಶದಲ್ಲಿ ಜಾಯಿಂಟ್ ಸೆಕ್ಟಾರ್, ಪಬ್ಲಿಕ್ ಸೆಕ್ಟಾರ್, ಪ್ರೈವೇಟ್ ಏನಿವೆ ಇವು ಮೂರು ಹೆಚ್ಚಿನ ರೀತಿಯಲ್ಲಿ ಬೆಳೆಯಬೇಕು ಎಂದು ಈ ಒಂದು ಫಿಲಾಸಫಿಯನ್ನು ಹೇಳುವವರೇ ಇವತ್ತು ಈ ಕೆಇಬಿಯನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ

ಎಂದರೆ ಹೇಗೆ? ಈ ವಿದ್ಯುತ್ ದರಗಳನ್ನು 200 ಪರ್‌ಸೆಂಟ್ ವರೆಗೆ ಎನ್‌ಹ್ಯಾನ್ಸ್ ಮಾಡಿದಮೇಲೆ ಆ ಎನ್‌ಹ್ಯಾನ್ಸ್‌ಮೆಂಟ್ ಮಾಡದೇ ಇದ್ದಿದ್ದರೆ ಆ ಪ್ರಶ್ನೆ ಬೇರೆ; ಆ ಹಣವನ್ನು ಒಂದು ಕಡೆಗೆ ಹೆಚ್ಚಿಗೆ ಮಾಡಿದಿರಿ. ಮತ್ತು ನಿಮಗೆ ಅದನ್ನು ಸುಧಾರಣೆ ಮಾಡಲಿಕ್ಕೂ ಆಗಲಿಲ್ಲ. ಇದರ ಬಗ್ಗೆ ನನಗೆ ಆಶ್ಚರ್ಯ ಎನ್ನಿಸುತ್ತದೆ. ಇವತ್ತು ನೀವು ಇದನ್ನು ಖಾಸಗಿಯವರಿಗೆ ಕೊಡಬೇಕಾಗಿದ್ದರೆ ರೈತರ ಮೇಲೆ, ಬಡವರ ಮೇಲೆ ಮತ್ತು ಗೃಹ ಬಳಕೆದಾರರ ಮೇಲೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಮೇಲೆ, ಏತಕ್ಕೆ ಹೆಚ್ಚಿಗೆ ದರವನ್ನು ಏರಿಸಿದಿರಿ? ಆ ಹೆಚ್ಚಿನ ದರವನ್ನು ಮತ್ತೆ ಇಳಿಸಿ. ಮುಂದೆ ಖಾಸಗಿಯವರು ಈ ಬಗ್ಗೆ ಏನು ಮಾಡುತ್ತಾರೋ ನೋಡೋಣ. ಆದರೆ ನೀವು ಕೆಇಬಿಯನ್ನು ಏನಾದರೂ ಪ್ರೈವೆಟೈಜ್ ಮಾಡಿದರೆ ಈ ರಾಜ್ಯದ ರೈತರು ಒಬ್ಬರೂ ಕೂಡ ಉಳಿಯುವುದಿಲ್ಲ. ನಾಳೆ ಕೆಇಬಿಯಲ್ಲಿರತಕ್ಕ ಒಬ್ಬೊಬ್ಬರೂ ಕೂಡ ಜಾಗೀರ್‌ದಾರ್ ಆಗಿ ಬಿಡುತ್ತಾರೆ. ಅವನ ಕಂಟ್ರೋಲ್‌ನಲ್ಲಿ ಅವತ್ತು ರೈತರು ಅವನ ಕಾಲಿಗೆ ಹೋಗಿ ಬೀಳಬೇಕಾಗುತ್ತದೆ. ಸ್ವಾಮಿ, ಇವತ್ತು ಅವರಿಗೆ ಎಲೆಕ್ಟ್ರಿಸಿಟಿ ಕೊಡಿ, ಇವತ್ತು ಟ್ರಾನ್ಸ್‌ಫಾರ್ಮರ್ ಕೊಡಿ, ಇವತ್ತು ಕಂಡಕ್ಟರ್ ಹಾಕಿ ಎಂದು ಹೇಳಿ ಕೇಳಬೇಕಾಗುತ್ತದೆ. ಇಲ್ಲೀನೋ ಪ್ರಜಾಪ್ರಭುತ್ವದಲ್ಲಿ ನಾವು ಮಂತ್ರಿಗಳ ಹತ್ತಿರ ಹೋಗಬಹುದು. ಅಧಿಕಾರಿಗಳ ಹತ್ತಿರವೂ ಹೋಗಬಹುದು. ಈ ಎಲೆಕ್ಟ್ರಿಸಿಟಿ ಬೋರ್ಡನ್ನು ತರಾಟೆಗೆ ತೆಗೆದುಕೊಳ್ಳಬಹುದು. ನಾಳೆ ಅದು ಪ್ರವೇಟೈಜೇಷನ್ ಆದರೆ ಯಾವ ರೀತಿ ಖಾಸಗಿ ಕಂಪನಿಗಳನ್ನು ಮುಚ್ಚುತ್ತಾರೆ ಮತ್ತು ಆ ಇಂಡಸ್ಟ್ರೀಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಗತಿ ಯಾವ ರೀತಿಯಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ಅದೇ ರೀತಿ ಕನ್‌ಸ್ಯೂಮರ್ಸ್ ಗತಿಯೂ ಅದೇ ಆಗುತ್ತದೆ. ಆಗ ನಮ್ಮ ಬಳಕೆದಾರರ ಗತಿ ಏನು ಎಂದರೆ ಇಡೀ ನಮ್ಮ ಜೀವನವನ್ನು ಅಲ್ಲಿಟ್ಟು ನಾವು ಗುಲಾಮರಾಗಿ ಬದುಕಬೇಕಾಗುತ್ತದೆ. ಆ ಒಂದು ಸ್ಥಿತಿಗೆ ಇವತ್ತು ತರುತ್ತಿದ್ದಾರೆ. ಇವತ್ತು ರೆಗ್ಯುಲೇಟರಿ ಆ್ಯಕ್ಟ್ ಕೂಡ ಬರುತ್ತಿದೆ. ಅದಕ್ಕಾಗಿ ಈ ಒಂದು ಕೆಇಬಿ ಸ್ಥಿತಿ ಏನಾಗಿದೆ ಎಂದರೆ ಕೋಟ್ಯಾಂತರ ರೂಪಾಯಿಗಳು ಇದರಲ್ಲಿ ಲುಕ್ಸಾನಾಗಿದೆ. ಕೋಟ್ಯಾಂತರ ರೂಪಾಯಿಗಳು ದೊಡ್ಡ ದೊಡ್ಡ ಇಂಡಸ್ಟ್ರೀಗಳಿಂದ ಬರಬೇಕಾದ್ದನ್ನು ಬೋರ್ಡ್‌ನವರು ವಸೂಲು ಮಾಡುತ್ತಿಲ್ಲ. ಸಣ್ಣಪುಟ್ಟ ರೈತರಿಂದ ಬರುವ ಹಣಕ್ಕೆ ಇವತ್ತು ಡಿಸ್‌ಕನೆಕ್ಟ್ ಮಾಡಿ ತೊಂದರೆಯನ್ನು ಕೊಡುತ್ತಿದ್ದಾರೆ. ನಾವು ಮೊನ್ನೆ ಇದೇ ಸದನದಲ್ಲಿ ತಮಗೆ ಕೇಳಿಕೊಂಡೆವು, ಏನೆಂದರೆ ಅನೇಕ ಕಡೆ ಪಂಪ್‌ಸೆಟ್‌ಗೆ ಕನೆಕ್ಷನ್ ತೆಗೆದುಕೊಂಡವರು ಹಣ ಕೊಡಲಿಲ್ಲ ಎಂದು ಹೇಳಿ ತಕ್ಷಣ ಎಲ್ಲಾ ಕಡೆ ಡಿಸ್‌ಕನೆಕ್ಟ್ ಮಾಡಿದರು. ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ರಿಯಾಯಿತಿ ಕೊಡುತ್ತಾರೆ. ಏನೆಂದರೆ ಟ್ಯಾರಿಫ್ ರಿಯಾಯಿತಿ, ಸೇಲ್ಸ್ ಟ್ಯಾಕ್ಸ್ ರಿಯಾಯಿತಿ, ಇನ್‌ಸ್ಟಾಲ್‌ಮೆಂಟ್ಸ್ ಪುನಃ ಸಬ್ಸಿಡಿ ಅದಲ್ಲದೆ ಲೋನ್ ಕೊಡುವುದಕ್ಕಾಗಲಿಲ್ಲವೆಂದರೆ ಅವನಿಗೆ ಪುನಃ ಒಂದು ಕಟ್ ಅಪ್ ಡೇಟ್ ಕೊಟ್ಟು ಅಂದಿನಿಂದ ಪುನಃ ಸಾಲ ತೀರಿಸಬೇಕು ಎಂದು ಹೇಳಿ ಅವರಿಗೆ ಸಹಾಯವನ್ನು ಮಾಡುತ್ತೀರಿ. ಆದರೆ ಇಲ್ಲಿ ಬಡವರಿಗೆ ಆ ಸಹಾಯ ಯಾವುದೂ ಇಲ್ಲ. ಇದರ ಬಗ್ಗೆ ಏಕೆ ನಿಮಗೆ ಚಿಂತನೆ ಇಲ್ಲ. ಇದರ ಬಗ್ಗೆ ಸಾಮಾಜಿಕ ನ್ಯಾಯ ಮಾಡತಕ್ಕಂಥವರು ರೈತರ ಬಗ್ಗೆ ಏಕೆ ಚಿಂತನೆ ಮಾಡುತ್ತಿಲ್ಲ. ಇದಕ್ಕೇನು ಫಿಲಾಸಫಿ ಬೇಕೇ? ಈ ರಸ್ತೆ ಸಾರಿಗೆ ಬಗ್ಗೆ ಕೂಡ ನಮ್ಮ ಮಾನ್ಯ ಸಭಾಪತಿಯವರು ಬೇರೆ ಪ್ರಸ್ತಾಪ ಮಾಡುವವರು ಇದ್ದಾರೆ. ಏಕೆಂದರೆ ರಸ್ತೆ ಸಾರಿಗೆಯವರೂ ಕೂಡ ನೂರಾರು ಕೋಟಿ ರೂಪಾಯಿಗಳ ಸಾಲವನ್ನು ಮಾಡಿ ಎಷ್ಟು ಬಸ್ ಖರೀದಿ ಮಾಡಿದ್ದಾರೆ. ಎಷ್ಟು ಚಾಸಿ ಖರೀದಿ ಮಾಡಿದ್ದಾರೆ, ಎಷ್ಟು ಬಾಡಿ ಬಿಲ್ಡಿಂಗ್ ಮಾಡಿದ್ದಾರೆ, ಅದರ ಬಗ್ಗೆ ಒಂದು

ವಿಸ್ತಾರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ ಈಗಾಗಲೇ ನಾವು ಬರೆಯುತ್ತಿದ್ದೇವೆ. ಅದನ್ನು ಸಪರೇಟಾಗಿ ನಾನು ತೆಗೆದುಕೊಳ್ಳುತ್ತೇನೆ. ಆದರೆ ಇವತ್ತು ಆ ಇಲಾಖೆ ಕೂಡ ಧೂಳೀಪಟ ಆಗುತ್ತಿದೆ. ಮತ್ತು ಅಲ್ಲಿ ಮೂರು ಡಿವಿಜನ್‌ಗಳನ್ನು ಮಾಡಿದರೂ ಕೂಡ ಇವತ್ತು 1997-98ರಲ್ಲಿ 29 ಕೋಟಿ ರೂಪಾಯಿಗಳ ಲಾಸ್. 1998ರಲ್ಲಿ ಜನವರಿ 99 ರವರೆಗೆ 40 ಕೋಟಿ 40 ಲಕ್ಷ ರೂಪಾಯಿಗಳು ಲಾಸ್ ಆಗಿದೆ. ಅಂದರೆ ಬೈಫರ್‌ಕೇಷನ್ ಮಾಡಿದ ಮೇಲಾದರೂ ಕೂಡ ಸಾರಿಗೆ ಸಂಸ್ಥೆ ಏನಾದರೂ ಪ್ರಾಫಿಟ್‌ನಲ್ಲಿ ಬರುತ್ತದೆ ಎಂದರೆ ಸುಮಾರು ಎರಡು ವರ್ಷಗಳಲ್ಲಿ 69 ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗಿದೆ. ಮೂರು ಸಲ ಪ್ರಯಾಣ ದರವನ್ನು ಏರಿಸಿದರೂ ಲುಕ್ಸಾನು ಆಗಿದೆ. ಮೂರು ಸಲ ಬಸ್ಸಿನ ದರಗಳನ್ನು ಏರಿಸಿ ಪುನಃ 69 ಕೋಟಿ ರೂಪಾಯಿಗಳ ಲುಕ್ಸಾನೆಂದರೆ ಯಾವ ರೀತಿಯಾಗಿ ಇದರಲ್ಲಿ ಆಡಳಿತ ನಡೆದಿದೆ? ಎಷ್ಟರಮಟ್ಟಿಗೆ ನೀವು ಇದನ್ನು ಹಿಡಿತದಲ್ಲಿಟ್ಟುಕೊಂಡಿದ್ದೀರಿ? ಸಾರಿಗೆ ಸಂಸ್ಥೆಯ ಆಡಳಿತವನ್ನು ನೀವೇನು ಚುರುಕುಗೊಳಿಸುತ್ತೀರಿ ಎನ್ನುವುದಕ್ಕೆ ಇದೇ ಸಾಕ್ಷಿಯಾಗಿದೆ. ನೀವು ಮೂರು ಪಟ್ಟು ದರವನ್ನು ಏರಿಸಿದರೂ ಇಂಪ್ರೂವ್‌ಮೆಂಟ್ ಆಗಲಿಲ್ಲವೆಂದರೆ ಸಮ್‌ವೇರ್ ಸಮ್ ಡಿಫೆಕ್ಟ್ ಇದೆ. ಏನು ಪರ್ಚೇಸ್‌ನಲ್ಲಿ ಡಿಫೆಕ್ಟ್ ಇದೆಯೋ? ಸ್ಪೇರ್ ಪಾರ್ಟ್ಸ್‌ನಲ್ಲಿ ಡಿಫೆಕ್ಟ್ ಇದೆಯೋ? ಸ್ಟೋರ್‌ನಲ್ಲಿ ಡಿಫೆಕ್ಟ್ ಇದೆಯೋ? ಡಿಫೆಕ್ಟ್ ಕನ್‌ಸ್ಟ್ರಕ್ಷನ್ ಸ್ಟೇಜ್‌ನಲ್ಲಿದೆಯೋ? ಕಂಡಕ್ಟರ್ ಆಗಲಿ, ಡ್ರೈವರ್ ಆಗಲಿ ಅದನ್ನು ನಾವು ಹೇಳುವುದಕ್ಕಿಂತ ಕಂಡಕ್ಟರ್ ಬಗ್ಗೆ ಹೇಳಬಹುದು. ಇದು ಯಾವ ಹಂತದಲ್ಲಿ ಲೋಪವಾಗುತ್ತಿದೆ ಎನ್ನುವ ಬಗ್ಗೆ ನೀವು ವಿವರಣೆಯನ್ನು ಈ ಸಭೆಗೆ ಕೊಡಬೇಕಾಗುತ್ತದೆ. ಏಕೆಂದರೆ ಸುಮ್ಮನೆ ಜನರ ಮೇಲೆ ಇವತ್ತು ದರವನ್ನು ಏರಿಸಿ ಒಂದು ಕಡೆ ನಾವು ಲಾಭ ಮಾಡುತ್ತೇವೆ ಎಂದು ಹೇಳಿದಿರಿ. ಇಲ್ಲಿಯವರೆಗೂ ನೀವು ಯಾವ ಲಾಭವನ್ನೂ ಮಾಡಲಿಕ್ಕಾಗಲಿಲ್ಲ. ಇವತ್ತು ಮೂರು ಸಂಸ್ಥೆಗಳೂ ಲುಕ್ಸಾನ್‌ನಲ್ಲಿ ಹೋಗುತ್ತಿವೆ. 1998-99ರಲ್ಲಿ ಜನವರಿ 99ರವರೆಗೆ ಸುಮಾರು 40 ಕೋಟಿ ರೂ.ಗಳು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ 20 ಕೋಟಿ 54 ಲಕ್ಷ, ಇನ್ನೊಂದು ವಾಯುವ್ಯ ಸಾರಿಗೆ ಸಂಸ್ಥೆಗೆ 14 ಕೋಟಿ, ರೂ.ಗಳು ಆಮೇಲೆ ಬಿ ಮನಸಾ - ಅದು 90 ಕೋಟಿ 89 ಲಕ್ಷ ರೂ.ಗಳ ಲುಕ್ಸಾನು ಆಗಿದೆ. ನೀವು ಫೈಂಡ್ ಔಟ್ ಮಾಡಿ. ನಾವು ಹೇಳುವುದು ಅದೆಲ್ಲಾ ಲಾಸ್‌ನಲ್ಲಿದೆ. ಪ್ರಯಾಣ ದರಗಳಲ್ಲಿ ಹಂಡ್ರೆಡ್ ಪರ್‌ಸೆಂಟ್ ಎನ್‌ಹ್ಯಾನ್ಸ್‌ಮೆಂಟಾದರೂ ಕೂಡ ಲಾಸ್‌ನಲ್ಲಿದೆ ಎಂದರೆ ಮತ್ತೆ ಆ ಸಂಸ್ಥೆಗಳು ಏಕೆ ಬೇಕು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಮಂತ್ರಿಗಳು) : ಪ್ರಯಾಣದರದಲ್ಲಿ ಎನ್‌ಹ್ಯಾನ್ಸ್‌ಮೆಂಟ್ ಆಗಿರುವುದು 30 ಪರ್‌ಸೆಂಟ್ ನೂರು ಪರ್‌ಸೆಂಟಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನು ರೀಜನಲ್ ಇಂಬ್ಯಾಲೆನ್ಸ್. ಇದರ ಬಗ್ಗೆ ಪದೇ ಪದೇ ನಾವು ಇಲ್ಲಿ ಮಾತನಾಡಿದ್ದೇವೆ. ನಾವೇನು ಮಾತನಾಡಿದರೂ ಇವರದು ಒಂದೇ ಉತ್ತರ, ಇಂಬ್ಯಾಲೆನ್ಸ್ ಆಗಿಲ್ಲ ಎಂದು ಹೇಳುತ್ತಾರೆ. ಮೊನ್ನೆ ನಾನು ನಬಾರ್ಡ್ ಫಿಗರ್ಸನ್ನು ತೋರಿಸಿದ್ದೇನೆ. ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ರೀತಿಯಾಗಿ ಆಗಿದೆ, ಆಮೇಲೆ ಸೌತ್‌ಜೋನ್‌ನಲ್ಲಿ ಎಷ್ಟು ಹಣ ಕೊಟ್ಟಿದ್ದಾರೆ, ಆಮೇಲೆ ನಾರ್ತ್‌ಜೋನ್‌ನಲ್ಲಿ ಎಷ್ಟು ಕೊಟ್ಟಿದ್ದಾರೆ? ಅದರ ಬಗ್ಗೆ ನಾನು ಫಿಗರ್ಸ್‌ನ್ನು

ಹೇಳುತ್ತೇನೆ. ಸುಮಾರು 100 ಕೋಟಿ ರೂಪಾಯಿಗಳ ವ್ಯತ್ಯಾಸ ಇದೆ. ಜಿಯಾಗ್ರಫಿಕಲಿ ಬಿಗ್ಗೆಸ್ಟ್ ಡಿಸ್ಟ್ರಿಕ್ಟ್ ಯಾವುದೆಂದರೆ ಅದು ಗುಲ್ಬರ್ಗಾ, ಜಿಯಾಗ್ರಫಿಕಲಿ ಬಿಗ್ಗೆಸ್ಟ್ ಡಿಸ್ಟ್ರಿಕ್ಟ್ ಬಾಗಲಕೋಟೆ ಮತ್ತು ಬಿಜಾಪುರ. ನೀವು ಇವುಗಳಲ್ಲಿ ಯಾವುದೇ ತೆಗೆದುಕೊಂಡರೂ ಅಲ್ಲಿ ನೀವು ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಅದರ ಬಗ್ಗೆ ನೀವು ಯಾವ ಯೋಚನೆಯನ್ನೂ ಮಾಡಿಲ್ಲ ಯಾರಾದರೂ ಕುಳಿತು ಇದನ್ನು ನೋಡಬೇಕಲ್ಲಾ ಬೇರೆಯವರಿಗೆ ನಾನು ಕೊಡಬಾರದು ಎಂದು ಹೇಳುವುದಿಲ್ಲ. ಏಕೆಂದರೆ ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿ ಚಂದ್ರಬಾಬು ನಾಯಿಡು ಹೋಗಿ ಅಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತರಬೇಕಾದರೆ ನೀವು ಇನ್ನೂ ಹೆಚ್ಚಿನ ಹಣವನ್ನು ತಂದು ಈ ರೀಜನಲ್ ಇಂಬ್ಯಾಲೆನ್ಸನ್ನು ಸರಿಪಡಿಸತಕ್ಕಂಥದ್ದನ್ನು ಮಾಡಿ. ಆದರೆ ಒಂದು ಕಡೆಗೆ 269 ಕೋಟಿ. ಇನ್ನೊಂದು ಕಡೆಗೆ 115 ಕೋಟಿ ಇದು ನ್ಯಾಯ? ಏಕೆಂದರೆ ನಾವು ಇದನ್ನು ಸರಿಪಡಿಸದೇ ಹೋದರೆ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ : ನಬಾರ್ಡ್‌ನಲ್ಲಿ ಎರಡು ಕ್ರಮ ಇದೆ, ನಬಾರ್ಡ್‌ನಿಂದ ತೆಗೆದುಕೊಂಡಿರುವ ಸಾಲದಲ್ಲಿ ನಾವು ರಸ್ತೆ ಮಾಡಿರುವುದು. ನಬಾರ್ಡ್‌ನಲ್ಲಿ ನಾವು ತೆಗೆದುಕೊಂಡಿರುವ ಸಾಲದಲ್ಲಿ ನೀರಾವರಿ ಯೋಜನೆಯನ್ನು ಮಾಡಿರುವುದು. ಆರ್‌ಡಿ 1 ರಿಂದ 5ರವರೆಗೆ ಟೋಟಲ್ ಮಾಡಿದರೆ ಇರಿಗೇಷನ್‌ನಲ್ಲಿ 20-22 ಕೋಟಿ ರೂಪಾಯಿಗಳು ಹಳೇ ಮೈಸೂರಿಗೆ, 140 ಕೋಟಿ ರೂಪಾಯಿಗಳು ಹೊಸ ಮೈಸೂರಿಗೆ. ನಾನು ಬೇಕಾದರೆ ಆ ಫಿಗರ್ಸನ್ನು ತರಿಸುತ್ತೇನೆ. ಈ ಇರಿಗೇಷನ್ ಮತ್ತು ಪಿಡಬ್ಲ್ಯೂಡಿ ಎರಡೂ ನಬಾರ್ಡ್‌ಗೆ ಕಂಬೈಂಡ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಈ ಯುಕೆಪಿ ಯಲ್ಲಿ ಇದು ನನ್ನ ತಾಲ್ಲೂಕಿಗೆ ಬರುವುದಿಲ್ಲ ಎಂದು ತಿಳಿದುಕೊಂಡು, ಶಹಾಪುರ್, ಸುರ್‌ಪುರ್, ಯಾದಗೀರ್, ಜೇವರ್ಗಿ ಮತ್ತು ರಾಯಚೂರು ಈ ಮೂರೇ ತಾಲ್ಲೂಕುಗಳಿಗೆ ಎರಡು ಸಾವಿರ ಕೋಟಿ ರೂಪಾಯಿಗಳು ಬರುತ್ತದೆ ಎಂದು ಹೇಳುವುದಕ್ಕಾಗುತ್ತದೆಯೇ? That is a national project.

ಶ್ರೀ ಕೆ.ಎನ್. ನಾಗೇಗೌಡ : ಮೊದಲು ತಾವು ಈ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡು ಆಮೇಲೆ ನನಗೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈ ಮೊದಲೇ ತಿಳಿದುಕೊಂಡು ಬಿಟ್ಟಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ನಾವು ನಬಾರ್ಡ್‌ನಲ್ಲಿ ಐದು ಸಾರಿ ಸಾಲ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಈ ವಿಷಯ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಮಾನ್ಯ ನಾಗೇಗೌಡರು, ತಾವು ಈ ಸದನದಲ್ಲಿ ಇರಲಿಲ್ಲ ಎಂದು ಕಾಣುತ್ತದೆ. ನಬಾರ್ಡ್‌ನಲ್ಲಿ ಈ ರಸ್ತೆಯ ವಿಚಾರವನ್ನು ನಾವು ಪ್ರತ್ಯೇಕವಾಗಿ ತೆಗೆದುಕೊಂಡಿದ್ದೇವೆ. ಆ ಬಗ್ಗೆ ದಾಖಲೆಗಳ ಸಮೇತ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಉತ್ತರದ ಭಾಗ ಏನು ಇದೆ, ಆ ನಾರ್ತ್ ಜೋನ್ನನ ಚೀಫ್ ಇಂಜಿನಿಯರ್‌ಗೆ ಕೊಟ್ಟಿರತಕ್ಕ ಹಣ ಕಡಿಮೆ. ಅದು 169 ಕೋಟಿ ರೂಪಾಯಿಗಳು ಮಾತ್ರ. ದಕ್ಷಿಣದವರಿಗೆ ಸ್ವಲ್ಪ ಹೆಚ್ಚಿಗೆ ಹಣ ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರೇ ನಾನು ಹೇಳುವುದನ್ನು ದಯಮಾಡಿ ಕೇಳಿ. ಮಾನ್ಯ ವಸಂತ ಸಾಲಿಯಾನ ಅವರ ಪ್ರಶ್ನೆಗೆ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆಗೆ ತಾವು ಉತ್ತರವನ್ನು ಮೊನ್ನೆ ದಿವಸ ಕೊಟ್ಟಿದ್ದೀರಿ. ಈ ಸದನದ 8ನೇ ಅಧಿವೇಶನ ದಿನಾಂಕ 28.06.99ಕ್ಕೆ ಉತ್ತರ ಕೊಟ್ಟಿದ್ದೀರಿ. ನಾನೂ ಈ ರಸ್ತೆಗಳ ವಿಚಾರವನ್ನೇ ಹೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ನಬಾರ್ಡ್‌ನಿಂದ ನಾವು ಸಾಲ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದು ಈ ನೀರಾವರಿಯಿಂದ. ಆಮೇಲೆ ನಾವು ರಸ್ತೆಗಳಿಗೆ ಹಣ ಕೊಟ್ಟಿದ್ದೇವೆ. ನಾವು ಎರಡೂ ಲೋನ್‌ಗಳನ್ನು ನಬಾರ್ಡ್‌ನಿಂದ ತೆಗೆದುಕೊಂಡಿದ್ದೇವೆ. ನೀರಾವರಿಗೂ ಲೋನ್ ತೆಗೆದುಕೊಂಡಿದ್ದೇವೆ ಹಾಗೂ ರಸ್ತೆಗೂ ಲೋನ್ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರ ಕಂಟೆನ್‌ಷನ್ ಏನು ಅಂದರೆ, ಅವರ ಕ್ಷೇತ್ರ ಗುರುಮಿಠಕಲ್ ಇದೆ ಆ ಗುರುಮಿಠಕ್ಕಲ್‌ನಲ್ಲಿ ನೀರಾವರಿ ಬರುವುದಿಲ್ಲ. ಸುರಪುರದಲ್ಲಿ ನೀರಾವರಿ ಬರುತ್ತದೆ. ನೀವು ಸುರಪುರದಲ್ಲಿ ನೀರಾವರಿಗೆ ಹಣ ಕೊಟ್ಟಿದ್ದೀರಿ ಎಂದು ಆ ಗುರುಮಿಠಕಲ್ ನಲ್ಲಿ ರಸ್ತೆ ಮಾಡುವುದನ್ನು ನಿಲ್ಲಿಸುತ್ತೀರಾ, ನನಗೆ ಏಕೆ ಅನ್ಯಾಯ ಮಾಡುತ್ತೀರಿ ಎಂದು ಕೇಳಿರತಕ್ಕದ್ದು, ಅಲ್ಲಿ ಪಾಯಿಂಟ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರೋಡ್ಸ್ ಮತ್ತು ಬ್ರಿಡ್ಜಸ್ ಏನಿವೆ ಇವು ಸೌತ್ ಅಂಡ್ ನಾರ್ತ್ ಜೋನ್‌ನಲ್ಲಿ ನೀರಾವರಿಯೊಳಗೆ ಬರುತ್ತದೆಯೇ? ನಾನು ಹೇಳುತ್ತಿರುವುದು ಈ ಸೌತ್ ಜೋನ್‌ಗೆ ನೀವು ಕೊಟ್ಟಿದ್ದು 239 ಕೋಟಿ 57 ಲಕ್ಷ ರೂಪಾಯಿಗಳು. ಇದರಲ್ಲಿ ಇಂಬ್ಯಾಲೆನ್ಸ್ ಆಗಿದೆ.

MR. SPEAKER : Your allegation is that the whole allocation has not been scientific, it is not reasonable......

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದು ಏನೆಂದರೆ ನೀವು ಈ ವಿಚಾರದಲ್ಲಿ ಸಬ್ ಕಮಿಟಿ ಮಾಡಿ. ನೀವೆಲ್ಲಾ ಮಂತ್ರಿಗಳು ಅಲ್ಲಿ ಕುಳಿತು ಅಟ್‌ಲೀಸ್ಟ್ ಆ ಬಗ್ಗೆ ಯೋಚನೆ ಆದರೂ ಮಾಡಬೇಕು. ಇದರಲ್ಲಿ ಎಲ್ಲಿ ಕೊರತೆ ಇದೆ? ಎಲ್ಲಿ ನ್ಯೂನತೆ ಇದೆ ಎಂದು.

ಅಧ್ಯಕ್ಷರು : ಯೂನಿಫಾರ್ಮ್ ಡೆವಲಪ್‌ಮೆಂಟಿಗೆ ನೀವು ಯೋಚನೆ ಮಾಡಿಲ್ಲ ಎಂದು ಅವರು ಹೇಳುತ್ತಿರುವುದು. You have all the time under the sun to reply to all these allegations while giving reply.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾರ್, ಈ ಯೂನಿಫಾರ್ಮಿಟಿ ಇಲ್ಲದೇ ಹೋದರೆ ನಾಳೆ ಏನಾಗುತ್ತದೆ? ನ್ಯಾಚುರಲಿ ಹಾರ್ಟ್ ಬರ್ನ್ ಯಾವಾಗ ಶುರು ಆಗುತ್ತದೆ ಎಂದರೆ ಯೂನಿಫಾರ್ಮ್ ಆಗಿ ಮಾಡದೇ ಇದ್ದಾಗ. ಆಮೇಲೆ ನಿಜವಾಗಿ ನೋಡಿದರೆ, ಯಾವುದು ಹಿಂದುಳಿದಂತಹ ಪ್ರದೇಶ ಇದೆ, ಅಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕು-ಎಂತಲೇ ನೀವು ಇವತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಮಾಡಿದ್ದು. ಮಲೆನಾಡು ಅಭಿವೃದ್ಧಿ ಬೋರ್ಡ್‌ಗಳನ್ನು ಮಾಡಿದ್ದು. ಆದರೆ ಹಣ ಕೊಟ್ಟಿದ್ದು

ಏನು? ಅವರು ಪದೇ ಪದೇ ಹೇಳಿದರೆ ಸಿಟ್ಟಿಗೆ ಬರುತ್ತಾರೆ.ನೀವು ಏನೂ ಪರ್ಸನಲ್ ಆಗಿ ತಿಳಿದುಕೊಳ್ಳಬೇಡಿ. ನೀವೇನೂ ಕ್ಯಾಬಿನೆಟ್‌ನಲ್ಲಿ ಫೈಟ್ ಮಾಡುವುದಿಲ್ಲ. ಇಲ್ಲಿ ಹಣ ಕೊಡಿಸಿಕೊಡತಕ್ಕಂಥ ಶಕ್ತಿಯೂ ಇಲ್ಲ. ನಾವು ಹೇಳಿದಾಗ ಏನಾಗುತ್ತದೆ ಎಂದರೆ ಇವರೇ ಅವರ ಪರವಾಗಿ ಇದ್ದಾರೇನೋ ಎನ್ನುವ ಹಾಗೆ ಮಾತನಾಡಿಕೊಂಡು ಬರುತ್ತಾರೆ. ನಾವು ಹೇಳುತ್ತೇನೆ, ನೀವು ಉತ್ತರ ಕೊಡಿ. 1990-91ರಲ್ಲಿ ಶ್ರೀ ವೀರೇಂದ್ರ ಪಾಟೀಲ್ ಅವರ ಕಾಲದಲ್ಲಿ ಬಿಡುಗಡೆ ಆಗಿದ್ದ ಹಣ 50 ಕೋಟಿ ರೂಪಾಯಿಗಳು ಆ 50 ಕೋಟಿ ರೂಪಾಯಿಗಳು ಖರ್ಚಾಗಿದೆ. 1991- 92ರಲ್ಲಿ 62 ಕೋಟಿ ರೂಪಾಯಿಗಳು ಬಿಡುಗಡೆ ಆಯಿತು. ಮುಂದೆ ಅದೇ ರೀತಿಯಾಗಿ 64, 63 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದರು. ಆದರೆ ಇವರ ಸರ್ಕಾರ ಬಂದ ಮೇಲೆ 1994-95ರಲ್ಲಿ ಹಣ ಕೊಟ್ಟಿದ್ದು 46 ಕೋಟಿ ರೂಪಾಯಿಗಳು ಬಿಡುಗಡೆ ಆಗಿದ್ದು 45 ಕೋಟಿ ರೂಪಾಯಿಗಳು ಆ ಖರ್ಚಿನ ಜೊತೆಯಲ್ಲಿ ಆ ಹಣ ಅಂತೂ ಅಲ್ಲೇ ಇತ್ತಲ್ಲಾ, ನೀವು ಬಜೆಟ್ ಪ್ರಾವಿಜನ್ ಮತ್ತು ಬಿಡುಗಡೆ ಆದ ಹಣದ ಬಗ್ಗೆ ಹೇಳುತ್ತೀರಿ. ಆದರೆ ಖರ್ಚು ಆಗದೇ ಇದ್ದಂತಹ ಹಣ ಅಲ್ಲೇ ಇತ್ತು. ಪಿಡಿ ಅಕೌಂಟ್‌ನಲ್ಲಿ ಆ ಹಣ ಇತ್ತು. ಆಮೇಲೆ 1995-96ರಲ್ಲಿ 45 ಕೋಟಿ ರೂಪಾಯಿಗಳನ್ನು ಕೊಟ್ಟಿರಿ. ಈ 15 ಕೋಟಿ ರೂಪಾಯಿಗಳ ವ್ಯತ್ಯಾಸ ಏನು ಇದೆ ಆ ಹಣವನ್ನು ಬಿಡುಗಡೆ ಮಾಡಿದ್ದು ಬರೇ 35 ಕೋಟಿ ರೂಪಾಯಿಗಳು. ಆಮೇಲೆ 1996-97ರಲ್ಲಿ 43 ಕೋಟಿ ರೂಪಾಯಿಗಳು, ವ್ಯತ್ಯಾಸ 17 ಕೋಟಿ ರೂಪಾಯಿಗಳು ಅದೇ ರೀತಿಯಲ್ಲಿ 1998-99ರಲ್ಲಿ 60 ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಇದ್ದರೆ, ಹಣ ಬಿಡುಗಡೆ ಮಾಡಿದ್ದು 27 ಕೋಟಿ ರೂಪಾಯಿಗಳು, ಇದರಲ್ಲಿ 33 ಕೋಟಿ ರೂಪಾಯಿಗಳ ವ್ಯತ್ಯಾಸವಿದೆ. ಕೊನೆಗೆ ಹತ್ತು ಕೋಟಿ ರೂಪಾಯಿಗಳನ್ನು ಲಾಸ್ಟ್ ಮೊಮೆಂಟ್‌ನಲ್ಲಿ ಹೋಗಿ ಬಿಡುಗಡೆ ಮಾಡಿದ್ದೀರಿ. ಅಂದರೆ ಇದರಲ್ಲಿ ನಿಮಗೆ ರೀಜನಲ್ ಇಂಬ್ಯಾಲೆನ್ಸ್ ಏನಿದೆ ಇದನ್ನು ತಡೆಯುವುದಕ್ಕೆ ಆಗುತ್ತದೆ. ಹಿಂದುಳಿದಂತಹ ಪ್ರದೇಶಕ್ಕೆ ನಾವು ಗಮನ ಕೊಟ್ಟಿದ್ದೇವೆಂಬ ಸಮಾಧಾನ ನಿಮಗೆ ಇದ್ದರೆ ಇದು ಸರಿಯಿಲ್ಲ. ಇದೇನೋ ಆ ಭಾಗದ ಜನರಿಗೆ ಆಗಿರುವುದು. ಆದರೆ ಮಲೆನಾಡಿನ ಜನರಿಗೆ ಏನು ಮಾಡಿದ್ದೀರಿ? ಅದಕ್ಕೂ ಹೀಗೆ ಮಾಡಿರುವುದು. ಮಲೆನಾಡಿನಲ್ಲೂ ಕೂಡ ಬಹಳ ಪ್ರಾವಿಷನ್ ಮಾಡುವುದು 30 ಕೋಟಿ ರೂಪಾಯಿಗಳು ಹಣ ಬಿಡುಗಡೆ ಮಾಡುವುದು ಹತ್ತು ಕೋಟಿ ರೂಪಾಯಿಗಳು ಅದೂ ಕೂಡ ಪ್ರತಿ ವರ್ಷ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೇನೆ. 1992-93ರಲ್ಲಿ 35 ಕೋಟಿ ರೂಪಾಯಿಗಳನ್ನು ಕೊಟ್ಟರೆ ಸಂಪೂರ್ಣವಾಗಿ ಆ ಹಣ ರಿಲೀಸ್ ಆಗಿದೆ. ನೀವು 1995-96ರಲ್ಲಿ 30 ಕೋಟಿ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದರೆ ಬರೇ 22 ಕೋಟಿ ರೂಪಾಯಿಗಳ ಹಣವನ್ನು ರಿಲೀಸ್ ಮಾಡಿದ್ದೀರಿ. 1997-98ರಲ್ಲಿ 30 ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿ ಬರೇ 15 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. 1998-99ರಲ್ಲಿ 34 ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿ ಬರೇ 18 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಇದು ಇವರ ಆಡಳಿತ ವೈಖರಿ !

ಶ್ರೀ ಡಿ.ಆರ್. ಪಾಟೀಲ್ : ಅದೂ ಕೂಡ ಮಲೆನಾಡು ಏರಿಯಾದವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಮಾಡಿರುವುದು ಇದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಲೆನಾಡು ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇದೆ. ಇದರ ವಿಚಾರ ಆಯಿತು ಇನ್ನು ಈ ಹೈದರಾಬಾದ್-ಕರ್ನಾಟಕ ಏರಿಯಾದವರಿಗೆ ಬರಲು ಪುರುಸೊತ್ತು ಇಲ್ಲ. ಬಿಸಿಲಿನಲ್ಲಿ ನಿಮಗೆ ಕಷ್ಟ ಆಗುತ್ತಿರಬಹುದು. 46 ಡಿಗ್ರಿಯಲ್ಲಿ ನಾವು ಹೋಗಿ ಏನು ನೋಡಿಕೊಂಡು ಬರೋಣ ಎಂದು ಹೇಳಬಹುದು. ಆ ಮಲೆನಾಡು ತಂಪು ಪ್ರದೇಶ ಅಲ್ಲಿ ನೀವು ಹೇಳಿದ್ದೇನು? 30 ಕೋಟಿ ರೂಪಾಯಿಗಳಷ್ಟು ಹಣದ ಪ್ರಾವಿಷನ್ ಎಂದು ಹೇಳುವುದು, 15 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುವುದು. ಇದು ಇವರ ಆಡಳಿತ, ಇವರ ಮನಸ್ಸು ಮತ್ತು ಇದು ಹಿಂದುಳಿದ ಭಾಗಗಳಿಗೆ ಕೊಡತಕ್ಕಂಥ ಪ್ರೋತ್ಸಾಹ ಮತ್ತು ಮಾಡತಕ್ಕಂತಹ ಡೆವಲಪ್‌ಮೆಂಟ್?

ಶ್ರೀ ಅರಗ ಜ್ಞಾನೇಂದ್ರ : ಈ ಸಲ ಪ್ಲಾನೇ ಆಗಲಿಲ್ಲ, ಒಂದು ಪೈಸೆ ಕೂಡ ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವರು ಎಷ್ಟರಮಟ್ಟಿಗೆ ತಮ್ಮ ಆಡಳಿತವನ್ನು ಚುರುಕುಗೊಳಿಸಿದ್ದಾರೆ ಎನ್ನುವುದಕ್ಕೆ ನಾನು ಇವೆಲ್ಲಾ ಉದಾಹರಣೆಗಳನ್ನು ಹೇಳುತ್ತಿದ್ದೇನೆ. ಇಷ್ಟೇ ಅಲ್ಲ ಇವರು ಅಸೆಂಬ್ಲಿಯಲ್ಲಿ ಇಲ್ಲಿಯವರೆಗೆ ಅಶ್ಯೂರೆನ್ಸ್ ಕೊಟ್ಟಿದ್ದಾರೆ. ನಮ್ಮ ಮಾನ್ಯ ನಾಗೇಗೌಡರಿಂದ ಹಿಡಿದು ಎಲ್ಲರೂ ಇಲ್ಲಿ ಅಶ್ಯೂರೆನ್ಸ್ ಕೊಟ್ಟಿದ್ದಾರೆ. ಸುಮಾರು 400 ಅಶ್ಯೂರೆನ್ಸ್ ಕೊಟ್ಟಿದ್ದಾರೆ. ಅದರಲ್ಲಿ ಫುಲ್‌ಫಿಲ್ ಮಾಡಿದ್ದು ಎಷ್ಟು ಅಂದರೆ, ವಿಧಾನಸಭೆ ಸರ್ಕಾರಿ ಭರವಸೆಗಳ ಸಮಿತಿ ಪರಿಶೀಲನೆಗಾಗಿ ಬಾಕಿ ಉಳಿದಿರುವ ಇಲಾಖಾವಾರು ತಃಖ್ತೆ ಏನಿದೆ ಇದರಲ್ಲಿ ಇರತಕ್ಕದ್ದು ಎಷ್ಟು ಎಂದರೆ 350.

ಅಧ್ಯಕ್ಷರು : ಮೆಂಬರ್ಸ್‌ಗೆ ಹಸಿವು ಜಾಸ್ತಿ ಆಗಿದೆ. ತಾವು ಊಟ ಆದನಂತರ ತಮ್ಮ ಮುಂದುವರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಇನ್ನು ಎರಡು ನಿಮಿಷ ಹೇಳಿ ಮುಗಿಸುತ್ತೇನೆ. ಈ ಸರ್ಕಾರಿ ಭರವಸೆಗಳ ವಿಚಾರ ಹೇಳುತ್ತೇನೆ. ಇಷ್ಟೊಂದು ಅಶ್ಯೂರೆನ್ಸ್ ಕೊಟ್ಟು ಇವರು ಫುಲ್‌ಫಿಲ್ ಮಾಡಿದ್ದು 10 ಪರ್ಸೆಂಟ್ ಇಲ್ಲ. ಲಿಸ್ಟ್ ಮಾಡಿ ಹೇಳಿ. ಅದೂ ನನ್ನದು ಅಲ್ಲ, ಈ ಸಮಿತಿ ಕೊಟ್ಟಂತಹ ಅಂಕಿ ಸಂಖ್ಯೆ. ಅಂದರೆ ಅವರು ಹೇಳುವುದೇ, ಹೇಳುವುದು. ಭರವಸೆಗಳನ್ನು ಕೊಡುವುದೇ ಕೊಡುವುದು. ಆಮೇಲೆ ಒಂದೂ ಕೂಡ ಅದನ್ನು ಫುಲ್‌ಫಿಲ್ ಮಾಡತಕ್ಕದ್ದು ಆಗಲೀ ಅಥವಾ ನಿಭಾಯಿಸತಕ್ಕದ್ದು ಆಗಲಿ ಆ ಕೆಲಸವನ್ನು ಇಲ್ಲಿಯವರೆಗೆ ಮಾಡಿಲ್ಲ. ರಾಜ್ಯದಲ್ಲಿ ಇಂತಹ ಒಂದು ಸರ್ಕಾರ ಇದೆ ಇಲ್ಲಿ ಉಳಿದಂತೆ ಲಾ ಅಂಡ್ ಆರ್ಡರ್ ಮತ್ತು ಇನ್ನು ಎರಡು ಮೂರು ಸಬ್ಜೆಕ್ಟ್ ಇದೆ, ಅದರ ಬಗ್ಗೆ ಅನಂತರ ಹೇಳಿ ಮುಗಿಸುತ್ತೇವೆ.

ಅಧ್ಯಕ್ಷರು : ನಾನು ಈಗ ಸದನವನ್ನು ಭೋಜನಕ್ಕಾಗಿ ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳುತ್ತದೆ. ದಯಮಾಡಿ ಯಾರೂ ಆಬ್ಸೆಂಟ್ ಆಗ ಬೇಡಿ. All major demands are coming up.

(ಸದನವು 1.48ಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 3 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾರವರು)
ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

## ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 118ರ ಮೇರೆಗೆ ದಿನಾಂಕ 8.7.1999ರಂದು ವಿಧಾನ ಪರಿಷತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸಲಾಗಿದೆ".

## ವಿತ್ತೀಯ ಕಲಾಪಗಳು

### ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಆಡಳಿತ ಪಕ್ಷದ ಕಡೆ ಯಾವ ಸದಸ್ಯರೂ ಇಲ್ಲ, ಮಂತ್ರಿಗಳೂ ಕೂಡ ಇಲ್ಲ. ನಾನು ಯಾರಿಗೆಂದು ಭಾಷಣ ಮಾಡಲಿ? ನೀವು ಮತ್ತು ನಾನು ಮಾತನಾಡುವುದಿದ್ದರೆ ಛೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡೋಣ. ಈಗ ನಾನು ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡಬೇಕೆಂದಿದ್ದೆ.........

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು, ಮಾನ್ಯ ಸದಸ್ಯರುಗಳು ಮತ್ತು ಎಲ್ಲಾ ಅಧಿಕಾರಿಗಳು ಬರುವವರೆಗೆ ಈ ಹೌಸ್ ಅನ್ನು ಸ್ವಲ್ಪ ಕಾಲ ಅಡ್ಜರ್ನ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನೀವು ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ರೀತಿ ಆಗುತ್ತಿದೆ. ಇದು ಬಹಳ ಅತಿಯಾಯಿತು. ಒಬ್ಬ ಮನುಷ್ಯನಿಗೆ ಎಷ್ಟು ಸಲ ತಿಳಿ ಹೇಳಲು ಸಾಧ್ಯ? ನಾವೇನು ಖಾಲಿ ಕುರ್ಚಿಗಳನ್ನು ಉದ್ದೇಶಿಸಿ ಇಲ್ಲಿ ಮಾತನಾಡಬೇಕೇ? ಅದಕ್ಕಾಗಿಯೇ ನಾನು ಹಿಂದೆಯೇ ಹೇಳಿದೆ, ಈ ಸದನದಲ್ಲಿ ನಾವು ಚರ್ಚೆ ನಡೆಸುವುದು ಬೇಡ, ಸದನ ಮುಂದೂಡಿ, ಗಿಲಟೀನ್‌ಗೆ ಹಾಕಿ ಬೇಡಿಕೆಗಳನ್ನು ಪಾಸ್ ಮಾಡಿಬಿಡಿ ಎಂದು. ನಾವು ಹೀಗೆ ಹೇಳಿದರೂ ಕೂಡ ಮತ್ತೆರಡು ದಿವಸ ಅಧಿವೇಶನ ಮುಂದುವರೆಸಿದ್ದೀರಿ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಎರಡು ದಿವಸಗಳ ಕಾಲ ಅಧಿವೇಶನದ ಅವಧಿಯನ್ನು ಎಕ್ಸ್‌ಟೆನ್‌ಷನ್ ಮಾಡಿಸಿದ್ದಕ್ಕೆ ನಾನೇ ಕ್ಷಮೆ ಕೇಳಬೇಕಾಗಿದೆ. ಎಲ್ಲರೂ ಬೇಡ ಎಂದರೂ ನಾನು ಒತ್ತಾಯಪಡಿಸಿ ಅಧಿವೇಶನ ಮತ್ತೆರಡು ದಿನ ಎಕ್ಸ್‌ಟೆಂಡ್ ಆಗುವಂತೆ ಮಾಡಿದೆ. ಈಗ ಒಂದು ಕೆಲಸ ಮಾಡಿ, ಗಿಲಟೀನ್‌ಗೆ ಹಾಕಿಬಿಡಿ, ಬೇಡಿಕೆಗಳನ್ನು ಪಾಸ್ ಮಾಡಿಸಿ ನಾವೆಲ್ಲಾ ಹೊರಟು ಹೋಗೋಣ. ವಿಧೇಯಕಗಳನ್ನು ಯಾವಾಗಲಾದರೂ ಪಾಸ್ ಮಾಡಿಕೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಯಾರೂ ಇಲ್ಲದೇ ನಾವು ಇಲ್ಲಿ ಬೇಡಿಕೆಗಳ ಮೇಲೆ ಚರ್ಚಿಸುವುದರಲ್ಲಿ ಏನೂ ಅರ್ಥವಿಲ್ಲ. ಸರ್ಕಾರಕ್ಕೆ ಈ ಬಜೆಟ್ ಪಾಸ್ ಆಗಬೇಕು. ನಮ್ಮ ಭಾಷಣ ಕೇಳುವುದಕ್ಕೆ ಸರ್ಕಾರಕ್ಕೆ ಪುರಸೊತ್ತು ಇಲ್ಲ ಅಥವಾ ತಾಳ್ಮೆ ಇಲ್ಲ. ಈ ಸದನಕ್ಕೆ ಬರತಕ್ಕಂಥ ಸೌಜನ್ಯ ಇಲ್ಲ, ಜನ ಏನು ಹೇಳುತ್ತಾರೋ ಎಂಬ ಬಗ್ಗೆ ಕೂಡ ಸರ್ಕಾರಕ್ಕೆ ಗೌರವ ಇಲ್ಲ, ಹೀಗಿರುವಾಗ ನಾವು ಈ ಬೇಡಿಕೆಗಳ ಮೇಲೆ ಮಾತನಾಡುವುದೇನಿದೆ? ಆದ್ದರಿಂದ ಗಿಲಟೀನ್‌ಗೆ ಹಾಕಿಬಿಡಿ, ಅವರ ಸಂಖ್ಯೆ ಕಡಿಮೆ ಇದ್ದರೂ ಕೂಡ ನಾವು 'ಯೆಸ್' ಎಂದು ಬೇಡಿಕೆಗಳನ್ನು ಪಾಸ್ ಮಾಡಿಕೊಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ಈ ಬಾರಿ ಇಡೀ ಅಧಿವೇಶನದ ಅವಧಿಯಲ್ಲಿ ಈ ರೀತಿಯಾಗುತ್ತಿದೆ. ನಾವು ಯಾರು ಮಾತನಾಡುವಾಗಲೂ ಕೂಡ ಯಾರೊಬ್ಬರೂ ಕೂಡ ನಮ್ಮ ಭಾಷಣ ಕೇಳಲಿಲ್ಲ ಅಥವಾ ನೋಟ್ ಮಾಡಿಕೊಳ್ಳಲಿಲ್ಲ. ಅಧಿಕಾರಿಗಳೂ ಕೂಡ ಏಕೋ ಮಂತ್ರಿಗಳ ತರಹವೇ ಆಗಿ ಬಿಟ್ಟಿದ್ದಾರೆ. ಅವರಾದರೂ ಬಂದು ಕುಳಿತುಕೊಂಡು ಚರ್ಚೆ ಕೇಳಿ ನೋಟ್ ಮಾಡಿಕೊಂಡರೆ ಅಡ್ಡಿ ಇಲ್ಲ. ಕೇವಲ ಮೂರು ಮತ್ತೊಂದು ಜನ ಮಾತ್ರ ಆಡಳಿತ ಪಕ್ಷದ ಕಡೆಗಿದ್ದಾರೆ, ಬೇರೆ ಯಾರೂ ಇಲ್ಲ. ಮಾನ್ಯ ಸರ್ಕಾರಿ ಸಚೇತಕರೂ ಕೂಡ ಬಹಳ ಹತಾಶರಾಗಿದ್ದಾರೆ. ಅವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಯಾರಿಗೂ ಏನೇನೂ ಮುಟ್ಟುತ್ತಿಲ್ಲ. ಮೂರನೇ ಮಹಡಿಯಲ್ಲೂ ಇನ್ನೂ ಕೂಡ ಮಂತ್ರಿಗಳಿದ್ದಾರೆ, ಅವರ್‍ಯಾರೂ ಕೆಳಗೆ ಬರುವಂತಹ ಪರಿಸ್ಥಿತಿಯಲ್ಲೂ ಕೂಡ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನು ಅವರೊಬ್ಬರಿಗೇ ಕೆಲಸವಿರುತ್ತದೆಯೇ? ಬೇರೆ ಯಾರಿಗೂ ಕೂಡ ಕೆಲಸವಿರುವುದಿಲ್ಲವೇ? ನಾವೇನು ಇಲ್ಲಿಗೆ ಕೆಲಸವಿಲ್ಲದೆ ಬರುತ್ತೇವೆಯೇ? ಅವರಿಗಿಂತಲೂ ಹತ್ತು ಪಟ್ಟು ಬೇರೆ ಕೆಲಸವನ್ನು ನಾವೂ ಮಾಡುತ್ತೇವೆ. ಪಕ್ಷದ ಕೆಲಸ ಇರುತ್ತದೆ, ಬೇರೆ ಸೋಷಿಯಲ್ ಆ್ಯಕ್ಟಿವಿಟೀಸ್ ಇರುತ್ತದೆ, ಲೆಜಿಸ್ಲೇಟರ್ಸ್ ಆಗಿ ಜವಾಬ್ದಾರಿಯುತ ಕೆಲಸ ಇರುತ್ತದೆ, ಸಣ್ಣ ಪುಟ್ಟ ಕೆಲಸಗಳನ್ನಾದರೂ ಅಟೆಂಡ್ ಮಾಡಿ ಇಲ್ಲಿಗೆ ಬರಬಹುದಾಗಿತ್ತು. ಅದನ್ನೂ ಮಾಡಲಿಕ್ಕಾಗಲಿಲ್ಲ. ಇದೇನಿದು? ಸುಮ್ಮನೆ ........

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣ ಮುಂದುವರೆಸಲಿ. ನಾವು ಇಲ್ಲಿ ಕುಳಿತುಕೊಂಡು ನೋಟ್ ಮಾಡಿಕೊಳ್ಳುತ್ತೇವೆ. ಇತರ ಮಂತ್ರಿಗಳು ಇಷ್ಟರಲ್ಲೇ ಬರುವವರಿದ್ದಾರೆ. ತಾವು ತಮ್ಮ ಭಾಷಣ ಮುಂದುವರೆಸಿ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೇ, ನನಗೆ ಖಾಲಿ ಖುರ್ಚಿಗಳನ್ನು ನೋಡಿದರೆ ಮಾತನಾಡಲು ಉತ್ಸಾಹವೇ ಬರುವುದಿಲ್ಲ. ಇಲ್ಲೆಲ್ಲಾ ಖಾಲಿ ಖುರ್ಚಿ ಇದ್ದರೆ ನಿಮಗಾದರೂ ಮಾತನಾಡಲು ಉತ್ಸಾಹ ಇರುತ್ತದೆಯೇ? ಈ ಮಾತನ್ನು ಕೇವಲ ವಾದಕ್ಕೆ ಹೇಳುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಉದಯ ರಾಗ, ಭೈರವಿ ರಾಗ ಎಂದು ಇರುವಂತೆ ಇದು 'ಸದನ ರಾಗ'ವಾಗಿದೆ. ನಾವು ಪ್ರತಿ ಸಲವೂ ಯಾರೂ ಮಂತ್ರಿಗಳಿಲ್ಲ ಎಂದು ಹೇಳುತ್ತೇವೆ. ಅಲ್ಲಿ ಯಾರೋ ಉಳಿದಿರುವವರು, ಅಳಿದಿರುವವರು ಮಂತ್ರಿಗಳು ಬರುತ್ತಾರೆ, ನೀವು

ಭಾಷಣ ಮಾಡಿ ಎನ್ನುತ್ತಾರೆ. ಇದು 'ಸದನ ರಾಗ' ಈ ರಾಗ ಕೇಳುವುದಕ್ಕೆ ನಾವು ಕುಳಿತುಕೊಳ್ಳಬೇಕೇ? ಮಾನ್ಯ ವಿರೋಧ ಪಕ್ಷದ ನಾಯಕರು ದಯವಿಟ್ಟು ಮಂತ್ರಿಗಳು ಬಂದ ಮೇಲೆ ಭಾಷಣ ಮಾಡಬೇಕೆಂದು ಕೋರುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ಈ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಕೆ. ವಸಂತ ಬಂಗೇರ : ಮಾನ್ಯ ಉಪಾಧ್ಯಕ್ಷರೇ, ಮಂತ್ರಿಗಳೆಲ್ಲಾ ಕೌನ್ಸಿಲ್‌ನಲ್ಲಿ ಇದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಸರಿಯಲ್ಲ. This House is supreme. If you pass a resolution, the other house cannot be there.

ಶ್ರೀ ಕೆ. ವಸಂತ ಬಂಗೇರ : ಅಲ್ಲಿ ಬಿಲ್ಸ್ ಬರುತ್ತಿದೆ ಎಂದು ಹೇಳುತ್ತಾರೆ.

SRI MALLIKARJUNA KHARGE : You can't say that. Don't talk non-sense.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರು ಈ ಹೌಸ್‌ಗೆ ಗೌರವ ಕೊಡಬೇಕೆಂದು ಹೇಳುತ್ತಿದ್ದಾರೆ. ಆದರೆ ಆ ಹೌಸ್‌ನಲ್ಲೂ ಕೂಡ ಮಂತ್ರಿಗಳು ಇರಬೇಕಾಗುತ್ತದೆ, ಆ ಹೌಸ್‌ಗೂ ಕೂಡ ಅಷ್ಟೇ ಗೌರವವನ್ನು ಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಎಲ್ಲಾ ಐವತ್ತು ಜನ ಮಂತ್ರಿಗಳೂ ಕೂಡ ಅಲ್ಲೇ ಇದ್ದಾರೆಯೇ? ಸುಮ್ಮನೆ ಏಕೆ ಹಾಗೆ ಹೇಳುತ್ತೀರಿ? ............

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ನೀವು ಆ ಹೌಸ್‌ಗೆ ಹೋಗಬೇಡಿ ಎಂದು ಹೇಳುತ್ತಿಲ್ಲ. ಈ ಹೌಸ್‌ನಲ್ಲಿ ನಾವು ಮಾತನಾಡುವಾಗ ಮಂತ್ರಿಗಳೂ ಕೂಡ ಇರಬೇಕೆಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲಾ ಮಂತ್ರಿಗಳೂ ಕೂಡ ಕೌನ್ಸಿಲ್‌ನಲ್ಲೇ ಇದ್ದಾರೆಯೇ? ಮಾನ್ಯ ಉಪಾಧ್ಯಕ್ಷರೇ, ಈ ಸದನವನ್ನು ಸ್ವಲ್ಪ ಕಾಲ ಮುಂದೂಡಿ. ಎಲ್ಲಾ ಮಂತ್ರಿಗಳೂ ಕೌನ್ಸಿಲ್‌ನಲ್ಲಿ ಇದ್ದಾರೆಯೇ ಎಂದು ನೋಡಿಬಿಡೋಣ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮಂತ್ರಿಗಳು ಎರಡೂ ಸದನದಲ್ಲಿ ಇರಬೇಕಾಗುತ್ತದೆ. ಅದರಲ್ಲಿ ಎರಡು ಮಾತೇ ಇಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲಾ ಮಂತ್ರಿಗಳೂ ಕೌನ್ಸಿಲ್‌ನಲ್ಲಿದ್ದಾರೆ ಎಂದು ಸುಳ್ಳೇಕೆ ಹೇಳುತ್ತೀರಿ? There should be some limit.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೇ, ನನ್ನ ಅನುಭವದಲ್ಲಿ ಹೇಳುವುದಾದರೆ, ಹಿಂದೆ ವಿಧಾನ ಸಭಾ ಅಧಿವೇಶನ ಕರೆದ ಮೇಲೆ ಒಂದು ವಾರ ಗ್ಯಾಪ್ ಕೊಟ್ಟು ವಿಧಾನ ಪರಿಷತ್ತು ಅನ್ನು ಕರೆಯಲಾಗುತ್ತಿತ್ತು. ಈ ರೀತಿ ರಗಳೆಯಾಗುತ್ತದೆ ಎಂದು ಆ ರೀತಿ ಮಾಡಲಾಗುತ್ತಿತ್ತು. ಆಗ ಕಡಿಮೆ ಮಂತ್ರಿಗಳು ಇರುತ್ತಿದ್ದರು. ಈಗ ಎರಡೂ ಸದನ ಒಟ್ಟಿಗೇ ಕರೆದಿದ್ದಾರೆ; 50-60 ಮಂತ್ರಿಗಳು ಸಚಿವ ಸಂಪುಟದಲ್ಲಿದ್ದಾರೆ. ಅವರುಗಳು ಈ ಸದನದಲ್ಲಿ ಹಾಜರಿರುವುದಿಲ್ಲ ಎಂದರೆ ಹೇಗೆ? ಉಳಿದ ಸದಸ್ಯರು ಹಾಜರಿರದಿದ್ದರೂ ಪರವಾಗಿಲ್ಲ, ಮಂತ್ರಿಗಳಾದರೂ ಇರಬೇಕಿತ್ತು. ಯಜಮಾನರು ಇದ್ದಂತೆ ಉಳಿದವರೂ ಇರುತ್ತಾರೆ ಎಂದು ಗಾದೆಯೊಂದು ಹೇಳುತ್ತದೆ. ಮಂತ್ರಿಗಳಾದವರೇ ಈ ರೀತಿ ಮಾಡಿದರೆ ಹೇಗೆ? ನಿಮ್ಮ ನಿಮ್ಮ ಜಿಲ್ಲೆಗಳ ಸದಸ್ಯರುಗಳನ್ನು ಕರೆದುಕೊಂಡು ಬಂದು ಸದನದಲ್ಲಿ ಕೂರಿಸಿಕೊಳ್ಳುವುದು ನಿಮ್ಮ ನಿಮ್ಮ ಕರ್ತವ್ಯವಾಗಿದೆ. ಮಾನ್ಯ ದೇವರಾಜ್‌ಅರಸ್‌ರವರು ನಮ್ಮ ಕಾಲದಲ್ಲಿ ಮಂತ್ರಿಗಳಿಗೆ ನಿಮ್ಮ ನಿಮ್ಮ ಜಿಲ್ಲೆಗಳ ಸದಸ್ಯರನ್ನು ಅಧಿವೇಶನದ ಸಮಯದಲ್ಲಿ ಕರೆದುಕೊಂಡು ಬರುವುದು ನಿಮ್ಮಗಳ ಜವಾಬ್ದಾರಿ ಎಂದು ಹೇಳುತ್ತಿದ್ದರು. ಏನಾದರೂ ಒಂದು ಮಾಡಿ ನಿಮ್ಮ ಪಾರ್ಟಿಯಲ್ಲಿ ಒಂದು ಡಿಸಿಪ್ಲೀನ್ ಮಾಡಿಕೊಳ್ಳಿ. ಸೋಮವಾರ ಮತ್ತು ಮಂಗಳವಾರವಾದರೂ ವಿಧಾನ ಪರಿಷತ್ತು ನಡೆಯದಂತೆ ನಿರ್ಧಾರ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೇ, ಪ್ರತಿ ದಿವಸ ಇದೇ ರಾಗವನ್ನು ಹಾಡಬೇಕೆಂದರೆ ನಮಗೂ ಬೇಜಾರು ಆಗುವುದಿಲ್ಲವೇ? ಒಂದು ಕೆಲಸ ಮಾಡಿ, ಈ ರೀತಿಯ ಪರಿಸ್ಥಿತಿಯಲ್ಲಿ ಕೌನ್ಸಿಲ್ ಇಟ್ಟುಕೊಳ್ಳುವುದರಲ್ಲಿ ಅರ್ಥ ಇಲ್ಲ........

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಫೈನಾನ್ಸ್ ಬಿಲ್ ಪಾಸ್ ಮಾಡುವುದು ಬೇಡ, ಗಿಲಟಿನ್‌ಗೆ ಹಾಕಿ ಬಿಡಿ. ಎಲ್ಲಾ ತೆಗೆದುಕೊಂಡು ಹೋಗಿ ಬಿಡೋಣ. ಯಾರಿಗೂ ಬೇಡದೆ ಇರತಕ್ಕಂಥಾದ್ದನ್ನು ಈ ಸದನದಲ್ಲಿ ಪಾಸ್ ಮಾಡುವುದಾದರೂ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ನಿಮ್ಮ ಸ್ಥಾನಕ್ಕೆ ಗೌರವ ಕೊಡುತ್ತೇವೆ. ನಿಮಗಾದರೂ ಗೌರವ ಕೊಟ್ಟು ಬರಬೇಕು, ಆ ಸದನಕ್ಕಾದರೂ ಗೌರವ ಕೊಡಬೇಕು, ಜನರ ಭಯವಿರಬೇಕು, ನಾವು ಇರದೇ ಹೋದರೆ ಪಬ್ಲಿಕ್ ಒಪೀನಿಯನ್ ಏನಾಗುತ್ತದೆ, ಯಾರಿಗೂ ಭಯ ಇಲ್ಲ. ಇವರಿಗೆ ಪ್ರೆಸ್ ಭಯ ಇಲ್ಲ, ನಿಮ್ಮ ಭಯ ಇಲ್ಲ, ಸದನದ ಭಯ ಇಲ್ಲ, ಜನರ ಭಯ ಇಲ್ಲ, ನಾನು ನಿಮಗೆ ಕೈ ಮುಗಿದು ಕೇಳಿಕೊಂಡೆ, ಮಾನ್ಯ ನಂಜೇಗೌಡರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದರಿಂದ ನಾನು ಸುಮ್ಮನೆ ಕುಳಿತೆ. ಯಾವ ಪುರುಷಾರ್ಥಕ್ಕೆ ನಾವು ಈ ಸದನವನ್ನು ಮುಂದುವರೆಸಬೇಕು?

ಯಾವಾಗ ಏನು ಮಾತನಾಡಿದರೂ ಪ್ರಯೋಜನವಿಲ್ಲ ಸರಿಯಾದ ಉತ್ತರ ಸಿಗುವುದಿಲ್ಲ. ಮಾನ್ಯ ಸದಸ್ಯರುಗಳ ಅಟೆಂಡೆನ್ಸ್ ಇರುವುದಿಲ್ಲ. ಮಂತ್ರಿಗಳು ಬರುವುದಿಲ್ಲ, ನಾವು ಏಕೆ ಸುಮ್ಮನೆ ಮಾತನಾಡುವುದು? ಇಂತಹ ಆಟಿಟ್ಯೂಡನ್ನು ನಾನು ಖಂಡನೆ ಮಾಡುತ್ತೇನೆ. ಈ ರೀತಿಯಾಗಿ ಯಾರೂ ಕೂಡ ನಡೆದುಕೊಳ್ಳಬಾರದು. ಇದು ನಮಗೆ ಮಾರ್ಗದರ್ಶನವಾಗಿ ಮುಂದುವರೆಯಬಾರದು. ನಾನು ಈಗಾಗಲೇ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಸೋಷಿಯಲ್ ವೆಲ್‌ಫೇರ್ ವಿಷಯದಲ್ಲಿ ಕೂಡ ನಾನು ಕೆಲವು ಮಾತುಗಳನ್ನು ಹೇಳಿದೆ, ಸಾಮಾಜಿಕ ನ್ಯಾಯದ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದೆ. ಈ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಒಂದೆರಡು ಉದಾಹರಣೆ ಕೊಡಬೇಕೆಂದು ಇದ್ದೆ, ಅದರಲ್ಲಿ ಬದಲಾವಣೆಯಾಯಿತು. ಇವರದೇ ಒಂದು 'ಮಾಂಗಲ್ಯ ಭಾಗ್ಯ ಯೋಜನೆ' ಎಂದು ಇದೆ. ಶ್ರೀಮಾನ್ ಅರಗ ಜ್ಞಾನೇಂದ್ರರವರು ಒಂದು ಪ್ರಶ್ನೆ ಹಾಕಿದ್ದರು. ಈ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಕರ್ನಾಟಕ ರಾಜ್ಯದಲ್ಲಿ ಇದರ ಲಾಭವನ್ನು ಕೊಟ್ಟಿದ್ದೀರಿ, ಅಥವಾ ಫಲಾನುಭವಿಗಳು ಎಷ್ಟು ಜನ ಇದ್ದಾರೆ ಎಂದು ಕೇಳಿದ್ದರು, ಅದಕ್ಕೆ ಅವರು ಕೊಟ್ಟ ಉತ್ತರ ಏನೆಂದರೆ, ಅರ್ಜಿಗಳು 764 ಬಂದಿವೆ, ಇವರು ಕೊಟ್ಟಿದ್ದು ಎಷ್ಟು ಜನರಿಗೆ ಎಂದರೆ, ಕೇವಲ ಎರಡು. ಇದು 8.7.99ರ ಪ್ರಶ್ನೆ, ಪ್ರಶ್ನೆ ಸಂಖ್ಯೆ 2407, ಅದಕ್ಕೆ ಕೊಟ್ಟ ಉತ್ತರ ಇದು. ಇದು ಇವರ ಸಾಧನೆ. ಇದು ಇವರ ವೆಲ್‌ಫೇರ್ ಸ್ಕೀಮ್. ಅಂದರೆ ಯೋಜನೆಗಳನ್ನು ಘೋಷಣೆ ಮಾಡುವುದು, ಅದನ್ನು ಅನುಷ್ಠಾನಕ್ಕೆ ತರತಕ್ಕಂತಹ ಯಾವ ಕೆಲಸವನ್ನು ಮಾಡುವುದಿಲ್ಲ. ಯಾವ ಚಟುವಟಿಕೆಯೂ ಕೂಡ ಇದರ ಬಗ್ಗೆ ನಡೆಯುವುದಿಲ್ಲ. ಆದರೆ ಇಲ್ಲಿ ಭರವಸೆಗಳ ಸುರಿಮಳೆ. ಇಲ್ಲಿ ಭರವಸೆಗಳ ಮೇಲೆ ಭರವಸೆ ಕೊಡುವುದು, ವಾಗ್ದಾನದ ಮೇಲೆ ವಾಗ್ದಾನ ಮಾಡುವುದು. ಕೆಲಸ ಎರಡು ಮಾತ್ರ. ಇದಕ್ಕೆ ನಾವು ಏನಾದರೂ ಹೇಳಿದರೆ ಮಾನ್ಯ ಬೈರೇಗೌಡರಿಗೆ ಸಿಟ್ಟು ಬರುತ್ತದೆ. ನೀವು ಏನು ಮಾಡಿದಿರಿ? ಇನ್ನು ಸೋಷಿಯಲ್ ವೆಲ್‌ಫೇರ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಬರುತ್ತದೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಈ ವಿಷಯದ ವಿವರಣೆ ಕೊಡಲಾಗಿದೆ. ಈ ಯೋಜನೆ ಕಾರ್ಯಾಚರಣೆಗೆ ತರುವ ಸಲುವಾಗಿ ಆಗುವಂತಹ ತೊಂದರೆಗಳ ಬಗ್ಗೆ ನಿಯಮಗಳನ್ನು ಮಾಡುವ ಸಲುವಾಗಿ 12.1.99ರಂದು ನಿಯಮಗಳನ್ನು ಜಾರಿ ಮಾಡಿದ್ದೇವೆ. ಇದಕ್ಕೆ ನಿನ್ನೆ ನಾನೇ ಉತ್ತರವನ್ನೂ ಸಹ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಅಧಿಕಾರದ ಅವಧಿ ಐದು ವರ್ಷ ಆದ ಮೇಲೆ ಈ ನಿಯಮಗಳನ್ನು ರೂಪಿಸುತ್ತಿದ್ದೀರಿ, ಮುಂದಿನ ಚುನಾವಣೆಯಲ್ಲಿ ಅವುಗಳನ್ನು ಆಚರಣೆಗೆ ತರುತ್ತೀರಾ?

ಶ್ರೀ ಸಿ.ಎಂ. ಉದಾಸಿ : ಈ ವರ್ಷ 2,000 ಕೋಟಿ ರೂಪಾಯಿಗಳ ಹಣವನ್ನು ಇದಕ್ಕಾಗಿ ಇಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ನಿಮಗೆ ಇಲ್ಲಿ ಕೊಡುತ್ತಿರುವುದು ಲೇಟೆಸ್ಟ್ ಫಿಗರ್ಸ್. ಅದಕ್ಕೆ ಇವರ ಸಾಧನೆ ಇದು. ಇದು ಇವರ ಅನಿಸಿಕೆ. ಇವರು ಜನರಿಗೆ ಸ್ಪಂದಿಸತಕ್ಕಂಥದ್ದು ಈ ರೀತಿಯಾಗಿ. ರೈತರ ಬಗ್ಗೆ ಸಾಕಷ್ಟು ಮಾತನಾಡಿ ಆಯಿತು. ಅದರ ಬಗ್ಗೆ ಅನೇಕ ಸಲ ಇಲ್ಲಿ ಪ್ರಸ್ತಾಪವಾಯಿತು.

ಆದರೆ ಮಾನ್ಯ ಬೈರೇಗೌಡರಿಗೆ ಸಲಹೆ ಸಾಕಷ್ಟು ನಮ್ಮ ಕಡೆ ಸದಸ್ಯರೆಲ್ಲರೂ ಕೊಟ್ಟಿದ್ದಾರೆ. ಕೆಲವು ಕನ್‌ಸ್ಟ್ರಕ್ಟೀವ್ ಸಲಹೆಗಳನ್ನು ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಮುನಿಯಪ್ಪನವರು ಮತ್ತು ಮಾನ್ಯ ಅರಗ ಜ್ಞಾನೇಂದ್ರರವರು ಎಲ್ಲರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಕೇಳತಕ್ಕಂಥದ್ದು ಇಷ್ಟೆ. ಏಕೆಂದರೆ ಬಹಳ ಸಿಟ್ಟಿನಿಂದ ಅವರು ಹೇಳುತ್ತಿದ್ದಾರೆ, ರೈತರ ಬಗ್ಗೆ ಈ ದೇಶದಲ್ಲಿ ಯಾರಿಗೆ ಕಾಳಜಿ ಇದೆ, ಏನು ಮಾಡಿದ್ದಾರೆಂದರೆ ಇದು ಹೀಗಿದೆ, "ಚೋರ್ ಉಲ್ಟಾ ಕೋತ್ವಾಲ್‌ಕು ಡಾಂಟೆ" ಅವರು ಇಂಪ್ಲಿಮೆಂಟ್ ಮಾಡುವುದು, ಅವರ ಮಂತ್ರಿಗಳು, ಅವರ ಸರ್ಕಾರ ಇರುವುದು ನಮ್ಮ ಮೇಲೆ ಸಿಟ್ಟು ಪ್ರದರ್ಶನ ಮಾಡಿದರು. ಅವರ ಧಾಟಿ ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ಸದನದ ಸಮಿತಿ ಮಾಡಿದಿರಿ, ಸುಮಾರು 310 ಜನ ರೈತರು, 12,000 ಜಾನುವಾರುಗಳು, 2,35,000 ಮನೆಗಳು, ಸುಮಾರು 67.178 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಬೆಳೆ ಹಾಳಾಗಿದೆ. ಸುಮಾರು 317 ಕೋಟಿ ರೂಪಾಯಿಗಳ ಬೆಳೆ ನಷ್ಟ. ಒಟ್ಟು ನಷ್ಟ 797 ಕೋಟಿ ರೂಪಾಯಿಗಳು ಎಂದು ತಾವೇ ಮೆಮರಾಂಡಂನಲ್ಲಿ ಕೊಟ್ಟಿದ್ದೀರಿ. ಆ ಹಣ ನಾವು ಕೊಟ್ಟಷ್ಟು ಯಾವ ಸರ್ಕಾರ ಕೊಡುವುದಿಲ್ಲ, ಯಾರಿಗೂ ಕಾಂಪನ್‌ಸೇಷನ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಕೊನೆಗೆ ವಾದ ವಿವಾದದಲ್ಲಿ ಏನಾಯಿತು, ಸದನ ಸಮಿತಿ ಮಾಡಬೇಕೆಂದು ಹೇಳಿ ಸದನ ಸಮಿತಿಯನ್ನು ಶ್ರೀಮಾನ್ ಜಿ.ಬಿ. ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಕಾನ್‌ಸ್ಟಿಟ್ಯೂಟ್ ಮಾಡಿದಿರಿ. ಅವರು ಎಲ್ಲಾ ಕಡೆ ಸುತ್ತಾಡಿಕೊಂಡು ಬಂದು ಒಂದು ರೆಕಮಂಡೇಷನ್ ಕೊಟ್ಟರು. ಪ್ರತಿ ಹೆಕ್ಟೇರಿಗೆ 500 ರೂಪಾಯಿಗಳಂತೆ ಕೊಡಬೇಕು, ಮ್ಯಾಕ್ಸಿಮಮ್ 25,000 ರೂಪಾಯಿಗಳವರೆಗೆ ಕೊಡಬೇಕು, ಜಾನುವಾರು ಏನು ಸತ್ತಿದೆ ಅವರಿಗೂ ಕೂಡ ಪ್ರತಿ ಹೆಕ್ಟೇರ್‌ಗೆ 500 ರೂಪಾಯಿಗಳು ಮತ್ತು ಗರಿಷ್ಟ 25,000 ರೂಪಾಯಿಗಳ ಪರಿಹಾರಧನ ಶಿಫಾರಸ್ಸು ಮಾಡಿತ್ತು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಕೂಡ ಇದರ ಬಗ್ಗೆ ಆದೇಶ ಕೊಟ್ಟಿತ್ತು. ಇಷ್ಟೆಲ್ಲಾ ಮಾಡಿದರೂ ಕೂಡ ನೀವು ಕೊಟ್ಟಂತಹ ಸಮಿತಿಯ ವರದಿಯನ್ನು ಏಕೆ ಜಾರಿಗೆ ತರಲಿಲ್ಲ? ಇದಕ್ಕೆ ಏನು ಬೇಕಾಗಿರಲಿಲ್ಲ. ನೀವು ಕೃಷಿ ಮಂತ್ರಿಗಳಾಗಿ ಮತ್ತು ಸಾಮಾನ್ಯ ಜನರ ಬಗ್ಗೆ ಮತ್ತು ರೈತರ ಬಗ್ಗೆ ಕಳಕಳಿ ಇರತಕ್ಕಂತಹವರು ನಾನು ಇವತ್ತು ಕೇಳುತ್ತೇನೆ, ಸ್ಪಷ್ಟವಾಗಿ ಹೇಳಿ. ಜಾನುವಾರು ಸತ್ತಿದ್ದರ ಬಗ್ಗೆ, ಕುರಿಗಳು, ಆಕಳು ಮತ್ತು ಸುಮಾರು 12,000 ಜಾನುವಾರುಗಳ ಸತ್ತಿದ್ದರ ಬಗ್ಗೆ ಎಷ್ಟು ಕಾಂಪನ್‌ಸೇಷನ್ ಕೊಟ್ಟಿರಿ, ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಕೊಡುತ್ತೇವೆಂದು ಹೇಳಿ ಅನೇಕ ಹಳ್ಳಿಗಳಲ್ಲಿ ಇದನ್ನು ಕೊಟ್ಟೇ ಇಲ್ಲ. ನ್ಯಾಚುರಲ್ ಕೆಲಾಮಿಟಿಯಲ್ಲಿ ಎಷ್ಟು ಲುಕ್ಸಾನು ಆದರೂ ಕೂಡ 50 ಪರ್ಸೆಂಟ್ ಅಮೌಂಟ್ ಅವರು ಕೊಡಬೇಕೆಂದು ಇದೆ. 50 ಪರ್ಸೆಂಟ್ ಕೊಡುವುದಕ್ಕೆ ಹಣ ಇಲ್ಲ, 25 ಪರ್ಸೆಂಟ್, 10 ಪರ್ಸೆಂಟ್ ಏನು ಕೊಟ್ಟಿರಿ, ಯಾವ ಹಣ ಕೂಡ ಕೊಡಲಿಲ್ಲ, ಅಲ್ಲಿಗೆ ಹೋಯಿತು. ಆದರೆ ಮಾತನಾಡುವುದು ರೈತರ ಬಗ್ಗೆ ಬರೀ ಮಾತನಾಡತಕ್ಕಂಥದ್ದೇ ನಿಮ್ಮ ಕೈಯಲ್ಲಿ ಅಧಿಕಾರ ಸಿಕ್ಕಾಗ ಸಣ್ಣ ಪುಟ್ಟ ಸಹಾಯ ಮಾಡತಕ್ಕಂಥಾದನ್ನು ನೀವು ಮಾಡಲಿಲ್ಲ. ಲಕ್ಷಾಂತರ ಜನ ಮನೆ ಬಿಟ್ಟರು. ಅದಕ್ಕೆ 500 ರಿಂದ ಸಾವಿರ ರೂಪಾಯಿಗಳನ್ನು ಕೊಡುವುದು ಬಿಟ್ಟರೆ ಹೆಚ್ಚಿಗೆ ಹಣ ಕೊಡುವುದನ್ನು ಮಾಡಲಿಲ್ಲ. ಆ ಆಶ್ರಯ ಸ್ಕೀಮ್‌ನಲ್ಲಿ ಇದನ್ನು ಅಳವಡಿಸುತ್ತೀರಿ ಎಂದು ಹೇಳಿ ಅದೂ ಆಗಲಿಲ್ಲ. ಏಕೆಂದರೆ ಎಲ್ಲಾ ಶಾಸಕರಿಗೂ ಸಾರಾಸಗಟು ಹಂಚಬೇಕೆಂದು ಆ ಕೆಲಸ ಮಾಡುವುದರಲ್ಲಿ ಈ ಕೆಲಸ ಮರೆತು ಹೋಯಿತು. ಎರಡು ಲಕ್ಷ ಮನೆಗಳು ಹೋದವು, ಯಾರಿಗೂ ಕೊಡಲಿಲ್ಲ.

ಶ್ರೀ ಸಿ. ಬೈರೇಗೌಡ : ಶ್ರೀ ಜಿ.ಬಿ. ಶಿವಕುಮಾರ್‌ರವರು ಅಧ್ಯಕ್ಷರಾಗಿದ್ದ ಸಮಿತಿ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಆದ ತೊಗರಿಬೇಳೆ ನಷ್ಟದ ಬಗ್ಗೆ ವರದಿ ಸಲ್ಲಿಸಿದ್ದಾರೆ. ಇದು ಬೇರೆ ವಿಚಾರ, ನೀವು ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತೊಗರಿ ಬೆಳೆ ಮತ್ತು ಬೇರೆ ಲುಕ್ಸಾನು ಅದ ಬಗ್ಗೆ ಕೂಡ ಆ ವರದಿಯಲ್ಲಿ ಇತ್ತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವೇ ರೆಕಮಂಡ್ ಮಾಡಿ ಅದನ್ನು ವಾಪಸ್ ತೆಗೆದುಕೊಂಡಿರಿ.

ಶ್ರೀ ಸಿ. ಬೈರೇಗೌಡ : ಈ ಸದನದಲ್ಲಿ ಚರ್ಚೆಯಾಗಿ ತಾವು ರೆಕಮಂಡ್ ಮಾಡಿದ್ದು ತೊಗರಿ ಬೆಳೆಗೆ ಹುಳ ಬಿದ್ದು ನಷ್ಟವಾಗಿದ್ದಕ್ಕೆ ಹೆಕ್ಟೇರ್‌ಗೆ 750 ರೂಪಾಯಿಗಳನ್ನು ಕೊಡತಕ್ಕಂಥಾದ್ದು ಏನಿದೆ ಅದನ್ನು ಪೂರ್ತಿಯಾಗಿ ಹಣ ಕೊಟ್ಟಿದ್ದೇವೆ. ಎಷ್ಟು ನಷ್ಟವಾಗಿತ್ತೋ ಅಷ್ಟೂ ಹಣ ನಾವು ಕೊಟ್ಟಿದ್ದೇವೆ. ನಾನು ಮೊನ್ನೆ ಸಹ ಆ ಭಾಗದಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ನಾನೇ ಜಿಲ್ಲಾಧಿಕಾರಿಗಳಿಗೆ ಕೇಳಿದ್ದೇನೆ, ಆ ಬಾಬಿನಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಏನು ಎಂದು ಹೇಳಿದೆ, ಕೆಲವು ಜಿಲ್ಲೆಗಳಲ್ಲಿ ಎರಡು ಜಿಲ್ಲೆಗಳ ಪೈಕಿ ಒಂದು ಜಿಲ್ಲೆಯಲ್ಲಿ ಇನ್ನೂ ಹಣ ಉಳಿದಿದೆ. ಆ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿತ್ತೋ ಅದರ ಪ್ರಕಾರ ಹಣವನ್ನು ಕೊಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದೇನೆಂದರೆ, ಕರ್ನಾಟಕ ರಾಜ್ಯಾದ್ಯಂತ ಬೆಳೆಗಳು ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಲು ಅಧ್ಯಕ್ಷರು ಜಂಟಿ ಸದನ ಸಮಿತಿಯನ್ನು ನೇಮಕ ಮಾಡಿದ್ದರು. ಈ ಜಂಟಿ ಸದನ ಸಮಿತಿ ದಿನಾಂಕ 24ನೇ ಏಪ್ರಿಲ್ 1998ರಂದು ಮಧ್ಯಂತರ ವರದಿಯನ್ನು ಏನು ಸಲ್ಲಿಸಿದೆಯೋ ಅದರಲ್ಲಿ ಏನು ಶಿಫಾರಸ್ಸುಗಳನ್ನು ಸಮಿತಿ ಮಾಡಿದೆಯೋ ಅದನ್ನು ನೀವು ಜಾರಿಗೆ ತರಲಿಲ್ಲವೆಂದೇ ನಾನು ಹೇಳುತ್ತಿರುವುದು. ಜಾನುವಾರುಗಳ ಬಗ್ಗೆ ಕಳಪೆ ಬೀಜ ಪೂರೈಕೆಯಾಗಿರುವ ಬಗ್ಗೆ ಮತ್ತು ಕೀಟನಾಶಕಗಳ ಬಗ್ಗೆ ಮತ್ತು ಔಷಧಿಗಳ ಬಗ್ಗೆ ಮತ್ತು ಫರ್ಟಿಲೈಸರ್ ಪೂರೈಕೆಯಾಗಿರುವ ಬಗ್ಗೆ ಹೇಳಿದ್ದಾರೆ. ಇಷ್ಟೆಲ್ಲಾ ಹೇಳಿದ್ದರೂ ಕೂಡ ಸಮಿತಿಯು ಯಾವ ಯಾವ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಮಾಡಿತ್ತೋ ಅವೆಲ್ಲವನ್ನೂ ಕೂಡ ಸರ್ಕಾರ ಜಾರಿಗೆ ತಂದಿಲ್ಲವೆಂದೇ ನಾನು ಹೇಳುತ್ತೇನೆ. ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಪದೇ ಪದೇ ಅದನ್ನೇ ಮಾತನಾಡುವ ನೀವು ಸಾಮಾನ್ಯವಾದ ಶಿಫಾರಸ್ಸುಗಳನ್ನು ಈಡೇರಿಸಿಲ್ಲ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ಕೂಡ ರೈತರ ಬಗ್ಗೆ ಪ್ರಸ್ತಾಪ ಮಾಡಿ 1000 ಕೋಟಿ ರೂ.ಗಳ ನಿಧಿಯನ್ನು ಸ್ಥಾಪನೆ ಮಾಡಿ ಅದರ ಮೂಲಕ ರೈತರಿಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿಕೊಂಡಿದ್ದಿರಿ. ಆದರೆ ಅದನ್ನೂ ಕೂಡ ನೀವು ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ : 1000 ಕೋಟಿ ರೂ.ಗಳ ನಿಧಿಯನ್ನು ಪ್ರಾರಂಭದಲ್ಲಿ ನಾವು ಸ್ಥಾಪನೆ ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿ 20 ಕೋಟಿ ರೂ.ಗಳನ್ನು ಇಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 1000 ಕೋಟಿ ರೂ.ಗಳನ್ನು ಇಡುತ್ತೇವೆಂದು ಹೇಳಿ ಕೇವಲ 20 ಕೋಟಿ ರೂ.ಗಳನ್ನು ಇಟ್ಟು ಇವೊತ್ತು ನೀವು ಪ್ರಾರಂಭ ಮಾಡಿದ್ದೀರಿ. ಇವೊತ್ತು ನೀವು ಇದನ್ನು ಪ್ರಾರಂಭ ಮಾಡಿ ಚುನಾವಣೆಗಾಗಿ ಹೋಗುತ್ತಿದ್ದೀರಿ. ಹೀಗೆ ನೀವು ಕೆಲಸ ಮಾಡಿ ರೈತರ ಬಗ್ಗೆ ಯಾವುದೇ ಕಾಳಜಿಯನ್ನು ತೋರಿಸಿಲ್ಲ ಮತ್ತು ಸದನ ಸಮಿತಿ ಕೊಟ್ಟ ವರದಿಯ ಶಿಫಾರಸ್ಸುಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಲಿಲ್ಲ. ಜಾನುವಾರುಗಳು ಸತ್ತಿರುವುದಕ್ಕೆ ಕೊಡಬೇಕಾದ ಪರಿಹಾರ ಹಣ ಕೆಲವು ಜಿಲ್ಲೆಗಳಲ್ಲಿ ಒಂದು ಪೈಸೆ ಕೂಡ ಕೊಟ್ಟಿಲ್ಲ. ಈ ರೀತಿಯಲ್ಲಿ ಕಾರ್ಯ ನಿರ್ವಹಿಸಿರುವ ನೀವು ರೈತರ ಬಗ್ಗೆ ಕಾಳಜಿ ನಮಗಿದೆ ಎಂದು ಹೇಳಿಕೊಳ್ಳುತ್ತೀರಿ ಮತ್ತು ಇದರ ಬಗ್ಗೆ ಘೋಷಣೆಗಳನ್ನೂ ಕೂಡ ಮಾಡುತ್ತೀರಿ. ಆದರೆ ರೈತರ ಪರಿಸ್ಥಿತಿ ಇನ್ನೂ ಹಾಗೆಯೇ ಇದೆ. ಇನ್ನು ಎರಡನೆಯದಾಗಿ, ಅನೇಕ ಯೋಜನೆಗಳು ರೈತರಿಗೆ ಸಂಬಂಧಪಟ್ಟಂತೆ ಮಾನ್ಯ ಬೈರೇಗೌಡರ ಬಳಿ ಇದೆ. ಏಕೆಂದರೆ ಅವರೊಬ್ಬ ಪ್ರೋಗ್ರೆಸೀವ್ ಫಾರ್ಮರ್, ರೈತರ ಬಗ್ಗೆ ಹೋರಾಟ ಮಾಡತಕ್ಕಂಥವರು, ರೈತರ ಸಮಸ್ಯೆಯನ್ನು ಚೆನ್ನಾಗಿ ಅರಿತುಕೊಳ್ಳತಕ್ಕಂಥವರಾಗಿದ್ದಾರೆ. ಆದರೆ ಅವರ ಬಳಿ ಇರುವ ಯೋಜನೆಗಳನ್ನು ಆಡಳಿತಾತ್ಮಕವಾಗಿ ಜಾರಿಗೆ ತರಲು ಅವರು ವಿಫಲರಾಗಿದ್ದಾರೆ. ಇದು ಹೇಗಿದೆಯೆಂದರೆ ಈ ಸಮಾಜವಾದಿ ತತ್ವಗಳಲ್ಲಿ ನಂಬಿಕೆ ಇರುವ ಮಾನ್ಯ ಮುಖ್ಯಮಂತ್ರಿಯವರು ಆ ಸಮಾಜವಾದಿ ತತ್ವಗಳನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲವೋ ಅದೇ ರೀತಿಯಲ್ಲಿ ಇಲ್ಲಿ ರೈತರ ಬಗ್ಗೆ ಕಾಳಜಿ ಇರುವ ಮತ್ತು ರೈತರ ಸಮಸ್ಯೆಗಳನ್ನು ಅರಿತಿರುವ ಮಾನ್ಯ ಬೈರೇಗೌಡರು ರೈತರ ಪರವಾದ ಯೋಜನೆಗಳನ್ನು ಆಡಳಿತದಲ್ಲಿ ಜಾರಿಗೆ ತರಲು ವಿಫಲರಾಗಿದ್ದಾರೆ. ಇವರ ಸುತ್ತಮುತ್ತಲಿರುವ ಮಾನ್ಯ ಮಂತ್ರಿಗಳಿಗೇ ಆಗಲಿ, ಮಾನ್ಯ ಮುಖ್ಯಮಂತ್ರಿಗಳಿಗಾಗಲಿ ಮಾನ್ಯ ಅರ್ಥ ಸಚಿವರಿಗಾಗಲಿ ಆ ಯೋಜನೆಗಳ ಬಗ್ಗೆ ಕನ್‌ವಿನ್ಸ್ ಮಾಡುವಲ್ಲಿ ಸಂಪೂರ್ಣವಾಗಿ ಮಾನ್ಯ ಬೈರೇಗೌಡರು ವಿಫಲರಾಗಿದ್ದಾರೆ. ಅದೇ ನಮ್ಮ ಮಾನ್ಯ ನಾಗೇಗೌಡರನ್ನು ನೋಡಿ, ಕೃಷ್ಣಾ ಜಲ ಭಾಗ್ಯ ನಿಗಮದಿಂದ ಸಾವಿರಾರು ಕೋಟಿ ರೂ.ಗಳನ್ನು ಎತ್ತಿದರು, ನೀರಾವರಿ ನಿಗಮದಿಂದಲೂ ನೂರಾರು ಕೋಟಿ ರೂ.ಗಳನ್ನು ಎತ್ತಿದರು, ಇದಲ್ಲದೆ ಬಜೆಟರಿ ಪ್ರಾವಿಷನ್‌ನಿಂದಲೂ ಹಣವನ್ನು ನೀರಾವರಿಗಾಗಿ ಪಡೆದುಕೊಂಡರು. ಆ ರೀತಿಯಲ್ಲಿ ಮಾನ್ಯ ಬೈರೇಗೌಡರು ಇರಬೇಕಾಗಿತ್ತು. ಆ ರೀತಿಯಲ್ಲಿ ಕನ್‌ವಿನ್ಸ್ ಮಾಡುವುದರಲ್ಲಿ ಮಾನ್ಯ ಬೈರೇಗೌಡರು ವಿಫಲರಾಗಿದ್ದಾರೆ. II ಇನ್ನು ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಂದು ಹಾರ್ಟಿಕಲ್ಚರ್ ತುಂಬಾ ಡೆವಲಪ್ ಆಗುತ್ತಿದೆ. ಇದು ಮಾನ್ಯ ಸಚಿವರಿಗೂ ಗೊತ್ತಿರುವ ವಿಚಾರವೇ ಆಗಿದೆ. ಇದು ನಮ್ಮ ಭಾಗದಲ್ಲಿ ಬಿಜಾಪುರ ಒಂದನ್ನು ಬಿಟ್ಟರೆ ಗುಲ್ಬರ್ಗಾ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಇದು ಡೆವಲಪ್ ಆಗಿಲ್ಲ. ಇಲ್ಲಿ ಹಾರ್ಟಿಕಲ್ಚರ್ ಡೆವಲಪ್ ಆಗಬೇಕಾದ ಅವಶ್ಯಕತೆ ಇದೆ ಎಂದು ಇನ್‌ಫರ್ಮೇಷನ್ ನಿಮಗೆ ಗೊತ್ತಿದೆ. ಅದೇ ರೀತಿಯಲ್ಲಿ ನಿಮ್ಮ ಕೋಲಾರ ಜಿಲ್ಲೆಯ ಬಗ್ಗೆಯೂ ನಿಮಗೆ ತಿಳಿದಿದೆ. ಆದರೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ? ಸಮಗ್ರವಾದ ಅಗ್ರಿಕಲ್ಚರ್ ಪಾಲಿಸಿ ಕೈಪಿಡಿಯನ್ನು ಬಿಡುಗಡೆ ಮಾಡುವುದನ್ನು ಮಾತ್ರ ಮಾಡಿದ್ದೀರಿಯೇ ವಿನಃ ಹೆಚ್ಚಿನ ಹಣವನ್ನು ಅಲೋಕೇಷನ್‌ನಲ್ಲಿ ತರಲೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಕೃಷಿ ಇಲಾಖೆಗೆ ಹತ್ತಾರು ವರ್ಷಗಳಿಂದ ಅಲೋಕೇಷನ್‌ನಲ್ಲಿ ಏನು ಹಣ ಬರುತ್ತಿತ್ತೋ ಆ ಹಣ ಕ್ರಮೇಣವಾಗಿ ಕಡಿಮೆಯಾಗಿ ಬರುತ್ತಾ ಇದೆ.

ಸಮಾನ ಮನಸ್ಕರ ಸಚಿವರಾದ ನೀವು ಮಾನ್ಯ ಮುಖ್ಯಮಂತ್ರಿಯವರಿಗೆ ಹೆದರಿಸಿ, ರೈತರ ಕಾಳಜಿ ವಿಷಯವನ್ನು ಅವರಿಗೆ ತಿಳಿಸಿ, ಅವರ ಮನವೊಲಿಸಿ ಹೆಚ್ಚಿನ ಹಣವನ್ನು ಅಲೋಕೇಷನ್‌ನಲ್ಲಿ ತೆಗೆದುಕೊಂಡು ಈ ಇಲಾಖೆಯನ್ನು ಸಮೃದ್ಧಿಪಡಿಸತಕ್ಕಂಥ ಕೆಲಸವನ್ನಾದರೂ ನೀವು ಮಾಡಬಹುದಾಗಿತ್ತು. ಆದರೆ ನೀವು ಅದರಲ್ಲೂ ಕೂಡ ಏಕೋ ಏನೋ ಯಶಸ್ವಿಯಾಗಲಿಲ್ಲ. ಇಷ್ಟಾದರೂ ಕೂಡ ಇನ್ನೂ ರೈತರ ಬಗ್ಗೆ ಕಾಳಜಿವಹಿಸಿ ಪ್ರಯತ್ನಗಳನ್ನು ಮಾಡುತ್ತಿದ್ದೇನೆ ಎಂದು ಹೇಳುವದನ್ನಂತೂ ಮಾನ್ಯ ಬೈರೇಗೌಡರು ಬಿಡಲೇ ಇಲ್ಲ. ಇನ್ನೂ ಆ ಮಾತುಗಳನ್ನು ಹೇಳುತ್ತಲೆ ಇದ್ದಾರೆ. II ಇನ್ನು ಶಿರಾ ಗಲಭೆ ಬಗ್ಗೆ ಹೇಳಬೇಕೆಂದರೆ, ಸಾಮಾನ್ಯವಾಗಿ ಇಂಥ ಗಲಭೆಗಳು ಆದಾಗ ಮಾತ್ರ ತುರ್ತಾಗಿ ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡಿ ಐದು ಕೋಟಿಯೋ ಅಥವಾ ಹತ್ತು ಕೋಟಿಯೋ ರೂ.ಗಳನ್ನು ಹಾಕಿ ಸರ್ಕಾರ ಕೂಡ ಮಾರ್ಕೆಟಿಂಗ್ ಫೆಡರೇಷನ್ ಮೂಲಕವೋ ಅಥವಾ ಇತರ ಏಜೆನ್ಸಿಗಳ ಮೂಲಕವೋ ಮಾರುಕಟ್ಟೆಗೆ ಇಳಿಯತಕ್ಕಂಥ ಪ್ರಯತ್ನವನ್ನು ಮಾಡುತ್ತದೆ. ಆದರೆ ಇದಕ್ಕೆ ಕಡೇ ಪಕ್ಷ ಮುಂದಾಲೋಚನೆಯನ್ನು ಮಾಡಬೇಕು. ಏಕೆಂದರೆ ಇಂದು ಸಾವಿರಾರು ಕೋಟಿ ರೂ.ಗಳನ್ನು ಸಾಲ ಮಾಡಿ ರಸ್ತೆ ನಿರ್ಮಾಣಕ್ಕೆ, ಸೇತುವೆ ನಿರ್ಮಾಣಕ್ಕೆ ವ್ಯಯ ಮಾಡಲಾಗುತ್ತಿದೆ. ಕೇವಲ ಬೆಂಗಳೂರು ನಗರದಲ್ಲಿ ಫುಟ್ ಪಾತ್‌ನಲ್ಲಿರುವ ಹಳೇ ಕಲ್ಲನ್ನು ತೆಗೆದು ಅದಕ್ಕೆ ಬಣ್ಣ ಹಾಕಿ ಅದೇ ಜಾಗದಲ್ಲಿ ಆಳ ತೆಗೆದು ಫಿಕ್ಸ್ ಮಾಡಿ ಕವರ್ ಮಾಡುವ ಕೆಲಸಕ್ಕೆ 125 ಕೋಟಿ ರೂ.ಗಳನ್ನು ಹಾಕಿರುವ ಪ್ರಾಜೆಕ್ಟ್ ಇದೆ. ಈ ಫುಟ್‌ಪಾತ್ ರಿಪೇರ್ಸ್‌ಗಾಗಿ ಇದನ್ನು ಖರ್ಚು ಮಾಡಿದ್ದಾರೆ. ಇಂಥ ಕೇವಲ ಕಲ್ಲನ್ನು ತಿರುವಿ ಹಾಕುವುದಕ್ಕೆ 125 ಕೋಟಿ ರೂ.ಗಳ ಸಾಲವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಆದರೆ ಇದೇ ರೀತಿಯಾಗಿ ನೀವು 100 ಅಥವಾ 200 ಕೋಟಿ ರೂ.ಗಳ ನಿಧಿಯನ್ನು ಕ್ರಿಯೇಟ್ ಮಾಡಿ ಶೇಂಗಾ ಬೆಳೆ, ತೊಗರಿ ಬೆಳೆ, ಮೆಣಸಿನಕಾಯಿ ಬೆಳೆ, ಆಲೂಗಡ್ಡೆ ಬೆಳೆ ಮತ್ತು ಇನ್ನಿತರ ಬೆಳೆಗಳು ಯಾವಾಗ ಎಕ್ಸೆಸ್ ಆಗುತ್ತದೋ ಆಗ ಸರ್ಕಾರ ಈ ನಿಧಿಯಿಂದ ಮಾರ್ಕೆಟ್‌ನಲ್ಲಿ ಎಂಟರ್ ಆಗಿ ರೈತರಿಗೆ ಸಹಾಯ ಮಾಡಿದರೆ ಲಕ್ಷಾಂತರ ರೈತ ಕುಟುಂಬಗಳಿಗೆ ಅನುಕೂಲವಾಗಿ ಒಳ್ಳೆಯದಾಗುತ್ತದೆ. ನೀವು ಫುಟ್‌ಪಾತ್ ಮೇಲೆ ನಡೆಯುವವರಿಗೆ ಒಳ್ಳೆಯದನ್ನು ಮಾಡುವುದಕ್ಕಿಂತಲೂ ರೈತರಿಗೆ ಅನುಕೂಲ ಮಾಡಿಕೊಟ್ಟರೆ ಕಡೇ ಪಕ್ಷ ಜನಗಳಿಗೆ ಅನ್ನ ಕೊಡತಕ್ಕಂಥ ರೈತರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ. ಇಂಥವುಗಳ ಬಗ್ಗೆ ಏಕೆ ನೀವು ಯೋಚನೆ ಮಾಡುವುದಿಲ್ಲ? ಇಂಥ ವಿಚಾರಗಳಿಗೆ ನೀವೇಕೆ ಹಠವನ್ನು ಹಿಡಿಯುವುದಿಲ್ಲ? ಇದಕ್ಕೆ ನೀವೇಕೆ ಹೋರಾಟ ಮಾಡುವುದಿಲ್ಲ? ಆದುದರಿಂದ ನಾನು ಹೇಳುವುದೇನೆಂದರೆ ನೀವು ದಯವಿಟ್ಟು ಇಂಥ ಯೋಜನೆಗಳನ್ನು ತಯಾರು ಮಾಡಿ ಜಾರಿಗೆ ತಂದು ರೈತರಿಗೆ ಅನುಕೂಲ ಮಾಡಿಕೊಡುವ ಕಾರ್ಯವನ್ನೇನಾದರೂ ಮಾಡಿ. ಇಂಥ ಕಾರ್ಯಗಳನ್ನೇನಾದರೂ ಮಾನ್ಯ ಬೈರೇಗೌಡರು ಮೊದಲೇ ಮಾಡಿದ್ದರೆ ನಾನು ಅವರಿಗೆ ಒಬ್ಬ ಒಳ್ಳೆಯ ಪ್ರೋಗ್ರೆಸೀವ್ ಫಾರ್ಮರ್, ರೈತರ ಬಗ್ಗೆ ಆಸಕ್ತಿ ಇರತಕ್ಕಂಥವರು ಮತ್ತು ಒಳ್ಳೆಯ ರೈತನಾಗಿ ರೈತರ ಪರ ಕೆಲಸವನ್ನು ಮಾಡಿದ್ದಾರೆ ಎಂದು ಹೇಳುತ್ತಿದ್ದೆ. ಈಗಲಾದರೂ ಇಂಥ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಹೇಳಬೇಕು.

ಶ್ರೀ ಸಿ. ಬೈರೇಗೌಡ : ರೈತರ ಯೋಜನೆಗಳನ್ನು ಮಾಡಿರುವುದನ್ನು ನಾವು ಇಲ್ಲಿ ಕೊಟ್ಟಿದ್ದೇವೆ. ನೀವು ಅದನ್ನು ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ನೀವು ಹೇಳಿದ್ದೀರಿ, ಆದರೆ ನಾನು ಕೇಳಿರುವುದು ಒಂದು, ನೀವು ಇದ್ದುದ್ದನ್ನು ಮಾತ್ರ ಕೊಟ್ಟಿದ್ದೀರಿ. ಆದರೆ ನಾನು ಈ ಪುಸ್ತಕದಲ್ಲಿ ಇಲ್ಲದೇ ಇರತಕ್ಕಂಥದ್ದರ ಬಗ್ಗೆ ಮಾತನಾಡಿದೆ. ನೀವು ಕೊಟ್ಟಿರುವ ಮಾಹಿತಿಯಲ್ಲೇನಿದೆ ಅದರ ಬಗ್ಗೆಯೇ ನಾನು ಮಾತನಾಡುವುದೇನಿಲ್ಲ.

ಶ್ರೀ ಸಿ. ಬೈರೇಗೌಡ : ನೀವು ಹೇಳುವುದೆಲ್ಲವನ್ನೂ ಮಾಡಲು ಹಣಕಾಸಿನ ಸಮಸ್ಯೆಯೂ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲದರಲ್ಲೂ ಸಮಸ್ಯೆ ಇದ್ದೇ ಇರುತ್ತದೆ. ಹಣಕಾಸಿನ ಸಮಸ್ಯೆಯನ್ನು ನಿವಾರಿಸಲೂ ಕೇವಲ ಒಂದು ದಿನದಲ್ಲಿ ಯಾರೂ ಬಂದರೂ ಜಾದು ಮಾಡಿ ಸರಿಮಾಡುವುದಕ್ಕೆ ಆಗುವುದಿಲ್ಲ. ಆದರೆ ಇರತಕ್ಕಂಥ ಹಣವನ್ನು ಸದುಪಯೋಗಪಡಿಸಿಕೊಳ್ಳುವ ಕೆಲಸವನ್ನಾದರೂ ಮಾಡಬೇಡವೆ? ಇರತಕ್ಕಂಥ ಹಣವನ್ನು ಖರ್ಚು ಮಾಡುವುದರಲ್ಲಿಯೂ ಕೂಡ ಯಾವುದಕ್ಕೆ ಮೊದಲು ಖರ್ಚು ಮಾಡಬೇಕೋ ಅದಕ್ಕೆ ಮೊದಲು ಆದ್ಯತೆಯನ್ನು ಕೊಟ್ಟರೆ ಪ್ರಯೋಜನ ಆಗುತ್ತದೆ. ಫುಟ್‌ಪಾತ್ ರಿಪೇರಿಗೆ ನೀವು 125 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಆದರೆ ರೈತರಿಗೆ ಕೊಡಬೇಕಾದ ಸಹಾಯವನ್ನು ತ್ವರಿತಗತಿಯಲ್ಲಿ ಕೊಟ್ಟರೆ ಅಲ್ಲಿ ಹೆಚ್ಚು ಉತ್ಪನ್ನವಾಗುತ್ತದೆ. ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟರೆ ಉತ್ಪನ್ನ ಹೆಚ್ಚಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲಿ ಆದ್ಯತೆಯನ್ನು ಕೊಡಬೇಕಾಗಿತ್ತೋ ಅದನ್ನೂ ಕೂಡ ನೀವು ಕಡೆಗಣಿಸುತ್ತಿದ್ದೀರಿ. ತಮ್ಮ ಪ್ರಭಾವವನ್ನು ಈ ಕಡೆಗೆ ಬೀರುತ್ತಿಲ್ಲ. ತಾವು ಈ ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಮನವೊಲಿಸುವಲ್ಲಿ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗಿದೆ.

ಶ್ರೀ ಕೆ.ಎನ್. ನಾಗೇಗೌಡ : ಪ್ರಭಾವ ಇದ್ದೇ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ನಿಮ್ಮ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಕೇಳುತ್ತಿದ್ದಾರೆ. ಸಮಾನ ಮನಸ್ಕರ ಸಭೆಯನ್ನು ನೀವು ಮಾಡಿದುದರಿಂದಲೇ ನೀವು ಮಾನ್ಯ ಮುಖ್ಯಮಂತ್ರಿಯವರಿಗೆ ಬಹಳ ಕ್ಲೋಸ್ ಆದಿರಿ. ಆದುದರಿಂದಲೇ ನಿಮ್ಮನ್ನು ಅಡ್ವೈಸರ್ ಎಂತಲೂ ಮತ್ತು ಶ್ರೀ ಎಂ.ಎಸ್. ಪಾಟೀಲ್‌ರವರಿಗೆ ಸ್ಪೋಕ್ಸ್‌ಮನ್ ಎಂದು ಇಟ್ಟುಕೊಂಡಿದ್ದಾರೆ.

3.50 ಪಿ.ಎಂ.

ಪಾಪ, ಶ್ರೀ ಎಂ.ಎಸ್.ಪಾಟೀಲರು ಇನ್ನೂ ಬಾಯಿ ಬಿಟ್ಟಿಲ್ಲ, ಕಳೆದ ಮೂರು ವರ್ಷಗಳಲ್ಲಿ ಯಾವ ರಾಜಕೀಯ ಸ್ಟೇಟ್‌ಮೆಂಟ್ ಆಗಲಿ, ಯಾವುದೇ ವಿಚಾರದ ಗೋಜಿಗೆ ಅವರು ಹೋಗಿಲ್ಲ. ಪಾಪ, ಅವರು ಸುಖವಾಗಿ ಸುಮ್ಮನೆ ಕುಳಿತಿರುತ್ತಿದ್ದರು. ಇವತ್ತು ಅವರಿಗೆ ಸ್ಪೋಕ್ಸ್‌ಮನ್ ಮಾಡಿ ಅವರ ಬಾಯಿಯಿಂದ ಏನೇನು ಬೇಕು ಅದನ್ನು ಅವರ ಮುಖಾಂತರ ಹೇಳಿಸಿ ಮಾನ್ಯ ಮುಖ್ಯಮಂತ್ರಿ ಅವರನ್ನು ಗಟ್ಟಿ ಮಾಡುತ್ತಿದ್ದಾರೆ. ಮಾನ್ಯ ದೇವೇಗೌಡರಿಂದ ಎಷ್ಟು ದೂರ ಸರಿಸಬೇಕೋ ಅಷ್ಟು ದೂರ ಅವರಿಂದ ಸರಿಸುತ್ತಿದ್ದಾರೆ. ನಿಮ್ಮಲ್ಲಿ ಎಲ್ಲರೂ ಮಾತನಾಡುತ್ತಾರೆ. ಈ ಐದು ವರ್ಷದಲ್ಲಿ ಕರ್ನಾಟಕ ಕೃಷಿಗೆ ವರ್ಷಕ್ಕೆ ಅಂದಾಜು ಒಂದು ಸಾವಿರ ಕೋಟಿ ರೂಪಾಯಿಗಳ ಹೂಡಿಕೆ ಆಗುವಂತೆ

ಮಾಡಲಾಗುವುದು. ಸಾಲ ನೀಡಿಕೆಗೆ ಕೃಷಿ ಹಣಕಾಸು ನಿಗಮದಿಂದ ಇನ್ನು ಉನ್ನತ ಸಂಸ್ಥೆ ಸ್ಥಾಪಿಸಲಾಗುವುದು, ತೋಟಗಾರಿಕೆ ಹೈನುಗಾರಿಕೆ, ಪುಷ್ಪಗಳ ಬೆಳವಣಿಗೆ ಹೊಸ ಕ್ರಾಂತಿ ನೀತಿಯನ್ನು ರೂಪಿಸುವುದಾಗಿ ಸಾರಿತು. ನಾನು ನಿಮಗೆ ಇದರಲ್ಲಿ ಹೇಳಿದ್ದೇನೆ, ಮ್ಯಾನಿಪೆಸ್ಟೋದಲ್ಲಿ ಪುನಃ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಈ ಪರಿಸ್ಥಿತಿ ನಿಮಗೂ ಕೂಡ ಬಂದಿದೆ. ಇನ್ನು ಡಿಸಿಲ್ಟಿಂಗ್ ಆಫ್ ಟ್ಯಾಂಕ್ಸ್ ವಿಚಾರದಲ್ಲಿ ನಿಮಗೆ ಗೊತ್ತಿದೆ. ಈಗ ಇರತಕ್ಕಂಥ ಎಲ್ಲಾ ಕೆರೆಗಳೂ ಕೂಡ ಮುಚ್ಚಿಹೋಗುತ್ತಿದೆ. ಏಕೆಂದರೆ ಹತ್ತಾರು ವರ್ಷಗಳಿಂದ ಮುಚ್ಚಿ ಹೋಗಿದೆ. ಇಂತವುಗಳಿಗೆ ಸಾಲ ತಂದು ಇಂಪ್ರೂವ್ ಮಾಡಿ. ಅದು ನಿಮ್ಮ ಹಣ ಅಸೆಟ್ ಆಗುತ್ತದೆ. ನಿಮ್ಮ ಪ್ರೈಯಾರಿಟಿ ಯಾವುದಕ್ಕೆ ಎಂದರೆ, ಬೆಂಗಳೂರಿನಿಂದ ಮೈಸೂರಿಗೆ ಎಕ್ಸ್‌ಪ್ರೆಸ್ ಹೈವೇ ಮಾಡುವುದಕ್ಕೆ ಸಾಲ ತರುತ್ತೀರಿ. 1200 ಕೋಟಿ ರೂಪಾಯಿಗಳಷ್ಟು ಅಲ್ಲಿ ಸಾಲ ಮಾಡುವುದಕ್ಕಿಂತಲೂ 21 ಪರ್ಸೆಂಟ್ ಬಡ್ಡಿಯಲ್ಲಿ ಸಿಕ್ಕರೆ ಭೂಮಿ ತೆಗೆದುಕೊಳ್ಳುತ್ತೀರಿ.

ಶ್ರೀ ಸಿ. ಬೈರೇಗೌಡ : ಎಕ್ಸ್‌ಪ್ರೆಸ್ ಹೈವೇ ನಾವು ಮಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಸಹಾಯ ಮಾಡುತ್ತಿದ್ದೀರಿ, ಅದಕ್ಕೆ ಗ್ಯಾರಂಟಿ ಯಾರು ಕೊಟ್ಟಿದ್ದು? ಸುಮ್ಮನೆ ಯಾರದೋ ಭೂಮಿ ಮೇಲೆ ಯಾರಾದರೂ ಮಾಡುತ್ತಾರೆಯೇ?

ಶ್ರೀ ಸಿ.ಎಂ. ಉದಾಸಿ : ಅದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರೇ ಮಾಡುತ್ತಾರಾ? ಗ್ಯಾರಂಟಿ ಕೊಡದೇ ಮಾಡುತ್ತಾರಾ? ಎಂ.ಓ.ಯುಗೆ ನೀವು ಸೈನ್ ಹಾಕುವುದು ಎಂದರೆ ಏನರ್ಥ? ಎಂ.ಓ.ಯುವಿನಲ್ಲಿ ಏನು ಕಂಡೀಷನ್ ಇದೆ?

ಶ್ರೀ ಸಿ.ಎಂ. ಉದಾಸಿ : ಸರ್ಕಾರ ಅವರಿಗೆ ಸಾಲ ತೆಗೆದುಕೊಳ್ಳುವ ಸಲುವಾಗಿ ಗ್ಯಾರಂಟಿಯಾಗಿಲ್ಲ. ಭೂಮಿಯನ್ನು ವಶಪಡಿಸಿಕೊಳ್ಳಬೇಕಾದಂತಹ ವಿಚಾರದಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಅವರೇ ತುಂಬಿದಮೇಲೆ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆಯೇ ಹೊರತು ನಾವು ಅವರಿಗೆ ಗ್ಯಾರಂಟಿ ಕೊಟ್ಟಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಗ್ಯಾರಂಟಿ ಕೊಡುವುದಕ್ಕೆ ಶಕ್ತಿ ಇಲ್ಲವಲ್ಲಾ.

ಶ್ರೀ ಸಿ.ಎಂ. ಉದಾಸಿ : 22 ಸಾವಿರ ಕೋಟಿ ರೂಪಾಯಿಗಳ ಸಾಲ ಇದ್ದರೆ, 20 ಸಾವಿರ ಕೋಟಿ ರೂಪಾಯಿಗಳ ಆಸ್ತಿ ಇದೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು 19 ಸಾವಿರ ಕೋಟಿ ರೂಪಾಯಿಗಳ ಆಸ್ತಿ. ಇಂಥಾದ್ದಕ್ಕೆ ಸಾಲ ಮಾಡಿದರೆ ಸ್ವಲ್ಪಮಟ್ಟಿಗೆ ಅದು ಸೂಕ್ತ. ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಸಾಲ ತರುತ್ತಿದ್ದೀರಿ. ಇನ್ನು ರಸ್ತೆಗಳಿಗಾದರೂ ಕೂಡ ಕೊಟ್ಟಿದ್ದರೆ ರಿಪೇರಿ ಮಾಡಿಸೋಣ. ಆದರೆ ಇಂತಹ ಡಿಸಿಲ್ಟಿಂಗ್ ಆಫ್ ಟ್ಯಾಂಕ್ಸ, ಇಂಪ್ರೂವ್‌ಮೆಂಟ್ ಆಫ್ ಟನಲ್ಸ್, ಹಳೇ ಚಾನಲ್ಸ್ ಇದೆ, ಅವುಗಳ ದುರಸ್ತಿ ಇಂತಹ ಕಡೆ ಗಮನ ಕೊಡಿ, ಅದರಿಂದ ನಮ್ಮ ರೈತನಿಗೆ ಅನುಕೂಲವಾಗುತ್ತದೆ. ನಮ್ಮ ಮಂತ್ರಿಗಳು ಹೋರಾಟ

ಮಾಡುತ್ತಿದ್ದಾರೆ, ಮಂತ್ರಿ ಪದವಿ ಹೋದರೂ ಪರವಾಗಿಲ್ಲ ಇದಕ್ಕೆ ಇನ್ನೂ ಮೀಸಲಾಗಿಡುತ್ತಾರೆ ಎಂದು ಹೇಳುತ್ತಿದ್ದೆ.

ಶ್ರೀ ಸಿ. ಬೈರೇಗೌಡ : ಇವತ್ತಿನ ದಿವಸ ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ನನಗಂತೂ ಬಹಳ ಸಂತೋಷ. ಏಕೆಂದರೆ ಈ ರಾಜ್ಯದಲ್ಲಿ ಎಂದೆಂದಿಗೂ ಕೂಡ ಬಳಕೆಯಾಗುತ್ತಿರತಕ್ಕಂಥ ಇರಿಗೇಷನ್ ಪೊಟೆನ್‌ಷಿಯಲ್ ಹಾರ್ಡ್ಲಿ 23 ಪರ್ಸೆಂಟ್. ಶೇಕಡ 23ರಷ್ಟು ನೀರಾವರಿಯಾಗುತ್ತಿದೆ. ಪೊಟೆನ್‌ಷಿಯಲ್ ಇರತಕ್ಕಂಥ 50 ಲಕ್ಷ ಹೆಕ್ಟೇರ್. ಇನ್ನು ಉಳಿದಂತಹ ಶೇಕಡ 50ಕ್ಕೂ ಹೆಚ್ಚು ಭೂ ಭಾಗ ನಮ್ಮ ರಾಜ್ಯದಲ್ಲಿ ಮಳೆಯಾಧಾರಿತ ಪ್ರದೇಶವಾಗಿ ಉಳಿಯುತ್ತದೆ, ಅಂದರೆ ನಮ್ಮ ಹಾಗೆ ಬಯಲು ಪ್ರದೇಶವಾಗಿ ಉಳಿಯುತ್ತದೆ. ಇದಕ್ಕೆ ನೀರಾವರಿಯನ್ನು ಒದಗಿಸಬೇಕಾಗಿರುವುದು ಬಹಳ ಅವಶ್ಯಕತೆ ಇದೆಯೆಂದು ನಾವು ಮನಗಂಡಿದ್ದೇವೆ. ಅದಕ್ಕೋಸ್ಕರ ಈ ಸಣ್ಣ ನೀರಾವರಿ ಅಭಿವೃದ್ಧಿಪಡಿಸುವುದಕ್ಕೋಸ್ಕರ ಮೈನರ್ ಇರಿಗೇಷನ್ ಫೈನಾನ್ಸ್ ಕಾರ್ಪೊರೇಷನ್ ಸ್ಥಾಪನೆ ಮಾಡಬೇಕೆಂದು ತಾತ್ವಿಕವಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ರಚನೆಯಾಗುತ್ತದೆ. ತಾವು ಏನು ಹೇಳುತ್ತಿದ್ದೀರಿ, ರಸ್ತೆ ಎಕ್ಸ್‌ಪ್ರೆಸ್ ಹೈವೇ ಮಾಡುವುದಕ್ಕೆ ಸಾಲ ಮಾಡುತ್ತೀರಿ, ಇನ್ನು ಬೇರೆ ಯಾವುದಕ್ಕೋ ಸಾಲ ಮಾಡುತ್ತೀರಿ ಎಂದು, ಈ ರೀತಿಯಾದಂತಹ ಆಲೋಚನೆ ಏಕೆ ಮಾಡಲಿಲ್ಲವೆಂದು ತಮ್ಮ ಪ್ರಶ್ನೆ ಸಾಧುವಾಗಿ ಇದೆ. ಅದಕ್ಕೋಸ್ಕರ ಈ ವಿಚಾರವನ್ನು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದು, ಈಗಾಗಲೇ ತಾತ್ವಿಕವಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದು ಸಚಿವ ಸಂಪುಟದ ಮುಂದೆ ಬರುತ್ತಿದೆ. ಅದನ್ನು ನಾವು ಒಪ್ಪಿ ಕೊಳ್ಳುತ್ತೇವೆ. ಹಾಗೆಯೇ ಈ ಮೈನರ್ ಇರಿಗೇಷನ್ ಕಾರ್ಪೊರೇಷನ್ ಸ್ಥಾಪನೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಕಳೆದ ಐದು ವರ್ಷಗಳಲ್ಲಿ ನೂರು ಕೆರೆಗಳನ್ನೇನಾದರೂ ಡೀಸಿಲ್ಟ್ ಮಾಡಿದ್ದೀರಾ? ಒಂದು ಕೆರೆಯನ್ನೂ ಸಹ ಡೀ-ಸಿಲ್ಟ್ ಮಾಡಲಿಲ್ಲ. ರಾಜ್ಯದಲ್ಲಿ 36 ಸಾವಿರ ಕೆರೆ ಇದೆ. ಎಲ್ಲಾ ಸೇರಿ ಆಶ್ರಯ ಲೇಔಟ್ ಮಾಡಬಹುದು, ಅಂತಹ ಪರಿಸ್ಥಿತಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಐದು ವರ್ಷದಿಂದ ಚಿಂತನೆ ಮಾಡಲಿಲ್ಲ. ಈಗ ಏನು ಚಿಂತನೆ ಮಾಡಿದ್ದೀರಿ ಚಿತ್ರಗುಪ್ತನಿಂದ ಚೀಟಿ ಈಗಾಗಲೇ ಬಂದಿದೆ. ನಿಮ್ಮ ಟೈಂ ಇನ್ನು ಎರಡು ತಿಂಗಳು ಮಾತ್ರ ಇರುವುದು ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಐದು ವರ್ಷದಲ್ಲಿ ಇದನ್ನು ಮಾಡಬೇಕಾಗಿತ್ತು. ಇಲ್ಲ ಎಂದರೂ ಒಂದೆರಡು ವರ್ಷಗಳ ಹಿಂದೆಯಾದರೂ ಇದರ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಸಾಕಷ್ಟು ನಾವು ರೈತರಿಗೆ ಸಹಾಯ ಮಾಡಬಹುದಾಗಿತ್ತು. ಆದರೆ ಅದರ ಬಗ್ಗೆ ನಾವು ಚಿಂತನೆ ಮಾಡುವುದಿಲ್ಲ. ಅನೇಕ ಸಾರಿ ಸಾಲ ಸಿಗುತ್ತದೆ ಎಂದರೆ ಯಾವುದಕ್ಕಾದರೂ ತೆಗೆದುಕೊಳ್ಳಲಿ ಎಂದು ನಮ್ಮ ಅಧಿಕಾರಿಗಳು ಸಾಲ ಮಾಡುತ್ತಾರೆ. ವಿಶ್ವ ಯೋಜನೆಯಲ್ಲಿ ಕೊಡುತ್ತಾರೆ, ವರ್ಲ್ಡ್ ಬ್ಯಾಂಕ್ ಕೊಡುತ್ತದೆ ಏಷಿಯಾ ಬ್ಯಾಂಕ್ ಕೊಡುತ್ತದೆ, ನಬಾರ್ಡ್‌ನಿಂದ ಹಣ ಸಿಗುತ್ತದೆ, ಕಮರ್ಷಿಯಲ್ ಬ್ಯಾಂಕ್‌ನವರು ಹಣ

ಕೊಡುತ್ತಿದ್ದಾರೆ, ಅವರ ಹತ್ತಿರ ಡೆಪಾಸಿಟ್ ಬಿದ್ದಿದೆ, ಅದಕ್ಕೆ ಅವರು ಮುಂದೆ ಬಂದಿದ್ದಾರೆ. ಈ ರೀತಿಯಾಗಿ ಅದು ಬಡ್ಡಿ 20, 22 ಪರ್ಸೆಂಟ್ ಎಷ್ಟಾದರೂ ಆಗಲಿ, ಕೊಡುವುದು, ತೆಗೆದುಕೊಳ್ಳುವುದು. ಹೈದರಾಬಾದ್ ಸ್ಟೇಟ್‌ನಲ್ಲಿ ಒಂದು ವೆಲ್ ಸಿಂಕಿಂಗ್ ಡಿಪಾರ್ಟ್‌ಮೆಂಟ್ ಇದೆ. ಅವರ ಕೆಲಸ ಏನೆಂದರೆ ಬಾವಿಯನ್ನು ಅವರೇ ತೋಡುವುದು, ಅವರೇ ದುಡ್ಡು ಖರ್ಚು ಮಾಡುವುದು, ಪೂರ್ತಿಯಾದಮೇಲೆ ಕೊನೆಯಲ್ಲಿ ಅವನಿಗೆ ವಹಿಸಿಕೊಟ್ಟು ತಹಶೀಲ್ದಾರ್‌ನಿಂದ ದುಡ್ಡು ವಸೂಲು ಮಾಡುತ್ತಾರೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಟ್ಯಾಂಕ್ ಡೀಸಿಲ್ಟ್ ಆಗಲಿ, ಟನಲ್ಸ್ ಇಂಪ್ರೂವ್‌ಮೆಂಟ್ ಆಗಲಿ ಅಥವಾ ಇವತ್ತು ಓಪನ್‌ವೆಲ್ಸ್ ಕೂಡ ಎಲ್ಲೆಲ್ಲಿ ಇದೆ ಅದನ್ನು ಪುನರ್ಜೀವನಗೊಳಿಸುವುದು ತಪ್ಪಲ್ಲ. ಏಕೆಂದರೆ ನಾವು ಚಿಕ್ಕ ಪಾಂಡ್ಸ್‌ಗೆ ಸಹಾಯ ಮಾಡುತ್ತಿದ್ದೇವೆ. ಪರ್ಕುಲೇಷನ್ ಟ್ಯಾಂಕ್ಸ್ ಎಂದು ಮಾಡುತ್ತಿದ್ದೇವೆ. ಅಥವಾ ಸಣ್ಣ ಸಣ್ಣ ಅಣೆಕಟ್ಟು ಮಾಡುತ್ತಿದ್ದೇವೆ. ಅನೇಕ ಕಡೆ ಹಳೆ ಭಾವಿಗಳು ಇವೆ. ಅದು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ನೀರು ಸ್ವಲ್ಪವಾದರೂ ಬರುತ್ತಿತ್ತು, ಅಂದರೆ ಹೂಳು ತುಂಬಿದ್ದರೆ ಅದನ್ನು ತೆಗೆಸಿ ಅಲ್ಲಿ ನೀರು ಶೇಖರಣೆ ಮಾಡುವಂತಹ ಪ್ರಯತ್ನ ಮಾಡದೇ ಹೋದರೆ ಮುಂದೆ ನಮಗೆ ಯಾವ ರೀತಿಯಲ್ಲಿಯೂ ಸಹಾಯ ಆಗುವುದಿಲ್ಲ ಎನ್ನುವ ಮಾತನ್ನು ತಮಗೆ ನಾನು ಹೇಳಬೇಕಾಗಿಲ್ಲ. ಕೋಲಾರದಲ್ಲಿ ಇರತಕ್ಕಂಥಾದ್ದು ಟ್ಯಾಂಕ್ ಬೇಸ್ಡ್ ಇರಿಗೇಷನ್. ಅಲ್ಲಿ ಇರತಕ್ಕಂಥಾದ್ದು ಎಲೆಕ್ಟ್ರಿಸಿಟಿ ಬೇಸ್ಡ್ ಮತ್ತು ಪಂಪ್‌ಸೆಟ್ ಮೇಲೆ ಅವಲಂಬಿಸಿರತಕ್ಕಂಥ ರೈತರು. ನಮ್ಮ ಬಗ್ಗೆ ಕಾಳಜಿ ಇಲ್ಲ, ನಿಮ್ಮ ಬಗ್ಗೆ ಕಾಳಜಿ ಇದೆ ಎಂದು ತಿಳಿದುಕೊಂಡಿದ್ದೇವೆ. ಅದನ್ನು ಮಾಡಲಿಲ್ಲ. ಈಗ ನೀವು ಹೇಳಿದಂತಹ ಇರಿಗೇಷನ್ ಕಾರ್ಪೊರೇಷನ್ ಕ್ಯಾಬಿನೆಟ್ ಮುಂದೆ ಇಡುತ್ತೇವೆ, ಎಂದು ಹೇಳಿದ್ದೀರಿ. ಅದನ್ನು ಅಪ್ರೂವ್ ಮಾಡುವುದು ಯಾವಾಗ ಆಗಬೇಕು? ಎಲೆಕ್ಷನ್ ನೋಟಿಫಿಕೇಷನ್ 23 ಅಥವಾ 25ನೇ ತಾರೀಖು ಆಗುತ್ತದೆ. ಆಗ ಇದನ್ನು ನಿಮಗೆ ಮಾಡುವುದಕ್ಕಾಗುತ್ತದೆಯೇ? ಅದು ಎಲೆಕ್ಷನ್ ಸ್ಟಂಟ್ ಆಗಿ ಬರುತ್ತದೆ ಹೊರತಾಗಿ ನಿಮಗೆ ಎಷ್ಟೇ ಕಾಳಜಿ ಇದ್ದರೂ ಕೂಡ ಒಪ್ಪುವುದಕ್ಕಾಗುವುದಿಲ್ಲ. ನೀವು ಮಾಡಿದ್ದರೆ ಅವತ್ತೇ ಮಾಡಬಹುದಾಗಿತ್ತಲ್ಲಾ. ನಮ್ಮ ಶ್ರೀರಾಮರೆಡ್ಡಿಯವರು ನಿಮ್ಮ ಬಗ್ಗೆ ಆಸಕ್ತಿ ಇರತಕ್ಕಂಥವರು, ನಿಮಗೆ ಸಹಕಾರ ಕೊಡತಕ್ಕಂಥವರೇ ಹೇಳಿದರು, ಇದು ಸುಲಭವಾಗಿ ಆಗತಕ್ಕಂಥಾದ್ದು ಅಲ್ಲ. ಇದು ಸುಮ್ಮನೆ ತೋರಿಕೆಗೋಸ್ಕರ ಮಾಡುವುದು. ಅದಕ್ಕೋಸ್ಕರ ಸಣ್ಣ ನೀರಾವರಿ ದಿಕ್ಕಿನಲ್ಲಿ ಕೂಡ ವಿಫಲರಾಗಿದ್ದೀರಿ. ಏಕೆಂದರೆ ದೊಡ್ಡದೊಡ್ಡ ನೀರಾವರಿ ಯೋಜನೆಗಳು ಇದೆಲ್ಲಾ ಕೆಲವೇ ಭಾಗದಲ್ಲಿ ಮತ್ತು ಕೆಲವೇ ತಾಲ್ಲೂಕುಗಳಿಗೆ ಲಾಭ ಇದೆ. ಇದು ಮಾತ್ರ ಪ್ರತಿ ಹಳ್ಳಿಗೂ ಕೂಡ ಲಾಭವಾಗತಕ್ಕಂಥ ಯೋಜನೆ. ದೊಡ್ಡ ದೊಡ್ಡ ಯೋಜನೆಗಳು ಕೆಲವೇ ತಾಲ್ಲೂಕು ಮತ್ತು ಹಳ್ಳಿಗಳಿಗೆ ಸೀಮಿತವಾಗಿದೆ. ಎಲ್ಲಾ ಹಳ್ಳಿಗಳಿಗೂ ಲಾಭದಾಯಕವಾಗಿರತಕ್ಕಂಥಾದ್ದು ಈ ಕೆರೆಗಳ ಯೋಜನೆ. ಇದರ ಜೀರ್ಣೋದ್ಧಾರ ಮಾಡುವಂಥಾದ್ದು ಮತ್ತು ಟ್ಯಾಂಕ್‌ಗಳ ರಿಪೇರಿ ಮಾಡುವಂಥಾದ್ದು, ಇತರ ಯಾವುದೇ ರೀತಿಯ ಕೆಲಸಗಳಾಗಲಿ ಅವುಗಳನ್ನು ಪುನರ್‌ಜ್ಜೀವನ ಮಾಡಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈಗ ಅದನ್ನು ಮಾಡುವುದಕ್ಕೆ ಸಮಯವೂ ಇಲ್ಲ, ಅದನ್ನು ನೀವು ಮಾಡುವುದಕ್ಕೂ ಆಗುವುದಿಲ್ಲ. ತಾವು ಇದರಲ್ಲಿ ವಿಫಲವಾಗಿದ್ದೀರಿ. II ಇನ್ನು ಎಕ್ಸೈಜ್ ವಿಚಾರವಾಗಿ ಹೇಳುವುದಾದರೆ, ಈ ಸದನದಲ್ಲಿ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ನಾವು ಈ ವಿಷಯವನ್ನು ಹಿಂದೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದು ಏನೆಂದರೆ ಈ ಎಕ್ಸೈಜ್ ವಿಚಾರದಲ್ಲಿ

ಈ ಸರ್ಕಾರ ಎಡವಿದೆ, ಎಂಎಸ್‌ಐಎಲ್‌ಗೆ ಕೊಡುವಂತಹ ಏಕ ಸದಸ್ಯತ್ವದ ಸೋಲ್ ಏಜೆನ್ಸಿ ಏನಿದೆ, ಅದನ್ನು ನೀವು ತೆಗೆದುಕೊಂಡು ಪ್ರೈವೇಟ್‌ನವರಿಗೆ ಕೊಡುವಂತಹ ರೂಲ್ 3(11) ಅಮೆಂಡ್‌ಮೆಂಟ್ ಮಾಡಿದ್ದೀರಿ. ಇದನ್ನು ಹೈಕೋರ್ಟ್‌ನವರೂ ಸಹ ಎಂಎಸ್‌ಐಎಲ್‌ನವರಿಗೆ ಕೊಡುವುದು ಸರಿಯೆಂದು ಹೇಳಿದರು. ಇದಕ್ಕೆ ನೀವು ಅಪೀಲು ಹೋದಿರಿ, ಅವರು ಬೇಕಾದರೆ ಸಿ.ಬಿ.ಐ. ಎನ್‌ಕ್ವಾಯರಿಯನ್ನು ಮಾಡಿ ಎಂದು ಹೇಳಿದರು. ಆದರೂ ನೀವು ಇದರ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಹೋಗಿ ಪ್ರೈವೇಟ್ ಕಂಟ್ರಾಕ್ಟ್‌ದಾರರಿಗೆ ಲಾಭ ಮಾಡುವಂತಹ ಕೆಲಸವನ್ನು ಮಾಡಿದ್ದೀರಿ. ಇಲ್ಲಿ ಸರ್ಕಾರದವರೇ ಮಾಡುವಂತಹ ಕಾನೂನು, ಅದನ್ನು ಎತ್ತಿ ಹಿಡಿದ ಮೇಲೆ ಮತ್ತೆ ಇದರ ವಿರುದ್ಧ ನೀವೇ ಅಪೀಲು ಹಾಕಿ, ಸಿ.ಬಿ.ಐ. ಎನ್‌ಕ್ವಾಯರಿ ಬೇಡವೆನ್ನುವಂಥಾದ್ದು, ಇದಕ್ಕೆ ನಮ್ಮ ಸರ್ಕಾರಿ ಅಡ್ವೋಕೇಟ್ ಕೂಡ ಪುಷ್ಟಿ ಕೊಟ್ಟಿದ್ದಾರೆ. ಇದನ್ನು ಮಾನ್ಯ ಎಕ್ಸೈಜ್ ಮಿನಿಸ್ಟರ್‌ರವರನ್ನು ಕೇಳಿ ಅವರೇ ಹೇಳುತ್ತಾರೆ. ಈ ರೀತಿಯಾಗಿ ಮಾಡಿದರೆ ಸಂಶಯ ಬರುವುದಿಲ್ಲವೇ? ನೀವು ಕೋರ್ಟಿಗೆ ಹೋಗುವಂತಹ ಅವಶ್ಯಕತೆ ಏನಿತ್ತು? ರೂಲ್ ಅಮೆಂಡ್ ಮಾಡುವಂತಹ ಅವಶ್ಯಕತೆ ಏನಿತ್ತು? ನಿಮಗೆ ಯಾವಾಗ ಎಕ್ಸೈಜ್‌ನಲ್ಲಿ ಹೆಚ್ಚಿನ ಹಣ ಬರುತ್ತಿತ್ತು, ಅದನ್ನು ಒಬ್ಬ ಸೋಲ್ ಏಜೆನ್ಸಿಯಿಂದಲೇ ಕಲೆಕ್ಟ್ ಮಾಡಬೇಕಾಗಿತ್ತು. ಈ ಸೋಲ್ ಏಜೆನ್ಸಿ ಕೂಡ ನಿಮ್ಮ ಪಬ್ಲಿಕ್ ಅಂಡರ್‌ಟೇಕಿಂಗ್ ಆಗಿರುವಂಥಾದ್ದು? ಇದರ ಮೇಲೆ ನಿಮಗೆ ವಿಶ್ವಾಸವಿಲ್ಲವೆಂದ ಮೇಲೆ ಪ್ರೈವೇಟ್‌ನವರ ಮೇಲೆ ವಿಶ್ವಾಸವಿರುತ್ತದೆಯೇ? This is too much. What happens is, everybody will look at the Government with suspicion only. ಅದುದರಿಂದ ಇದಕ್ಕೆ ಏನು ಕಾರಣ? ಇದರ ಅವಶ್ಯಕತೆ ಇರಲಿಲ್ಲ, ಇದು ಹಗರಣವಲ್ಲವೇ? ಹಗರಣವೆಂದರೆ ನೀವೇನು ದುಡ್ಡು ತೆಗೆದುಕೊಂಡು ಓಡಿಹೋಗುವುದನ್ನು ನೋಡಿ ಹಿಡಿಯಬೇಕೇ? These are the things where rules are amended and it is beneficial to some contractor, we say that the Government is interfering, the Government is helping them, with modification of certain rules and regulations. ಈ ರೀತಿಯಾಗಿ ಎಕ್ಸೈಜ್‌ನಲ್ಲಿ ಆಗಿದೆ, ಇವತ್ತು ಎಷ್ಟು ಹಣ ಬರಬೇಕಾಗಿತ್ತೋ, ಅಷ್ಟು ಹಣ ಬರುತ್ತಾ ಇಲ್ಲ. ಇವತ್ತು ಕನ್‌ಸ್ಯೂಮರ್ ಫೇರ್ ಪ್ರೈಸ್ ಶಾಪ್‌ಗಳನ್ನು ಲೆಕ್ಕ ಹಾಕಿದರೆ, ಎಕ್ಸೈಜ್‌ಗೆ ಸಂಬಂಧಪಟ್ಟ ಅಂಗಡಿಗಳು ಹೆಚ್ಚಿಗೆ ಇವೆ. ಅವುಗಳಲ್ಲಿ ಅರ್‍ಯಾಕ್ ಅಂಗಡಿ ಇರಬಹುದು, ಬ್ರಾಂದಿ ಅಂಗಡಿ ಇರಬಹುದು, ಸಿ.ಎಲ್. 9, 10 ಈ ರೀತಿಯಾಗಿ ಏನೇನೋ ಇವೆ, ಈ ಎಲ್ಲವನ್ನೂ ಲೆಕ್ಕ ಹಾಕಿದರೆ ಮ್ಯಾಗ್ಸಿಮಮ್ ಇವೆ, ಇಷ್ಟು ಫೇರ್ ಪ್ರೈಸ್ ಶಾಪ್‌ಗಳಿಲ್ಲ. ಅದರಲ್ಲೂ ಸೆಕೆಂಡ್ಸ್, ಥರ್ಡ್ಸ್, ಇವೆಲ್ಲಾ ನೇರವಾಗಿ ಡಿಸ್ಟಿಲರಿಗಳಿಂದಲೇ ಹೋಗುತ್ತವೆ. ಇದನ್ನು ಮಧ್ಯೆ ಫೈನಾನ್ಸ್ ಮಿನಿಸ್ಟರ್, ಸೇಲ್ಸ್ ಟ್ಯಾಕ್ಸ್‌ನವರು, ಹಾಗೂ ಪೋಲೀಸಿನವರು ಸೇರಿ ಟ್ರೈಟ್ ಮಾಡಿದ್ದರು. ಈ ರೀತಿ ಮಾಡಿದ ಮೇಲೆ ಈ ಡಿಸ್ಟಿಲರಿ ಓನರ್‌ಗಳು ಇವರ ಬಳಿ ಒಂದಾಗಿ ಬಂದ ಮೇಲೆ ಮತ್ತೆ ಅದು ಸರಳವಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತಹ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಂಡ್ಯ ತಾಲ್ಲೂಕಿನಲ್ಲಿ ಅಣ್ಣಯ್ಯ ಎನ್ನುವವರು ಇದ್ದು, ಅಲ್ಲಿ ಅರ್‍ಯಾಕ್ ಹರಾಜು ಆಯಿತು. ಅದು

ಸುಮಾರು 68 ಲಕ್ಷ ರೂಪಾಯಿಗಳಿಗೆ ಹರಾಜು ಆಯಿತು. ಇದು ಆಗಿ ಒಂದು ತಿಂಗಳಾಯಿತು. ಇದುವರೆಗೂ ಸುಮಾರು ಏಳೂವರೆ ಕೋಟಿ ರೂಪಾಯಿಗಳು ಬರಬೇಕಾಗಿದೆ. ಆದರೆ ಆ ವ್ಯಕ್ತಿ ಮರಣ ಹೊಂದಿದ್ದಾನೆ. ಅವನ ಸಾವು ಯಾವ ರೀತಿಯಾಗಿದೆ ಎಂಬುದು ಇದುವರೆಗೂ ನಿಗೂಢವಾಗಿದೆ. ಈ ರೀತಿಯಾಗಿ ಮಂಡ್ಯಾದಲ್ಲಿ ಎರಡು ಸಾವು ಆಗಿವೆ. ಇದುವರೆಗೂ ಇವರ ಸಾವು ಯಾವ ರೀತಿಯಲ್ಲಾಗಿದೆ ಎಂಬುದು ಪೋಲಿಸ್ ಇಲಾಖೆಯಿಂದಲೂ ಗೊತ್ತಾಗಿಲ್ಲ. ಎರಡು ಸಾವಿರ ರೂಪಾಯಿಗಳಷ್ಟು ಬೆಲೆಯಾಗುವಂತಹ ಜಮೀನು ಐವತ್ತು ಸಾವಿರ ರೂಪಾಯಿಗಳಿಗೆ ವಾಲ್ಯೂಯೇಷನ್ ಮಾಡಿ ಅವನ ಹೆಸರಿಗೆ ರಿಜಿಸ್ಟ್ರೇಷನ್ ಆಗಿದೆ. ಇವರು ಯಾರಿಗೆ ಪವರ್ ಆಫ್ ಅಟಾರ್ನಿ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ರಿ-ಆಕ್ಷನ್ ಮಾಡಿಲ್ಲ. ಹೊಸದಾಗಿ ಪುನಃ ಆಕ್ಷನ್ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಹಿಂದೆ ಯಾರು ಮಾಡಿದ್ದರು, ಅವನೇ ಆ ರೇಟಿಗೆ ಮಾಡುವುದಕ್ಕೆ ಅವಕಾಶ ಕೊಟ್ಟಿತ್ತು, ತಾತ್ಕಾಲಿಕ ಆಕ್ಷನ್ ಮಾಡಲು ಅವಕಾಶವನ್ನು ಕೊಟ್ಟರು. ಇದು ಒಂದು ತಿಂಗಳಾಯಿತು, ಎರಡು ತಿಂಗಳಾಯಿತು, ಮೂರನೆ ತಿಂಗಳು ನಡೆಯುತ್ತಿದೆ, ಈ ಆಕ್ಷನ್ ಮಾಡುವಂತಹ ಕೆಲಸವೂ ಆಗುತ್ತಿಲ್ಲ. ಇದನ್ನು ಹಿಂದೆ ನಲವತ್ತು ನಾಲ್ಕು ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದು, ಈಗ ಅದು ಅರವತ್ತೆಂಟು ಲಕ್ಷ ರೂಪಾಯಿಗಳಾಗುತ್ತವೆ. ಈ ರೀತಿಯಾಗಿ ಕೊಟ್ಟಿರುವುದರಿಂದ ತಿಂಗಳಿಗೆ ನಲವತ್ತು ನಾಲ್ಕು ಲಕ್ಷ ರೂಪಾಯಿಗಳೆಂದರೆ ಇಪ್ಪತ್ತು ನಾಲ್ಕು ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ. ಮಂಡ್ಯ ತಾಲ್ಲೂಕಿನಲ್ಲಿ ಈ ಅಂಗಡಿಗಳಿಗೆ ಪರವಾನಗಿಯನ್ನು ಕೊಟ್ಟಿರುವಂಥಾದ್ದು 210 ಅಂಗಡಿಗಳಿಗೆ ಮಾತ್ರ, ಆದರೆ ಒಂದು ಸಾವಿರ ಅಂಗಡಿಗಳು ಇಲ್ಲೀಗಲ್ಲಾಗಿ ನಡೆಯುತ್ತಿವೆ, ಈ ರೀತಿಯಾಗಿ ಜನರಿಗೆ ವಿಷವನ್ನು ಕುಡಿಸುವುದು. ಮತ್ತೆ ತೆರಿಗೆಯನ್ನು ಸರಿಯಾಗಿ ವಸೂಲು ಮಾಡದೇ ಇರುವುದು, ಈ ರೀತಿಯಾದಂತಹ ಆಡಳಿತ ವ್ಯವಸ್ಥೆ ಇದೆ. ಇನ್ನೊಂದು ವಿಚಾರ ಏನೆಂದರೆ, ಮಂಡ್ಯದ ಮೈ ಷುಗರ್ ಫ್ಯಾಕ್ಟರಿಯಲ್ಲಿ ಆಗಿರುವಂತಹ ಅನ್ಯಾಯ, ಯಾವ ಯಾವುದು ಎನ್ನುವಂಥಾದ್ದನ್ನು ನಾನು ಈ ಸದನದಲ್ಲಿ ಎಕ್ಸ್‌ಪ್ಲೈನ್ ಮಾಡಿದ್ದೇನೆ. ಇದನ್ನು ಯಾವ ಚಾರ್ಟರ್ಡ್ ಅಕೌಂಟೆಂಟ್ ಕಂಡು ಹಿಡಿದರೋ, ಯಾವುದನ್ನು ಸಿ.ಓ.ಡಿ.ಗೆ ನೀವು ರೆಫರ್ ಮಾಡಿದ್ದಿರೋ, ಆ ಚಾರ್ಟರ್ಡ್ ಅಕೌಂಟೆಂಟ್ ಅನ್ನು ಬದಲಿಸಿ ಬೇರೆಯವರನ್ನು ನೇಮಿಸಿದ್ದೀರಿ. ಈ ಹಗರಣ ಸುಮಾರು ನಾಲ್ಕು ವರ್ಷಗಳ ಹಿಂದೆ ನಡೆದಿದ್ದು, ಕಂಡು ಹಿಡಿಯದೇ ಇರುವಂತಹ ಮುಥಾಲಿಕ್ ಎಂಟರ್‌ಪ್ರೈಸಸ್ ಎಂಬ ಹೊಸಬರನ್ನು ನೇಮಕ ಮಾಡಿಕೊಂಡಿದ್ದೀರಿ. ಇದು ಈ ಸರ್ಕಾರದ ಆಡಳಿತ ವೈಖರಿ ಮತ್ತು ನಡವಳಿಕೆಯಾಗಿದೆ. ಒಟ್ಟು ಏಳು ಕೋಟಿ ರೂಪಾಯಿಗಳನ್ನು ಅವರು ಕೊಡಬೇಕು. ಈ ಹಣವನ್ನು ಯಾರು ತೀರಿಸಬೇಕು, ಅಲ್ಲಿ ಆ ವ್ಯಕ್ತಿಯೂ ಸತ್ತು ಹೋಗಿದ್ದಾನೆ. ಇದಕ್ಕೆ ತಾವು ಉತ್ತರವನ್ನು ಕೊಡುವಾಗ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಈ ರಾಜ್ಯದಲ್ಲಿ ನಿಮ್ಮ ಆಡಳಿತ ನಡೆಯುತ್ತಿದೆ. ಇದಕ್ಕೆ ನೀವು, ನಮ್ಮದು ಒಳ್ಳೆಯ ಆಡಳಿತ, ನಮ್ಮ ಸಾಧನೆಗಳನ್ನು ನೋಡಿ ಜನರು ನಮಗೆ ಮತವನ್ನು ನೀಡುತ್ತಾರೆ, ನಮ್ಮ ಕೆಲಸವನ್ನು ನೋಡಿ ಮತ ಕೊಡುತ್ತಾರೆಂದು ಹೇಳುತ್ತೀರಿ. ಇವರು ಕಾಂಗ್ರೆಸ್‌ನವರಿಗೆ ಮುಖವಿಲ್ಲ, ಬಿ.ಜೆ.ಪಿ.ಯವರಿಗೆ ದೇಹ ಇಲ್ಲ, ಮುಖ ಚೆನ್ನಾಗಿದೆ, ಶರೀರ ಚೆನ್ನಾಗಿಲ್ಲ, ಕಾಂಗ್ರೆಸ್‌ನವರಿಗೆ ಶರೀರ ಚೆನ್ನಾಗಿದೆ, ಮುಖ ಇಲ್ಲವೆಂದು ಹೇಳುತ್ತಾರೆ. ಆದರೆ ಇವರ ಮುಖಾನೂ ಸಹ ಚೆನ್ನಾಗಿಲ್ಲ,

ಶರೀರವೂ ಇಲ್ಲ, ಯಾವುದೂ ಇಲ್ಲ, ಈ ಸರ್ಕಾರಕ್ಕೆ ಸರಿಯಾಗಿ ಕೂಡುವುದಕ್ಕೂ ಬರುವುದಿಲ್ಲ, ನಿಲ್ಲುವುದಕ್ಕೂ ಬರುವುದಿಲ್ಲ, ಯಾರಾದರೂ ಒಬ್ಬರು ಹಿಡಿದುಕೊಂಡೇ ಹೋಗಬೇಕು. ಈ ಸರ್ಕಾರಕ್ಕೆ ನಾಲ್ಕು ಜನರು ಎತ್ತಿಕೊಂಡೇ ಹೋಗಬೇಕೇ ಹೊರತಾಗಿ, ಇದು ತನ್ನ ಸ್ವಂತ ಕಾಲಿನಲ್ಲಿ ನಡೆಯುವಂತಹ ಸರ್ಕಾರವೇ ಅಲ್ಲ. ಇಂಥಾದ್ದಕ್ಕೆ ಯಾರು ಓಟು ಕೊಡುತ್ತಾರೆ? ನೀವು ನಮಗೆ ಮುಖವಿಲ್ಲ, ಮೂತಿ ಇಲ್ಲವೆಂದು ಹೇಳುತ್ತೀರಲ್ಲಾ, ಆಯಿತು ನಿಮಗೆ ಮುಖಾನೂ ಇಲ್ಲ, ಮೂತಿನೂ ಇಲ್ಲ, ಶರಿರಾನೂ ಇಲ್ಲ. ನಡೆಯುವುದಕ್ಕೂ ಬರುವುದಿಲ್ಲ ಎಲ್ಲಾ ಕೆಟ್ಟು ಹೋಗಿದೆ, ಕಂಪ್ಲೀಟ್ ಆಗಿ ಎಲ್ಲಾ ಕೊಲ್ಯಾಪ್ಸ್ ಆಗಿದೆ. ಅವರನ್ನು ಯಾರಾದರೂ ಹಿಡಿದುಕೊಂಡೇ ಹೋಗಬೇಕೇ ಹೊರತಾಗಿ ಸ್ವಂತ ನಡೆಯುವ ಹಾಗೆ ಇಲ್ಲ. ಇಂತಹ ಕುರ್ಚಿಯನ್ನು ಉಳಿಸಿಕೊಳ್ಳುವಂಥಾದ್ದಕ್ಕೆ ಈಗ ಪ್ರಯತ್ನಗಳು ನಡೆಯುತ್ತಿದೆ. ಈ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನೀವು ಚಾಮರಾಜನಗರಕ್ಕೆ ಹೋಗಬಾರದೆಂದರೆ ಬೇಡ. ಏಕೆಂದರೆ ಇಲ್ಲಿ ಸಪೋರ್ಟರ್ ಆಗಿ ಶ್ರೀ ವಾಟಾಳ್ ನಾಗರಾಜ್ ಆಗುತ್ತಾರೆ, ಇವರು ರ್‍ಯಾಷನಲಿಸ್ಟ್ ಎಂದು ಹೇಳಿಕೊಂಡು ಇಲ್ಲಿಯವರೆಗೆ ಬಂದಂತಹ ಮನುಷ್ಯ. ನೀವು ಮಹದೇಶ್ವರ ಬೆಟ್ಟಕ್ಕೆ ಹೋಗುವುದು ಅಲ್ಲಿಂದ ವಾಪಸ್ಸು ಬರುವುದು, ಡಿಸ್ಟ್ರಿಕ್ಟ್ ಪ್ಲೇಸ್‌ಗೆ ಹೋಗುವ ಹಾಗೆ ಇಲ್ಲ. ಇವರು ಡಿಸ್ಟ್ರಿಕ್ಟ್ ರಿವ್ಯೂ ಮಾಡುತ್ತಾರೆ, ಆಡಳಿತವನ್ನು ಜಿಲ್ಲೆಯಲ್ಲಿ ರಿವ್ಯೂ ಮಾಡಬೇಕಲ್ಲಾ? ಇದನ್ನು ಇವರು ಏನು ಮಹದೇಶ್ವರ ಬೆಟ್ಟದಲ್ಲಿ ರಿವ್ಯೂ ಮಾಡುತ್ತಾರೆ? ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವರು ತಮ್ಮ ಅನಿಸಿಕೆಯಲ್ಲಿ, ತನ್ನ ತತ್ವದಲ್ಲಿ ಪ್ರಾಮಾಣಿಕವಾಗಿ ಇಲ್ಲ ಎನ್ನುವುದಕ್ಕೆ ಇವೆಲ್ಲಾ ಉದಾಹರಣೆಗಳಾಗಿವೆ, ಇವತ್ತು ಈ ರೀತಿಯಾಗಿ ಇವರ ಆಡಳಿತ ಇದೆ. ಇನ್ನು ಅಡಮಿನಿಸ್ಟ್ರೇಷನ್ ಒಂದು ಕಡೆ ಇರಲಿ, ಈಗ ನಾನು ಪಬ್ಲಿಕ್ ಅಂಡರ್ ಟೇಕಿಂಗ್ ಬಗ್ಗೆ ಹೇಳುವುದಿಲ್ಲ. ಇವೆಲ್ಲವೂ ಲಾಸ್‌ನಲ್ಲೇ ಇವೆ, ಇವತ್ತು ಹೇಳಬೇಕೆಂದರೆ ಕೋಟ್ಯಾಂತರ ರೂಪಾಯಿಗಳ ಲುಕ್ಸಾನ್ ಈ ಗೌರ್ನಮೆಂಟ್ ಅಂಡರ್‌ಟೇಕಿಂಗ್‌ಗಳಲ್ಲಿ ಆಗುತ್ತವೆ. ಇದನ್ನು ಸುಧಾರಣೆ ಮಾಡುವಂತಹ ಯಾವ ಪ್ರಯತ್ನವೂ ಇಲ್ಲ. ಇವತ್ತು ಸುಮಾರು 78 ಪಬ್ಲಿಕ್ ಸ್ಟೇಟ್ ಎಂಟರ್‌ಪ್ರೈಸಸ್ ಇದ್ದು, ಅದರಲ್ಲಿ 36 enterprises have made a net profit of 289 crores, 33 enterprises have made a net loss of Rs. 197 crores. 22 companies have accumulated losses which exceeds their share capital. Total Rs. 538 crores. ಇದು ಒಂದು ದಿವಸದಲ್ಲಿ ಆದದ್ದು ಅಲ್ಲ, ಇದೆಲ್ಲಾ ಹಿಂದಿನ ಸರ್ಕಾರಗಳ ಅಕ್ಯುಮುಲೇಟೆಡ್ ಲಾಸ್ ಆಗಿ ಬಂದಿರುವಂಥಾದ್ದು. ಆದರೆ ನೀವು ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ನಿಷ್ಠೆ ಇರುವಂತಹ ನಾಯಕರಾಗಿದ್ದೀರಿ. ಇದರ ಸುಧಾರಣೆಯ ಬಗ್ಗೆ ಏನು ಮಾಡಿದ್ದೀರಿ? ಮಾನ್ಯ ಮಂತ್ರಿಗಳಾದ ಶ್ರೀ ಬಿ.ಎಲ್. ಶಂಕರ್‌ರವರು ಈ ಸದನದಲ್ಲಿ ಇಲ್ಲ. ಅವರು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರಿಗೆ ಬಿಡುವು ಇಲ್ಲವೋ ಅಥವಾ ಕೌನ್ಸಿಲ್‌ನಲ್ಲಿ ಇದ್ದಾರೋ ಗೊತ್ತಿಲ್ಲ. ಈ ಸಾರ್ವಜನಿಕ ಉದ್ಯಮಗಳು ಇವತ್ತು ಇಷ್ಟೊಂದು ನಷ್ಟದಲ್ಲಿವೆ, ಅವನ್ನು ಸುಧಾರಣೆ ಮಾಡುವುದಕ್ಕೆ ಈ ಐದು ವರ್ಷಗಳಲ್ಲಿ ನಿಮ್ಮ ಪ್ರಯತ್ನಗಳೇನು? ನೀವು ಹಿಂದಿನವರ ಕತೆಯನ್ನೇ ಹೇಳುವುದಾದರೆ, ನೀವು ಮತ್ತೆ ಅಧಿಕಾರಕ್ಕೆ ಬರಬೇಕಾಗಿಲ್ಲ, ಅದು ಯಥಾಪ್ರಕಾರ ನಡೆದುಕೊಂಡು ಹೋಗುತ್ತದೆ. ಇವನ್ನು ಸುಧಾರಣೆ ಮಾಡುವುದು ಬಿಟ್ಟು ಖಾಸಗೀಕರಣ ಮಾಡುವುದಕ್ಕೆ ಇವತ್ತು ನೀವು ಹೆಚ್ಚಿನ ಒತ್ತನ್ನು ಕೊಡುತ್ತಿದ್ದೀರಿ. ಇವತ್ತು ಎನ್‌ಜಿಇಎಫ್ ಮುಳುಗುತ್ತಿದೆ, ಕರ್ನಾಟಕ ಸೋಪ್ ಅಂಡ್ ಡಿಟರ್ಜೆಂಟ್ ಕಾರ್ಖಾನೆ ಲಾಭದಲ್ಲಿತ್ತು

ಈಗ ಮುಳುಗುತ್ತಿದೆ, ಮೈಸೂರು ಲ್ಯಾಂಪ್ಸ್ ಸಹ ಮುಳುಗುತ್ತಿದೆ, ಎಲೆಕ್ಟ್ರಿಕಲ್ ಕಂಪನಿ, ಮಲ್ಲೇಶ್ವರಂ ಅದೂ ಸಹ ಮುಳುಗುತ್ತಿದೆ. ಹೀಗೆ ಎಲ್ಲಾ ಸಾರ್ವಜನಿಕ ಉದ್ಯಮಗಳು ಮುಳುಗುತ್ತಿವೆ. ಯಾವ ಉದ್ದೇಶದಿಂದ ಸಾರ್ವಜನಿಕ ಉದ್ಯಮಗಳು ಅಸ್ತಿತ್ವಕ್ಕೆ ಬಂದವು, ಅದಕ್ಕೆ ಸಂಪೂರ್ಣ ತಿಲಾಂಜಲಿಯನ್ನು ಕೊಟ್ಟಿದ್ದೀರಿ. ನಿಮಗೆ ಅಲ್ಲಿರತಕ್ಕಂಥ ಕಾರ್ಮಿಕರ ಬಗ್ಗೆಯೂ ಕಾಳಜಿಯಿಲ್ಲ. ಬಿಐಎಫ್‌ಆರ್ ಗೆ ಹೋದಂಥ ಅನೇಕ ಕೈಗಾರಿಕೆಗಳಿಗೂ ಕೂಡ ಇವತ್ತು ಪರಬಾರೆ ಮಾಡಬೇಕು, ಖಾಸಗೀಕರಣ ಮಾಡಬೇಕು ಎಂದು ಅಲ್ಲಿ ಖಾಸಗಿಯವರಿಗೆ ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಇವತ್ತು ಎನ್‌ಜಿಇಎಫ್, ಕೆಇಬಿ ಹೀಗೆ ಬೇರೆ ಬೇರೆ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಬೇಕೆನ್ನುವ ಎಲ್ಲಾ ಪ್ರಯತ್ನಗಳು ನಡೆದಿವೆ. ಇದು ಲೂಟೊ ಔರ್‌ಬಾಟೊ ಸಿಸ್ಟಂ ತರಹ ಆಗಬಾರದು. ತುಂಬಿ ಲೂಟೊ ಔರ್ ಬಾಟೊ ಎಂದು ಹೇಳಿ ನೀವು ಖಾಸಗಿಯವರಿಗೆ ಇದಕ್ಕೆ ಅವಕಾಶ ಮಾಡಿಕೊಟ್ಟರೆ ಅವನು ಇದೇ ಕೆಲಸ ಮಾಡುತ್ತಾನೆ, ಲಾಭವಿಲ್ಲದೆ ಯಾರೂ ಕೂಡ ಬರುವುದಿಲ್ಲ. ಕೇವಲ ಚಾರಿಟಿಗೋಸ್ಕರ ಯಾರೂ ಬರುವುದಿಲ್ಲ, ಸಮಾಜ ಸೇವೆಗಾಗಿ ಯಾರೂ ಬರುವುದಿಲ್ಲ, ನಾಲ್ಕು ಕಾಸು ಅವನಿಗೆ ಲಾಭ ಸಿಕ್ಕರೆ ಅವನು ಬರುತ್ತಾನೆ. ಹಿಂದೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನ ಕೇವಲ ನಾಲ್ಕು ಮಿಲ್‌ಗಳು ಕರ್ನಾಟಕದಲ್ಲಿ ರಾಷ್ಟ್ರೀಕರಣವಾಗಬೇಕಾದರೂ ಕೂಡ ದೊಡ್ಡ ಹೋರಾಟ ನಡೆಯಿತು. ಅದು ಮೈಸೂರು ಮಿನರ್ವ ಮಿಲ್ ಇರಬಹುದು ಅಥವಾ ಬೆಂಗಳೂರು ಮಿನರ್ವ ಮಿಲ್ ಇರಬಹುದು ಅಥವಾ ಗುಲ್ಬರ್ಗಾ ಎಂಎಸ್‌ಕೆ ಮಿಲ್ ಇರಬಹುದು, ಅಥವಾ ದಾವಣಗೆರೆ ಯಲ್ಲಮ್ಮ ಮಿಲ್ ಇರಬಹುದು, ಇವೆಲ್ಲಾ ಮಿಲ್‌ಗಳನ್ನು ನ್ಯಾಷನಲ್ ಟೆಕ್ಸ್‌ಟೈಲ್‌ಕಾರ್ಪೊರೇಷನ್‌ಗೆ ಸೇರಿಸಬೇಕೆಂದಾಗಲೂ ಕೂಡ ಜನರು ಹಠ ಮಾಡಿದರು. ಈಗ ನಿಮಗೆ ಯಾವ ತತ್ವದಲ್ಲಿಯೂ ನಂಬಿಕೆಯೇ ಇಲ್ಲ, ಮಾತೆತ್ತಿದರೆ ಖಾಸಗೀಕರಣ ಸರ್ಕಾರಿ ಉದ್ಯಮಗಳನ್ನು ಸುಧಾರಣೆ ಮಾಡುವ ಚಿಂತನೆಯೇ ನಿಮಗಿಲ್ಲವೆಂದರೆ ಏನರ್ಥ? ಈ ಕೆಲಸವನ್ನು ಸರ್ಕಾರ ಮಾಡದಿದ್ದರೆ ಮತ್ಯಾರು ಮಾಡಬೇಕು? ಬೇರೆಯವರಿಗೆ ಮಾಡಿ ಎಂದು ಕೇಳುವುದಕ್ಕಾಗುತ್ತದೆಯೇ? ಈ ಎಲ್ಲಾ ಸಾರ್ವಜನಿಕ ಉದ್ಯಮಗಳು ಸಾಮಾಜಿಕ ನ್ಯಾಯ ತತ್ವದ ಅಡಿಪಾಯದ ಮೇ ಬಂದಂತಹವು, ಪ್ರಾರಂಭದಲ್ಲಿ ಯಾರೂ ತೆರೆಯುತ್ತಿರಲಿಲ್ಲ. ಮಾನ್ಯ ಜವಹಾರ್‌ಲಾಲ್ ನೆಹರೂರವರಿಗೆ ಭೊಕಾರೊ ಸ್ಟೀಲ್ ಪ್ಲಾಂಟ್ ಸ್ಥಾಪಿಸಬೇಕೆನ್ನುವ ಅವಶ್ಯಕತೆ ಇರಲಿಲ್ಲ, ಅಥವಾ ಮಾನ್ಯ ಶ್ರೀ ವಿಶ್ವೇಶ್ವರಯ್ಯನವರಿಗೆ, ಭದ್ರಾವತಿ ಸ್ಟೀಲ್ ಪ್ಲಾಂಟ್ ಅಥವಾ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆ, ಎನ್‌ಜಿಇಎಫ್ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಆಗ ಈ ಕಲ್ಪನೆ ಏತಕ್ಕೆ ಇತ್ತು ಎಂದರೆ, ಅಂದಿನ ಯುವಕರಿಗೆ ಉದ್ಯೋಗ ಕೊಡಬೇಕು ಅದರ ಜೊತೆಗೆ ನಾವು ಉತ್ಪಾದನೆಯನ್ನೂ ಕೂಡ ಆರಂಭಿಸಬೇಕು, ಇರುವ ಸಂಪತ್ತನ್ನು ಸಮೃದ್ಧಿಗೊಳಿಸಬೇಕೆನ್ನುವ ದೃಷ್ಟಿಯಿಂದ ಇವುಗಳನ್ನು ಸ್ಥಾಪನೆ ಮಾಡಿದರು. ಆದರೆ ಅದಕ್ಕೆಲ್ಲಾ ನೀವು ತಿಲಾಂಜಲಿಯನ್ನು ಕೊಟ್ಟು ಇವತ್ತು ಹಾಳು ಮಾಡುತ್ತಿದ್ದೀರಿ. ಹೀಗೆ ಇವತ್ತು ಸಾರ್ವಜನಿಕ ಉದ್ಯಮಗಳ ಗತಿಯಾಗಿದೆ.

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸೋಪ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿ ಈಗ ಲಾಸ್‌ನಲ್ಲಿ ಇಲ್ಲ. 1993 ರಿಂದ 1994ರವರೆಗೆ 100 ಕೋಟಿ ರೂಪಾಯಿಗಳ ಲಾಸ್‌ನಲ್ಲಿತ್ತು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 80 ಕೋಟಿ ರೂಪಾಯಿಗಳ ಆದಾಯ ಮಾಡಿ ಅದರಲ್ಲಿ 70 ಕೋಟಿ ರೂಪಾಯಿಗಳ ಸಾಲವನ್ನು ತೀರಿಸಿದ್ದೇವೆ. ಇನ್ನು ಉಳಿದಿರುವುದು 20 ಕೋಟಿ ರೂಪಾಯಿಗಳು, ಆ ಉದ್ಯಮವು ಲಾಭದಲ್ಲಿ ನಡೆಯುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನು ಬಿಡದಿಯಲ್ಲಿ ನಾಫ್ತಾ ಬೇಸ್ಡ್ ವಿದ್ಯುತ್‌ಉತ್ಪಾದನಾ ಪ್ಲಾಂಟಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಈಗಾಗಲೇ ಮಾತನಾಡಿದ್ದಾರೆ. ಎಲ್ ಅಂಡ್ ಟಿ, ಬಿಹೆಚ್‌ಇಎಲ್, ಎಬಿಬಿ ಈ ಮೂರು ಕಂಪನಿಗಳಿಂದ ಟೆಂಡರ್ ಕರೆದು ಒಪ್ಪಿಕೊಂಡು ಮಾಡತಕ್ಕಂಥ ಹಂತದಲ್ಲಿ ಇವತ್ತು ಸರ್ಕಾರವಿತ್ತು. ಆದರೆ ನಿನ್ನೆ ನಮ್ಮ ಸದಸ್ಯರಾದ ಮಾಧುಸ್ವಾಮಿಯವರು ಇಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಇನ್ನೂ ಇದರಲ್ಲಿ ಯಾವುದನ್ನೂ ಬಿಟ್ಟು ಫೈನಲ್ ನಿರ್ಣಯ ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರುಗಳು ಹೇಳಿದ್ದಾರೆಂದು ತಿಳಿಯಿತು. ಯಾವುದರ ಬಗ್ಗೆ ಕೂಡ ನಿರ್ಣಯವನ್ನು ತೆಗೆದುಕೊಂಡಿಲ್ಲ. ಅದರ ಬಗ್ಗೆ ನಾನು ಇಲ್ಲಿ ಮಾತನಾಡುವುದಿಲ್ಲ, ಆದರೆ ನಿರ್ಣಯವನ್ನು ತೆಗೆದುಕೊಳ್ಳುವಾಗ ನ್ಯಾಯವಾಗಿ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರದ ಉದ್ಯಮವಾದ ಬಿಹೆಚ್‌ಇಎಲ್‌ಇದೆ, ನೀವು ಕರೆದು ಒಪ್ಪಂದ ಮಾಡಿಕೊಂಡು ಅವರಿಗೆ ಒಪ್ಪಿಸಿದ್ದೀರಿ. ನಿಮಗೇಕೆ ಎಬಿಬಿ ಕಂಪನಿಯ ಮೇಲೆ ಮೋಹ? ಅವರು ಅತ್ಯಂತ ಹೆಚ್ಚಿನ ಹಣವನ್ನು ಕೋಟ್ ಮಾಡಿದ್ದಾರೆ. ಇವತ್ತು ಬೇರೆಯವರ ಟೆಂಡರ್‌ಗೆ ಹೋಲಿಸಿದರೆ ಲೋಯೆಸ್ಟ್ ಆಫರ್609 ಕೋಟಿ ರೂಪಾಯಿಗಳು, ಬಿಹೆಚ್‌ಇಎಲ್ 751 ಕೋಟಿ ರೂಪಾಯಿಗಳು, ಮತ್ತೆ ABBದ್ದು 844 ಕೋಟಿ ರೂಪಾಯಿಗಳು. 844 ಕೋಟಿ ರೂಪಾಯಿಗಳ ಆಫರ್ ಕೊಟ್ಟಂಥ ಅಮೇರಿಕಾದ ಎಬಿಬಿ ಕಂಪನಿಗೆ ನೀವು ಅವಕಾಶ ಮಾಡಿಕೊಡುತ್ತೀರಿ, ಬಿಹೆಚ್‌ಇಎಲ್ ಮತ್ತು ಎಲ್ ಅಂಡ್ ಟಿ ಸ್ಥಳೀಯ ಕಂಪನಿಗಳನ್ನು ಕರೆದು ಮಾತನಾಡುವುದಕ್ಕೆ ತಾವು ತಯಾರಿಲ್ಲ. 200-300 ಕೋಟಿ ರೂಪಾಯಿಗಳ ವ್ಯತ್ಯಾಸವಿದ್ದಾಗ ಇದನ್ನು ಯಾವ ದೃಷ್ಟಿಯಿಂದ ಮಾಡುತ್ತಿದ್ದೀರಿ? ಬಿಹೆಚ್‌ಇಎಲ್ ಕಂಪನಿ ಕೇಂದ್ರ ಸರ್ಕಾರದ್ದಾಗಿದೆ. ಅವರನ್ನು ಕರೆದು ಮಾತನಾಡಿ, ಅನೇಕ ಜನ ನಮ್ಮ ನೌಕರರೇ ಅಲ್ಲಿದ್ದಾರೆ, ಅಂಥ ಕಂಪನಿಗೆ ಸಹಾಯ ಮಾಡುವುದು ನಮ್ಮ ಉದ್ದೇಶವಾಗಿರಬೇಕೇ ಹೊರತು ಹೊರಗಿನ ಕಂಪನಿಗಳಿಗೆ ಸಹಾಯ ಮಾಡುವ ಪ್ರಯತ್ನ ಮಾಡಿದರೆ ನಿಜವಾಗಿಯೂ ಇದನ್ನು ನಾವು ಸಂಶಯದಿಂದ ನೋಡುವುದಕ್ಕೆ ಅವಕಾಶವಾಗುತ್ತದೆ ಮತ್ತೆ ಜನರೂ ಕೂಡ ಅದೇ ದೃಷ್ಟಿಯಿಂದ ನೋಡುತ್ತಾರೆನ್ನುವ ಮಾತನ್ನು ನಾನು ಹೇಳುತ್ತೇನೆ. ಮುಂದೆ ಇದನ್ನು ಅಂತಿಮಗೊಳಿಸುವಾಗ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ರಾಜ್ಯದ ಕಾನೂನು ಸುವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಅನೇಕ ಕಡೆ ದಿನೇ ದಿನೇ ದರೋಡೆಗಳು, ಮನೆಗಳ್ಳತನ, ಮುಂಬೈನಲ್ಲಿ ಯಾವ ರೀತಿ ಮಾಫಿಯಾಗಳಿದ್ದಾರೆ ಆ ರೀತಿ ಅವರ ಹಾವಳಿ ಇವತ್ತು ಬೆಂಗಳೂರು, ಮಂಗಳೂರು ಮತ್ತು ಇತರೆ ಭಾಗಗಳಲ್ಲಿ ಇವೆ. ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ, ಅಂಕಿಸಂಖ್ಯೆಗಳನ್ನು ಹೇಳುವುದಲ್ಲ. ಹಿಂದಿನ ಸರ್ಕಾರದಲ್ಲಿದ್ದ ಅಧಿಕಾರಿಗಳೇ ಈಗಲೂ ಇದ್ದಾರೆ, ಅವರು ಕೊಡುವ ಅಂಕಿಸಂಖ್ಯೆಯ ಮೇಲೆ ನಾವು ಹೋಗುವುದಿಲ್ಲ, ನಾವು ವಾಸ್ತವಿಕತೆಯ ಮೇಲೆ ಹೋಗಬೇಕು. ಪ್ರಾಮಾಣಿಕವಾಗಿ ಇವತ್ತು ಅದನ್ನು ನೋಡಬೇಕೇ ಹೊರತು

ಅದನ್ನು ಬಿಟ್ಟು ಮಾಡಿದರೆ ನಿಜವಾಗಿಯೂ ಅದು ಸರಿಯಲ್ಲ. ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಷ್ಟರಮಟ್ಟಿಗೆ ಇದೆ ಎನ್ನುವುದಕ್ಕೆ ಅವರೇ ಕೊಟ್ಟಿರುವ ಅಂಕಿಸಂಖ್ಯೆಗಳನ್ನು ನೋಡಿದರೆ ಅರ್ಥವಾಗುತ್ತದೆ. ನಾವು ಕೆಲವೊಂದು ಮಾತ್ರ ಉದಾಹರಣೆಯನ್ನು ಕೊಡುತ್ತೇನೆ.

| | | |
|---|---|---|
| 1. | Murder for gain | 57 |
| 2. | Dacoity | 276 |
| 3. | Robbery | 1208 |
| 4. | H.B.T. | 8949 |
| 5. | House breaking & ordinary thefts | 15,175 |
| 6. | Cattle thefts | 403 |
| 7. | Cheating | 2040 |
| 8. | Counterfeit coins, currency Notes | 53 |
| 9. | Criminal breach of Trust | 643 |
| 10. | Murder other than for gain | 1636 |
| 11. | Rioting | 7,338 |
| 12. | Under Section 304-A-C | 4951 |
| 13. | Culpable homicide | 58 |
| 14. | Administration of stuff drugs | 5 |
| 15. | Kidnapping cases | 633 |
| 16. | Rape cases | 243 |
| 17. | Other IPC cases | 66,866 |
| | **Total cases during1997-98** | **1,10,,533** |

ಇದರಲ್ಲಿ ಸುಧಾರಣೆಯಾಗಿದ್ದರೆ ಕಳೆದ ಸಲಕ್ಕಿಂತ ಕಡಿಮೆ ಇರಬೇಕು. ಅಥವಾ 1994-95ಕ್ಕಿಂತಲೂ ಕಡಿಮೆಯಾಗಬೇಕು, ಆದರೆ ಇದು ದಿನೇ ದಿನೇ ಹೆಚ್ಚಾಗುತ್ತಿದೆ. ನಾನು ಪ್ರತಿಯೊಂದು ಅಂಕಿಅಂಶಗಳನ್ನು ಪುನಃ ಹೇಳುವುದಕ್ಕೊಗುವುದಿಲ್ಲ. ಒಮ್ಮೆಲೇ ಒಟ್ಟಾರೆ ಹೇಳಿದ್ದೇನೆ. ಇನ್ನೂ ಸಹ ಈ ಕಾನೂನು ಸುವ್ಯವಸ್ಥೆ ಸುಧಾರಣೆಯಾಗಿಲ್ಲ, ಆ ನಿಟ್ಟಿನಲ್ಲಿ ಇವತ್ತಿನ ದಿವಸ ಸಾಕಷ್ಟು ಪ್ರಯತ್ನವನ್ನು ಮಾಡಬೇಕಾಗಿತ್ತು, ಅದರಲ್ಲೂ ಕೂಡ ಈ ಸರ್ಕಾರ ವಿಫಲವಾಗಿದೆ. ಆಮೇಲೆ ಈ ಸರ್ಕಾರದವರು ಕ್ರಿಮಿನಲ್‌ಪ್ರಕರಣಗಳನ್ನು ವಾಪಸ್ ತೆಗೆದುಕೊಂಡಿದ್ದಾರೆ. 1996-97ರಲ್ಲಿ 28466, 1997-98ರಲ್ಲಿ 35672, 1998-99ರಲ್ಲಿ 715 ಪ್ರಕರಣಗಳು ಮೇ ವರೆಗೆ ಆಗಿವೆ.

4.20 ಪಿ.ಎಂ.

ಇವುಗಳು ಐ.ಪಿ.ಸಿಯಲ್ಲಿ ಮತ್ತು ಬೇರೆ ಬೇರೆ ಕಾನೂನುಗಳ ಕೆಳಗೆ ತೆಗೆದುಕೊಂಡಂಥ ವಿತ್‌ಡ್ರಾಯಲ್ ಕೇಸುಗಳು. ಇವರ ಬಗ್ಗೆ ತಾವು ಅನುಕಂಪ ತೋರಿಸಿದ್ದೀರಿ. ಆದರೆ ಕೆಲವು ಶಾಸಕರು ಮತ್ತು ಕೆಲವು ಪಕ್ಷಗಳು ಪ್ರೈಸ್ ರೈಸ್ ಬಗ್ಗೆ, ಅದು ಎಲೆಕ್ಟ್ರಿಸಿಟಿ, ಬಸ್, ಹಾಲು ಮುಂತಾದವುಗಳಿರಬಹುದು, ಇಂಥವೆಲ್ಲದರ ಬಗ್ಗೆ ಮತ್ತು ಅನ್ಯಾಯ, ದೌರ್ಜನ್ಯಗಳ ಬಗ್ಗೆಯೂ ಆಜಿಟೇಷನ್ ಮಾಡಿದರೆ, ಆಗ ಹಾಕಿರತಕ್ಕಂಥ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಪ್ರಯತ್ನ ನಡೆದಿಲ್ಲ.

(ಈ ಹಂತದಲ್ಲಿ (ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾನು ಈಗಾಗಲೇ ಹೇಳಿದ ಹಾಗೆ, ಸುಮಾರು 28 ಸಾವಿರ ಕೇಸುಗಳನ್ನು ಇವರು ವಾಪಸ್ಸು ತೆಗೆದುಕೊಂಡಿದ್ದರೂ ಕೂಡ, ಶಾಸಕರ ಮೇಲೆ ಹಾಕಿರತಕ್ಕಂಥ ಅಜಿಟೇಷನ್ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥಾದ್ದನ್ನು ಮಾಡಲಿಲ್ಲ. ಇದು ಏಕೆ ಎಂದು ನಾನು ಕೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ನಾವು ಪ್ರೊಟೆಸ್ಟ್ ಮಾಡತಕ್ಕಂಥಾದ್ದಾಗಲೀ ಅಥವಾ ಜನರ ಸಮಸ್ಯೆಗೆ ಸ್ಪಂದಿಸತಕ್ಕಂಥಾದ್ದಾಗಲೀ ಅದು ನಮ್ಮ ಕೆಲಸ. ಆದರೆ ನೀವು ಇದನ್ನು ಮಾಡಿದ್ದು ಸರಿಯಲ್ಲ ಎಂದು ಹೇಳುತ್ತೇನೆ. ನಮ್ಮ ಮೇಲೆ ಕೇಸ್ ಹಾಕಿದರೆ, ನಾಳೆ ಯಾರೂ ಅಜಿಟೇಷನ್ ಮಾಡುವುದು ಬೇಡ, ಏನನ್ನೂ ಕೇಳುವುದು ಬೇಡ ಎಂದ ಹಾಗೆ ಆಗುತ್ತದೆ. ಇಲ್ಲವೆಂದರೆ, ಇದು ಡಿಕ್ಟೇಟರ್‌ಶಿಫ್ ಗವರ್ನಮೆಂಟ್,ಯಾರೂ ಪ್ರೊಟೆಸ್ಟ್ ಮಾಡಬೇಡಿ ಎಂದು ಹೇಳಲಿ. ಇವರು ಎಂಥೆಂಥ ಕೇಸುಗಳನ್ನು ಶಾಸಕರ ಮೇಲೆ ಹಾಕಿದ್ದಾರೆ ಎನ್ನುವುದಕ್ಕೆ ನನ್ನದೇ ಒಂದು ಉದಾಹರಣೆ ಕೊಡುತ್ತೇನೆ. ಸಿಸಿ ನಂ. 80098, ದಿನಾಂಕ 18.9.98, ನನ್ನ ಮೇಲೆ ಕೇಸುಗಳನ್ನು ಹಾಕಿರತಕ್ಕಂಥ ಸೆಕ್ಷನ್‌ಗಳೆಂದರೆ, 143, 144, 145, 147, 148, 152, 153, 324, 353, 332, 427 ಮತ್ತು 506 ರೆಡ್ ವಿತ್ 49 ಐ.ಪಿ.ಸಿ, ಇಷ್ಟೊಂದು ಕೇಸುಗಳನ್ನು ಹಾಕಿದ್ದಾರೆ. ಅಂದರೆ ಯಾರು ಜನಪರ ಅಜಿಟೇಷನ್ ಮಾಡುತ್ತಾರೋ ಅಥವಾ ಜನರ ಪರವಾಗಿ ಕೇಳಬೇಕು ಎಂದು ಪ್ರೊಸೆಷನ್ ತೆಗೆಯುತ್ತಾರೋ ಅದಕ್ಕೂ ಕೂಡ ಅವಕಾಶ ಇಲ್ಲ. ಇದು ಪಾಕಿಸ್ಥಾನದ ನವಾಜ್ ಷರೀಫ್ ತರಹದ ಸರ್ಕಾರವಾಯಿತು. ಏಕೆಂದರೆ ನನ್ನ ಮೇಲೆ ಸುಮಾರು 10 ಸೆಕ್ಷನ್‌ಗಳನ್ನು ಹಾಕಿದ್ದಾರೆ.

Section 143- punishment for a member of an unlawful assembly with imprisonment for a term of six months and fine. Section 144 - joining unlawful assembly, armed with deadly weapons, shall be punished with imprisonment for a term which may extend 2 years. ನಮ್ಮ ಕೈಯ್ಯಲ್ಲಿ ವೆಪನ್ ಇದ್ದುದ್ದನ್ನು ತಾವು ನೋಡಿದಿರೇನು? ಇದನ್ನು ಹಾಕುವವರಿಗೆ ಸ್ವಲ್ಪವಾದರೂ ಬುದ್ಧಿ ಬೇಕಲ್ಲವೇ?

Section 145 - Joining or continuing in unlawful assembly knowing, it has been amended to disperse, imprisonment for a term which may extend to two years or fine or both.

Section 147 - Punishment for rioting. Punishment with imprisonment up to two years or fine or both.

Section 148 - Rioting armed with deadly weapons. Punished with imprisonment for a term up to 3 years or fine or both.

Section 152 - Assaulting or obstructing public servant when suppressing riots, etc.

Section 153 - Want only giving provocation with the intention to cause riots. Punishment for this is one year.

Section 324 - Voluntarily causing hurt by dangerous weapons.

ಡೇಂಜರಸ್ ವೆಪನ್ಸ್‌ನಿಂದ ನಾವು ಬೇರೆಯವರಿಗೆ ಹೊಡೆದಿದ್ದೇವೆ ಎಂದು ಕೇಸ್‌ಹಾಕಿದ್ದಾರೆ. ಅಲ್ಲಿ ಪೋಲೀಸರಿದ್ದರು, ಸಬ್-ಇನ್ಸ್‌ಪೆಕ್ಟರ್ ಇದ್ದರು. ಡಿ.ವೈ.ಎಸ್.ಪಿ. ಎಲ್ಲರೂ ಇದ್ದರು. ನಾವು ಯಾರಿಗೆ ಹೊಡೆದೆವು? ಒಬ್ಬ ಪೋಲೀಸಿನವರಾದರೂ ನನ್ನ ಕೈಯ್ಯಲ್ಲಿ ಹೊಡೆಸಿಕೊಂಡು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಎಂದು ಈ ಸದನದಲ್ಲಿ ಹೇಳಿದರೆ ನಾನು ಶಹಬಾಸ್ ಎಂದು ಹೇಳುತ್ತೇನೆ, ಕನಿಷ್ಟ ಒಬ್ಬ ಎಸ್.ಪಿ.ಗೆ ಒಬ್ಬ ಡಿ.ವೈ.ಎಸ್.ಪಿ ಗೆ ಹೊಡೆಯತಕ್ಕಂಥ ಧೈರ್ಯವನ್ನು ನಾವು ಮಾಡಿದ್ದೇವೆ ಎಂಬುದನ್ನು ಹೇಳಲಿ ನೋಡೋಣ. Section 153 - Want only giving provocation with intent to cause riot and voluntarily causing a hurt by dangerous weapons or means. If anybody voluntarily causes hurt by means of any instrument for shooting or stabbing or cutting shall be punished with imprisonment of either description for a term up to 3 years or with fine or with both. Section 353 - Assault or criminal force to deter public servant. ನಾವು ಅಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳಿಗೆ ಫೋರ್ಸ್ ಮಾಡಿದ್ದೇವೆ, ಅಸಾಲ್ಟ್ ಮಾಡಿದ್ದೇವೆ, ಹೊಡೆದಿದ್ದೇವೆ ಎಂದು ಇದನ್ನು ಹಾಕಿದ್ದಾರೆ. ಇದಕ್ಕೆ ಎರಡು ವರ್ಷ ಪನಿಷ್‌ಮೆಂಟ್. Section 332 - Voluntarily causing hurt to deter public servant from his duty. ಅವರಿಗೆ ನಾವು ತೊಂದರೆ ಕೊಟ್ಟಿದ್ದೇವೆ, ಹರ್ಟ್ ಮಾಡಿದ್ದೇವೆ ಎಂದು ಇದನ್ನು ಹಾಕಿರುವುದು.

Section 427 - Mischief causing damage to the amount of Rs. 50/-. 50 ರೂಪಾಯಿಗಳಿಗೆ ಯಾವ ಸಾಮಾನು ಬರುತ್ತದೋ ಗೊತ್ತಿಲ್ಲ. ಅದನ್ನು ಡ್ಯಾಮೇಜ್ ಮಾಡಿದ್ದೇನೆ ಎಂದು ಕೇಸ್ ಹಾಕಿದ್ದಾರೆ. Section 506 - Punishment for criminal intimidation. Criminal intimation or offence shall be punished with imprisonment of two years or fine.

Section 149 - Every member of unlawful assembly quietly of the offence committed in a prosecution's common object, who at the time of committing that offence is a member of the same assembly is guilty. This is Section 149. ನನ್ನ ಮೇಲೆ ಎಷ್ಟೊಂದು ಸೆಕ್ಷನ್‌ಗಳನ್ನು ಹಾಕಿದ್ದಾರೆ ಎಂದರೆ, ನನಗೆ ಕನ್ವಿಕ್ಷನ್ ಆದರೆ ನಾನು ಇಡೀ ಲೈಫನ್ನು ಜೈಲಿನಲ್ಲಿ ಕಳೆಯಬೇಕಾಗುತ್ತದೆ. ನೀವು 28 ಸಾವಿರ ಜನರ ಕೇಸುಗಳನ್ನು ವಿತ್‌ಡ್ರಾ ಮಾಡಿದಿರಿ. ನಿಮಗೋಸ್ಕರವಾಗಿ, ಹಾಲಿನ ಬೆಲೆ ಹೆಚ್ಚಾಗಿದೆ, ನೀರಿನ ಬೆಲೆ ಹೆಚ್ಚಾಗಿದೆ ಎನ್ನುವುದಕ್ಕೋಸ್ಕರ ಅಜಿಟೇಷನ್ ಮಾಡಿದ್ದಕ್ಕೆ ಅಷ್ಟೊಂದು ಕೇಸುಗಳನ್ನು ನೀವು ಹಾಕಿದ್ದೀರಿ. ನೀವು ನಮ್ಮಲ್ಲಿ ಬಂದು, ಅಜಿಟೇಷನ್ ಮಾಡಿ ಎಂದು ಹೇಳುತ್ತೀರಿ, ನಂತರ ನಮ್ಮ ಮೇಲೆ ಕೇಸುಗಳನ್ನು ಹಾಕಿಸುತ್ತೀರಿ. ಎಲೆಕ್ಟ್ರಿಸಿಟಿ ದರ ಜಾಸ್ತಿಯಾಗಿದೆ, ರೈತರಿಗೆ ವಿದ್ಯುಚ್ಛಕ್ತಿ ದರ ಹೆಚ್ಚಾಗಿದೆ, ಅದಕ್ಕಾಗಿ ನೀವು ಅಜಿಟೇಷನ್ ಮಾಡಿ ಎಂದು ನಮಗೆ ಹೊರಗಡೆ ಹೇಳಿಕೊಡುವುದು, ನಾವು ಅಜಿಟೇಷನ್ ಮಾಡಿದರೆ ನಮ್ಮ ಮೇಲೆ ಕೇಸುಗಳನ್ನು ಹಾಕಿಸುವುದು. ಅಜಿಟೇಷನ್ ಮಾಡಿ ಎಂದು ನನಗೆ ಹೇಳಿದ್ದು ಯಾರೆಂದು ಅವರ ಹೆಸರು ಹೇಳಲೇ. ಬೇಡ, ಅದನ್ನು ಹೇಳಿದರೆ ನಿಮ್ಮ ನಿಮ್ಮಲ್ಲೇ ಜಗಳವಾಗುತ್ತದೆ. ನಮ್ಮ ಮೇಲೆ ಸುಮಾರು 15 ಸೆಕ್ಷನ್‌ಗಳನ್ನು ಹಾಕಿದ್ದಾರೆ. ಈ 15 ಸೆಕ್ಷನ್‌ಗಳನ್ನು ನಾನು ಈಗಾಗಲೇ ಓದಿದೆ. ಅವುಗಳೆಂದರೆ 143, 144, 145, 147, 148, 152, 153, 324, 353, 332, 427, 506 ರೆಡ್ ವಿತ್ 49 ಐ.ಪಿ.ಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮದು ಸೆಕ್ಷನ್ 302, 307ವರೆಗೆ ಮಾತ್ರ ಇದೆ. 506ರವರೆಗೆ ಬಂದಿರುವುದು ನಿಮ್ಮೊಬ್ಬರದ್ದು ಮಾತ್ರವೇ. ಇವರಿಗೆ 5 ವರ್ಷ ಕೈ ಎತ್ತಿದ ಪಾಪಕ್ಕೆ ಇವರು ನನ್ನ ಮೇಲೆ 302, 307 ಕೂಡ ಹಾಕಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವಾಗಲೂ ನಮ್ಮ ಜೊತೆಯಲ್ಲಿ ಇರಿ ಎಂದು ಹೇಳಿದೆವು, ನೀವು ಕೇಳುವುದಿಲ್ಲ. ಅಂಥವರ ಸಹವಾಸ ಮಾಡಿದ್ದೀರಿ. ಇಲ್ಲದಿದ್ದರೆ ಸ್ವತಂತ್ರವಾಗಿ ಇರಬಹುದು. ಅಲ್ಲಿಗೆ ಹೋಗಿ ಒದೆಸಿಕೊಳ್ಳುವುದರಲ್ಲಿ ಏನು ಪುರುಷಾರ್ಥ ಇದೆ? ರಾಜ್ಯಸಭೆಯಲ್ಲಿ ಅವರಿಗೆ ಸಹಾಯ ಮಾಡಿದಿರಿ, ಎಂ.ಎಲ್.ಸಿ. ಆಯ್ಕೆಯಲ್ಲಿ ಸಹಾಯ ಮಾಡಿದಿರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಓಟು ಕೊಟ್ಟು ಗೆಲ್ಲಿಸಬೇಕು ಎಂದು ಹೇಳಿದವರು ಜನತಾ ದಳದವರು. ಒಂದು ದೊಡ್ಡ ಸಹಾಯ ಮಾಡಿ, ನಿಮ್ಮ ಅಧ್ಯಕ್ಷರನ್ನು ರಾಜ್ಯಸಭೆಗೆ ಕಳುಹಿಸಿದ್ದು ಇವರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮನ್ನು ಕಳುಹಿಸದೇ ಬಿ.ಜೆ.ಪಿ.ಯವರನ್ನು ಕಳುಹಿಸುತ್ತಿದ್ದರೇ ಎಂದು ನಾನು ಕೇಳುತ್ತೇನೆ. ಅದು ಅನಿವಾರ್ಯವಾಗಿತ್ತು. ಕೆಲಸ ಬೇಕೆಂದಾಗ ಯಾರಾದರೂ ಅದನ್ನು ಮಾಡುತ್ತಾರೆ. ಅದು ನೀವು ನಮಗೆ ಮಾಡಿದ ಸಹಾಯವಲ್ಲ, ನಿಮ್ಮ ಮರಣ ಶಾಸನವನ್ನು ತಪ್ಪಿಸಿಕೊಳ್ಳಬೇಕು ಎಂದು ನೀವು ನಮಗೆ ಸಹಾಯ ಮಾಡಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಅಷ್ಟನ್ನಾದರೂ ಅಪ್ರಿಷಿಯೇಟ್ ಮಾಡಬೇಕಲ್ಲಾ, ನಾಗೇಗೌಡರಿಗೆ ಪಾಪ, ಏನಾಯಿತು, ಆದರೆ ನಿಮ್ಮ ಅಧ್ಯಕ್ಷರನ್ನು ರಾಜ್ಯಸಭೆಗೆ ಕಳುಹಿಸಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಗುರು ಶಿಷ್ಯರು. ನಾಳೆ ಏನಾದರೂ ಹೇಳಲು ಹೋದರೆ ಮತ್ತೆ ಏನೇನು ಆಗುತ್ತಾರೋ ಯಾರಿಗೆ ಗೊತ್ತು. ಆಗಿದ್ದು ಆಯಿತು, ಏನು ಮಾಡುವುದು, ಸುಮ್ಮನೆ ಇರಿ ಎಂದರೆ ಏನು ಮಾಡುವುದು?

ಶ್ರೀಮತಿ ಪ್ರಮೀಳ ನೇಸರ್ಗಿ : ಸೆಕ್ಷನ್ 307ನ್ನು 300 ಜನರ ಮೇಲೆ ಹಾಕಿದ್ದಾರೆ. ಅದನ್ನು ಹಾಕಿರುವುದು ಮನುಷ್ಯರ ಮೇಲೆ ಅಲ್ಲ. ಕಟ್‌ಔಟ್‌ಗಳಿಗೆ ಹಾಕಿದ್ದಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಚಿಕ್ಕೋಡಿ) : ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಚಿಕ್ಕೋಡಿ ಅರ್ಬನ್ ಬ್ಯಾಂಕಿನ ಉಪಶಾಖೆ ಕುಥಳಿ ಗ್ರಾಮದಲ್ಲಿದೆ. ದಿನಾಂಕ 17.2.1999ರಂದು ಮಧ್ಯರಾತ್ರಿಯಲ್ಲಿ ಕುಥಳಿ ಗ್ರಾಮದಲ್ಲಿರುವ ಚಿಕ್ಕೋಡಿ ಅರ್ಬನ್ ಬ್ಯಾಂಕನ್ನು ದರೋಡೆ ಮಾಡಿ 32 ಲಕ್ಷ ರೂಪಾಯಿಗಳ ಬಂಗಾರ ಮತ್ತು 2 ಲಕ್ಷ 10 ಸಾವಿರ ರೂಪಾಯಿಗಳಷ್ಟು ನಗದು ಹಣವನ್ನು ಕಳ್ಳರು ದೋಚಿಕೊಂಡು ಹೋಗಿದ್ದಾರೆ. ನಾವು ಸಾಕಷ್ಟು ಸಲ ಮನವಿ ಕೊಟ್ಟು ಆದಷ್ಟು ಬೇಗ ಕಳ್ಳರನ್ನು ಹಿಡಿಯಿರಿ ಎಂದು ಹೇಳಿದ್ದರೂ ಸಹ ಇಲ್ಲಿಯವರೆಗೆ ದರೋಡೆ ಮಾಡಿ ಹಣ ದೋಚಿರತಕ್ಕಂಥ ಕಳ್ಳರನ್ನು ಹಿಡಿಯುವುದಕ್ಕೆ ಬೆಳಗಾಂ ಪೋಲೀಸ್ ಇಲಾಖೆಗೆ ಆಗಿಲ್ಲ. ಇದರಿಂದ ಜನರು ಬ್ಯಾಂಕಿನ ಮೇಲೆ ಇಟ್ಟಿರತಕ್ಕಂಥ ವಿಶ್ವಾಸ ಹೊರಟು ಹೋಗಿದೆ. ಆದ್ದರಿಂದ ಆದಷ್ಟು ಬೇಗ ಕಳ್ಳರನ್ನು ಹಿಡಿಯಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಳ್ಳರು ಎಲ್ಲಿದ್ದಾರೆ, ಯಾವ ರೂಮ್ ನಲ್ಲಿದ್ದಾರೆಂದು ಪೋಲೀಸ್‌ನವರಿಗೆ ಹೇಳಿ. ಉಪಚಾರ ಮಾಡಿ ಜೀಪ್‌ನಲ್ಲಿ ಕರೆದುಕೊಂಡು ಹೋದರೆ ಕಳ್ಳರನ್ನು ಅವರು ಕರೆದುಕೊಂಡು ಬರುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : 32 ಲಕ್ಷ ರೂಪಾಯಿಗಳಷ್ಟು ಭಾರಿ ಕಳ್ಳತನ ಇದುವರೆಗೂ ಬೆಳಗಾಂ ಜಿಲ್ಲೆಯಲ್ಲಿ ಆಗಿರಲಿಲ್ಲ. ಪೋಲೀಸ್ ಇಲಾಖೆಯವರಿಗೆ ಕಳ್ಳರನ್ನು ಹಿಡಿಯುವುದಕ್ಕೆ ಇಲ್ಲಿಯವರೆಗೆ ಆಗಿಲ್ಲ. ಆದ್ದರಿಂದ ಆದಷ್ಟು ಬೇಗ ಕಳ್ಳರನ್ನು ಹಿಡಿದು ಇನ್ನೊಮ್ಮೆ ಜನರು ಆ ಬ್ಯಾಂಕಿನ ಮೇಲೆ ವಿಶ್ವಾಸ ಮೂಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಕಳ್ಳರನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿ ಎಂದು ಪೋಲೀಸ್ ಅಧಿಕಾರಿಗಳಿಗೆ ತಿಳಿಸೋಣ. ಕಳ್ಳರನ್ನು ಹಿಡಿಯತಕ್ಕಂಥ ಕೆಲಸವನ್ನು ಅವರು ಮಾಡಿಯೇ ಮಾಡುತ್ತಾರೆ. ಏಕೆಂದರೆ ಇದು ಅವರ ಕರ್ತವ್ಯ. ಆದರೆ ಬ್ಯಾಂಕಿನ ಮೇಲೆ ಜನರಿಗೆ ವಿಶ್ವಾಸ ಹೋಗಿದೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈ ವಿಶ್ವಾಸ ಖಂಡಿತ ಹೋಗುವುದಿಲ್ಲ. ಏಕೆಂದರೆ ಆ ಬ್ಯಾಂಕಿನ ಮೇಲೆ ವಿಮೆ ಮಾಡಿರುತ್ತೇವೆ. ಆದ್ದರಿಂದ ವಿಶ್ವಾಸ ಹೋಗತಕ್ಕಂಥ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಲ್ಲಿ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಲಿ ಎಂಬ ಉದ್ದೇಶಕ್ಕೆ ವಿಮೆ ಮಾಡಲಾಗಿದೆಯೇ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ವಿಮೆ ಮಾಡಿದ್ದೇವೆ, ಇದರಿಂದ ಕಳ್ಳತನ ಮಾಡಿಕೊಂಡು ಹೋದರೂ ಸಹ ಏನಾಗುವುದಿಲ್ಲ ಎಂಬ ಅರ್ಥದಲ್ಲಿ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ.

ಶ್ರೀ ವಿ. ಮುನಿಯಪ್ಪ : ಲಾ ಅಂಡ್ ಆರ್ಡರ್ ನಮ್ಮ ರಾಜ್ಯದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸಂಪುಟ ದರ್ಜೆಯ ಮತ್ತು ರಾಜ್ಯ ಸಚಿವರಾದ ಗೃಹ ಮಂತ್ರಿಯವರು ಈ ಸದನದಲ್ಲಿ ಇಲ್ಲ. ಇದು ಬಹಳ ಶೋಚನೀಯ. ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರಬೇಕೆಂದು ಅನೇಕ ಸಲ ವಿರೋಧ ಪಕ್ಷದ ಕಡೆಯಿಂದ ಹೇಳುತ್ತಿದ್ದರೂ ಸಹ ಇವತ್ತಿನ ಪರಿಸ್ಥಿತಿ ನೋಡಿದರೆ ಬಹಳ ಅವಮಾನಕರ ವಿಚಾರವಾಗಿದೆ. ನಾವು ವಿಧಿ ಇಲ್ಲದೇ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ಸಚಿವರು ಇರಲೇ ಬೇಕಾಗಿತ್ತು.

ಛೇರ್ಮನ್ : ಕೆಲವು ಜನ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾಮಾನ್ಯ ಜನರಿಗೆ ಸಂಬಂಧಪಟ್ಟ ಹಾಗೆ ಶಾಂತಿಯುತವಾದ ಅಜಿಟೇಷನ್ ಮಾಡುವ ನಮ್ಮಂಥ ಜನ ಪ್ರತಿನಿಧಿಗಳ ಮೇಲೆ ಸುಮಾರು 10 ರಿಂದ 15 ಸೆಕ್ಷನ್‌ನಷ್ಟು ಕೇಸ್ ಹಾಕಿದ್ದೀರಿ. ಇದರಿಂದ ನೀವು ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದೀರಿ ಎನ್ನತಕ್ಕಂಥಾದ್ದೂ ಸಹ ಗೊತ್ತಾಗುತ್ತಿಲ್ಲ. ಲೂಟಿ, ಹಗಲು ದರೋಡೆ ಮಾಡತಕ್ಕಂಥ ಅನೇಕ ಜನರನ್ನು ನೀವು ಬಿಟ್ಟು ನಮ್ಮಂಥವರನ್ನು ಹಿಡಿದುಕೊಳ್ಳುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವಿಧಾನ ಪರಿಷತ್ತಿನಲ್ಲಿ ಒಂದು ಬಿಲ್ ಇತ್ತು. ಆದ್ದರಿಂದ ನಾನು ಅಲ್ಲಿದ್ದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಬಿಲ್ ಅಲ್ಲಿದ್ದರೂ ಸಹ ದಿಲ್ ಮಾತ್ರ ಇಲ್ಲೇ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೌದು. ದಿಲ್ ಇಲ್ಲಿಯೇ ಇರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಫಾರೆಸ್ಟ್ ಅಥವಾ ಐ.ಪಿ.ಸಿ. ಕೇಸ್‌ಗಳಿಗೆ ಸಂಬಂಧಪಟ್ಟಂತೆ ಸುಮಾರು 7 ರಿಂದ 8 ಸಾವಿರ ಕ್ರಿಮಿನಲ್ ಕೇಸ್‌ಗಳನ್ನು ಈಗ ವಿಥ್‌ಡ್ರಾ ಮಾಡಿಕೊಂಡಿದ್ದೀರಿ. ಬಸ್ ದರ, ಹಾಲಿನ ದರ, ವಿದ್ಯುತ್ ದರ ನೀರಿನ ದರಗಳ ಬಗ್ಗೆ ನಾವು ಹೇಳಿದರೆ ಜನರು ಕೇಳುವುದಿಲ್ಲ. ಆದ್ದರಿಂದ ನೀವೇ ಹೇಳಿ ಎಂದು ಹೇಳುವಂಥ ಸಂದರ್ಭದಲ್ಲಿ ನಮ್ಮಂಥ ಶಾಸಕರು ಪಬ್ಲಿಕ್ ಅಜಿಟೇಷನ್ ಮಾಡುವಾಗ ನೀವೇ ಅನೇಕ ಸಾರಿ ನಮಗೆ ಅಪ್ರೀಷಿಯೇಟ್ ಮಾಡಿದ್ದೀರಿ. ನಿಮ್ಮ ಪರವಾಗಿ ನಿಮ್ಮ ಜನರ ಮತ್ತು ಮತದಾರರ ಪರವಾಗಿ ನಾವು ಹೋರಾಟ ಮಾಡಿದ್ದರಿಂದ ನನ್ನ ಮೇಲೆ ಸುಮಾರು 20 ಸೆಕ್ಷನ್‌ಗಳನ್ನು ಹಾಕಿ 22 ವರ್ಷಗಳ ಕಾಲ ಜೈಲಿಗೆ ಹಾಕತಕ್ಕಂಥ ಪ್ರಯತ್ನ ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಸರ್ಕಾರ ಇರುವಾಗ ನಮ್ಮನ್ನು ಎರಡು ವರ್ಷಗಳ ಕಾಲ ಜೈಲಿಗೆ ಹಾಕಿದ್ದೀರಿ. ಆದರೆ ನಾವು ನಿಮ್ಮನ್ನು 22 ವರ್ಷಗಳ ಕಾಲ ಜೈಲಿಗೆ ಹಾಕುವುದಕ್ಕಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಆ ಸಂದರ್ಭದಲ್ಲಿ ಹೊರಗಡೆ ಇದ್ದಿದ್ದರೆ ಲ್ಯಾಂಡ್ ರಿಫಾರ್ಮ್ಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಇಂಪ್ಲಿಮೆಂಟ್ ಆಗುತ್ತಿರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಲ್ಯಾಂಡ್ ರಿಫಾರ್ಮ್ ಬಗ್ಗೆ ನಿಮಗಿಂತ ಮೊದಲು ಫೈಟ್ ಮಾಡಿದಂಥ ಮಾನ್ಯ ಜೆ.ಹೆಚ್. ಪಟೇಲ್‌ರವರು ಅವರನ್ನೇ ಹಿಡಿದು ಜೈಲಿಗೆ ಹಾಕಿದ್ದೀರಿ. ಈ ಸಂದರ್ಭದಲ್ಲಿ ನನಗೂ ಸಹ ಎರಡು ವರ್ಷ ಜೈಲಿಗೆ ಹಾಕಲಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಮೊದಲು ಬಂದಾಗ ಯಾವರೀತಿ ನುಡಿದಿದ್ದೀರಿ ಮತ್ತು ಈಗ ಯಾವರೀತಿ ನಡೆದುಕೊಂಡಿದ್ದೀರಿ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥ ವಿಚಾರದಲ್ಲಿ ನಮ್ಮ ಸರ್ಕಾರದ ಧೋರಣೆಯನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಸಾರ್ವಜನಿಕ ಹಿತದೃಷ್ಟಿಯಿಂದ ಸುಮಾರು 20 ರಿಂದ 30 ವರ್ಷಗಳ ಕಾಲ ಚಳುವಳಿ, ಹೋರಾಟ ಮತ್ತು ಧರಣಿ, ಸತ್ಯಾಗ್ರಹ ಮಾಡಿ ಇವತ್ತಿನ ದಿವಸ ಇಲ್ಲಿ ಬಂದು ಕುಳಿತುಕೊಂಡಿದ್ದೇವೆ. ಇದೇ ರೀತಿ ವಿರೋಧ ಪಕ್ಷದಲ್ಲಿರತಕ್ಕಂಥ ಅನೇಕ ಜನರು ಹೋರಾಟ ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆ. ಕೆಲವು ಕಾರ್ಮಿಕರು ಮತ್ತು ಕಾರ್ಮಿಕ ಮುಖಂಡರ ಮೇಲೆ ಹಾಕಿರತಕ್ಕಂಥ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಶ್ರೀ ರಾಮರೆಡ್ಡಿಯವರು ಒಂದು ವಾರದ ಹಿಂದೆ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದರು. ನಾನು ಈಗಾಗಲೇ ಸದನದಲ್ಲಿ ಹೇಳಿದಹಾಗೆ ಅವರನ್ನೆಲ್ಲಾ ಕರೆಸಿ ಒಂದು ಸಭೆಯನ್ನು ಮಾಡಿದ್ದೇನೆ. ಎಲ್ಲಿ ಹಿಂಸಾತ್ಮಕ ಕೃತ್ಯಗಳು ನಡೆದಿವೆ ಅಂಥವುಗಳನ್ನು ಬಿಟ್ಟು ಸಾರ್ವಜನಿಕರ ಹಿತಾಸಕ್ತಿಯಿಂದ ನಡೆದಿರತಕ್ಕಂಥ ಚಳುವಳಿಗಳಲ್ಲಿ ಭಾಗವಹಿಸಿದಂಥ ಶಾಸಕರು ಅಥವಾ ಮುಖಂಡರ ಮೇಲೆ ಹಾಕಿರತಕ್ಕಂಥ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಮ್ಮ ಸರ್ಕಾರದ ನಿಲುವಾಗಿದೆ. ಆದ್ದರಿಂದ, ಒಂದು ವೇಳೆ ಆಕಸ್ಮಿಕವಾಗಿ ತಪ್ಪಾಗಿರುವ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಏನೆಂದರೆ ಒಬ್ಬ ಹರಿಜನ ಹೆಣ್ಣುಮಗಳು ನನ್ನ ಹತ್ತಿರ ಬಂದು, 'ನನ್ನ ಗಂಡ ಬಹಳ ತೊಂದರೆ ಕೊಡುತ್ತಿದ್ದಾನೆ, ಆದ್ದರಿಂದ ನನ್ನ ಗಂಡನ ಜೊತೆ ಕಾಂಪ್ರಮೈಸ್ ಮಾಡಿಸಿ, ಇಲ್ಲದಿದ್ದರೆ ಡೌರಿ ಹೆರ್‍ಯಾಸ್‌ಮೆಂಟ್ ಕೇಸನ್ನು ಬುಕ್ ಮಾಡಿ' ಎಂದು ಹೇಳಿದಳು. ನಾನು ಸಂಬಂಧಪಟ್ಟ ಎಸ್.ಪಿ.ಗೆ ಫೋನ್ ಮಾಡಿ ಒಬ್ಬ ಹರಿಜನ ಹೆಣ್ಣು ಮಗಳು ಬರುತ್ತಾಳೆ, ಏನಾದರೂ ವ್ಯವಸ್ಥೆ ಮಾಡಿ ಎಂದು ಹೇಳಿದೆ. ನಂತರ ಈಕೆ ಎಸ್.ಪಿ. ಹತ್ತಿರ ಹೋದಳು. ಸಾಮಾನ್ಯವಾಗಿ ಎಸ್.ಪಿ. ಇಂಥ ಕೇಸ್‌ಗಳನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಎಸ್.ಪಿ.ಯವರು ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಫೋನ್ ಮಾಡಿ ಈಕೆ ಬರುತ್ತಾಳೆ ಎಂದು ಹೇಳಿದರು. ನಂತರ ಆ ಹೆಣ್ಣು ಮಗಳು ಮತ್ತು ಅವರ ಕಡೆಯವರು ಅಲ್ಲಿಗೆ ಹೋಗಿ ಸ್ವಲ್ಪ ಮಾತನಾಡಿದ್ದಾರೆ. ಇವರು ಹೋಂ ಮಿನಿಸ್ಟರ್ ಕಡೆಯಿಂದ ಬಂದಿದ್ದಾರೆಂದು ಗೊತ್ತಿದ್ದರೂ ಸಹ ಅಲ್ಲಿರತಕ್ಕಂಥ ಕಾನ್‌ಸ್ಟೇಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳು ಸೇರಿಕೊಂಡು ಅವರ ಮೇಲೆ ಒಂದು ಪೆಟ್ಟಿ ಕೇಸ್ ಹಾಕಿ 100 ರೂಪಾಯಿಗಳ ದಂಡ ವಸೂಲ್ಮಾಡಿದ್ದಾರೆ. ಇದೊಂದು ಸಿಸ್ಟಮ್, ಇದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಮಾನ್ಯ

ಖರ್ಗೆಯವರ ಮೇಲೆ 20 ರಿಂದ 30 ಕೇಸ್‌ಗಳನ್ನು ಹಾಕಿ 22 ವರ್ಷಗಳ ಕಾಲ ಜೈಲಿಗೆ ಹಾಕುವುದು ಸಾಧ್ಯವೇ? ಇವೆಲ್ಲಾ ಆಗದೇ ಇರತಕ್ಕಂಥ ವಿಚಾರಗಳು. ಎಲ್ಲಿ ಈ ತರಹದ ಅಜಿಟೇಷನ್‌ಗಳಲ್ಲಿ ಭಾಗವಹಿಸಿದಂಥ ಸಂದರ್ಭದಲ್ಲಿ ಬುಕ್ ಮಾಡಿರತಕ್ಕಂಥ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಸ್ ನಂಬರ್ ಮತ್ತು ಸಮನ್ಸ್ ನೋಟೀಸನ್ನು ತಮಗೆ ನಾನು ಕಳುಹಿಸಿಕೊಡುತ್ತೇನೆ. ಮಾನ್ಯ ಜಾಫರ್ ಷರೀಫ್‌ನವರು ಇದರಲ್ಲಿ ಭಾಗವಹಿಸದಿದ್ದರೂ ಸಹ ಅವರ ಮೇಲೆ ಕೇಸ್ ಹಾಕಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೊನೇ ಪಕ್ಷ, ನಮ್ಮ ಸರ್ಕಾರದಲ್ಲಿ ನಿಮಗೆ ಅಪೀಲ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನಾದರೂ ನಾವು ಕೊಟ್ಟಿದ್ದೇವೆ, ಆದರೆ, ನೀವು ನಮ್ಮನ್ನು ಜೈಲಿಗೆ ಹಾಕಿ, ಅಪೀಲ್ ಮಾಡಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ನಮ್ಮನ್ನು ಮೊದಲು ಜೈಲಿಗೆ ಹಾಕಿ, ಆಮೇಲೆ ಏನಾಗುತ್ತದೆಯೋ ನೋಡೋಣ. ಈಗ ನಾನು ಹೇಳುವುದೇನೆಂದರೆ, ಇಂಥವುಗಳನ್ನು ಕಣ್ಣು ಮುಚ್ಚಿ ಮಾಡುವುದಕ್ಕೆ ಹೋಗಬೇಡಿ, ಇದನ್ನು ಯಾವ ಕಾರಣಕ್ಕಾಗಿ ಮಾಡಿದ್ದಾರೆ, ಇದರಲ್ಲಿ ಯಾರು ಇನ್ವಾಲ್ ಆಗಿದ್ದಾರೆ ಎಂಬುದನ್ನು ಮತ್ತು ಘಟನಾವಳಿಗೆ ಹಿನ್ನೆಲೆ ಏನು, ಅಜಿಟೇಷನ್‌ಗೆ ಕಾರಣ ಏನು ಎಂಬುದನ್ನೆಲ್ಲಾ ತಿಳಿದುಕೊಂಡು ಕೇಸ್ ಹಾಕಿದ್ದರೆ ಪರವಾಗಿರಲಿಲ್ಲ. ಡೆಡ್ಲಿ ವೆಪನ್ ಕ್ಯಾರಿ ಮಾಡಿದರು, ಅಸಾಲ್ಟ್ ಮಾಡಿದ್ದಾರೆಂದು ನನ್ನ ಮೇಲೆ ಸುಮಾರು 20 ಸೆಕ್ಷನ್‌ನಷ್ಟು ಕೇಸ್‌ಗಳನ್ನು ಹಾಕಿದ್ದೀರಿ. ನನ್ನ ಮೇಲೆ ಹಾಕಿರತಕ್ಕಂಥ ಎಲ್ಲಾ ಕೇಸ್‌ಗಳನ್ನು ಲೆಕ್ಕ ಮಾಡಿದ್ದಕ್ಕೆ ಒಟ್ಟು 22 ವರ್ಷಗಳ ಕಾಲ ಜೈಲಿಗೆ ಹಾಕಬಹುದು. ಮಾನ್ಯ ದೇವೇಗೌಡರು ಮತ್ತು ಮಾನ್ಯ ಜೆ.ಹೆಚ್. ಪಟೇಲ್‌ರವರು ಹಾಗೂ ನೀವು ಮನಸ್ಸು ಮಾಡಿ ಏನಾದರೂ ಕರಾಮತ್ ಮಾಡಿದರೆ ನಾನು 22 ವರ್ಷ ಜೈಲಿನಲ್ಲಿಯೇ ಇರಬೇಕಾಗುತ್ತದೆ. ನಮ್ಮಂಥವರಿಗೆ ಈ ರೀತಿಯಾದರೆ ಬೇರೆಯವರಿಗೆ ಯಾವ ರೀತಿ ಇರಬಹುದೆಂಬುದನ್ನೂ ಸ್ವಲ್ಪ ಯೋಚನೆ ಮಾಡಿ. ಆದ್ದರಿಂದ, ಪಬ್ಲಿಕ್ ಅಜಿಟೇಷನ್ ಮಾಡತಕ್ಕಂಥ ಹಿನ್ನೆಲೆಯನ್ನು ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 5 ವರ್ಷ ಇವರಿಗೆ ಸತತವಾಗಿ ಅನ್-ಕಂಡಿಷನಲ್ ಆಗಿ ಬೆಂಬಲ ಕೊಟ್ಟವರನ್ನೇ ಇವರು ಬಿಡಲಿಲ್ಲ. ನಿಮ್ಮನ್ನು ಹೇಗೆ ಬಿಡುತ್ತಾರೆ? ಮಾನ್ಯ ಸಿಂಧ್ಯಾರವರು ಕತೆಯನ್ನು ಹೇಳುವುದಾದರೆ ನಾವು ಕೇಳುವುದಕ್ಕೆ ತಯಾರಿದ್ದೇವೆ. ನಾನು 5 ವರ್ಷ ನಿಮಗೆ ಕೈ ಎತ್ತಿದ್ದಕ್ಕೆ ಏನು ಪ್ರತಿಫಲ ಸಿಕ್ಕಿತ್ತೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಗಳು ನನ್ನ ಹತ್ತಿರ ಇದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಮಾನ್ಯ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಹಿಂಸಾಕೃತ್ಯ ನಡೆಸಿದಂಥವರ ಮೇಲೆ ಹಾಕಿರತಕ್ಕಂಥ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ, ಉಳಿದವರುಗಳ ಮೇಲೆ ಹಾಕಿರತಕ್ಕಂಥ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದರು. ಬಾಗೂರು-ನವಿಲೆ

ಕಾಲುವೆ ಬಗ್ಗೆ ಗಲಾಟೆ ಆಯಿತು. ಈ ವಿಷಯದ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆ ಕೂಡ ಆಯಿತು ಮತ್ತು ನಿಮ್ಮ ಮಾನ್ಯ ನೀರಾವರಿ ಸಚಿವರು ಅಲ್ಲಿನ ಪ್ರತಿನಿಧಿಗಳನ್ನು ಕರೆದು ಒಂದು ಸಭೆಯನ್ನೂ ಸಹ ಮಾಡಿದರು. ಕೆಲವು ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಈ ಸಭೆಯಲ್ಲಿ ಹೇಳಲಾಗಿತ್ತು. ಅದು ಆದಮೇಲೆ ಆಯ್ಕೆ ಮಾಡಿ, ಆಯ್ಕೆ ಮಾಡಿ ಇನ್ನೊಂದು 152 ಕೇಸು ಹಾಕಿದ್ದಾರೆ. ಯಾವ ಹಿಂಸಾಕೃತ್ಯದಲ್ಲಿ ತೊಡಗಿದ್ದರು ಅವರು? ಇದರಲ್ಲಿ ಯಾರದ್ದೋ ಚಿತಾವಣೆ ಇರುತ್ತದೆ, ರಾಜಕೀಯವಾಗಿ ಅವರು ಹಾಕಿಸುತ್ತಾರೆ, ಪೋಲೀಸ್‌ನವರು ಕೇಸು ಬುಕ್ ಮಾಡುತ್ತಾರೆ. ಇಷ್ಟೇ ಆಗುತ್ತಿರತಕ್ಕದ್ದು. ಪೋಲೀಸ್‌ನವರಿಗೆ ಕೇಸ್ ಹಾಕಲಿಕ್ಕೆ ಆಸೆ ಇರುತ್ತದೆಯಾ? ಹುಡುಕಿ, ಹುಡುಕಿ ಆಯ್ದು 152 ಜನರ ಮೇಲೆ ಪುನಃ ಕೇಸು ಹಾಕಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಬ್ಬ ಹೆಣ್ಣುಮಗಳ ಮೇಲೆ, ಟ್ರೇಡ್ ಯೂನಿಯನ್ ಲೀಡರ್ ಮೇಲೆ 32 ಕೇಸುಗಳನ್ನು ಹಾಕಿದ್ದಾರೆ. ಆ ಹೆಣ್ಣುಮಗಳು ಏನು ಮಾಡುತ್ತಾರೆ ಸಾರ್? ಜಾಸ್ತಿ ಅಂದರೆ ಒಂದು ಅಜಿಟೇಷನ್ ಮಾಡಿರಬಹುದು, ರಸ್ತೆ ತಡೆ ಚಳುವಳಿ ಮಾಡಿರಬಹುದು. ಒಬ್ಬ ಹೆಣ್ಣುಮಗಳ ಮೇಲೆ 32 ಕೇಸುಗಳು, ಅದು ಸೆಕ್ಷನ್ 307 ಸೇರಿಸಿ ಕೇಸ್ ಹಾಕಿದ್ದಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಒಬ್ಬರಿಗೆ ನಾನು ತಮಿಳಿನಲ್ಲಿ ಬೈದೆ ಎಂದು ನನ್ನ ಮೇಲೆ ಕೇಸ್ ಹಾಕಿದ್ದಾರೆ. ನನಗೆ ತಮಿಳು ಭಾಷೆ ಬರುವುದಿಲ್ಲ. ಅದನ್ನು ಬರೆಯುವುದಕ್ಕೂ ಬರುವುದಿಲ್ಲ. ಪೋಲೀಸ್‌ನವರಿಗೆ ತಮಿಳಿನಲ್ಲಿ ಬೈದೆ ಎಂದು ಆ ಕೇಸು ನಡೆಯುತ್ತಿದೆ. ಇದನ್ನು ಇಲ್ಲಿ ನಾನು ಏಕೆ ಹೇಳುತ್ತಿದ್ದೇನೆಂದರೆ, ನಾವು ಕನ್ನಡಕ್ಕೋಸ್ಕರ ಹೋರಾಟ ಮಾಡಿದವರು. ಕನ್ನಡದಲ್ಲಿ ಬೈದೆ ಅಂದರೆ ಅದನ್ನು ನಂಬಬಹುದು. ಅದು ತಮಿಳಿನಲ್ಲಿ ಬೈದೆ ಎಂದು ಕೇಸ್ ಹಾಕಿದ್ದಾರೆ. ಪೋಲೀಸ್‌ನವನಿಗೆ ತಮಿಳಿನಲ್ಲಿ ಬೈದೆ ಎಂದು ಕೇಸ್ ಹಾಕಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇಲ್ಲ, ಅವನು ತುಳುಭಾಷೆಯ ಪೋಲೀಸ್‌ನವನು ಇರಬೇಕು. ಅದಕ್ಕೆ ಅವನಿಗೆ ಕನ್‌ಫ್ಯೂಸ್ ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಮೇಲೆ ಕ್ರಿಮಿನಲ್‌ಕ್ರೈಮ್ಸ್ ಎಗೆನೆಸ್ಟ್ ವುಮನ್ ಮೊನ್ನೆ ಇದರ ಬಗ್ಗೆ ಶ್ರೀಮತಿ ಪ್ರಮೀಳಾರವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಇದು ಇನ್ನು ವರ್ಷೆ ವರ್ಷೇ ಹೆಚ್ಚಾಗುತ್ತಿದೆಯೇ ಹೊರತಾಗಿ ಕಡಿಮೆಯಾಗುತ್ತಿಲ್ಲ. ಉದಾಹರಣೆಗೆ 1994ರಲ್ಲಿ 3,260 ಕ್ರೈಮ್ಸ್ ಎಗೆನೆಸ್ಟ್ ವುಮನ್, ಆಮೇಲೆ 1998ರಲ್ಲಿ 6,169 ಕ್ರೈಮ್ ಕೇಸುಗಳು ಅಂದರೆ ಮೋರ್ ಆರ್ ಲೆಸ್ .......

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಅಂದರೆ ಅದರ ಅರ್ಥ ಕೇಸುಗಳನ್ನು ಬುಕ್ ಮಾಡುತ್ತಿದ್ದೇವೆ. ಮುಂಚೆ ನೀವು ಕೇಸುಗಳನ್ನು ಬುಕ್ ಮಾಡುತ್ತಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗೆ ಹೇಳಿದರೆ ಹೀಗೆ ಹೇಳುತ್ತೀರಿ. ಈಗ ನೀವೇ ಅಡ್ಡಾಡಿ ಜನರನ್ನು ಕೇಳಿಕೊಂಡು ಬನ್ನಿ. ಈಗ ಜನ ಫಾಸ್ಟ್ ಆಗಿದ್ದಾರೆ. ಮೋಟಾರು ಸೈಕಲ್‌ನಲ್ಲಿ ಅಡ್ಡಾಡುತ್ತಾ ಲೇಡೀಸ್ ಚೈನು ಕಸಿದುಕೊಳ್ಳುತ್ತಾರೆ. ಮೊದಲು ಕದಿಯುತ್ತಿದ್ದರಾ? ಅಂದರೆ ನೀವು ಹೀಗೆ ಹೇಳಿದರೆ,

1983ರಲ್ಲಿ ಮತ್ತು 1986ರಲ್ಲಿ ಮುಚ್ಚಿಟ್ಟಿದ್ದಿರಾ? ಈಗ ಸರಿ. 1984, 1985, 1986 ಮತ್ತು 1987ರಲ್ಲಿ ನಿಮ್ಮ ಸರ್ಕಾರ ಇದ್ದಾಗ ಇದನ್ನು ಮುಚ್ಚಿಟ್ಟಿದ್ದಿರಾ? ಆಗ ಕಡಿಮೆ ಇತ್ತಲ್ಲಾ. 1994ರಲ್ಲಿ ಕಡಿಮೆ ಇತ್ತಲ್ಲಾ ಈಗ ಜಾಸ್ತಿಯಾಗಿದೆ ಎಂದು ನಾವು ಹೇಳಿದರೆ, ಅಂದರೆ ಆಗ ಕೇಸಸ್ ಬುಕ್ ಮಾಡುತ್ತಿರಲಿಲ್ಲ ಎಂದಾಯಿತು. ಇದನ್ನು ಹೇಳಲಿಕ್ಕೆ ಹೋಗಬೇಡಿ. ಈಗ ಏನಾಗಿದೆ ಅಂದರೆ, ಜನ ವೇರಿಯಸ್ ಟೈಪ್ಸ್ ಯೂಸ್ ಮಾಡುತ್ತಾರೆ. ಜನ ಇವತ್ತು ಏನಾಗಿದೆ ಅಂದರೆ ಒಂದು ಕಡೆ ಅನ್‌ಎಂಪ್ಲಾಯಿಮೆಂಟ್ ಹೆಚ್ಚಾಗಿದೆ. ಆಮೇಲೆ ಅನೇಕ ಯುವಕರು ಕೆಲಸ ಇಲ್ಲದೆ ಅಡ್ಡಾಡುತ್ತಿದ್ದಾರೆ. ಇವರೆಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಇಂತಹ ಒಂದು ಚಟುವಟಿಕೆಯಲ್ಲಿ ಇನ್‌ವಾಲ್ವ್ ಆಗುತ್ತಾರೆ. ಅದರ ಜೊತೆಯಲ್ಲಿ ಉಳಿದವು. ಅದು ರೇಪ್ ಇರಬಹುದು ಮೋಲೆಸ್ಟೇಷನ್ ಇರಬಹುದು, ಕಿಡ್ನಾಪಿಂಗ್ ಇರಬಹುದು ಇಂತಹ ಕೇಸಸ್ ಇವೆ. ಅವು ಕೂಡ ನೂರಾರು ಕೇಸಸ್ ಇವೆ. ಮೋಲೆಸ್ಟೇಷನ್ 1335 ಕೇಸಸ್ 1998ರಲ್ಲಿ ಆಗಿವೆ. ಆಮೇಲೆ ರೇಪ್ ಕೇಸಸ್ 233. ಕಿಡ್ನಾಪಿಂಗ್ 132, ಹೀಗೆ ಹೆಣ್ಣುಮಕ್ಕಳ ಮೇಲೆ ಕೂಡ ಇವತ್ತು ಅತ್ಯಾಚಾರ, ದೌರ್ಜನ್ಯ ಹೆಚ್ಚಿನ ರೀತಿಯಲ್ಲಿ ಆಗುತ್ತಿದೆ. ಅದಕ್ಕೆ ಈಗಾಗಲೇ ಶ್ರೀಮತಿ ಪ್ರಮೀಳ ನೇಸರ್ಗಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಈ ಸದನ ಸಮಿತಿ ವರದಿ ಕೊಟ್ಟಿದೆ. ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಇನ್ನೂ ಸಮಾಜದಲ್ಲಿ ಹೆಣ್ಣುಮಕ್ಕಳನ್ನು ತುಚ್ಛ ದೃಷ್ಟಿಯಿಂದ ನೋಡತಕ್ಕದ್ದು ಇದೆ. ಅವರವರ ಜಾತಿಯ ಆಧಾರದ ಮೇಲೆ ಅವರ ಸ್ಟೇಟಸ್ ಇರಬಹುದು. ಆದರೆ ವುಮನ್ ಅಂದರೆ ಅವರನ್ನು ನೋಡತಕ್ಕ ದೃಷ್ಟಿನೇ ಬೇರೆ. ಪುನಃ ಅದರಲ್ಲಿ ವರ್ಗೀಕರಣ ಆದಾಗ ಕ್ಯಾಸ್ಟ್ ಸಿಸ್ಟಂ ಇದ್ದಾಗ ಅದಕ್ಕಂತೂ ಕೇಳಲೇಬೇಡಿ, ಅದು ತೀರಾ ಅತ್ಯಂತ ಅಮಾನವೀಯ. ಹ್ಯೂಮನ್ ರೈಟ್ಸ್ ಕಮೀಷನ್‌ದವರು ಎಲ್ಲಿ ಮಲಗುತ್ತಾರೋ ಗೊತ್ತಿಲ್ಲ. ಅವರು ಸ್ವಲ್ಪ ಹಳ್ಳಿಯಲ್ಲಿ ಹೋದರೆ ಗೊತ್ತಾಗುತ್ತದೆ. ಬರೀ ದೊಡ್ಡ ದೊಡ್ಡವರು ಯಾವುದಾದರೂ ಪಿಟಿಷನ್ ಕೊಟ್ಟರೆ ಹ್ಯೂಮನ್ ರೈಟ್ಸ್ ಎಲ್ಲಿ ವಯಲೆಟ್ ಆಯಿತು, ಅದಾಯಿತು ಎಂದು ಹೇಳುತ್ತಾರೆ. ಅಲ್ಲಿ ಹಳ್ಳಿಯಲ್ಲಿರತಕ್ಕ ಹೋಟೆಲ್‌ಗಳಲ್ಲಿ ಕಪ್ ಅಂಡ್ ಸಾಸರ್ ತೆಗೆಯಲಿಕ್ಕೆ ಅವರು ಹೋಗಿ ನೋಡಿಕೊಂಡು ಬರಬೇಕು. ಅಲ್ಲಿ ಅನ್‌ಟಚ್‌ಬಲಿಟಿ ಕೇಸಸ್ ಬುಕ್ ಮಾಡುವುದಿಲ್ಲ, ಅದನ್ನು ನೋಡಿಕೊಂಡು ಬರಬೇಕು. ಇನ್ನೂ ಅನ್‌ಟಚ್‌ಬಿಲಿಟಿ ಪ್ರಾಕ್ಟೀಸ್ ಮಾಡುತ್ತಾರಲ್ಲಾ ಅಲ್ಲಿಗೆ ಹೋಗಿ ಹ್ಯೂಮನ್ ರೈಟ್ಸ್ ಕಮೀಷನ್‌ದವರು ನೋಡಿಕೊಂಡು ಬರಬೇಕು. ನಿಮ್ಮ ಪೋಲೀಸ್‌ನವರು ಅವರಿಗೆ ಅಂತಹ ಕಡೆ ಕಳುಹಿಸಿ ಸಮಾಜ ಸುಧಾರಣೆ ಮತ್ತು ಸಾಮಾಜಿಕ ನ್ಯಾಯ ಕೊಡತಕ್ಕ ಆ ಕೆಲಸ ಮಾಡುವುದನ್ನು ಬಿಟ್ಟು ಕುಳಿತಲ್ಲಿ ಒಂದು ಕಾನ್ಫರೆನ್ಸ್ ಮಾಡುವುದು, ಮೀಟಿಂಗ್ ಮಾಡಿ ಒಂದು ಬುಕ್ ರಿಲೀಸ್ ಮಾಡಿ ಹ್ಯೂಮನ ರೈಟ್ಸ್ ಕಮೀಷನ್ ಬಗ್ಗೆ ಎಲ್ಲರೂ ಮಾತನಾಡಿದ್ದೇ ಆಡಿದ್ದು. ಇವತ್ತು ಸಮಾಜದಲ್ಲಿ ಮನುಷ್ಯರಂತೆ ಅವರು ಕಾಣುವುದಿಲ್ಲ. ಅದರ ಬಗ್ಗೆ ಚಿಂತನೆಯಿಲ್ಲ. ಯಾರು ಮನುಷ್ಯರಂತೆ ಇದ್ದು ಅವರ ಕೆಲವು ಹಕ್ಕುಗಳು ವಯಲೇಟ್ ಆದರೆ, ಅವನಿಗೆ ಹೊಡೆದಿದ್ದಾರೆ-ಬಡಿದಿದ್ದಾರೆಂದರೆ ಇವತ್ತು ಎಲ್ಲರೂ ಕೇಳುತ್ತಾರೆ. ರಿಯಾಬಿಲಿಟೇಷನ್ ಸೆಂಟರ್, ಎಲ್ಲೋ ಒಂದು ಆಲಮಟ್ಟಿ ಡ್ಯಾಮ್ ಕಟ್ಟುತ್ತೇವೆ ನಾರಾಯಣಪುರ ಡ್ಯಾಮ್, ಅಥವಾ ಮಧ್ಯಪ್ರದೇಶದಲ್ಲಿ ನರ್ಮದಾ ಡ್ಯಾಮ್ ಕಟ್ಟುತ್ತೇವೆಂದರೆ ಅಲ್ಲಿ ಹ್ಯೂಮನ್ ರೈಟ್ಸ್ ವಯಲೆಟ್ ಆಯಿತೆಂದು ಪ್ರೊಸೆಷನ್ ಮಾಡಿದರೆ ದೂರದರ್ಶನದಲ್ಲಿ ತೋರಿಸುತ್ತಾರೆ. ಸಾವಿರಾರು ವರ್ಷದಿಂದ

ಅಲ್ಲೇ ಬಿದ್ದಿದ್ದಾರೆ ಜನರು, ಅವರ ಕಣ್ಣೆದುರಿಗೇ ಓಡಾಡುತ್ತಾರೆ, ಅವರಿಗೆ ಸರ್ವ್ ಮಾಡುತ್ತಾರೆ, ಅವರಿಗೆ ಹ್ಯೂಮನ್ ರೈಟ್ಸ್ ವಯಲೇಟ್ ಆಗಿದೆ ಎಂದು ಹೇಳಿ ಯಾವ ಮುಖಂಡ, ಯಾವ ಜಡ್ಜ್, ಯಾವ ಲೀಡರ್ ಕೂಡ ಇದುವರೆಗೆ ಕೇಳುವ ಹಾಗೆ ಇಲ್ಲ. ಅವರ ಪರ ಮಾತನಾಡುವುದು ಇಲ್ಲ. ಮಾತನಾಡಿದವನಿಗೆ ಕಾರ್ನರ್ ಮಾಡಿ ಬ್ರಾಕೆಟ್ ಮಾಡಿ ಅವನಿಗೆ ದೂರ ಇಡುತ್ತಾರೆ. ಬಹಳ ಮಾತನಾಡುತ್ತಾನೆ, ಅವರ ಪರವಾಗಿ ನಾಳೆ ಅವನಿಗೆ ಅಧಿಕಾರ ಕೊಟ್ಟರೆ ಅವನು ಹಾಗೆಯೇ ಮಾಡುವವನು. ಈ ಸಮಾಜದಲ್ಲಿ ಇಂತಹ ವ್ಯವಸ್ಥೆಯಿದೆ. ಇಲ್ಲಿ ನಾವು ಹ್ಯೂಮನ್‌ರೈಟ್ಸ್ ಬಗ್ಗೆ ಮಾತನಾಡಿದರೆ ಅದು ನಡೆಯುವುದಿಲ್ಲ. ಮನುಷ್ಯನಿಗೆ ಮನುಷ್ಯನೇ ವೈರಿ ಇದ್ದಾನೆ. ಇರುವೆಗೆ ಬೇಕಾದರೆ ಸಕ್ಕರೆ ಹಾಕುತ್ತೇವೆ. ಒಬ್ಬ ಮನುಷ್ಯ ನನಗೆ ನೀರಡಿಕೆಯಾಗಿದೆ ಅಂದರೆ ಅವನಿಗೆ ನೀರು ಕೊಡುವುದಿಲ್ಲ. ಅಂತಹ ಸಮಾಜವನ್ನು ಇಟ್ಟುಕೊಂಡು ನಾವು ಬದುಕಬೇಕಾಗಿದೆ. ಅದನ್ನು ಇಟ್ಟುಕೊಂಡು ನಾವು ಬಾಳಬೇಕಾಗಿದೆ. ಅದಕ್ಕೆ ದಯವಿಟ್ಟು ಕೇಳಿ, ಎಲ್ಲಿಯವರೆಗೆ ಆಡಳಿತದಲ್ಲಿ ಚುರುಕು ಇರುವುದಿಲ್ಲ ವಿಶೇಷವಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಎಸ್‌ಪಿ ಇವರಿಬ್ಬರೂ ಆಕ್ಟೀವ್ ಆಗಿ ಇದ್ದು ಕಮಿಟೆಡ್ ಆಗಿದ್ದರೆ ಮಾತ್ರ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಇಲ್ಲ. ಅದಕ್ಕೆ ದಿವಂಗತ ಮಾನ್ಯ ದೇವರಾಜ ಅರಸ್‌ರವರು ಏನು ಮಾಡುತ್ತಿದ್ದರು ಅಂದರೆ, ಎಲ್ಲಿ ಯಾವ ಜಾತಿಯ ಜನ ಜಾಸ್ತಿ ಇದ್ದಾರೆ ಅಥವಾ ಪ್ರಭಾವಶಾಲಿಗಳು ಇದ್ದಾರೆ ಅಲ್ಲಿ ಆ ಜಾತಿಯ ಜನರನ್ನು ಹಾಕುತ್ತಿರಲಿಲ್ಲ. ಅಸಿಸ್ಟೆಂಟ್ ಕಮೀಷನರ್ ಆಗಲೀ, ಎಸ್‌ಪಿಯವರಾಗಲೀ, ಜಿಲ್ಲಾಧಿಕಾರಿಗಳಾಗಲೀ ಅಂದರೆ ಸೆನ್ಸಿಟಿವ್ ಎಕ್ಸಿಕ್ಯೂಟಿವ್ ಪೋಸ್ಟ್‌ಗಳಲ್ಲಿ ಬದಲಾವಣೆ ಮಾಡುತ್ತಿದ್ದರು. ಎಲ್ಲಿ ಆ ಜಾತಿ ಜನ ಇಲ್ಲ ಅಲ್ಲಿ ಹಾಕುತ್ತಿದ್ದರು. ನಾವು ಎಷ್ಟೇ ಮಾತನಾಡಿದರೂ ಕೂಡ ನಾವೆಲ್ಲರೂ ಕೂಡ ಪ್ರಿಜುಡಿಸಸ್ ವಿತ್‌ಕ್ಯಾಸ್ಟ್ ಸಿಸ್ಟಂ ಎಂದಾಗುತ್ತದೆ. ಅವರು ಅದಕ್ಕಾಗಿ ಬದಲಾವಣೆ ಮಾಡಿದ್ದರು. ನೀವೇನು ಮಾಡಿದ್ದೀರಿ ಸ್ವಾಮಿ? ಸೋಷಿಯಲಿಸ್ಟ್ ವಾದಕ್ಕೆ ಲ್ಯಾಂಡ್ ರಿಫಾರ್ಮ್ಸ್ ಎಂದು ಹೇಳಿದಿರಿ. ಮಾನ್ಯ ಸಿಂಧ್ಯಾರವರು ಸೋಷಿಯಲಿಸಂ ಮತ್ತು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಮಾತನಾಡಿದರು. ಆಡಳಿತದಲ್ಲಿ ಈ ಒಂದು ವ್ಯವಸ್ಥೆಯನ್ನು ತರಲಿಕ್ಕೆ ಸೋಷಿಯಲಿಸ್ಟ್ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ? ನಿಮಗೆ ಆ ಮನಸ್ಸು ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಲ್ಯಾಂಡ್ ರಿಫಾರ್ಮ್ಸ್ ಬಿಲ್ಲನ್ನು ಅಮೆಂಡ್‌ಮೆಂಟ್ ಮಾಡಿಬಿಟ್ಟರು ಈ ಸೋಷಿಯಲಿಸ್ಟ್‌ನವರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳುವುದು ಒಂದು ಮಾಡುವುದು ಇನ್ನೊಂದು. ಈ ರೀತಿಯಾದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಸಮಾಜ ಹಾಗೆ ಆಗಿದೆಯೆಂದು ಹೇಳಿ ಕುಳಿತು ಬಿಡುವುದು. ಹೀಗೆ ತಹಶೀಲ್ದಾರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಯಾರ್‍ಯಾರು ಎಂಎಲ್‌ಎಗಳು ಪ್ರಭಾವ ಬೀರುತ್ತಾರೆ. ಸಾರ್ ಇದನ್ನು ಮಾಡಲಿಲ್ಲವೆಂದರೆ ನಾನು ನಿಮ್ಮನ್ನು ಬಿಟ್ಟುಹೋಗುತ್ತೇನೆಂದರೆ ಅವರು ಹೇಳಿದ್ದೇ ಬರೆಯುವುದು. ಆದರೆ ಒಳ್ಳೆಯವ ಕೆಟ್ಟವ, ಅದನ್ನು ನೋಡಿ ಪರೀಕ್ಷೆ ಮಾಡಿ, ಅದನ್ನು ನಾವು ಬೇಡವೆಂದು ಹೇಳುವುದಿಲ್ಲ. ಅವರಿಗೆ ಬೇಕು ಅಂದಾಗ ಇಲ್ಲಪ್ಪ ಎಂದು ಹೇಳಿ. ಒಂದೊಂದು ಕಡೆ ಹೀಗಿದೆ, ಒಂದೇ ಕಮ್ಯುನಿಟಿಯವರು ಎ ಟು ಜಡ್ ತಹಶೀಲ್ದಾರ್ ಅವನೇ

ಬಿಡಿಓ ಅವನೇ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವನೇ ಪಿಡಬ್ಲ್ಯೂಡಿನಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಅವನೇ ಜ್ಯೂನಿಯರ್ ಇಂಜಿನಿಯರ್ಸ್ ಅವರೇ ಏನು ಬೇರೆ ಜನಾಂಗದವರು ಬದುಕಲೇಬಾರದಾ? ಬೇರೆಯವರಿಗೆ ನೀವು ನ್ಯಾಯ ಕೊಡಬಾರದೇ? ಈ ರೀತಿಯಾದ ಸಮಾಜದಲ್ಲಿ ನೀವು ಸುಧಾರಣೆ ತರುವುದಕ್ಕೆ ಹೇಗೆ ಆಗುತ್ತದೆ? ಒಂದೊಂದು ಸಾರಿ ನಿಷ್ಠೂರ ಆಗಬೇಕಾಗುತ್ತದೆ. ನೀವು ನಿಷ್ಠೂರವಾಗದೇ ಹೋದರೆ ಬೇರೆಯವರಿಗೆ ಸಾಮಾಜಿಕ ನ್ಯಾಯ ಹೇಗೆ ಬರುತ್ತದೆ? ನಾವು ಆಟಕ್ಕೆ ಬೇಕು, ಊಟ ಮಾಡುವುದಕ್ಕೆ ನೀವು. ಲೆಕ್ಕಕ್ಕೆ ಇವರು. ನಿಮಗೆ ಓಟು ಬೇಕಾದಾಗ ಇವರ ಕಡೆಯಿಂದ ತೆಗೆದುಕೊಳ್ಳುವುದು, ಇವರ ಬಗ್ಗೆ ಮಾತನಾಡುವುದು, ಅನುಕಂಪ ತೋರಿಸುವುದು, ಅಧಿಕಾರಕ್ಕೆ ಬಂದ ತಕ್ಷಣ ಅವರವರ ಜಾತಿಯವರಿಗೆ ಮಾಡಿಬಿಡುವುದು. ಯಾರೇ ಇರಲಿ. ಇದು ಬಹಳ ಆಯಿತು. ನೀವು ಶ್ರೀ ದೇವರಾಜ ಅರಸ್‌ರವರ ರೀತಿಯಲ್ಲಿ ನಿಮಗೆ ನಡೆಯಲಿಕ್ಕೆ ಆಗಲಿಲ್ಲ. ಏಕೆಂದರೆ ಕುರ್ಚಿ ಉಳಿಸಲಿಕ್ಕೋಸ್ಕರ ಏನೇನು ಕಸರತ್ತು ಮಾಡಬೇಕು ಅದೇ ದಿನನಿತ್ಯ ನಡೆಯುತ್ತಿದೆ. ಇನ್ನು ಇಂಪ್ಲಿಮೆಂಟ್ ಮಾಡುವುದು, ನೀತಿ, ನಿಯಮ, ತತ್ವ ಎಲ್ಲಿಂದ ಬರುತ್ತದೆ? ಇವತ್ತು ಅಡ್ಮಿನಿಸ್ಟ್ರೇಷನ್‌ನಲ್ಲಿ ಪಂಚಾಯಿತಿ ಸೆಕ್ರೆಟರಿ ಯಾವ ಎಂಎಲ್‌ಎಗಳಿಗೆ ಹೆದರುವುದಿಲ್ಲ. ಏನಾಗಿದೆ ಅಂದರೆ ಜಿಲ್ಲಾಪಂಚಾಯಿತಿಯಲ್ಲಿ ಸ್ಕೂಲ್ ಬಿಲ್ಡಿಂಗ್ ಕಟ್ಟಡ ಕಟ್ಟುವುದು ಇದ್ದರೆ ನೀವು ಮಂತ್ರಿಯಾಗಲಿ ಎಂಎಲ್‌ಎ ಆಗಲಿ ಕೇಳುವಹಾಗೇ ಇಲ್ಲ. ಜಿಲ್ಲಾಪಂಚಾಯಿತಿ ಸದಸ್ಯ ನೇರವಾಗಿ ಚೀಫ್ ಸೆಕ್ರೆಟರಿಗೆ ಹೇಳಿರುತ್ತಾನೆ, ನನ್ನ ಮತಕ್ಷೇತ್ರದಲ್ಲಿ ನಾನು ಎಲ್ಲಿ ಹೇಳುತ್ತೇನೆ ಅಲ್ಲೇ ಸ್ಕೂಲ್ ಬಿಲ್ಡಿಂಗ್ ಕಟ್ಟಬೇಕು. ತಾಲ್ಲೂಕು ಪಂಚಾಯಿತಿಯಲ್ಲಿ 15 ಪರ್ಸೆಂಟ್ ಏನು ಹಣ ಸಿಗುತ್ತದೆ ಅದನ್ನು ತಾಲ್ಲೂಕು ಪಂಚಾಯಿತಿ ಸದಸ್ಯ ಅವನು ಡ್ರೈನೇಜ್, ಮೋರಿ ಅವನಿಗೆ ಎಲ್ಲಿಬೇಕೋ ಅಲ್ಲೆ ಕಟ್ಟಬೇಕು. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕಟ್ಟುವಹಾಗೆ ಇಲ್ಲ. ಅವನಿಗೆ ಬೇಕಾದ ಕಾಂಟ್ರಾಕ್ಟರ್. ಅವನಿಗೆ ಆ ಕಾಂಟ್ರಾಕ್ಟ್ ಕೆಲಸ ಕೊಡಲಿಲ್ಲವೆಂದರೆ ನಿಮ್ಮಲ್ಲಿಗೆ ಬಂದು ದೂರು ಕೊಡುತ್ತಾರೆ. ಏನು ಸಾರ್ ಆ ಜೂನಿಯರ್ ಸರಿಯಿಲ್ಲ, ಸರಿಯಾಗಿ ಮಾಡುವುದಿಲ್ಲ ನಮ್ಮ ಮಾತೇ ಕೇಳುವುದಿಲ್ಲವೆಂದು ಹೇಳುತ್ತಾರೆ. ನೀವು ಅದೆಲ್ಲಾ ನಡೆಯುವುದಿಲ್ಲ ಎಂದು ಕಳುಹಿಸಿದರೆ, ಸಾರ್ ಅವರು ನಮ್ಮ ಪಾರ್ಟಿಯವರು ನಮ್ಮ ಪಾರ್ಟಿ ಸ್ಟ್ರಾಂಗ್ ಆಗಬೇಕಾದರೆ ಆ ಜೂನಿಯರ್ ಇಂಜಿನಿಯರ್ ತೆಗೆಯಲೇ ಬೇಕಾಗುತ್ತದೆಂದು ಹೇಳುತ್ತಾರೆ. ಇದರಿಂದ ಏನಾಗಿದೆ ಅಂದರೆ ನ್ಯಾಯವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಡೆವಲಪ್‌ಮೆಂಟಿನಲ್ಲಿ ಈ ತರಹ ಮಾಡುವುದು. ಕೋಟ್ಯಾಂತರ ರೂಪಾಯಿಗಳ ಹಣ ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಹೋದರೂ ಕೂಡ ಅದರಲ್ಲಿ ಶೇಕಡ 50ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಹಣ ಬರೀ ಕಮೀಷನ್‌ಗೆ ಹೋಗುತ್ತದೆ.

4.50 ಪಿ.ಎಂ.

ಈ ಪಾರ್ಟಿ ಆ ಪಾರ್ಟಿ ಎಂದು ನಾನು ಹೇಳುವುದಿಲ್ಲ. ತಿನ್ನುವವರಿಗೆ ಪಾರ್ಟಿಯೇ ಇಲ್ಲ. ಇವರಿಗೆ ಹಿಡಿತ ಇಲ್ಲ, ಅವರಿಗೆ ಪಾರ್ಟಿ ಇಲ್ಲ. ಹಿಡಿತ ಯಾವಾಗ ಬರುತ್ತದೆ ಎಂದರೆ ಸ್ಟೇಬಲ್ ಸರ್ಕಾರ ಬಂದಾಗ, ಸ್ಥಿರ ಸರ್ಕಾರ ಇದ್ದಾಗ, ಕಮಿಟೆಡ್ ಸರ್ಕಾರ ಇದ್ದಾಗ ಮಾತ್ರ ಇದು ಸಾಧ್ಯ.

ಇವತ್ತು ನಿಮ್ಮ ಕುರ್ಚಿಯೇ ಅಲುಗಾಡುವಾಗ ಇವತ್ತಿನ ದಿವಸ ಹೋದರೆ ಸಾಕು ಎನ್ನುವ ಹಾಗೆ ಆಗಿದೆ. ಯಾವುದಾದರೂ ಒಂದು ರೀತಿಯಿಂದ 'ದಿನ್ ಡಕಲ್ನಾ' ಎಂದು ನಮ್ಮ ಕಡೆ ಹೇಳುತ್ತಾರೆ. 'ದಿನ್‌ಡಕಲೊ' ಎಂದರೆ ದಿನ ಕಳೆಯುವುದು ಎಂದು ಅರ್ಥ. ಹೀಗೆ ನೀವು ದಿನ ಕಳೆಯುತ್ತಿದ್ದೀರೇ ಹೊರತಾಗಿ ಒಂದು ಸ್ವಚ್ಛವಾದಂಥ ಸುಭದ್ರವಾದಂಥ ಸರ್ಕಾರ ಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ. ನಿಮ್ಮ ತತ್ವವನ್ನು, ನಿಮ್ಮ ಹೇಳಿಕೆಯನ್ನು, ನಿಮ್ಮ ಪ್ರಣಾಳಿಕೆಯನ್ನು ಜಾರಿಗೆ ತರುವುದಕ್ಕೆ ನಿಮ್ಮಿಂದ ಆಗಿಲ್ಲ. ಆ ಪರಿಸ್ಥಿತಿ ಇವತ್ತು ಆಗಿದೆ. ಅಂದಮೇಲೆ ಈ ಐದು ವರ್ಷಗಳಲ್ಲಿ ನೀವು ಜನತೆಗೆ ಏನು ಪ್ರಮಾಣವಚನ ಕೊಟ್ಟಿದ್ದೀರಿ, ಅಥವಾ ಏನು ಹೇಳಿಕೊಂಡು ಬಂದಿದ್ದೀರಿ, ನೀವು ಎದೆಯಮೇಲೆ ಕೈಯಿಟ್ಟು ಹೇಳಿ, ಏನು ಕೆಲಸವನ್ನು ಸಾಧನೆಯನ್ನು ನೀವು ಮಾಡಿದ್ದೀರಿ? ನಮ್ಮ ಸಾಧನೆಯನ್ನು ನೋಡಿ ಜನ ಓಟು ಕೊಡುತ್ತಾರೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪಮುಖ್ಯಮಂತ್ರಿಯವರು ಭಾಷಣ ಹೊಡೆದಿದ್ದೇ ಹೊಡೆದಿದ್ದು. ನಿಮ್ಮ ಸಾಧನೆಗಳು ಏನು?

ಶ್ರೀ ಎಸ್.ಎಸ್. ಪಾಟೀಲ್ : ಮುಂದಿನ ಚುನಾವಣೆಯಲ್ಲಿ ನಾವು ಮತ್ತೆ ಗೆದ್ದು ಬರುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚುನಾವಣೆಯಲ್ಲಿ ಅನೇಕ ರೌಡಿಗಳೂ ಗೆದ್ದು ಬಂದಿದ್ದಾರೆ. ಚುನಾವಣೆಯಲ್ಲಿ ಗೆಲ್ಲುವುದು ಮುಖ್ಯ ಅಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ನಿಮ್ಮ ಕಮಿಟ್‌ಮೆಂಟ್ ಬಗ್ಗೆ ಹೇಳುತ್ತಿದ್ದೇನೆ. ನೀವು ಯಾವ ವಾಗ್ದಾನವನ್ನು ಜನರಿಗೆ ಕೊಟ್ಟು ಬಂದಿದ್ದೀರಲ್ಲಾ, ಅದನ್ನು ಆಚರಣೆಗೆ ತರುವುದಕ್ಕೆ ನಿಮಗೆ ಆಗಲಿಲ್ಲ ಎನ್ನತಕ್ಕದ್ದನ್ನು ಹೇಳುತ್ತಿದ್ದೇನೆಯೇ ಹೊರತಾಗಿ ರಾಜಕೀಯ ದೃಷ್ಟಿಯಿಂದ ಅದನ್ನು ಹೇಳುತ್ತಿಲ್ಲ. ರಾಜಕೀಯವಾಗಿ ನಾನು ಅಲ್ಲಿ ಹೋಗಿ ಓಟು ಕೊಡಿ ಎಂದು ಹೇಳುತ್ತೇನೆ ಮತ್ತು ನೀವು ಕೂಡ ಹೇಳಿ. ಜನ ಯಾರಿಗೆ ಓಟು ಕೊಡುತ್ತಾರೋ ನೋಡೋಣ, ಏನು ಕೆಲಸ ಮಾಡಿದ್ದೀರಿ? ಹೊಸ ಗೋಡೌನ್ ಕಟ್ಟಿಸಿದ್ದೀರಾ? ನಾವು ಎಸ್.ಸಿ.ಪಿ. ಹಣ ಕೊಟ್ಟು ಲಕ್ಷಾಂತರ ಜನ ಎಸ್.ಸಿ., ಎಸ್.ಟಿ.ಗಳನ್ನು ಮೆಂಬರ್ಸ್ ಮಾಡಿದ್ದೇವೆ. ಹೀಗೆ ಏನಾದರೂ ಫ್ಲಡ್‌ಗೇಟ್ ಓಪನ್ ಮಾಡಿ ಸಾವಿರಾರು ಜನರಿಗೆ ಸದಸ್ಯರನ್ನಾಗಿ ಮಾಡಿದ್ದೀರಾ? ಒಂದು ಸಂಸ್ಥೆಯಲ್ಲಿ, ಒಬ್ಬ ಅಧ್ಯಕ್ಷರನ್ನು ಮಾಡುವುದಕ್ಕೆ ಆಗಿಲ್ಲ. ಮಾರ್ಕೆಟಿಂಗ್ ಫೆಡರೇಷನ್ನೂ ನೀವೇ, ಕೋಪರೇಟಿವ್ ಫೆಡರೇಷನ್ನೂ ನೀವೇ, ಕನ್‌ಸ್ಯೂಮರ್ಸ್ ಫೆಡರೇಷನ್ನು, ಲ್ಯಾಂಡ್ ಬ್ಯಾಂಕ್ ನೀವೇ. ಯಾವ ಎಸ್.ಸಿ. ಯವರಿಗೆ ಅಲ್ಲಿ ಕೊಟ್ಟಿದ್ದೀರಿ? ಒಂದು ಅಪೆಕ್ಸ್ ಸೊಸೈಟಿಯಲ್ಲಿ ಒಬ್ಬ ವೀಕರ್ ಸೆಕ್ಷನ್‌ನವರನ್ನು ಅಧ್ಯಕ್ಷರನ್ನಾಗಿ ಮಾಡಲಿಕ್ಕೆ ನಿಮ್ಮಿಂದ ಆಗಲಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ : ನೀವು ನಾಮಕರಣ ಮಾಡಿದವರು ಒಬ್ಬರೂ ಇಲ್ಲ ..........

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ನಾಮಿನೇಷನ್‌ಗೆ ಮೊದಲಿನಿಂದಲೂ ಪರವಾಗಿ ಇದ್ದೇನೆ. ಇದರ ಬಗ್ಗೆ ಪರವಾಗಿ ಇದ್ದು ಹೋರಾಟ ಮಾಡಿ 76ನ್ನು ತಂದವರು ನಾವು. ನೀವೇನು ತಂದಿರಿ?

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮ ಕಾಲದಲ್ಲಿ ಏನಿತ್ತು, ನಮ್ಮ ಕಾಲದಲ್ಲಿ ಏನಿದೆ ಎಂಬುದನ್ನು ನೀವೇ ನೋಡಿ. 20 ಸಾವಿರ ಜನರನ್ನು ಬೋರ್ಡಿನಲ್ಲಿ ಎಲೆಕ್ಟೆಡ್ ಮೆಂಬರ್ಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸುಮ್ಮನೆ ಹೇಳಬೇಡಿ. ಒಂದು ಅಪೆಕ್ಸ್ ಸೊಸೈಟಿಗೆ ಒಬ್ಬರನ್ನು ಚೇರ್ಮನ್ ಮಾಡಲಿಕ್ಕೆ ನಿಮಗೆ ಆಗಲಿಲ್ಲ. ಸುಮ್ಮನೆ ಸಾಧನೆ ಬಗ್ಗೆ ಹೇಳುತ್ತಿದ್ದೀರಿ. ನಾಮಿನೇಷನ್ ಮಾಡಿಕೊಂಡು ಎಲ್ಲಾ ಸಾಧನೆ ಮಾಡಿ, ನಿಮಗೆ ಬೇಕಾದವರಿಗೆ ಮಾಡಿ, ಬೀಗರು, ನೆಂಟರಿಗೆ ಮಾಡಿ, ನಿಮ್ಮ ಮಕ್ಕಳಿಗೆ ಮಾಡಿ. ನಾವೇನೂ ಅಡ್ಡಿ ಬರುವುದಿಲ್ಲ. ಜನ ನೋಡಿ ತೀರ್ಮಾನ ಮಾಡುತ್ತಾರೆ. ಈ ರೀತಿಯಾಗಿ ನೀವು ಹೋದರೆ ಸಾಮಾಜಿಕ ನ್ಯಾಯವನ್ನು ಕೊಡುವುದಕ್ಕೆ ಆಗುವುದಿಲ್ಲ. ಆಡಳಿತದಲ್ಲಿ ಎಲ್ಲರೂ ಬೇಕಾಗುತ್ತಾರೆ. ಇದಕ್ಕೆ ಷೇರಿಂಗ್ ಆಫ್ ಪವರ್ಸ್ ಬೇಕು. ಹಾರ್ಟ್ ಬರ್ನಿಂಗ್ ಯಾವಾಗ ಶುರುವಾಗುತ್ತದೆ ಎಂದರೆ ನೀವು ಅತಿಯಾಗಿ ಬ್ಯಾಕ್‌ವರ್ಡ್‌ನವರಿಗೆ ಕೊಟ್ಟರೆ ಬೇರೆಯವರು ಅಜಿಟೇಟ್ ಮಾಡುತ್ತಾರೆ. ಅತಿಯಾಗಿ ಮುಂದುವರೆದಂಥ ಜನಾಂಗದವರಿಗೆ ಕೊಟ್ಟರೆ ಬೇರೆಯವರು ಅಜಿಟೇಟ್ ಮಾಡುತ್ತಾರೆ. ಇದನ್ನು ಸಮತೋಲನ ಮಾಡಬೇಕೇ ಹೊರತು ಇದು ಕೆಲವು ಜನರ ಆಸ್ತಿ ಎಂದು ತಿಳಿದುಕೊಂಡು ಈ ಸಂಪತ್ತನ್ನು ಹಂಚಿಕೊಳ್ಳಿ, 'ಲೂಟೋ ಬಾಟೋ' ಪದ್ಧತಿಯನ್ನು ಶುರು ಮಾಡಿದರೆ ಇದು ಸಾಧ್ಯ ಆಗುವುದಿಲ್ಲ. ಅದಕ್ಕಾಗಿ ದಯಪಿಟ್ಟು ನಾವು ಸ್ವಲ್ಪ ನ್ಯಾಯದ ಸ್ಥಾನದಲ್ಲಿದ್ದಾಗ, ಅಡ್ಮಿನಿಸ್ಟ್ರೇಶಷನ್ ಮಾಡುವಾಗ ನಿಷ್ಪಕ್ಷಪಾತವಾಗಿ ಮಾಡಬೇಕಾಗುತ್ತದೆ. ಅದಕ್ಕೆ ಕೆಲವು ಸಲ ನಿಮಗೆ ತೊಂದರೆ ಬಂದರೂ ಕೂಡ ಸಹಿಸಬೇಕಾಗುತ್ತದೆ. ಆ ಸಹಿಸತಕ್ಕಂಥ ಶಕ್ತಿ ಇದ್ದವರು ಮಾತ್ರ ಬದಲಾವಣೆಗಳನ್ನು, ಒಳ್ಳೆಯ ಯೋಜನೆಗಳನ್ನು ಆಚರಣೆಗೆ ತರುತ್ತಾರೆ. ಅದನ್ನು ಬಿಟ್ಟು ನಾನೇನು ಮಾಡಲಿ, ಅಸಹಾಯಕ ಎಂದು ಹೇಳಿ ಮಾತನಾಡಿದರೆ ಇದು ಸಾಧ್ಯವಿಲ್ಲ. ಅದಕ್ಕಾಗಿ ನಾನು ಮಾನ್ಯ ಸಿಂಧ್ಯಾ ಅವರಿಗೆ ಹೇಳಿದೆ. ಅವರು ಮಾನ್ಯ ಮುಖ್ಯಮಂತ್ರಿಯವರು ನಲವತ್ತು ವರ್ಷ ತತ್ವ ಹೇಳಿದರು. ಆದರೆ ಐದು ವರ್ಷ ಅವಕಾಶ ಸಿಕ್ಕರೂ ಏನೂ ಸಾಧನೆ ಮಾಡುವುದಕ್ಕೆ ಆಗಲಿಲ್ಲ. ಆ ಸೋಷಲಿಸ್ಟ್ ತತ್ವ ಹೇಳಿದ ಒಂದನ್ನೂ ಕೂಡ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಿಲ್ಲ. ಮಾನ್ಯ ದೇವರಾಜ ಅರಸು ಅವರು ಮಾಡಿದಂಥ ತತ್ವಗಳನ್ನೂ ಕೂಡ ರಿಟೇನ್ ಮಾಡುವುದಕ್ಕೂ ಅವರಿಂದ ಆಗಲಿಲ್ಲ. ಅದನ್ನು ಉಳಿಸಿಕೊಳ್ಳುವುದಕ್ಕೂ ಆಗಿಲ್ಲ. ಕೊನೆಗೆ ಇದರಲ್ಲಿ ಮಾನ್ಯ ದೇವೇಗೌಡರು ಸಕ್ಸೀಡ್ ಆದರು. ತಾನು ಕೊನೆಯ ಪಕ್ಷ ನೀರಾವರಿ ಸಲುವಾಗಿ ಮೂರು ನೂರು ಕೋಟಿ ರೂಪಾಯಿಗಳನ್ನು ಶ್ರೀ ರಾಮಕೃಷ್ಣ ಹೆಗಡೆಯವರು ಕೊಡದಿದ್ದರೆ ಕುರ್ಚಿಯನ್ನು ಬಿಟ್ಟು ಬರುವುದಾಗಿ ಹೇಳಿ ಬಂದ ಮನುಷ್ಯ ಎಂದು ಅವರು ಪ್ರಚಾರ ಮಾಡಿಕೊಂಡರು. ಈ ಮಾನ್ಯ ಬೈರೇಗೌಡರು ಹಾಗೂ ಮಾಡಲಿಲ್ಲ. ಕೃಷಿಗೆ ನೀವು ಇಷ್ಟು ಕೋಟಿ ಕೊಡದೇ ಹೋದರೆ ನಾನು ಇಲ್ಲಿ ಒಂದು ಕ್ಷಣವೂ ಇರುವುದಿಲ್ಲ ಎಂದು ಹೇಳಿದ್ದರೆ ನಿಮಗೆ ಗೌರವ ಸಿಗುತ್ತಿತ್ತು ಮತ್ತು ಒಂದು ಚಾನ್ಸ್ ಸಹ ಸಿಗುತ್ತಿತ್ತು. ಆದರೆ ಅದನ್ನೂ ಮಾಡಲಿಲ್ಲ. ನೀವು ಬರೀ ಶ್ರೀ ಜೆ.ಹೆಚ್. ಪಟೇಲರ ಕುರ್ಚಿಯನ್ನು ಭದ್ರ ಮಾಡುವ ಪ್ರಯತ್ನ ಮಾಡಿದಿರೇ ಹೊರತಾಗಿ ..........

ಶ್ರೀ ಸಿ. ಬೈರೇಗೌಡ : ನೀವು ಈ ಸಲಹೆಯನ್ನು ಸ್ವಲ್ಪ ತಡವಾಗಿ ಕೊಡುತ್ತಿದ್ದೀರಿ. ಮೊದಲೇ ಕೊಟ್ಟಿದ್ದರೆ ಆ ಬಗ್ಗೆ ಆಲೋಚನೆಯಾದರೂ ಮಾಡಬಹುದಾಗಿತ್ತು. ಈಗ ಆಲೋಚನೆ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನಮಗೆ ಏನು ಗೊತ್ತಾಯಿತು ಎಂದರೆ ನೀವು ಸಮಾನ ಮನಸ್ಕರ ಸಮಿತಿಯ ಕನ್ವೀನರ್ ಇದ್ದೀರಿ ಎಂದು. ಈಗ ಗೊತ್ತಾದ ಮೇಲೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಿಮ್ಮ ಪಕ್ಕದಲ್ಲಿ ಅಡ್ವೈಸರ್ ಇದ್ದಾರೆ, ಅವರನ್ನೇ ಕೇಳಿ.

ಶ್ರೀ ಬಿ.ಎ. ಮೊಯ್ದೀನ್ : ನಾವು ನೀವು ಇಬ್ಬರೂ ಸಮಾನ ಮನಸ್ಕರಲ್ಲವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೊನೆಯವರೆಗೆ ಈ ಜನತಾದಳದಲ್ಲೇ ಉಳಿಯುವುದು. ಪಾಪ, ಅವರು ಅಲ್ಲಿಯೇ ಉಳಿಯುತ್ತಾರೆಯೇ ಹೊರತು ಹೋಗುವವರು ಅಲ್ಲ. ಮಾನ್ಯ ಸಿಂಧ್ಯಾರವರು ಮಾತ್ರ ನ್ಯೂಟ್ರಲ್ ಪಾತ್ರ ವಹಿಸುತ್ತಾರೆ. ಏಕೆಂದರೆ ಅವರಿಗೆ ಯಾರ್‍ಯಾರು ಕೈಕೊಡುತ್ತಾರೆ ಎಂಬುದು ಗೊತ್ತಿಲ್ಲ. ಫೋರ್ಸಸ್ ಅಲೆಯನ್‌ಮೆಂಟ್ ಎಲ್ಲಾ ಆಗಬೇಕಲ್ಲಾ? ಈ ಅಲೆಯನ್‌ಮೆಂಟ್ ಆದಮೇಲೆ ಅವರು ನಂತರ ನೋಡುತ್ತಾರೆ. ಅವರು ಹೋಮ್ ಮಿನಿಸ್ಟರ್ ಆಗಿರುವುದರಿಂದ ಎಲ್ಲಾ ಮಾಹಿತಿ ಅವರ ಹತ್ತಿರ ಇರುತ್ತದೆ. ಎಲ್ಲೆಲ್ಲಿ ಶಕ್ತಿ ಇದೆಯೆಂದು ನೋಡಿಕೊಂಡು ಕೊನೆಗೆ ಅವರು ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಮಾನ ಮನಸ್ಕರು ನಿಮ್ಮ ಜತೆಯಲ್ಲಿ ಏನಾದರೂ ಮಾತುಕತೆ ಆಡುತ್ತಿದ್ದಾರೇನು? ಇವತ್ತು ಪತ್ರಿಕೆಯಲ್ಲಿ ಕೆಲವರು ನಿಮ್ಮ ಪಕ್ಷದವರ ಜತೆಯಲ್ಲಿ ಮಾತನಾಡುತ್ತಿದ್ದಾರೆ ಎಂದು ಬಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನನಗೆ ಏನು ಹೇಳಿದರು ಎಂದರೆ, ಅವರು ಯಾರೇ, ಇದ್ದರೂ ಕೂಡ ಆ ಸಮಾನ ಮನಸ್ಕರು ಶ್ರೀ ವಾಟಾಳ್ ನಾಗರಾಜ್ ಅವರಿಗೆ ಮೊದಲು ತಿಳಿಸಿಯೇ ಬೇರೆ ಪಕ್ಷಕ್ಕೆ ಹೋಗುತ್ತಾರೆ ಎಂಬುದು ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್ : ಕೆಲವರು ತಮ್ಮನ್ನು ಭೇಟಿ ಮಾಡಿದ್ದು ಸತ್ಯವೇ ಹೇಗೆ? ಅದನ್ನು ತಾವು ಬಹಿರಂಗಪಡಿಸಬಹುದಾದರೆ ಇಲ್ಲಿ ಬಹಿರಂಗ ಪಡಿಸಬಹುದು ಅಂತ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಸದ್ಯಕ್ಕೆ ಬೇಡ ಬಿಡಿ. ಅದಕ್ಕೆ ಈ ಮಹಿಳಾ ದೌರ್ಜನ್ಯದ ಬಗ್ಗೆ ಏನು ಆಗುತ್ತದೆ ಎಂದು ನಾನು ಹೇಳಿದೆ. ಎಸ್.ಸಿ/ಎಸ್.ಟಿ.ಯಲ್ಲಿ ಕೂಡ ಕೆಲವು ಫಾಲ್ಸ್ ಕೇಸಸ್ ಆಗುತ್ತವೆ. ಇಲ್ಲವೆಂದು ನಾನು ಹೇಳುವುದಿಲ್ಲ. ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೋಸ್ಕರ ತಮ್ಮ ಮಾತು ನಡೆಯಬೇಕು ಎಂದು ಹೇಳಿ ದುರುಪಯೋಗ ಕೂಡ ಮಾಡಿಕೊಳ್ಳತಕ್ಕಂಥ ಜನ ಇದ್ದಾರೆ. ಆದರೆ ಜನರು ನೇರವಾಗಿ ಆಡಳಿತಕ್ಕೆ ಸ್ಪಂದಿಸಬೇಕು ಎಂದರೆ ನೀವು ಒಳ್ಳೆಯ ಅಧಿಕಾರಿಗಳನ್ನು ಇಟ್ಟರೆ ಅವರು ನೇರವಾಗಿ ಹೋಗಿ ಅವರಿಗೆ ದೂರು ಕೊಡುತ್ತಾರೆ. ಆದರೆ ಅಲ್ಲಿರತಕ್ಕಂಥ ಅಧಿಕಾರಿ ನಿಷ್ಪಕ್ಷಪಾತವಾಗಿ ನೋಡದೆ ಪಕ್ಷಪಾತ ಮಾಡುತ್ತಾರೆ ಅಥವಾ ಒಂದೇ ಕಡೆ ನೋಡುತ್ತಾರೆ, ಕೆಲವರ ಮಾತು ಕೇಳುತ್ತಾರೆ ಎನ್ನತಕ್ಕಂಥ ಭಾವನೆ ಜನರಲ್ಲಿ ಬಂದರೆ ಅವರು ನೇರವಾಗಿ ಅಧಿಕಾರಿಯ ಹತ್ತಿರ

ಹೋಗುವುದಿಲ್ಲ. ಅನೇಕ ಜನ ಇಂಪಾರ್ಷಿಯಲ್ ಆಫೀಸರ್ಸ್ ಇದ್ದಾರೆ. ಜನ ನೇರವಾಗಿ ಅವರಲ್ಲಿಗೆ ಹೋಗಿ ಲಾಭವನ್ನು ಪಡೆದುಕೊಳ್ಳುವುದಕ್ಕೆ ಭಯಪಡುವುದಿಲ್ಲ. ಆದರೆ ನೀವು ಶಾಸಕರು ಹೇಳಿದ್ದು ಕೇಳದೆ ಅಥವಾ ಜನ ಹಠಹಿಡಿಯುತ್ತಾರೆ ಎಂದು ಹೇಳಿ ಅಂತಹ ಅಧಿಕಾರಿಗಳಿಗೆ ಬದಲು ಬೇರೆಯವರನ್ನು ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ಹಾಕಿದಾಗ ಜನರಿಗೆ ಭಯ ಇರುತ್ತದೆ, ಅಲ್ಲಿ ಹೋದರೆ ನಮಗೆ ನ್ಯಾಯ ಸಿಗುವುದಿಲ್ಲ, ಏಕೆ ಹೋಗೋಣ ಎಂದು ಸುಮ್ಮನೆ ಅವರು ಇರುತ್ತಾರೆ.

(ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಾದರು)

ಕೊನೆಯಪಕ್ಷ ಜನರಲ್ ಅಡ್ಮಿನಿಸ್ಟ್ರೇಷನ್‌ದಲ್ಲಿಯಾದರೂ ಕೂಡ ಈ ವ್ಯವಸ್ಥೆ ಇರಬೇಕು. ಇಂಪಾರ್ಷಿಯಲ್ ಆಗಿ ನಡೆದುಕೊಳ್ಳತಕ್ಕಂಥ, ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಅಧಿಕಾರಿಗಳನ್ನು ಜಿಲ್ಲಾಮಟ್ಟದಲ್ಲಿ ಕೂಡಿಸತಕ್ಕ ವ್ಯವಸ್ಥೆ ಮಾಡಬೇಕು. ಇದಕ್ಕೆ ಕ್ಯಾಸ್ಟ್, ಕಮ್ಯೂನಿಟಿ, ಎಂ.ಎಲ್.ಎ. ಪ್ರಭಾವ, ಇದು ಯಾವುದೂ ದಯವಿಟ್ಟು ಬೇಡ. ಯಾವುದಾದರೂ ಸಣ್ಣಪುಟ್ಟ ಹುದ್ದೆಗಳು ಇದ್ದರೆ ಅದನ್ನು ಕೇಳಿ. ಆದರೆ ದೊಡ್ಡ ದೊಡ್ಡ ಹುದ್ದೆಗಳು ಏನಿವೆ, ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಲಿ, ಚೀಫ್ ಸೆಕ್ರೆಟರಿಗಳಾಗಲೀ, ಎಸ್.ಪಿ.ಗಳಾಗಲೀ ಇಂತಹ ಪೋಸ್ಟ್‌ಗಳಿಂದಲೇ ಜನಸಾಮಾನ್ಯರಿಗೆ ಸಹಾಯವಾಗತಕ್ಕಂಥಾದ್ದು. ಇದನ್ನಾದರೂ ನೀವು ಮಾಡಬೇಕಿತ್ತು. ಇದನ್ನೂ ಕೂಡ ನೀವು ಮಾಡಿಲ್ಲ ಎಂಬ ಮಾತನ್ನು ನಾನು ಹೇಳುತ್ತೇನೆ ಮತ್ತು ತಾಲ್ಲೂಕು ಮಟ್ಟದಿಂದ ಜಿಲ್ಲಾಮಟ್ಟದವರೆಗೆ, ವಿಧಾನಸೌಧ ಮಟ್ಟದವರೆಗೆ ಎಲ್ಲಾ ಆಡಳಿತ ಹದಗೆಟ್ಟಿದೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂತಹ ಉದಾಹರಣೆಯನ್ನು ನಾನು ಪುನಃ ಪುನಃ ಕೊಡಬೇಕಾಗಿಲ್ಲ. ಆಮೇಲೆ ಮಾನ್ಯ ಅಧ್ಯಕ್ಷರೇ, ಸ್ಥಿರ ಸರ್ಕಾರ ಇದ್ದರೆ ಅವರ ಕಾರ್ಯಕ್ರಮಗಳನ್ನು ಆಚರಣೆಗೆ ತರುವುದಕ್ಕೆ ಬರುತ್ತದೆ ಎನ್ನತಕ್ಕಂಥ ಮಾತನ್ನು ತಾವು ಬರುವುದಕ್ಕೆ ಮುಂಚೆ ನಾನು ಹೇಳಿದೆ. ನೀವು ಕೇಳಿಸಿಕೊಂಡಿರೋ ಇಲ್ಲವೋ ಗೊತ್ತಿಲ್ಲ. ಈಗ ಸ್ಥಿರ ಸರ್ಕಾರ ಇದೆಯೇ? ಸರ್ಕಾರ ಸ್ಥಿರವಾಗಿಲ್ಲ. ಇವರ ಸರ್ಕಾರ ಯಾವಾಗಲೂ ಅಲ್ಲಾಡುತ್ತಲೇ ಇರುತ್ತದೆ. ಚೈನೀಸ್ ಡಾಲ್ ಎಂದು ಇದೆಯಲ್ಲಾ ಅದು ಹಾಗೆ ಹೀಗೆ ಅಲ್ಲಾಡುತ್ತದೆ ಆದರೆ ಬೀಳುವುದಿಲ್ಲ. ಹಾಗೆ ಈ ಮಾನ್ಯ ಪಟೇಲರ ಸರ್ಕಾರ ಬೀಳುತ್ತದೆ-ಬೀಳುತ್ತದೆ ಎಂದು ಹೇಳುತ್ತಿದ್ದಂತೆಯೇ ಮತ್ತೆ ಎದ್ದು ಕೂಡುತ್ತದೆ. ಇದರಿಂದ ಏನಾಗಿದೆ ಎಂದರೆ ಆಡಳಿತದಲ್ಲಿ ಕುಸಿತ ಮತ್ತು ಒಬ್ಬರ ಮಾತನ್ನು ಒಬ್ಬರು ಕೇಳುವುದಿಲ್ಲ. ಸೆಕ್ರೆಟರಿಗಳು ಮಂತ್ರಿಗಳ ಮಾತನ್ನು ಕೇಳುವುದಿಲ್ಲ. ಮಂತ್ರಿಗಳು ಸೆಕ್ರೆಟರಿಗಳಿಗೆ ಏನು ಹೇಳಬೇಕು ಎನ್ನುವುದನ್ನು ಕೂಡ ಅರ್ಥಮಾಡಿಕೊಳ್ಳದೆ ಕಚ್ಚಾಟ ಆಡತಕ್ಕಂಥಾದ್ದು, ಒಳಜಗಳ ಮಾಡತಕ್ಕಂಥಾದ್ದು ಇದೆ. ಈ ಒಂದು ದೌರ್ಬಲ್ಯದಿಂದ ಕೂಡಿದಂಥ ಸರ್ಕಾರ ಯಾವುದೇ ಒಂದು ಜನಪರ ಕಾರ್ಯಕ್ರಮವನ್ನು ಹಳ್ಳಿಗಳಿಗೆ ತಲುಪಿಸುವುದರಲ್ಲಿ, ಜಿಲ್ಲೆಗೆ ತಲುಪಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಆಮೇಲೆ ಸಣ್ಣ ಮಂತ್ರಿಮಂಡಲ ಮಾಡುತ್ತೇವೆಂದು ಹೇಳಿಕೊಂಡರು. ಹಿಂದೆ ಮೂರು ಮೂರು ಜನ ಮುಖ್ಯಮಂತ್ರಿಗಳಾಗಿ ಹೋದರು ಎಂದು ಹೇಳಿದರು. ಇವರ ಕಾಲದಲ್ಲಿ ಸುಮಾರು 47-48 ಮಂದಿ ಮಂತ್ರಿಗಳಾಗಿದ್ದಾರೆ. ಸುಮಾರು 18 ಜನ ಎಂ.ಎಲ್.ಎ.ಗಳು ನಿಗಮಗಳಿಗೆ ಅಧ್ಯಕ್ಷರಾಗಿದ್ದಾರೆ. ರಾಜ್ಯಮಂತ್ರಿಗಳ ಸ್ಟೇಟಸ್ ಅವರಿಗೆ ಕೊಟ್ಟಿದ್ದಾರೆ. ಹತ್ತಾರು ಶಾಸಕರು ಇವತ್ತು ಆ ನಿಗಮ, ಈ ನಿಗಮಗಳ ಅಧ್ಯಕ್ಷರಾಗಿದ್ದಾರೆ. ಅಂದರೆ ಇರತಕ್ಕ 112 ಜನರಲ್ಲಿ, ಎಲ್ಲರಿಗೂ

ಕೂಡ ಒಂದೊಂದು ಪೋಸ್ಟ್. ಇದರಲ್ಲಿ ಯಾರಾದರೂ ಏನು ಕೆಲಸವನ್ನಾದರೂ ಮಾಡುತ್ತಾರೆಂದು ನೋಡಿದ್ದೀರಾ? ಎಲ್ಲೆಲ್ಲಿ, ಯಾವ ಯಾವ ನಿಗಮದಲ್ಲಿ ಏನೇನು ಕೆಲಸ ಇದೆ, ಎಷ್ಟು ಹಣ ಇದೆ ಎಂಬುದಾದರೂ ಗೊತ್ತೆ? ನಿಗಮದ ಅಧ್ಯಕ್ಷರು ಯಾರಿರುತ್ತಾರೆ, ಅವರೊಬ್ಬರೇ ಫಲಾನುಭವಿಗಳು. ಆ ನಿಗಮದಿಂದ ಇಷ್ಟು ಜನ ಫಲಾನುಭವಿಗಳನ್ನು ಆರಿಸಿದ್ದೇವೆ, ಎಂಬುದು ಇಲ್ಲ. ಅಲ್ಲಿ ಫಲಾನುಭವಿಗಳು ಯಾರು ಎಂದರೆ, ಅಧ್ಯಕ್ಷರೊಬ್ಬರೇ. ಏನಾದರೂ ನಿಗಮ ಅಥವಾ ಕಮಿಷನ್‌ಗಳನ್ನು ಮಾಡಿದಾಗ ಸಾವಿರಾರು ಜನರಿಗೆ ಸಹಾಯ ಮಾಡುತ್ತೇವೆ, ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಲೋನ್ ಕೊಟ್ಟಿದ್ದೇವೆ ಎಂಬುದು ಯಾವುದೂ ಇಲ್ಲ. ನೀವು ಈ ಐದು ವರ್ಷದ ಆಡಳಿತದಲ್ಲಿ ಏನು ಮಾಡಿದ್ದೀರಿ?

ಅಧ್ಯಕ್ಷರು : ನಮ್ಮಲ್ಲಿ ಬಿ.ಸಿ.ಎಂ ಕಾರ್ಪೊರೇಷನ್‌ಗೆ ಕೊಟ್ಟರು, ಮೈನಾರಿಟೀಸ್‌ಗೆ ಕೊಟ್ಟರು, ಎಸ್‌ಸಿ, ಎಸ್‌ಟಿ ನಿಗಮಗಳಿಗೆ ಕೊಟ್ಟರು.......

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದೆಲ್ಲಾ ಕೊಟ್ಟರು. ಆದರೆ, ಅಲ್ಲಿ ಅಧ್ಯಕ್ಷರೊಬ್ಬರೇ ಫಲಾನುಭವಿಗಳು. ಅದಕ್ಕೆ, ಇವತ್ತು ಇಂತಹ ಒಂದು ಪರಿಸ್ಥಿತಿ, ಇಂತಹ ಒಂದು ಪರಿಸ್ಥಿತಿ, ಇಂತಹ ಒಂದು ಹದಗೆಟ್ಟ ಆಡಳಿತ, ದಿಕ್ಕುತಪ್ಪಿದ ಆಡಳಿತ ಯಂತ್ರವನ್ನು ಇವರ ಹತ್ತಿರ ಇಟ್ಟುಕೊಂಡು ಇವತ್ತು ಯಾವ ಕೆಲಸವನ್ನೂ ಮಾಡುವುದಕ್ಕಾಗುತ್ತಾ ಇಲ್ಲ. ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಹಿಂದೆ ನಮ್ಮನ್ನು ಟೀಕೆ ಮಾಡಿದ್ದೇ ಮಾಡಿದ್ದು. ಮಾನ್ಯ ಸಿಂಧ್ಯರವರೂ ಕೂಡ ಟೀಕೆ ಮಾಡಿದ್ದೇ ಮಾಡಿದ್ದು. ಆದರೆ, ಸುದೈವದಿಂದ ನಮಗೇನಾಗಿದೆ ಎಂದರೆ ಮಾನ್ಯ ಸಿಂಧ್ಯರವರು ಒಬ್ಬರು ಮಾತ್ರ ಆ ಕಡೆ ಉಳಿದುಕೊಂಡಿದ್ದಾರೆ. ಇಬ್ಬರು ವಿರೋಧ ಪಕ್ಷದ ನಾಯಕರುಗಳಾದ ಶ್ರೀ ಚಂದ್ರೇಗೌಡ ಮತ್ತು ಶ್ರೀ ದೇಶಪಾಂಡೆಯವರು ನಮ್ಮ ಕಡೆ ಬಂದಿದ್ದಾರೆ. ಹೆಚ್ಚು ಟೀಕೆ ಮಾಡಿದವರಲ್ಲಿ ಅವರೊಬ್ಬರೇ ಆ ಕಡೆ ಉಳಿದಿದ್ದಾರೆ. ಜೊತೆಗೆ ಶ್ರೀ ಬೈರೇಗೌಡರೂ ಉಳಿದಿದ್ದಾರೆ. ನಾವು ಆ ಕಡೆ ಇದ್ದಾಗ, ಇಲ್ಲಿ ವಿರೋಧ ಪಕ್ಷದಲ್ಲಿದ್ದು ನಮ್ಮನ್ನು ಟೀಕೆ ಮಾಡಿದವರಿಬ್ಬರು ನಮ್ಮ ಕಡೆ ಬಂದಿದ್ದಾರೆ. ಇನ್ನೂ ಒಬ್ಬರು ಉಪ ನಾಯಕರಾಗಿದ್ದವರು ಮತ್ತು ಶ್ರೀ ಬೈರೇಗೌಡರು ಆ ಕಡೆಯೇ ಇದ್ದಾರೆ. ಮತ್ತೆ ನಮ್ಮ ಜೊತೆ ಇದ್ದ ಶ್ರೀ ನಾಗೇಗೌಡರು ಆ ಕಡೆ ಹೋಗಿದ್ದಾರೆ. ನೋಡೋಣ ಇನ್ನೂ ಟೈಮ್ ಇದೆ. ಈಗಲೇ ಅವರ ಮನಸ್ಸನ್ನು ಕೆಡಿಸುವುದು ಬೇಡ. ಅವರದೊಂದು ಸಿಂಡಿಕೇಟ್ ಇದೆ. ಆ ಸಿಂಡಿಕೇಟ್‌ನಲ್ಲಿ ಏನು ತೀರ್ಮಾನವಾಗುತ್ತದೋ ಅದೇ ಈಗ ಇಂಪ್ಲಿಮೆಂಟ್ ಆಗುವುದು. ಇವತ್ತು ಮಾನ್ಯ ಮುಖ್ಯಮಂತ್ರಿಯವರ ಮೇಲೆ ಏನಾದರೂ ಹಿಡಿತ ಇದ್ದರೆ, ಆ ಸಿಂಡಿಕೇಟ್‌ನವರ ಹಿಡಿತ ಇದೆ. ಇಲ್ಲದೇ ಹೋದರೆ ಇದುವರೆಗೆ ಅವರಿಗೂ ಕೂಡ ಬಹಳ ತೊಂದರೆಯಾಗುತ್ತಿತ್ತು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಎಲ್ಲರನ್ನೂ ಫ್ರೀಯಾಗಿ ಬಿಟ್ಟುಬಿಟ್ಟಿದ್ದಾರೆ. ನೀವು ಏನಾದರೂ ಮಾಡಿ, ನಿಮ್ಮ ಮಾತನ್ನು ಕೇಳುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು : ನಿಮ್ಮದು ಏನೇನಾಗಿ, ಏನೇನಾಗುತ್ತದೋ. ನೀವು ಹೇಳಿದ್ದನ್ನೆಲ್ಲಾ ವಾಪಸ್ ನುಂಗಬೇಕಾಗಿ ಬರುತ್ತದೋ, ಏನನ್ನೂ ಹೇಳುವುದಕ್ಕಾಗದೆ ಸುಮ್ಮನಿರಬೇಕಾದ ಸ್ಥಿತಿ ಬರುತ್ತೋ ಏನೋ, ಏಕೆಂದರೆ ನೀವೇ ಹೇಳಿದಹಾಗೆ ನಿಮ್ಮ ಕಡೆ ಅವರು ಬಂದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮದು ಸಮುದ್ರ ಇದ್ದಹಾಗೆ. ಸಮುದ್ರಕ್ಕೆ ಸಣ್ಣ ಹಳ್ಳ, ನದಿಗಳು ಬಂದು ಸೇರುತ್ತವೆಯೇ ಹೊರತಾಗಿ ಅದರದೇ ಐಡೆಂಟಿಫಿಕೇಷನ್ ನಮ್ಮಲ್ಲಿ ಇರುವುದಿಲ್ಲ. ನಮ್ಮಲ್ಲಿ, ಯಾರೂ ಅದನ್ನು ಹೇಳುವುದಿಲ್ಲ. ನಾನು ಕಾವೇರಿ, ನಾನು ಕೃಷ್ಣಾ, ನಾನು ಭೀಮಾ, ನಾನು ಘಟಪ್ರಭಾ, ನಾನು ಮಲಪ್ರಭಾ ಎಂಬುದು ಇಲ್ಲ. ಎಲ್ಲವೂ ಹೋಗಿ ಸಮುದ್ರಕ್ಕೆ ಸೇರುತ್ತವೆ, ಅಲ್ಲಿ ಎಲ್ಲರೂ ಉಪ್ಪು ತಿನ್ನಬೇಕು ಅಷ್ಟೆ.

ಅಧ್ಯಕ್ಷರು : ಡೆಡ್ ಆಗಿದ್ದು ನೀರಿನ ಮೇಲೆ ಫ್ಲೋಟ್ ಆಗುತ್ತೆ.......

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಇಲ್ಲ. ನೀವೂ ಕೂಡ ಹಾಗೆ ಹೇಳುವುದಕ್ಕೆ ಹೋಗಬೇಡಿ. ಅಧ್ಯಕ್ಷರೇ, ಮತ್ತೆ ಕಷ್ಟವಾದೀತು.

ಅಧ್ಯಕ್ಷರು : ನನಗೆ ಯಾವುದೇ ರಿಸರ್ವೇಷನ್ಸ್ ಇಲ್ಲ. ನಾನು ನಿಮ್ಮ ಪಾರ್ಟಿಯ ಮೇಲೆ ಎಲ್ಲಾ ಅಫೆಕ್ಷನ್ ಇರತಕ್ಕಂಥವನು.

ಶ್ರೀ ಸಿ. ಬೈರೇಗೌಡ : ವಿರೋಧ ಪಕ್ಷದ ನಾಯಕರಾಗಿದ್ದ ನಮ್ಮ ಕಡೆಯ ಇಬ್ಬರನ್ನು ನೀವು ತೆಗೆದುಕೊಂಡಿದ್ದೀರಿ. ಮಾನ್ಯ ಚಂದ್ರೇಗೌಡರನ್ನು ತೆಗೆದುಕೊಂಡಿದ್ದೀರಿ, ಶ್ರೀ ದೇಶಪಾಂಡೆಯವರನ್ನು ತೆಗೆದುಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಇಬ್ಬರು ನಾಯಕರಂತೂ ಬಂದಿದ್ದಾರೆ, ಉಪ ನಾಯಕರಾಗಿದ್ದವರು ಮತ್ತು ಪ್ರಮುಖ ನಾಯಕರಾಗಿ ಮಾತನಾಡಿದವರು ಇದ್ದೀರಿ. ಅದಕ್ಕಾಗಿ ನೋಡೋಣವೆಂದು ನಾನು ಹೇಳಿದೆ.

ಅಧ್ಯಕ್ಷರು : ನಾನು ನೀರಿನ ಗುಣದ ಬಗ್ಗೆ ನಿಮಗೆ ಹೇಳಿದ್ದು, ಏನೆಂದರೆ ನೀರಿನಲ್ಲಿ ಡೆಡ್ ಬಾಡೀಸ್ ಫ್ಲೋಟ್ ಆಗುತ್ತದೆ. They come to the surface. Living bodies they continue to swim.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಈಜಾಡುವವರು ಬೇಕಲ್ಲಾ! ಈಜಾಡುವುದಕ್ಕೆ ಬರದೇ ಇರುವವರು ನೀರಿನಲ್ಲಿ ಮುಳುಗಿ ಹೋಗುತ್ತಾರೆ. ಆಮೇಲೆ ಈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿದ್ದೇ ಹೇಳಿದ್ದು. ಮಾನ್ಯ ದೇವೇಗೌಡರನ್ನು ಪ್ರಧಾನ ಮಂತ್ರಿ ಮಾಡಿದರೂ ಅವರು ಇದನ್ನು ಮಾಡಲಿಲ್ಲ. ನಾನು ಜನತಾ ದಳದ ಸರ್ಕಾರದ ಬಗ್ಗೆ ಮಾತನಾಡುತ್ತೇನೆ, ಯಾರ ಬಗ್ಗೆಯೂ ಪ್ರತ್ಯೇಕವಾಗಿ ಮಾತನಾಡುವುದಿಲ್ಲ. ನಾನೇ ಇರಬಹುದು, ಅವರೇ ಇರಬಹುದು. ಈಗ ಶ್ರೀ ನಾಗೇಗೌಡರು ಆ ಕಡೆ ಹೋಗಿದ್ದಾರೆ, 20 ವರ್ಷದ ಅನುಭವವನ್ನು ನಮ್ಮ ಪರವಾಗಿ ಅವರು ಜನರ ಹತ್ತಿರಕ್ಕೆ ತೆಗೆದುಕೊಂಡು ಹೋಗಿ ಮಾತನಾಡುತ್ತಿದ್ದಾರೆ. ಅವರು ಏಕೆ ಮಾತನಾಡುತ್ತಾರೆ? ಅವರು ಮಾತನಾಡುವುದು ಪ್ರತಿಯೊಂದು ಕೂಡ ಈ ಜನತಾ ದಳ 1976-77ರಲ್ಲಿ ಏನು ಹುಟ್ಟಿತ್ತು.

ಅಧ್ಯಕ್ಷರು : ನೀವು ಪಾಲಿಟಿಕ್ಸ್‌ನಲ್ಲಿ ನೋಡಿ, ಅಥವಾ ರಿಲಿಜಿಯನ್‌ನಲ್ಲಿ ನೋಡಿ, ಎಲ್ಲಾದರೂ

ನೋಡಿ ಕನ್‌ವರ್ಟ್ ಯಾವಾಗಲೂ ಬಹಳ ಸ್ಟ್ರಾಂಗ್ ಇರುತ್ತಾರೆ, because it is on the strength of conviction that they convert.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಅವರು ನಮ್ಮ ಪರ ಮಾತನಾಡುವುದಿಲ್ಲ. ಜನತಾದಳದ ಪರವಾಗಿ ಮಾತನಾಡುತ್ತಾರೆ. ಶ್ರೀ ದೇಶಪಾಂಡೆಯವರು ನಮ್ಮ ಕಡೆ ಬಂದ ತಕ್ಷಣವೇ ಸರ್ಕಾರದ ವಿರುದ್ಧ ಮಾತನಾಡುವುದು ಇದೆ. ಅವರು ಏನು ಕೆಲಸ ಮಾಡಿಲ್ಲ. ಅದನ್ನು ಹೇಳದೇ ಇರುವುದಕ್ಕಾಗುತ್ತದೆಯೇ? ಇದನ್ನು ಯಾರೂ ಕೂಡ ಮಾಡಲಿಕ್ಕಾಗಲಿಲ್ಲ. ಏನೆಂದರೆ ಮಾನ್ಯ ಪ್ರಧಾನ ಮಂತ್ರಿ ನಮ್ಮವರಾದರು. ನಮ್ಮಲ್ಲಿ ಶ್ರೀ ಸಿ.ಎಂ. ಇಬ್ರಾಹಿಂ ಮತ್ತು ಈಗ ಶ್ರೀ ಅನಂತ ಕುಮಾರ್ ಈ ಇಬ್ಬರು ಮಂತ್ರಿಗಳು ಆಗಿದ್ದಾರೆ. ಯಾರೂ ಮಂತ್ರಿಗಳಾಗಿ ಬಂದರೂ ಕೂಡ ಆಸಕ್ತಿ ವಹಿಸಿ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಾಡಲಿಲ್ಲ. ಇವತ್ತು ಹೈದರಾಬಾದಿನಲ್ಲಿ ವಿಮಾನ ನಿಲ್ದಾಣವನ್ನು ಕನ್‌ವರ್ಟ್ ಮಾಡಿ, ಎಷ್ಟು ಚೆನ್ನಾಗಿ ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಅಲ್ಲಿಂದ ನೇರವಾಗಿ ದುಬೈಗೆ, ಲಂಡನ್‌ಗೆ ಅಮೇರಿಕಾಕ್ಕೆ ಹೋಗತಕ್ಕಂಥ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅಲ್ಲಿದೆ. ಆದರೆ ಇಲ್ಲಿ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಯಾವ ಆಸಕ್ತಿಯನ್ನೂ ಯಾರೂ ಸಹ ತೋರಿಸುತ್ತಾ ಇಲ್ಲ. ಒಬ್ಬರ ಮೇಲೆ ಒಬ್ಬರು, ಮಾನ್ಯ ದೇವೇಗೌಡರ ಮೇಲೆ ಇಲ್ಲಿನ ಸರ್ಕಾರದವರು ಕುಂಟುನೆಪ ಹಾಕುತ್ತಿರುವುದು, ಇಲ್ಲಿ ಶ್ರೀ ದೇಶಪಾಂಡೆಯವರು ಹೇಳಿದಾಗ ಶ್ರೀ ಇಬ್ರಾಹಿಂರವರು ಒಂದು ಹೇಳಿಕೆ ಕೊಟ್ಟರು. ಈಗ ಶ್ರೀ ಅನಂತಕುಮಾರ್ ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ರೀತಿಯಾಗಿ ನಮ್ಮ ರಾಜ್ಯಕ್ಕೆ ಬರತಕ್ಕಂಥ ಯಾವುದೇ ಯೋಜನೆಗಳನ್ನು ಇವರ ಕಾಲದಲ್ಲಿ ಜಾರಿಗೆ ತರುವುದಕ್ಕಾಗಲಿಲ್ಲ. ಈ ರಾಜ್ಯಕ್ಕೆ ಸಹಾಯ ಕೂಡ ಏನನ್ನೂ ಮಾಡುವುದಕ್ಕಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಸರ್ಕಾರ ಇದೆ. ನಮ್ಮ ಸರ್ಕಾರ ಬಹಳ ದಕ್ಷ ಸರ್ಕಾರ, ಸಾಧನೆ ಮಾಡಿದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ, ಸಣ್ಣ ಪುಟ್ಟ ಇಂತಹ ಸಾಧನೆಯನ್ನು ಮಾಡುವುದಕ್ಕಾಗಲಿಲ್ಲ. ಆದರೆ ಬೇರೆ ರಾಜ್ಯದವರು ಇವತ್ತು ಸಾಧನೆಯನ್ನು ಮಾಡಿ ತೋರಿಸಿದ್ದಾರೆ. ಇನ್ನು ಇವರು ನಮ್ಮದು ಹಗರಣ ಮುಕ್ತ ಸರ್ಕಾರ ಎಂದ ಹೇಳುತ್ತಾರೆ. ಈ ಸದನದ ಸದಸ್ಯರು ಕಂಠೀರವ ಕ್ರೀಡಾಂಗಣದ ಬಗ್ಗೆ ಎಸ್ಟಿಮೇಟ್ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟರು. ಅದಕ್ಕೆ ಸುಮಾರು 376 ಲಕ್ಷ ರೂಪಾಯಿಗಳು ಖರ್ಚಾಗಿದೆ. ಅದರಲ್ಲಿ ಅವ್ಯವಹಾರವಾಗಿದೆ ಎಂದು ಈ ಸದನದ ಸಮಿತಿ, ಎಸ್ಟಿಮೇಟ್ ಕಮಿಟಿಯೇ ವರದಿಯನ್ನು ಕೊಟ್ಟಿದೆ. ಹಾಗಾದರೆ, ಹಗರಣ ಎಂದರೆ ಹೇಗಿರಬೇಕು? ಈ ಸದನದ ಸಮಿತಿಯಾದ ಎಸ್ಟಿಮೇಟ್ ಕಮಿಟಿಗೆ ಕಾನೂನು ಬೆಂಬಲ ಇದೆ. ಈ ಸದನದ ಒಪ್ಪಿಗೆ ಕೊಟ್ಟಂಥ ಕಾನೂನಿನ ಆಧಾರದ ಮೇಲೆ ನಿಯಮಾವಳಿಗಳ ಮೇಲೆ ಒಂದು ಸಮಿತಿ ಆಗುತ್ತದೆ. ಆ ಸಮಿತಿಯವರು ಹೇಳಿದರೂ ಕೂಡ ಅದು ಹಗರಣ ಅಲ್ಲವೆಂದು ಹೇಳಿದರೆ ಮತ್ತೆ ಯಾವುದು ಹಗರಣ? ಆಮೇಲೆ ಇದೇ ರೀತಿಯಾಗಿ ಕೃಷ್ಣಾ ಮೇಲ್ದಂಡೆ ವಿಚಾರದಲ್ಲಿ ಸಿ.ಎ.ಜಿ. ವರದಿ ಇದೆ. ನಾನು ಈ ವಿಚಾರವನ್ನು ಹತ್ತು ಸಾರಿ ಇಲ್ಲಿ ಹೇಳಿದ್ದೇನೆ. ವಿ.ಸಿ. ಕೆನಾಲ್ ಬಗ್ಗೆಯೂ ಹೇಳಿದ್ದೇನೆ. ಇದೆಲ್ಲಾ ಕೂಡ ಇದೆ. ಎಸ್ಟಿಮೇಟ್ ಕಮಿಟಿಯಲ್ಲಿ ಇದರ ಬಗ್ಗೆ ಸಿ.ಬಿ.ಐ ಎನ್‌ಕ್ವೈರಿ ಆಗಲಿ ಎಂದು ಮಾನ್ಯ ವೈಜನಾಥ ಪಾಟೀಲರೇ ಹೇಳಿದ್ದಾರೆ. ಅವರು ನಿಮ್ಮ ಪಕ್ಷದ ಸದಸ್ಯರಿದ್ದು, ಅವರೂ ಕೂಡ ಸಿ.ಬಿ.ಐ. ವಿಚಾರಣೆಯಾಗಬೇಕೆಂದು ಹೇಳಿದರು. ಇದಕ್ಕಿಂತ ಮತ್ತೇನೂ

ಸಾಕ್ಷಿ ಬೇಕು? ಸಿ.ಎ.ಜಿ. ರಿಪೋರ್ಟ್ ಕೊಟ್ಟು ಹೇಳಿದರೂ ಕೂಡ ನೀವು ಅದನ್ನು ಕೇಳುವುದಿಲ್ಲ, ಎಸ್ಟಿಮೇಟ್ ಕಮಿಟಿ ವರದಿಗೂ ಮರ್ಯಾದೆ ಇಲ್ಲ. ಇದು ಹಗರಣ ಅಲ್ಲದಿದ್ದರೆ ಮತ್ತೆ ಯಾವುದು? ನಾನು ಎಂ.ಎಸ್.ಐ.ಎಲ್. ಬಗ್ಗೆ ಎಲ್ಲಾ ವಿವರಗಳನ್ನು ಹೇಳಿದ್ದೆ, ತಾವು ಇರಲಿಲ್ಲ. ಈಗ ಎಂ.ಎಸ್.ಐ.ಎಲ್ ರೂಲ್ಸನ್ನು ತಿದ್ದುಪಡಿ ಮಾಡಿ ಯಾವ ರೀತಿಯಾಗಿ ಪ್ರೈವೇಟ್ ಕಾಂಟ್ರಾಕ್ಟರ್ಸ್‌ಗಳಿಗೆ ಅವಕಾಶ ಮಾಡಿಕೊಟ್ಟರು, ಅವರು ದುಡ್ಡು ಮಾಡುವುದಕ್ಕೆ ಎಂ.ಎಸ್.ಐ.ಎಲ್.ನ ಸೋಲ್ ಏಜೆನ್ಸಿಯನ್ನು ತೆಗೆದು ಹಾಕಿದರು. ಈ ಬಗ್ಗೆ ನಾನು ಮಾನ್ಯ ಬೈರೇಗೌಡರಿಗೆ ಏನು ಹೇಳಬೇಕಾಗಿಲ್ಲ. ಮಾನ್ಯ ಬೈರೇಗೌಡರು ಈ ಕಡೆ ಕುಳಿತಿದ್ದಾಗ ಹೇಳಿದ್ದೇ ಹೇಳಿದ್ದು. ಅವರ ಭಾಷಣ ಯಾವಾಗಲೂ ಮೂರು ವಿಷಯಗಳ ಮೇಲೆ. ಒಂದು ಕೃಷಿ, ಎರಡು ವಿದ್ಯುತ್, ಮೂರನೆಯದು ಎಕ್ಸೈಜ್. ಸೆಕೆಂಡ್ಸ್ ಬಗ್ಗೆ ಈಗ ಅದೆಲ್ಲಾ ನಿಂತು ಹೋಗಿದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಮೊದಲಿನ ಹಾಗೆ ಬೈರೇಗೌಡರಾಗಿ ಇಲ್ಲ. ಈಗ ಬೇರೆ ಬೈರೇಗೌಡರು ಆಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಮೂರನೆಯ ಹಗರಣ. ಅವರು ಇದು ಹಗರಣ ಅಲ್ಲ ಎಂದು ಹೇಳುತ್ತಾರೆ. ಆಮೇಲೆ ಗ್ರಾನೈಟ್ ಬಗ್ಗೆ ವಿಚಾರಣೆ ಮಾಡಲು ಒಂದು ಸದನದ ಸಮಿತಿ ಆಯಿತು. ಅವರು ಕೂಡ ಹೇಳಿದ್ದಾರೆ. ಈ ರೀತಿಯಾಗಿ ಗ್ರಾನೈಟ್ ಎಕ್ಸೈಜ್, ವಿ.ಸಿ. ಕೆನಾಲ್‌ದ್ದು, ಅಪ್ಪರ್ ಕೃಷ್ಣಾದು, ಆಮೇಲೆ ಕಂಠೀರವ ಕ್ರೀಡಾಂಗಣದ್ದು, ಆಮೇಲೆ ಈಗ ಬೆಂಗಳೂರು ಕುಡಿಯುವ ನೀರು. ಬೈವಾಟರ್‌ದ್ದು. ಈ ಯೋಜನೆಗಳು ಹೇಗೆ ಬಂತು? ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದು ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ ಅವರು ಹೇಳಿದರು. ಅದು ಏನೂ ಇಲ್ಲ, ಒಂದು ಮಲೇಷಿಯನ್ ಕಂಪನಿ ಬಂದು, ಅಡ್ಡಾಡುತ್ತಿದ್ದಾರೆ, 1200 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್ ತೆಗೆದುಕೊಂಡು ತಿರುಗಾಡುತ್ತಿದ್ದಾರೆ. ಪ್ರತಿ ಲೀಟರ್‌ಗೆ ಸುಮಾರು 26 ರೂಪಾಯಿಗಳು ಬೀಳತಕ್ಕಂಥ ಪರಿಸ್ಥಿತಿ ಇದೆ. ಇದು ಬೆಂಗಳೂರು ನಾಗರೀಕರ ಮೇಲೆ ದೊಡ್ಡ ಹೊರೆಯಾಗುತ್ತದೆ. ಆದ್ದರಿಂದ ನೀವು ಪ್ರೈವೇಟೈಜೇಷನ್ ಮಾಡುವುದಕ್ಕೆ ಹೋಗಬೇಡಿ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರೇ ಎಕ್ಸ್‌ಪರ್ಟ್ಸ್ ಇದ್ದಾರೆ, ಅವರು ಈಗಾಗಲೇ ಎರಡು ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡಿದ್ದಾರೆ. ಅದೂ ಕೂಡ ಬಹಳ ಕಡಿಮೆ ವೆಚ್ಚದಲ್ಲಿ. ಅಂತಹವರನ್ನು ನೀವು ಬಿಟ್ಟು ಇವತ್ತು ನೀವು ಯಾರನ್ನು ಹೇಳದೇ ಕೇಳದೇ ನೇರವಾಗಿ ಮಲೇಷಿಯನ್ ಕಂಪನಿ ಜೊತೆಯಲ್ಲಿ ಬೈವಾಟರ್ ಜೊತೆಯಲ್ಲಿ ನೀವು ಒಂದು ಹೊಂದಾಣಿಕೆಯನ್ನು ಮಾಡಿಕೊಂಡು, ಮೆಮೋರಾಂಡಂ ಆಫ್ ಅಂಡರ್ ಸ್ಟ್ಯಾಂಡಿಂಗ್ ಮಾಡಿಕೊಂಡು ಅವರಿಗೆ ಈ ಕೆಲಸವನ್ನು ವಹಿಸಿಕೊಡತಕ್ಕಂಥ ಪ್ರಯತ್ನವನ್ನು ಏನು ಮಾಡಿದಿರಿ, ಅದರ ಬಗ್ಗೆ ನಾವು ಇಲ್ಲಿ ಹೋರಾಟ ಮಾಡಿದೆವು. ಅದು ಈಗ ಮುಂದುವರಿದಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ದುರ್ದೈವದ ಸಂಗತಿ. ಬಹುಶಃ ನಾವು ಎಷ್ಟು ಮನವೊಲಿಸುವುದಕ್ಕೆ ಡೀಟೈಲ್ ಆಗಿ ಹೇಳಬೇಕೋ ಅಷ್ಟನ್ನು ಈ ಬೈವಾಟರ್ ಬಗ್ಗೆ ಅಷ್ಟೆಲ್ಲಾ ಹೇಳಿ ಆಯಿತು. ಬೆಂಗಳೂರು ಪ್ರಜೆಗಳ ಮೇಲೆ ವರ್ಷಕ್ಕೆ ಅನಗತ್ಯವಾಗಿ 400 ಕೋಟಿ

ರೂಪಾಯಿಗಳ ತೆರಿಗೆ ಬೀಳುತ್ತಿದೆ. ನಾವೇನೂ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಇಲ್ಲಿ ಅವರು ಹೇಳಿದರು. ಈಗ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಅಧ್ಯಕ್ಷರು, ತರಾತುರಿಯಿಂದ ಆ ಮಲೇಷಿಯನ್ ಕಂಪನಿಯವರನ್ನು ಕರೆಸಿಕೊಂಡು ಬೈವಾಟರ್ ಕಂಪನಿಯವರನ್ನು ಕರೆಸಿಕೊಂಡು ಅವರ ರೂಮ್ ನಂಬರ್ ಬೇಕಾದರೆ ನಾನು ಹೇಳುತ್ತೇನೆ, ತಾವು ಹೋಗಿ ನೋಡಿ, ಹೋಟೆಲ್ ಒಬೇರಾಯ್‌ನಲ್ಲಿ ಒಂದು ಟೀಮ್ ಇದೆ. ವೆಸ್ಟೆಂಡ್ ಹೋಟೆಲ್‌ನಲ್ಲಿ ಇನ್ನೊಂದು ಟೀಮ್ ಇದೆ. ಅವಸರ ಅವಸರವಾಗಿ ಆ ಡೀಲ್ ಮುಗಿಸಬೇಕು, ಈ ಪ್ರಯತ್ನ ಈಗ ನಡೆದಿದೆ. ಇದಕ್ಕೆ ಸಮಾಧಾನ ಹೇಗೆ ಹೇಳುವುದು ಜನಗಳಿಗೆ? ಆ ಪೈಪ್ ಲೆಂಗ್ತ್ ಕಡಿಮೆ ಮಾಡುವುದು, ಅದಕ್ಕೆ ಸ್ವಲ್ಪ ದುಡ್ಡು ಕಟ್ ಮಾಡುವುದು. ಆ ಪವರ್ ಚಾರ್ಜಸ್ ಅದಕ್ಕೊಂದು ಸ್ವಲ್ಪ ದುಡ್ಡು ಕಟ್ ಮಾಡುವುದು. ಹೀಗೆ ಮಾಡಿ ನಾವು ರೆಡ್ಯೂಸ್ ಮಾಡಿದೆವು, 1200 ಕೋಟಿ ರೂಪಾಯಿಗಳಿಗೆ ಎಂದು ಅಂತ. ನೀವು 1200 ಕೋಟಿ ರೂಪಾಯಿಗಳ ಎಸ್ಟಿಮೇಟ್ ಹಾಕಿಸುತ್ತೀರೋ, 10 ಸಾವಿರ ಕೋಟಿ ರೂಪಾಯಿಗಳ ಅಂದಾಜು ಹಾಕಿಸುತ್ತೀರೋ ಅಥವಾ 400 ಕೋಟಿ ರೂಪಾಯಿಗಳಿಗೆ ಹಾಕಿಸುತ್ತೀರೋ ಅದು ಮುಖ್ಯವಲ್ಲ. ಇಲ್ಲಿ ಮುಖ್ಯವಾಗಿರತಕ್ಕಂಥಾದ್ದು ವರ್ಷಕ್ಕೆ ನಾವು ಎಷ್ಟು ಕೋಟಿ ರೂಪಾಯಿಗಳನ್ನು ಅವನಿಗೆ ಕೊಡುತ್ತೇವೆ ಎಂಬುದು. ನಾವು 400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಅದನ್ನು ಫೈನಲೈಸ್ ಮಾಡುವುದಕ್ಕೆ ಆ ಅಧ್ಯಕ್ಷರು ನನಗೆ ಜವಾಬ್ದಾರಿಯುತವಾಗಿರತಕ್ಕಂಥ ಒಬ್ಬ ಬೋರ್ಡ್ ಸದಸ್ಯರು ಕಣ್ಣಲ್ಲಿ ನೀರು ಹಾಕಿಕೊಂಡು ಹೇಳಿದರು ಏನಾದರೂ ಬಿಡುವುದಿಲ್ಲ ಸಾರ್, ಕೆಲವರು ಸರ್ಕಾರದ ಅಧಿಕಾರಿಗಳು ಅಲ್ಲಿ ಹೋಗುವುದಿಲ್ಲ. ಬೋರ್ಡ್ ಮೀಟಿಂಗ್‌ಗೆ ಹೆಚ್.ಯು.ಡಿ. ಸೆಕ್ರೆಟರಿಯವರು ಹೋಗುವುದಿಲ್ಲ. ಫೈನಾನ್ಸ್ ಕಮೀಷನರ್ ಹೋಗುವುದಿಲ್ಲ. ಅಲ್ಲಿರುವವರೆಲ್ಲರೂ ಆತನ ಚೇಲಾಗಳು ಆಗಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಬಿ.ಡಿ.ಎ. ಮಂತ್ರಿಯವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ತರಾತುರಿಯಲ್ಲಿ ಇದು ನಡೆಯುತ್ತಿದೆ. ಆ ವ್ಯವಹಾರ ನಡೆಯುತ್ತಿದೆ. ಇದೆಲ್ಲಾ ಸೇಫ್ ಆಗಿ ಓವರ್‌ಸೀಸ್ ಬ್ಯಾಂಕ್‌ನಲ್ಲಿ ಈ ಕಮೀಷನ್ ಎಲ್ಲಾ ಜಮಾ ಆಗುತ್ತಿದೆ. ಇದು ಇರತಕ್ಕಂಥ ಪರಿಸ್ಥಿತಿ ಇದು ಆದರೆ ಬೆಂಗಳೂರು ಜನರ ಸಮಾಧಿ ಮಾಡಿದಂತೆ ಆಗುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಹೇಳುತ್ತೇನೆ. ನೀವೆಲ್ಲಾ ಹೇಳಬೇಕು ನಿಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ನಮಗೆ ನಿಮ್ಮನ್ನು ಕಂಡರೆ ಹೊಟ್ಟೆಕಿಚ್ಚು ಇಲ್ಲ. ನೀವು ಒಳ್ಳೆಯ ಕೆಲಸ ಮಾಡಿದಾಗ ನಿಮ್ಮನ್ನು ನಾವು ದೂರಿಲ್ಲ. ನಿಮ್ಮನ್ನು ನಾವೆಲ್ಲರೂ ಮೆಚ್ಚಿಕೊಂಡಿದ್ದೇವೆ. ಆದರೆ ಇನ್ನೊಂದು ಅನಾಹುತವನ್ನು ಮಾಡಬೇಡಿ. ಬೆಂಗಳೂರು ಪ್ರಜೆಗಳ ಮೇಲೆ ಸಮಾಧಿ ಕಟ್ಟಬೇಡಿ, ಅವರಿಗೆ ರಕ್ಷಣೆ ಕೊಡಿ. ಇದು ನಿಮ್ಮ ಜವಾಬ್ದಾರಿ ಇದೆ. ತಾವು ಹೋಗುವ ಕೊನೆಯಲ್ಲಿ ಜನಗಳಿಗೆ ಈ ಶಿಕ್ಷೆ ಕೊಟ್ಟು ಹೋಗಬೇಡಿ ಎನ್ನತಕ್ಕಂಥಾದ್ದನ್ನು ಬಾರಿ ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಮಗೆ ಏನಾದರೂ ಅನುಮಾನ ಬಂದರೆ ಬೇಕಾದರೆ ಸದನದ ಒಂದು ಸಮಿತಿಯನ್ನು ಕಳುಹಿಸಿಕೊಡಿ, ಅವರು ಎಲ್ಲಿ ಉಳಿದುಕೊಂಡಿದ್ದಾರೆ, ಅವರ ಹೆಸರು ಎಲ್ಲಾ ಮಾಹಿತಿಯನ್ನು ನಾನು ಕೊಡುತ್ತೇನೆ. ಏಕೆಂದರೆ ನಾನು ಕೋರ್ಟಿನಲ್ಲಿ ಒಂದು ಅಫಿಡವಿಟ್ ಹಾಕಿದ್ದೇನೆ. ಅವರಿಗೆ ಸಮನ್ ಸರ್ವ್ ಮಾಡಬೇಕು. ನಮ್ಮ ಕೈಯಲ್ಲಿಯೇ ಕೊಡಿ, ನಾವು ಅವರ ಅಡ್ರೆಸ್

ತೆಗೆದುಕೊಂಡಿದ್ದೇವೆಂದು ಹೇಳಿ, ಈ ಅಡ್ರೆಸ್‌ನ್ನು ಕೊಟ್ಟಿದ್ದೇವೆ. ಮೊದಲು ಹಾಕಿದಾಗ ಅಲ್ಲಿನ ಅಡ್ರೆಸ್ ಕೊಟ್ಟಿದ್ದೆವು. ಇದೇನೆಂದರೆ ಕೇಸನ್ನು ಪ್ರಿವೆಂಟ್ ಮಾಡಬೇಕು. ಏನಾದರೂ ಮಾಡಿ. ಕೇಸ್ ಹಿಯರಿಂಗ್ ಆಗುವುದರೊಳಗೆ ಕೊಟ್ಟೆವು ಎಂದು ಮಾಡಿಬಿಟ್ಟರೆ, ಆಮೇಲೆ ಏನೂ ಮಾಡುವುದಕ್ಕೆ ಆಗುವುದಿಲ್ಲವಲ್ಲಾ. ಫೇಟ್ ಅಕೆಂಪ್ಲಿ ಮಾಡುವುದು. ದಯವಿಟ್ಟು ಇಂತಹ ಶಿಕ್ಷೆಯನ್ನು ಬೆಂಗಳೂರು ಪ್ರಜೆಗಳಿಗೆ ನೀವು ಕೊಡಬೇಡಿ. ಈ ರಾಜಧಾನಿಯಲ್ಲಿ ನೀವೆಲ್ಲಾ ಆಡಳಿತ ನಡೆಸಿದ ತಪ್ಪಿಗಾಗಿ ಅವರಿಗೆ ಈ ಶಿಕ್ಷೆಯನ್ನು ಕೊಡಬೇಡಿ ಎನ್ನತಕ್ಕಂಥಾದ್ದನ್ನು ಬಾರಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ನೀವೆಲ್ಲಾ ಕುಳಿತುಕೊಂಡು ನಿಮ್ಮ ಮಂತ್ರಿಮಂಡಲ ಒಗ್ಗಟ್ಟಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಈಗ ಮಾನ್ಯ ಖರ್ಗೆಯವರು ಹೇಳುತ್ತಿದ್ದರು, 'ನಿಮ್ಮಲ್ಲಿ ಒಂದು ಸಿಂಡಿಕೇಟ್ ಇದೆ, ಅದರ ಮಾತನ್ನು ಬಹಳ ಚೆನ್ನಾಗಿ ಕೇಳುತ್ತಾರೆಂದು, ಮಾನ್ಯ ದೇವೇಗೌಡರ ಮೇಲಿನ ಸಿಟ್ಟಿಗಾಗಿ ಆದರೂ ಇವತ್ತು ಅವರು ನಿಮ್ಮ ಮಾತು ಕೇಳಬೇಕಾಗಿದೆ. ಅವರು ಅಧಿಕಾರದಲ್ಲಿ ಉಳಿದುಕೊಳ್ಳುವುದಕ್ಕೆ ದಯವಿಟ್ಟು ಇದೊಂದು ಸಾಧನೆ ಮಾಡಿ, ಬೇಕಾದರೆ ನಾವು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಬೆಂಗಳೂರು ಜನರೂ ಸಹ ನಿಮಗೆ ಕೃತಜ್ಞತೆಗಳನ್ನರ್ಪಿಸುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ನೀವು ಏನು ಅಂತೀರಿ. ಇದು ಹಗರಣ ಅಂತೀರೋ ಅಥವಾ ಏನು ಅಂತೀರಿ?

ಶ್ರೀ ಹೆಚ್.ಎನ್. ನಂಜೇಗೌಡ : ಇದು ಹಗರಣ ಅಂದರೆ ವರ್ಷಂಪ್ರತಿ 30 ಪರ್ಸೆಂಟ್ ಕಮೀಷನ್ ಹೊಡೆಯುವ ಹಗರಣ. ಅಡ್ವಾನ್ಸ್ ತೆಗೆದುಕೊಳ್ಳುತ್ತಾರೆ. ಜೊತೆಗೆ ವಾರ್ಷಿಕ ಪೇಮೆಂಟ್ ಇರುತ್ತದೆ. ಮಂತ್ಲಿ ಮಂತ್ಲಿ ಅವನಿಗೆ ಎಷ್ಟು ಹಣ ಕೊಟ್ಟರೆ ಅದರಲ್ಲಿ ಇಷ್ಟು ಪರ್ಸೆಂಟ್ ಎಂದು ಕಮೀಷನ್ ಜಮಾ ಆಗುತ್ತಾ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ತರಹ ನಾನು ಲಿಸ್ಟ್ ಮಾಡಿಕೊಳ್ಳುತ್ತಾ ಹೋಗಬಹುದು. ಇವರು ಪ್ರಗತಿಪರವಾದಂತಹ ಕಾನೂನಿಗಳಿಗೂ ಕೂಡ ತಿಲಾಂಜಲಿ ಕೊಟ್ಟರು. ಭೂ ಸುಧಾರಣೆ ಕಾನೂನು ಹೋಯಿತು. ಮೊನ್ನೆ ಅರ್ಬನ್ ಲ್ಯಾಂಡ್ ಸೀಲಿಂಗ್ ಬಗ್ಗೆ ಮಾತನಾಡುವಾಗಲೂ ಕೂಡ ಕೇಂದ್ರ ಸರ್ಕಾರ ರಿಪೀಲ್ ಮಾಡಿದ್ದಾರೆ, ಅದಕ್ಕೆ ನಾವೂ ರಿಪೀಲ್ ಮಾಡುತ್ತೇವೆ ಎನ್ನತಕ್ಕಂಥಾದ್ದು, ಮೂರನೆಯದು ಈ ರೆಗ್ಯುಲೇಟರಿ ಕಮೀಷನ್‌ಗೂ ಸಹ ಒಪ್ಪಿಗೆಯನ್ನು ಕೊಟ್ಟು ಪ್ರೈವೇಟೈಜೇಷನ್ ಮಾಡತಕ್ಕಂಥಾದ್ದರ ಬಗ್ಗೆ ಅವರು ಹೇಳಿದ್ದಾರೆ. ಈ ಕೆ.ಇ.ಬಿ.ಗೆ ಯಾವುದೂ ಇಲ್ಲ. ಯಾವ ಯಾವ ಕಾನೂನುಗಳು ಜನರ ಪರ ಇರತಕ್ಕಂಥಾದ್ದು ಇದೆ, ಅವುಗಳನ್ನು ತಿದ್ದುಪಡಿ ಮಾಡಿ ಶ್ರೀಮಂತರಿಗೆ ಸಹಾಯ ಮಾಡತಕ್ಕಂಥ ಕಾನೂನು ತರುತ್ತಿದ್ದೀರೇ ಹೊರತಾಗಿ ಬಡವರಿಗೆ ಯಾರಿಗೂ ಸಹಾಯ ಮಾಡತಕ್ಕಂಥಾದ್ದು ತಾವು ಕಾಣುತ್ತಿಲ್ಲ. ಅದಕ್ಕೆ ನೀವು ಹೇಳಿಕೊಂಡಿರಿ, ನಾನು ಪ್ರಾರಂಭದಲ್ಲಿಯೇ ಹೇಳಿದೆ. ಜನತಾ ದಳದ ಬಹಳ ಪ್ರಾಮುಖ್ಯವಾದ ಒಂದು ಡಾಕ್ಯುಮೆಂಟ್, ಇದರ ಪ್ರಕಾರ ನಡೆದುಕೊಳ್ಳುತ್ತೇವೆ ಎಂದು ಹೇಳಿದರು. 'ಕೃಷ್ಣಾ, ಕಾವೇರಿ ಮೇಲಾಣೆ ನಮ್ಮ ಸಾಧನೆಗಳಿಗೆ ನಿಮ್ಮ ಮನ್ನಣೆ' ಎಂದು ಹೇಳಿ ಓಟು ಕೇಳಿದರು. ಕರ್ನಾಟಕ ನವನಿರ್ಮಾಣ ನಮ್ಮ ಸಾಧನೆಗಳೇ ಪ್ರಮಾಣ

ಎಂದು ಹೇಳಿದರು. ಇದು ಇವರ ಸಾಧನೆಗಳು. ವಿದ್ಯುತ್ ದರ ಏರಿಸಿದ್ದು ಒಂದು ಸಾಧನೆ. ಬಸ್ಸಿನ ದರ ಏರಿಸಿದ್ದು ಸಹ ಒಂದು ಸಾಧನೆ. ನೀರಿನ ದರ ಏರಿಸಿದ್ದು ಸಹ ಒಂದು ಸಾಧನೆ. ಹಾಲಿನ ದರ ಏರಿಸಿದ್ದು ಸಹ ಒಂದು ಸಾಧನೆ. ಬೈವಾಟರ್ ಅಂತಹ ಯೋಜನೆಗಳನ್ನು ತರುವುದು ಸಾಧನೆಯೇ. ಲ್ಯಾಂಡ್ ರಿಫಾರ್ಮ್ಸ್‌ನ್ನು ತಿರುಚು ಮುರುಚು ಮಾಡಿದ್ದೂ ಸಹ ಸಾಧನೆ. ಇವೆಲ್ಲಾ ಸಾಧನೆ ಲೆಕ್ಕದಲ್ಲಿಯೇ ಬರುತ್ತವೆ. ಅಪ್ಪರ್ ಕೃಷ್ಣಾದಲ್ಲಿ ಎಕ್ಸಸ್ ಪೇಮೆಂಟ್ ಮಾಡಿದ್ದೂ ಸಹ ಒಂದು ಸಾಧನೆ. ಕಂಠೀರವ ಕ್ರೀಡಾಂಗಣದಲ್ಲಿ ಎಕ್ಸಸ್ ಪೇಮೆಂಟ್ ಮಾಡಿ ಬೇಕಾದವರಿಗೆ ಕಂಟ್ರಾಕ್ಟ್ ಕೊಟ್ಟಿದ್ದೂ ಸಹ ಸಾಧನೆ. ಇವೆಲ್ಲಾ ಈ ಸಾಧನೆಗಳ ಲಿಸ್ಟ್‌ನಲ್ಲಿ ಬರುತ್ತವೆ ಅಂದರೆ ಇದನ್ನು ನೋಡಿ ಜನ ತಿಳಿದುಕೊಳ್ಳಬೇಕು. ಅದಕ್ಕೆ ಮಾನ್ಯ ಅಧ್ಯಕ್ಷರೇ, ನುಡಿದಂತೆ ನಡೆಯುತ್ತೇವೆಂದು ಸಾರಿಕೊಂಡು ನಾಡಿನ ಜನತೆಗೆ ಸಮೃದ್ಧ ಸ್ವಾಭಿಮಾನಿ, ಸ್ವಾವಲಂಬಿ, ನವ ಕರ್ನಾಟಕದ ನಿರ್ಮಾಣ ಮಾಡುತ್ತೇವೆಂದು ಭರವಸೆ ನೀಡಿ ತಮ್ಮ ಸಾಧನೆಗಳಿಗೆ ಕೃಷ್ಣಾ ಕಾವೇರಿಯ ಆಣೆ ಇಟ್ಟುಕೊಂಡು ಇವರು ಡಿಸೆಂಬರ್ 11-1994ರಂದು ಅಧಿಕಾರಕ್ಕೆ ಬಂದರು. ಆದರೆ ಇವರು ನುಡಿದಂತೆ ನಡೆಯಲಿಲ್ಲ. ನಮ್ಮ ಮಾನ್ಯ ಸಹಕಾರಿ ಸಚಿವರು ಎಲ್ಲೋ ಹೊರಗಡೆ ನಾಮಿನೇಷನ್ ಮಾಡುವುದಕ್ಕೆ ಹೋದರು. ಆದರೆ ಇವರು ನುಡಿದಿದ್ದು ಒಂದಾದರೆ ನಡೆದಿದ್ದು ಇನ್ನೊಂದು. ಹದಗೆಟ್ಟ ಕಾನೂನು ಸುವ್ಯವಸ್ಥೆ, ಮಿತಿಮೀರಿದ ಭ್ರಷ್ಟಾಚಾರ ದಿಕ್ಕೆಟ್ಟ ಆಡಳಿತ. ಗಜಗಾತ್ರದ ಮಂತ್ರಿಮಂಡಲ. ಕೆಲಸವೇ ಇಲ್ಲದ ಮಂತ್ರಿಗಳು. ಒಬ್ಬರಿಗೆ ಖಾತೆಯೇ ಇಲ್ಲ. ಮೊನ್ನೆ ನೀವು ಅಂದಿರಿ ಪಾಪ ಶ್ರೀ ಅನಂತನಾಗ್ ಅವರು ಬೇಡಿಕೆಗಳನ್ನು ಇಲ್ಲಿ ಮಂಡಿಸಲೇ ಇಲ್ಲ. ಇವತ್ತು ಇದೇ ರೀತಿಯಾಗಿ ಅಭಿವೃದ್ಧಿ ಕೆಲಸಗಳು ನಿಂತುಹೋಗಿವೆ. ಇಲ್ಲಿ ಸರ್ಕಾರ ನಿದ್ರೆ ಮಾಡುತ್ತಿದೆ. ರೈತರಿಗೆ ಎಷ್ಟು ದ್ರೋಹ ಮಾಡಬೇಕೋ ಅಷ್ಟೂ ದ್ರೋಹ ಮಾಡಿದ್ದಾರೆ. ಆದರೂ ಕೂಡ ನಾವೇ ಕೆಲಸ ಮಾಡಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಈ ವಿಧಾನ ಸಭೆಯಲ್ಲಿಯೇ ಅವರು ಕಳೆದ ಒಂದೂವರೆ ವರ್ಷದಲ್ಲಿ ಕೊಟ್ಟಂತಹ ಭರವಸೆಗಳನ್ನು ನೋಡಿದರೆ ನಿಮ್ಮ ಭರವಸೆ ಸಮಿತಿಯಲ್ಲಿಯೇ ಸುಮಾರು 350 ಇದೆ. ಅದರಲ್ಲಿ ಒಂದು 10 ಭರವಸೆಗಳೂ ಸಹ ಈಡೇರಿಸಿಲ್ಲ. ಇವೆಲ್ಲವುಗಳನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡರೆ ನೂರಾರು, ಸಾವಿರಾರು ಭರವಸೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಒಂದನ್ನೂ ಸಹ ಸರಿಯಾಗಿ ಈಡೇರಿಸುವುದಕ್ಕೆ ಆಗಿಲ್ಲ. ಜಿಲ್ಲಾಮಟ್ಟದಲ್ಲಿ ಮೀಟಿಂಗ್ ಮಾಡಿ ಅಲ್ಲಿ ಏನು ಆಡಳಿತ ನಡೆಯುತ್ತಿದೆ ಎಂದು ನೋಡುವ ಪರಿಪಾಠ ಇಲ್ಲ. ಅದು 20 ಅಂಶಗಳ ಕಾರ್ಯಕ್ರಮ ಇರಬಹುದು, ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂ ರಿವ್ಯೂ ಮಾಡತಕ್ಕಂಥ ಕೆಲಸ ಇರಬಹುದು.

5.20 ಪಿ.ಎಂ.

ಖಂಡಿತವಾಗಿ ಜನ ಬರುವ ಚುನಾವಣೆಯಲ್ಲಿ ಇವರಿಗೆ ಪಾಠ ಕಲಿಸುತ್ತಾರೆ. ಶ್ರೀ ಎಂ.ಎಸ್. ಪಾಟೀಲರು ಸಹಕಾರಿ ಇಲಾಖೆಯಿಂದ ಅದನ್ನು ಹೇಗೆ ಚೈತನ್ಯಶೀಲ ಮಾಡಬೇಕೆಂದು ಅವರ ಪ್ರೈವೇಟ್ ಸೆಕ್ರೆಟರಿ , ಸೆಕ್ರೆಟರಿ ಆಮೇಲೆ ಪ್ರೆಸಿಡೆಂಟ್ಸ್ ಎಲ್ಲಾ ಯೂರೋಪಿಯನ್ ರಾಷ್ಟ್ರಗಳಿಗೆ ಟೂರ್ ಹೋಗಿದ್ದರು. ಅಲ್ಲಿಂದ ಏನೇನು ತೆಗೆದುಕೊಂಡು ಬರುತ್ತಾರೋ ಗೊತ್ತಿಲ್ಲ. ಅಲ್ಲೂ ನಾಮಿನೇಷನ್ ಮಾಡಬೇಕೆಂದು ಹೇಳಿ ಬರುತ್ತಾರೋ ಗೊತ್ತಿಲ್ಲ. ಇಂತಹ ಕೆಟ್ಟ ಸರ್ಕಾರವನ್ನು ನಾವಂತೂ ಎಂದಿಗೂ ನೋಡಿಲ್ಲ. ಇವರಿಗೆ ಆಡಳಿತದಲ್ಲಿ ಆಸಕ್ತಿನೂ ಇಲ್ಲ, ತತ್ವದ ಮೇಲೆ ನಿಷ್ಠೇನೂ ಇಲ್ಲ. ಅವರ ಪ್ರಣಾಳಿಕೆಯನ್ನು

ಆಚರಣೆಗೆ ತರಬೇಕೆಂಬ ಆತ್ಮವಿಶ್ವಾಸ ನಂಬಿಕೆ ಅವರಿಗಿಲ್ಲ. ಒಳ್ಳೆಯ ಆಡಳಿತ ಕೊಡಬೇಕೆಂಬ ಕಳಕಳಿ ಇಲ್ಲ. ಇಷ್ಟೊಂದು ಗಂಭೀರ ವಿಚಾರಗಳನ್ನು ನಾವು ಇಲ್ಲಿ ಇಟ್ಟರೂ ಅದನ್ನು ಕೇಳಬೇಕೆಂಬ ಸೌಜನ್ಯ ಮಾನ್ಯ ಮುಖ್ಯಮಂತ್ರಿಗಳಿಗೂ ಇಲ್ಲ, ಮಾನ್ಯ ಉಪಮುಖ್ಯಮಂತ್ರಿಗಳಿಗೂ ಇಲ್ಲ, ಈ ಡಿಮ್ಯಾಂಡನ್ನು ಮಂಡಿಸಿದ ಅನೇಕ ಸಚಿವರಿಗೂ ಇಲ್ಲ. ಇಂಥವರಿಗೆ ಜನ ಶಿಕ್ಷೆ ಕೊಡುತ್ತಾರೆ. ಪುನಃ ಅವರು ಇಲ್ಲಿ ಕಾಲಿಡುವುದಕ್ಕೂ ಅವಕಾಶ ಕೊಡುವುದಿಲ್ಲ. ಇವರಿಗೆ ಅವಕಾಶ ಮಾಡಿಕೊಟ್ಟು ಆಡಳಿತ ನಡೆಸಿರಿ ಎಂದು ಐದು ವರ್ಷಕ್ಕೆ ಆರಿಸಿ ಕಳುಹಿಸಿದರೆ ಸದನಕ್ಕೆ ಬರಲೂ ಪುರುಸೊತ್ತಿಲ್ಲದ ಇವರಿಗೆ ಹೇಗೆ ಶಿಕ್ಷೆ ಕೊಡಬೇಕೋ ಜನ ಕೊಡುತ್ತಾರೆ. ಅದನ್ನೇ ಪುನಃ ಪುನಃ ಹೇಳುತ್ತಾ ಈ ಸದನಕ್ಕೆ ನಾನು ಅವಮಾನ ಮಾಡುವುದಿಲ್ಲ. ಈ ಸದನಕ್ಕೆ ಅವಮಾನ ಹ್ಯುಮಿಲಿಯೇಟ್ ಮಾಡುವ ಪ್ರಯತ್ನ ಅವರೇ ಮಾಡಿದ್ದಾರೆ. ಆದರೂ ಜನರಿಗೆ ಈ ಸದನದ ಮೂಲಕ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆಯೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ. ಇದೇ ರೀತಿ ಮುಂದುವರೆದರೆ ಖಂಡಿತ ಇದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲವೆಂದು ಹೇಳುತ್ತಾ ಇವತ್ತು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಖರ್ಗೆಯವರೇ ಮಾನ್ಯ ಪಾಟೀಲರು ಫಾರಿನ್‌ಗೆ ಹೋದರೂ ಕೂಡ ಇಟಲಿಯ ಹೆಣ್ಣುಮಗಳನ್ನು ಏನೂ ನಾಮಿನೇಷನ್ ಮಾಡುವುದಿಲ್ಲ ಎಂದು ನಾನು ಅಂದು ಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪಾಕಿಸ್ತಾನದಿಂದ ಬಂದವರು ನೀವು ಆಗಬಹುದಂತೆ, ಏನಿದು ಹಗುರವಾಗಿ ಇಂತಹ ಮಾತನಾಡುವುದು? This is how they behave.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ತರವಲ್ಲ, ರೆಕಾರ್ಡಿಗೆ ಹೋಗಬಾರದು. ಸುಮ್ಮನೆ ಮಾತನಾಡಲು ಅವಕಾಶವಿದೆ, ಮೈಕಿದೆ ಎಂದು ಹೇಳಿ.

ಅಧ್ಯಕ್ಷರು : ನಾನು ಬೇರೆ ಏನೋ ಮಾತನಾಡುತ್ತಿದ್ದೆ, ಏನಾಯಿತು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಏನಾಯಿತು ಅಂತ!

MR. SPEAKER : I will take care of it. ಆ ಪ್ರೊಸೀಡಿಂಗ್ಸ್ ತರಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಈಗ ಆದದ್ದು ಏನೆಂದರೆ, ಮಂತ್ರಿಗಳು ಫಾರಿನ್‌ಗೆ ಹೋಗುತ್ತಿದ್ದಾರೆ, ಅಲ್ಲೂ ಅವರು ನಾಮಿನೇಷನ್ ಮಾಡಲು ಹೋಗುತ್ತಿದ್ದಾರೆ.ಅಂದರು ಅದಕ್ಕೆ ಅವರು ಫಾರಿನ್‌ಗೆ ಹೋದರೂ ಹೋಗಲಿ ಆದರೆ ಇಟಲಿ ಹೆಣ್ಣುಮಗಳನ್ನು ನಾಮಕರಣ ಮಾಡಲಿಕ್ಕಿಲ್ಲ ಅಂದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ಎಲ್ಲರಿಗೂ ಬುದ್ಧಿ ಇದೆ. ಬುದ್ಧಿ ಇಲ್ಲದ ಯಾರೂ ಇಲ್ಲಿ ಕುಳಿತಿಲ್ಲ. ಯಾರಿಗೋ ತಲೆ ಕೆಟ್ಟಿದೆ ಅವನ ಮಗ ನಾಮಿನೇಟ್ ಆಗಿದ್ದಾನೆ ಸಹಕಾರ ಸಂಘಕ್ಕೆ ಅಂದರೆ ಅದು ಯಾರಿಗೆ ಹತ್ತುತ್ತದೆ ನನಗೋ ನಿಮಗೋ?

ಶ್ರೀ ಎಚ್.ಎನ್. ನಂಜೇಗೌಡ : ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಹೆತ್ತಮಗಳು ಹೊರಗಡೆಯವಳಾಗುತ್ತಾಳೆ. ಮನೆಗೆ ಬಂದ ಸೊಸೆ ಮನೆ ಮಗಳಾಗುತ್ತಾಳೆ. ಯಜಮಾನತಿ ಆಗುತ್ತಾಳೆ, ಅಷ್ಟು ತಿಳಿದುಕೊಳ್ಳಬೇಕು ನಾವು.

ಶ್ರೀ ಎಂ. ವೀರಪ್ಪ ಮೊಯಿಲಿ : ಭಾರತೀಯ ಸಂಸ್ಕೃತಿ ತಿಳಿದಿದ್ದರೆ ಸರಿಯಾಗಿ ಮಾತನಾಡುತ್ತಾರೆ. ಅದರ ಪ್ರಾಥಮಿಕ ಅಭ್ಯಾಸವೂ ಇಲ್ಲದೇ ಇದ್ದರೆ ಇಂತಹ ಮಾತುಗಳು ಬರುತ್ತದೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಅವರು ಶ್ರೀ ಅದ್ವಾನಿಯವರ ಬಗ್ಗೆ ಹೇಳಿದರು, ಅವರು ಪಾಕಿಸ್ತಾನಿಯರೇ?

ಶ್ರೀ ಬಿ.ಬಿ. ಶಿವಪ್ಪ : ಮನೆಗೆ ಬಂದ ಹೆಣ್ಣು ಆ ಮನೆತನಕ್ಕೆ ತಕ್ಕಂತಿರಬೇಕು, ತನ್ನ ಮನೆತನದ ಬಗ್ಗೆ ಮತ್ತೆ ಯೋಚನೆ ಮಾಡಬಾರದು. ಅದು ಹಿಂದೂ ಸಂಸ್ಕೃತಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ನಿಮ್ಮ ಸ್ವಂತ ಅನುಭವ ಇರಬಹುದು. ಆದರೆ ನಮ್ಮ ದೇಶದ ಅನುಭವ ಅದಲ್ಲ.

ಅಧ್ಯಕ್ಷರು : ಇಲ್ಲಿಯವರೆಗೆ ನಾವೆಲ್ಲಾ ಅನ್ಯೋನ್ಯವಾಗಿ ನಡೆದುಕೊಂಡು ಬಂದಿದ್ದೇವೆ. ಈ ನಿರ್ದಿಷ್ಟ ಸಂದರ್ಭದಲ್ಲಿ ಅದು ಅವರ ಪಕ್ಷದ ಮುಖಂಡರಿಗೆ ಅನ್ವಯಿಸುವ ಮಾತು ಯಾರನ್ನೂ ಕೆಣಕುವುದು ಬೇಡ. ಅವರವರ ಅಭಿಪ್ರಾಯ ಅವರವರದು. ಇದನ್ನು ಇಲ್ಲಿಗೇ ಮುಗಿಸೋಣ. ಬಿಲ್ ತೆಗೆದುಕೊಂಡು ಬನ್ನಿರಿ.

+ ಶ್ರೀ ಡಾ|| ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಅಧ್ಯಕ್ಷರೇ, ಇಲ್ಲೇನು 53 ಬೇಡಿಕೆಗಳನ್ನು ಮಂಡಿಸಿದ್ದಾರೆ ಅವಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿದ್ದಾರೆ. ನಾನು ಮೂರು ಬೇಡಿಕೆಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಪ್ರವಾಸೋದ್ಯಮ ಇಲಾಖೆ, ಮಂತ್ರಿಮಂಡಲ ಮತ್ತು ಸಾಮಾನ್ಯ ಆಡಳಿತದ ಬಗ್ಗೆ ಹೇಳುತ್ತೇನೆ. ಇವರು ಏನು ಮಾಡಿದ್ದಾರೆಂಬ ಆಧಾರದ ಮೇಲೆ ನಾವು ಮುಂದಿನ ವರ್ಷಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಅಂತಹ ಆಧಾರ ಇಟ್ಟುಕೊಂಡರೆ ಇವರ ಬೇಡಿಕೆಗಳಿಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ವಿರೋಧಿಸಿ ನಾನು ಮಾತನಾಡಲು ಇಚ್ಛೆಪಡುತ್ತೇನೆ ಪ್ರವಾಸೋದ್ಯಮ ಇಲಾಖೆಯ ವಾರ್ಷಿಕ ವರದಿಯಲ್ಲಿ ಬಹಳ ದೊಡ್ಡದಾಗಿ ಬರೆದಿದ್ದಾರೆ. ಅದನ್ನು ನಾನು ಓದಿ ಹೇಳಿಬಿಡುತ್ತೇನೆ. ಕರ್ನಾಟಕವು ಅದರ ಸ್ವಾಭಾವಿಕ ಹಾಗೂ ಮಾನವ ನಿರ್ಮಿತ ಆಕರ್ಷಣೆಗಳಿಂದಾಗಿ ಇಡೀ ಪ್ರಪಂಚದಲ್ಲೇ ತುಂಬಾ ವೈಭವಯುತ ರಾಜ್ಯವೆಂದು ಕೀರ್ತಿ ಪಡೆದಿದೆ. ಇಂದು ನಮ್ಮ ಕರ್ನಾಟಕ ಭಾರತದಲ್ಲಿ ಪ್ರಸಿದ್ಧ ಪ್ರವಾಸಿಕೇಂದ್ರವಾಗಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ರಾಜ್ಯದ ಹೆಚ್ಚಿನ ಭಾಗ ಹಿತಕರವಾದ ಹವಾಮಾನದಿಂದ ಕೂಡಿದೆ. ಇದಕ್ಕೆ ಮೂಲಕಾರಣ ಉನ್ನತ ಪರ್ವತ ಶ್ರೇಣಿಗಳು, ಹರಿದ್ವರ್ಣದ ಕಾನನಗಳು, ದೇವಾಲಯಗಳು, ಅರಮನೆಗಳು, ವನ್ಯ ಜೀವಿಗಳು ಉತ್ಕೃಷ್ಟ ಕರಕುಶಲವಸ್ತುಗಳು - ಇವೆಲ್ಲವೂ ಕರ್ನಾಟಕವನ್ನು ಪ್ರವಾಸಿಗರ ಸ್ವರ್ಗವಾಗಿ ಮಾರ್ಪಡಿಸಿದೆ. ಪ್ರವಾಸೋದ್ಯಮ ಒಂದು ಉದ್ಯಮವಾಗಿದ್ದು, ಪರಿಸರದ ಅಭಿವೃದ್ಧಿಗೆ ವಿಫುಲ ಅವಕಾಶ ಕಲ್ಪಿಸುತ್ತದೆ.

ಮತ್ತು ವಿದೇಶಿ ವಿನಿಮಯ ಗಳಿಕೆಗೆ ನೆರವಾಗುತ್ತಿದೆ. ಈ ಪ್ರವಾಸೋದ್ಯಮ ಹೆಚ್ಚಿನ ಪ್ರಮಾಣದ ದುಡಿಮೆಗೆ ಅವಕಾಶ ಹೊಂದಿರುವ ಕೈಗಾರಿಕೆಯಾಗಿರುವುದರಿಂದ ಭಾರೀ ಪ್ರಮಾಣದ ಉದ್ಯೋಗ ಸಾಮರ್ಥ್ಯವನ್ನು ಹೊಂದಿದೆ. ಮಾನ್ಯ ಮಂತ್ರಿಯವರು ಆ ಬಗ್ಗೆ ಬಹಳ ಒಳ್ಳೆಯ ಬಣ್ಣನೆ ಕೊಟ್ಟಿದ್ದಾರೆ. ಈ ಬಣ್ಣನೆ ಸಾರ್ಥಕವಾಗಲಿಕ್ಕೇನು ಮಾಡಿದ್ದಾರೆ? ನಮ್ಮ ಕರ್ನಾಟಕಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಹಾಗೆಯೇ ವಿದೇಶಿ ವಿನಿಮಯ ಕೂಡ ಸಿಗಬೇಕು ಎಂದು ಹೇಳುವುದರಲ್ಲಿ ಅವರು ಏನು ಉನ್ನತವಾದ ಕೆಲಸ ಮಾಡಿದ್ದಾರೆ ಎಂದು ನೋಡಿದರೆ, ಇರತಕ್ಕಂಥ ಅಲ್ಪ ಬಜೆಟ್‌ನಲ್ಲಿ ಹನ್ನೆರಡೂವರೆ ಕೋಟಿ ರೂಪಾಯಿಗಳು ಇದೆ. ಇದರಲ್ಲಿ ಎರಡೂವರೆ ಕೋಟಿ ರೂಪಾಯಿಗಳು ನಮ್ಮದು. ಇನ್ನು ಹತ್ತು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಯೋಜನೆಯಲ್ಲಿ ಅದನ್ನು ವರ್ಗೀಕರಣ ಮಾಡಿದ್ದಾರೆ. ಇದು ಬಹಳ ಆಶ್ಚರ್ಯಕರವಾಗಿರುವ ವರ್ಗೀಕರಣ. ಕೇಂದ್ರ ಸರ್ಕಾರ ಒಂದು ರೀತಿ ವರ್ಗೀಕರಣ ಮಾಡಿದೆ. ಪ್ರವಾಸಿ ಕೇಂದ್ರಗಳು ಯಾವ ರೀತಿ ಇರತ್ತವೆ, ಯಾವ ರೀತಿ ಇರುಬೇಕು, ಯಾವುದನ್ನು ಅಟ್ರಾಕ್ಟ್ ಮಾಡಬೇಕು ಎನ್ನುವ ಆಧಾರದ ಮೇಲೆ ಮಾಡಿದ್ದಾರೆ. ಇಲ್ಲಿ ವರ್ಗೀಕರಣ ಅಂದರೆ, ಕರ್ನಾಟಕದಲ್ಲಿ ಉತ್ತರ ವಲಯ, ದಕ್ಷಿಣ ವಲಯ ಎಂದು ಮಾಡಿದ್ದಾರೆ. ಅದು ಯಾವ ವಲಯ? ಏತಕ್ಕಾಗಿ? ಯಾವ ಡಿವಿಜನ್ ಆಧಾರದ ಮೇಲೆ ಯಾವ ರೀತಿ ಮಾಡಲಾಯಿತು ಎಂಬುದು ಗೊತ್ತಿಲ್ಲ. ಮುಂದೆ ವನ್ಯಜೀವಿಗಳ ವಲಯ, ಗಿರಿಧಾಮಗಳ ವಲಯ ಎಂದು ಐದು ಸಂಚಾರಿ ಭಾಗಗಳಾಗಿ ವಿಭಾಗಿಸಲಾಗಿದೆ. ಇದನ್ನು ಒಪ್ಪೋಣ. ಇದು ಎರಡು-ಮೂರು. ಕೊನೆಯ ಪಕ್ಷ ಕೇಂದ್ರ ಸರ್ಕಾರ ಏನು ವರ್ಗೀಕರಣವನ್ನು ಮಾಡಿದೆ, ಅದನ್ನಾದರೂ ನೋಡಿ ವರ್ಗೀಕರಣ ಮಾಡಬಹುದಾಗಿತ್ತು. ಅನಂತರ ಇರುವ ಹಣದಲ್ಲಿ 600 ಕೋಟಿ ರೂಪಾಯಿಗಳನ್ನು ಸುಮಾರು ಅರ್ಧದಷ್ಟು ಪ್ರವಾಸಿ ಪ್ರಚಾರಕ್ಕೆ 200 ಕೋಟಿ ರೂಪಾಯಿಗಳು ಪ್ರವಾಸೋದ್ಯಮ ಅಭಿವೃದ್ಧಿಗೆ 100 ಕೋಟಿ ರೂಪಾಯಿಗಳು, ಪ್ರವಾಸೋದ್ಯಮವನ್ನು ಒಂದು ಕೈಗಾರಿಕೆಯಾಗಿ ಮಾಡುವುದಕ್ಕೆ 300 ಕೋಟಿ ರೂಪಾಯಿಗಳನ್ನು ಇಡಬಹುದಾಗಿತ್ತು. ಕಳೆದ ಸಲ ಹೇಗೆ ಸಬ್ಸಿಡಿ ಕೊಡಬೇಕು ಎಂದು ಹೇಳಿ ಯೋಚನೆ ಮಾಡುತ್ತಿದ್ದರು, ಅದನ್ನೇ ಪ್ರವಾಸೋದ್ಯಮವನ್ನು ಒಂದು ಕೈಗಾರಿಕೆಯನ್ನಾಗಿ ಬೇರೆ ತಲೆಬರಹದಡಿಯಲ್ಲಿ ಹೋಟೆಲುಗಳನ್ನು ಕಟ್ಟತಕ್ಕ ಜನರಿಗೆ ಸಬ್ಸಿಡಿ ಕೊಡುವಲ್ಲಿ ಮಾತ್ರ ತಮ್ಮ ಇಚ್ಛೆಯನ್ನು ಪ್ರಕಟಪಡಿಸಿದ್ದಾರೆ. ಈ ರೀತಿ ಖರ್ಚು ಮಾಡಿದ್ದಾರೆ. ಪ್ರವಾಸೋದ್ಯಮ, ಪ್ರವಾಸಿ ಪ್ರಚಾರದ ಬಗ್ಗೆ ಇದನ್ನು ಯಾವ ರೀತಿ ಪ್ರಚಾರ ಮಾಡುತ್ತಾರೆ ಎಂದು ಹೇಳುವುದಕ್ಕೆ ಒಂದು ಮಾತನ್ನು ಹೇಳಿಬಿಡುತ್ತೇನೆ. ಈ ಪ್ರವಾಸಿ ಪ್ರಚಾರದಲ್ಲಿ ಬೆಂಗಳೂರಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಏನಿದೆ ಇದನ್ನು ಪ್ರವಾಸೋದ್ಯಮ ಇಲಾಖೆ ಮಾಡತಕ್ಕಂಥದ್ದೆ ಅಥವಾ ಕನ್ನಡ ಸಂಸ್ಕೃತಿ ಇಲಾಖೆ ಮಾಡತಕ್ಕಂಥದ್ದೆ? ಬೆಂಗಳೂರಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ, ತುಮಕೂರು ತಾಲ್ಲೂಕಿನಲ್ಲಿ, ಸಿದ್ಧಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನ, ಇದನ್ನು ಟೂರಿಸಂ ಮಾಡಿ ಖರ್ಚು ತೋರಿಸಿರುವುದು. ಬೇರೆ ಖರ್ಚು ತೋರಿಸುವುದಕ್ಕೆ ಇವರಿಗೆ ಜಾಗವೇ ಇಲ್ಲವೇ? ಟೂರಿಸಂನಲ್ಲಿ ಬೇಕಾಗಿರುವ ರಸ್ತೆಗಳ ಸೌಲಭ್ಯವನ್ನು ಮಾಡಿಕೊಡಿ ಎಂದು ಎರಡು ವರ್ಷಗಳ ಹಿಂದೆ ಕೇಳಿದ್ದಕ್ಕೆ ಇದನ್ನು ಪಿಡಬ್ಲ್ಯೂ ಡಿಯವರು ಮಾಡುತ್ತಾರೆ, ಇದು ನನ್ನ ಕೆಲಸವಲ್ಲ ಎಂದು ಮಾನ್ಯ ಮಂತ್ರಿಯವರು ಹೇಳಿದರು. ಈಗ ಕೆಲವು ಮಟ್ಟಿಗಾದರೂ ಕೂಡ ಆ ರಸ್ತೆಗಳ ಅವಶ್ಯಕತೆ ಇದೆ

ಎಂಬುದು ಗೊತ್ತಾಗಿದೆ. ಅದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗೆ ಸಿಕ್ಕಂಥ ಅಲ್ಪ ಹಣದಲ್ಲಿ ಸರಿಯಾದ ಪ್ರಯೋಜನವನ್ನು ಮಾಡಿಕೊಳ್ಳದೆ they are frittering away the finances. ಬೇಕಾಬಿಟ್ಟಿಯಾದ ಕೆಲಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ನಾನು ನಮ್ಮ ಉತ್ತರ ಕನ್ನಡದ ಪರವಾಗಿ ಕೇಂದ್ರ ಸರ್ಕಾರಕ್ಕೆ ಹೋಗಿ ನಮ್ಮಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು ಎಂದು ಅಲ್ಲಿನ ಮಂತ್ರಿಗಳ ಹತ್ತಿರ ಮಾತನಾಡಿ ಬಂದೆ. ಈ ಬಗ್ಗೆ ಒಂದು ರೆಪ್ರೆಸೆಂಟೇಷನ್ ಸಹ ಕೊಟ್ಟೆ.

MR. SPEAKER : What is tourism? Which is a tourist place? ಯಾವ ಜಾಗದಲ್ಲಿ ಏನಾದರೂ ವೈಶಿಷ್ಟತೆ ಇರುತ್ತದೆ, ಆರ್ಕಿಯಾಲಜಿಕಲ್ ಇಂಪಾರ್ಟೆನ್ಸ್ ಇರಬಹುದು, ಹಿಸ್ಟಾರಿಕಲ್ ಇಂಪಾರ್ಟೆನ್ಸ್ ಇರಬಹುದು, ಬೊಟಾನಿಕಲ್ ಗಾರ್ಡನ್ಸ್ ಇರಬಹುದು ಅಥವಾ ನ್ಯಾಚುರಲ್ ಆಗಿ ಇರಬಹುದು, ವಾಟರ್‌ಫಾಲ್ಸ್ ರೀತಿ ಜೋಗ್ ಇರಬಹುದು, ಅಂತಹ ಜಾಗಗಳನ್ನು ಮೊದಲು ಸರ್ವೆ ಮಾಡತಕ್ಕಂಥದ್ದು ಇದೆ. ಅಲ್ಲಿ ಸರ್ವೆ ಮಾಡಿದ ಮೇಲೆ ಎಲ್ಲಾ ವರ್ಗದ ಜನರು ವಿಶೇಷವಾಗಿ ಕೆಳವರ್ಗದ ಜನ, ಮಧ್ಯಮ ವರ್ಗದ ಜನರು ಹೋದರೆ ನೋಡಲಿಕ್ಕೆ ಅನುಕೂಲ ಮತ್ತು ಅವರು ಅಲ್ಲಿ ಇರಬೇಕು ಎಂದು ಅಪೇಕ್ಷಿಪಟ್ಟರೆ ಅವರು ಅಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡತಕ್ಕಂಥದ್ದು ಇದೆ. ಹೋಗಿ ಬರುವುದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಇದೆಯೇ ಇಲ್ಲವೇ, ರಸ್ತೆ ಇದೆಯೇ ಇಲ್ಲವೇ, ಈ ದೃಷ್ಟಿಯಿಂದ how much we have developed. ಮತ್ತು ಫಾರಿನ್ ಎಕ್ಸ್‌ಛೇಂಜ್ ದೃಷ್ಟಿಯಿಂದ which are of international importance ಎಷ್ಟು ಜನ ಫಾರಿನರ್ಸ್ ಬರುವುದಕ್ಕೆ ಅನುಕೂಲ ಇದೆ, ಒಂದು ವೇಳೆ ಅವರು ಬರಬೇಕೆಂದು ಅಪೇಕ್ಷಿಪಟ್ಟರೂ ಕೂಡ ಅವರಿಗೆ ಏನು ಆಕರ್ಷಣೆ ಇದು ಎಂಬುದನ್ನು ನೋಡಬೇಕು. This is precisely we have to go by. If you come that way, you will be reaching the subject directly.

ಡಾ|| ಎಂ.ಪಿ. ಕರ್ಕಿ : ಅದನ್ನು ವಿವರವಾಗಿ ಮಾತನಾಡಿದರೆ ಬಹಳ ಸಮಯಬೇಕಾಗುತ್ತದೆ.

MR. SPEAKER : Does not matter even if you take ten minutes more. But, let the suggestion be concrete.

ಡಾ|| ಎಂ.ಪಿ. ಕರ್ಕಿ : ಕಳೆದ ಸಲ ಇದರ ಬಗ್ಗೆ ನಾನು ಮಾತನಾಡಿದ್ದೆ, ಆಗ ಅದನ್ನು ಹೇಗೆ ವರ್ಗೀಕರಣ ಮಾಡಬೇಕು ಎನ್ನುವುದನ್ನೂ ಕೂಡ ಹೇಳಿದ್ದೇನೆ, ಇದರ ಬಗ್ಗೆ ಮಾತನಾಡಿದಾಗ ಶ್ರೀ ಕಾಗೋಡು ತಿಮ್ಮಪ್ಪನವರ ಜೋಗ್ ಫಾಲ್ಸ್‌ನಲ್ಲೂ, ನೀರು ಇಲ್ಲ ಎಂದು ಹೇಳಿದೆ. ಅದೂ ನವಂಬರ್ ತಿಂಗಳಿನಲ್ಲಿ ಡಾ|| ಕರ್ಕಿ ಅಲ್ಲಿಗೆ ಹೋದಾಗ ಸ್ವಲ್ಪ ಹೀಗೆ ತಲೆ ತಿರುಗಿ ನಿದ್ದೆ ಬಂದಿರಬೇಕು ಫಾಲ್ಸ್‌ನಲ್ಲಿ ನೀರು ಇರುತ್ತದೆ ಎಂದು ಹೇಳಿದರು. ಆದರೆ ಇವತ್ತೂ ನವಂಬರ್‌ನಲ್ಲಿ ಹೋದರೆ ಜೋಗ್ ಫಾಲ್ಸ್‌ನಲ್ಲಿ ನೀರಿರುವುದಿಲ್ಲ. ಅದನ್ನು 'ಎ' ಕ್ಯಾಟಗರಿಯಾಗಿ ಮಾಡಿದ್ದಾರೆ. ಅದನ್ನು ಏನು ಮಾಡಿದ್ದರು, ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗಿದ್ದಾರೆ ಎಂದು ನಾನಂದುಕೊಂಡಿದ್ದೇನೆ. ಏಕೆಂದರೆ ಅದು 'ಸಿ' ಕ್ಯಾಟಗರಿ ಇರುವುದು. ಆ ಸಮಯದಲ್ಲಿ ಅತ್ಯುತ್ತಮ ಸೌಕರ್ಯವುಳ್ಳ ಪ್ರವಾಸಿ ಕೇಂದ್ರ ಎಂದು ಹೇಳಿ

ಅದನ್ನು ಗುರುತು ಮಾಡಿದ್ದರು. ಹಾಗೆ ಹೇಳಿದಾಗ ಇಲ್ಲ ಎಂದು ಹೇಳಿದ್ದರು. ಪ್ರವಾಸೋದ್ಯಮ ಮಂತ್ರಿಗಳೂ ಹೋಗಿರಲಿಲ್ಲ. ಕಾರ್ಯದರ್ಶಿಗಳೂ ಹೋಗಿರಲಿಲ್ಲ. ಇಲ್ಲೇ ಕುಳಿತುಕೊಂಡು ಮಾತನಾಡುತ್ತಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೇ ಇದು ಹೊಸ ಪದ್ಧತಿ ಇದೆ. ಅವರು ಪೂರ್ಣವಾಗಿ ಹೇಳಿದಮೇಲೆ ತಾವು ತಾಳ್ಮೆಯಿಂದ ಕೇಳಿ ಅನಂತರ ನೀವು ಸರ್ಕಾರದ ಪರವಾಗಿ ಉತ್ತರ ಕೊಡಬೇಕು. ಮಧ್ಯೆ ಮಧ್ಯೆ ಕೊಟ್ಟುಬಿಟ್ಟರೆ ಆ ಮೇಲೆ ರಿಪ್ಲೈ ಎಲ್ಲಿರುತ್ತೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ನನಗೆ ಮಾತ್ರವೇ ಏಕೆ? ಬೇರೆಯವರು ಉತ್ತರ ಕೊಡುವಾಗ ಈ ಪದ್ಧತಿ ಇರಲಿಲ್ಲ.

ಅಧ್ಯಕ್ಷರು : ಎಲ್ಲರಿಗೂ ಅಷ್ಟೆ. ಎಲ್ಲರೂ ಆ ಪದ್ಧತಿ ಮಾಡಿಕೊಂಡು ಬಿಟ್ಟಿದ್ದೀರಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇದು ನನಗೆ ಮಾತ್ರ ವಿಶೇಷವಾಗಿ ಆ ರೀತಿ ಮಾಡುತ್ತಿದ್ದೀರಾ?

ಅಧ್ಯಕ್ಷರು : ಏನೂ ಇಲ್ಲ. ವಿಶೇಷವಾಗಿ ನಿಮಗೆ ಬೇರೆ ಎಲ್ಲಾ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯರ ಬಗ್ಗೆಯೇ ಅವರು ಈ ತರಹ. ನೀವು ಏನು ಬೇಕಾದರೂ ಯೋಚನೆ ಮಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಮಾಡಿದ್ದು ಇಲ್ಲಿ ಹೇಳುವುದು ಬ್ಯಾಡವೇ? ಅದು ರೆಕಾರ್ಡಿಗೆ ಹೋಗುತ್ತಿದೆ. ಅವರು ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತಿದೆ.

ಅಧ್ಯಕ್ಷರು : ನಿಮ್ಮ ರಿಪ್ಲೈಗೆ ಅವಕಾಶ ಇರುತ್ತಲ್ಲಾ, ಆಗ ಹೇಳಿ. ನೀವು ಮಾಡಿದ್ದೆಲ್ಲಾ ಈಗ ಅವರು ಹೇಳುತ್ತಿದ್ದಾರೆ. ಅವರು ಹೇಳಿದ್ದಕ್ಕೆ ನೀವು ರಿಪ್ಲೈಯನ್ನು ಮತ್ತೆ ಉತ್ತರ ಕೊಡುವಾಗ ಹೇಳಿ.

ಡಾ||ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಅದಕ್ಕಾಗಿ ನಾನು ದೆಹಲಿಗೆ ಹೋಗಿ ಅಲ್ಲಿರುವ ಮಂತ್ರಿಗಳನ್ನು ಕಂಡು ಬಂದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅವರು ಹೇಳುತ್ತಿರುವುದು ರೆಕಾರ್ಡ್‌ಗೆ ಹೋಗುತ್ತಿದೆ. ಪ್ರವಾಸೋದ್ಯಮ ಮಂತ್ರಿಗಳು ಅಲ್ಲಿಗೆ ಹೋಗೇ ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಎಲ್ಲಿಗೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾನು ಜೋಗ್ ಫಾಲ್ಸ್‌ಗೆ ಹೋಗಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಜೋಗ್ ಫಾಲ್ಸ್‌ಗೆ ನವಂಬರ್‌ನಲ್ಲಿ ಹೋಗಿದ್ದೇನೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಅಪ್ಪಣೆ ಕೊಟ್ಟರೆ ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಸಿದ್ಧವಾಗಿದ್ದೇನೆ.

ಅಧ್ಯಕ್ಷರು : ಆಗಬಹುದು, ತಾವು ಈ ಬಗ್ಗೆ ಉತ್ತರಕೊಡುವಾಗ ಹೇಳಿ.

ಡಾ|| ಎಂ.ಪಿ. ಕರ್ಕಿ : ಹಾಗೆ ನಾನು ರೆಪ್ರೆಸೆಂಟೇಷನ್ ಮಾಡಿದಾಗ ಕೇಂದ್ರ ಸರ್ಕಾರದಿಂದ ನನಗೆ ಒಂದು ಪತ್ರ ಬಂತು. ಉತ್ತರ ಕನ್ನಡ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದಕ್ಕಾಗುತ್ತದೆಯೇ ಎಂದು. ಇಲ್ಲಿಂದ ಆಗುತ್ತದೆ ಎಂದು ಹೇಳಿ ಉತ್ತರ ಹೋಯಿತು. ಹಾಗಾದರೆ ಈ ಬಗ್ಗೆ ಒಂದು ಸ್ಕೀಮ್ ಮಾಡಿ ಕಳುಹಿಸಿ, ಯಾವ ಯಾವ ಪ್ರದೇಶಕ್ಕೆ ಏನೇನು ಆಗಬೇಕೆಂದು ಸ್ಕೀಮ್ಸ್ ಮಾಡಿ ಕಳುಹಿಸಿ ಎಂದು ಕೇಂದ್ರದಿಂದ ನಮ್ಮ ಇಲಾಖೆಗೆ ಪತ್ರ ಬಂತು. ಆ ರೀತಿ ಪತ್ರ ಬರೆದು ಆರು ತಿಂಗಳಾಯಿತು. ನಾನು ಅನೇಕ ಸಲ ಅವರನ್ನು ಕಂಡಿದ್ದೇನೆ. ಆದರೂ ಕೂಡ ಒಂದೇ ಒಂದು ಪ್ರಾಜೆಕ್ಟ್ ಮಾಡಿ ಕಳುಹಿಸುವುದಕ್ಕೆ ಆಗಲಿಲ್ಲ. ನಾನೇ ಹೋಗಿ ಅಧಿಕಾರಿಗಳನ್ನು ಭೇಟಿಯಾಗಿದ್ದೇನೆ. ನೋಡಿ, ಇದನ್ನು ದಯವಿಟ್ಟು ಮಾಡಿ. ಕೇಂದ್ರ ಸರ್ಕಾರ ಮಾಡುತ್ತದೆಂದರೂ ಏತಕ್ಕೆ ಕಲ್ಲು ಹಾಕುತ್ತಿದ್ದೀರಿ, ದಯವಿಟ್ಟು ಮಾಡಿ ಎಂದು ಹೇಳಿದರೂ ಕೂಡ ಏನೊಂದು ಪ್ರಯತ್ನ ಕೂಡ ಮಾಡಿಲ್ಲ. ಆ ಬಗ್ಗೆ ಪ್ರಾಜೆಕ್ಟ್ ಕೂಡ ಹೋಗಲೂ ಇಲ್ಲ. ನನ್ನ ಸಂಗಡ ನೋಡಲಿಕ್ಕೆ ಬರುತ್ತೇನೆ ಎಂದು ಹೇಳಿದರು, ಅವರು ಬರಲೂ ಇಲ್ಲ. ಏನೂ ಮಾಡಿಯೂ ಇಲ್ಲ. ಕೊನೆಯಪಕ್ಷ ಟೂರಿಸಂ ಬಗ್ಗೆ ಆಸಕ್ತಿ ಇರುವವರನ್ನು ಡೈರೆಕ್ಟರ್ ಅಥವಾ ಕಾರ್ಯದರ್ಶಿ ಹುದ್ದೆಗಳಿಗೆ ಹಾಕಿ. It is not an administrative Department. It has to be developed. ಈ ಬಗ್ಗೆ ಸ್ವಲ್ಪ ಇಮ್ಯಾಜಿನೇಷನ್ ಇರಬೇಕಾಗುತ್ತದೆ. ಅಲ್ಲಿ ಇರತಕ್ಕಂಥಾದ್ದು ಏನು ಎಂಬುದನ್ನು ನೋಡಬೇಕಾಗುತ್ತದೆ. ಅದನ್ನು ಯಾವ ರೀತಿ ಅಭಿವೃದ್ಧಿ ಮಾಡುವುದಕ್ಕಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಈ ರೀತಿ ಇಮ್ಯಾಜಿನೇಷನ್ ಇರುವ ಯಾವುದಾದರೂ ಕಾರ್ಯದರ್ಶಿ ಅಥವಾ ಡೈರೆಕ್ಟರನ್ನು ಹಾಕಿದರೆ ಪ್ರಯೋಜನವಾಗುತ್ತದೆಯೇ ಹೊರತಾಗಿ ಬೆಂಗಳೂರಿನಲ್ಲಿ ಕುಳಿತು ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಈ ಪ್ರವಾಸೋದ್ಯಮದ ಬಗ್ಗೆ ನಾನು ಇಷ್ಟನ್ನು ಹೇಳಿದ್ದೇನೆ. ಎಷ್ಟು ಪ್ರವಾಸಿಗರು ಎಂದು ಗೊತ್ತಿದೆಯಾ? ಪ್ರವಾಸಿಗರು ಕಳೆದ ವರ್ಷ ಕರ್ನಾಟಕಕ್ಕೆ ಎಷ್ಟು ಬಂದರು? ಈ ವರ್ಷ ಎಷ್ಟು ಬಂದರು ಪ್ರವಾಸಿಗರ ಸಂಖ್ಯೆ ಎಷ್ಟು ಜಾಸ್ತಿಯಾಯಿತು? ಅದಕ್ಕೆ ಅವರಿಂದ ಉತ್ತರವಿಲ್ಲ. ಪುಸ್ತಕದಲ್ಲಿ ಯಾವ ದಾಖಲೆಯೂ ಇಲ್ಲ. ಏನು ಮಾಡಿದ್ದೀರಿ ಎಂತಲೂ ಇಲ್ಲ. ಯಾರಾದರೂ ಪ್ರವಾಸೋದ್ಯಮದ ಸಲುವಾಗಿ ನಮಗೆ ಸಬ್ಸಿಡಿ ಕೊಡಿ ಎಂದು ಒಂದು ಹೋಟೆಲ್ ಹಾಕಿದರೆ ಅವರಿಗೆ ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಅಷ್ಟೆ. ಪ್ರವಾಸೋದ್ಯಮ ಇಲಾಖೆಯಿಂದ ರೆಕಗ್ನೈಸ್ಡ್ ಆಗಿದೆ ಎಂದು ಒಂದು ಬೋರ್ಡನ್ನು ಹಾಕಿರುತ್ತಾರೆ ಅಷ್ಟೆ. ಅಲ್ಲಿ ಊಟಕ್ಕೆ ಹೋದರೆ ಕಳಪೆ ಊಟ ಇರುತ್ತದೆ ಏನೇನೂ ಚೆನ್ನಾಗಿರುವುದಿಲ್ಲ. ಆ ರೀತಿಯ ಹೋಟೆಲುಗಳು ಇರುತ್ತವೆ. ಅಂಥವುಗಳಿಗೆ ಈ ಇಲಾಖೆಯವರು ಸಬ್ಸಿಡಿ ಕೊಟ್ಟಿದ್ದಾರೆ.

ಅಧ್ಯಕ್ಷರು : ನಮ್ಮ ಬ್ಯುರೋಕ್ರಸಿಯಲ್ಲಿ ಆ ರೀತಿ ಎಕ್ಸ್‌ಪರ್ಟೈಸ್ ಇರುವವರು ಯಾರೂ ಯಾವ ಡಿಪಾರ್ಟ್‌ಮೆಂಟಿನಲ್ಲೂ ಇರುವುದಿಲ್ಲ. ಇವತ್ತು ಅವರು ಪಿಡಬ್ಲ್ಯುಡಿಯಲ್ಲಿರುತ್ತಾರೆ. ಪಿಡಬ್ಲ್ಯೂಡಿಯಲ್ಲಿರುವಾಗ ಮೋರಿ-ಗೀರಿ ನೋಡಿಕೊಳ್ಳುತ್ತಿರುತ್ತಾರೆ. ಅವರನ್ನು ಟೂರಿಸಂಗೆ ಹಾಕಿದರೆ ಆ ಹೋಟೆಲ್ ನೋಡಿಕೊಳ್ಳುತ್ತಾರೆ. ಅವರನ್ನೇ ತೆಗೆದು ಸ್ಲಂ ಬೋರ್ಡ್‌ಗೆ ಹಾಕಿದರೆ ಸ್ಲಂಸ್ ನೋಡಿಕೊಳ್ಳುತ್ತಿರುತ್ತಾರೆ. ಈಗ ಈ ಬಗ್ಗೆ ನಮ್ಮ ಪ್ರಿಸಂಪ್ಷನ್ ಏನೆಂದರೆ ನಮ್ಮಲ್ಲಿ ಬುದ್ಧಿವಂತರುಗಳು

ಯಾರು ನೌಕರಶಾಹಿಯಲ್ಲಿ ಇದ್ದಾರೆ, ಅವರಿಗೆ ಗೊತ್ತಿರಲಾರದ ವಿಚಾರ ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಅವರು ದೈವಾಂಶ ಸಂಭೂತ ಪುರುಷರು, ಸರ್ವಜ್ಞರು. ಆದ್ದರಿಂದ ಅವರ ನೇತೃತ್ವದಲ್ಲಿ ನಡೆಯುವ ಎಲ್ಲಾ ಕೆಲಸವೂ ಕೂಡ ಪರಿಪೂರ್ಣ, ಪರಮೋಚ್ಛ, ಸಂಪೂರ್ಣ ಎಂದು ಹೇಳಿ ನಾವು ಅವರನ್ನು ಅಲ್ಲಿ ಕೂಡಿಸಿದ್ದೇವೆ. ನಾಳೆ ಒಂದು ವೇಳೆ ನಿಮ್ಮ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂದು ಇಟ್ಟುಕೊಳ್ಳಿ. ನೀವೇನೂ ಬೇರೆ ಫ್ರಾನ್ಸ್, ಅಮೇರಿಕಾದಿಂದ ಅವರನ್ನು ತರುವುದಿಲ್ಲ. ಇವರ ಹತ್ತಿರವೇ ಆಡಳಿತವನ್ನು ನಡೆಸುವುದು. ನಾನು ಪದೇ ಪದೇ ಇಂಟರ್‌ಫಿಯರ್ ಆಗುವುದಕ್ಕೆ ಇಷ್ಟಪಡದಿದ್ದರೂ ಸ್ಟ್ರಕ್ಚರಲ್ ಛೇಂಜಸ್ ಸಜೆಸ್ಟ್ ಮಾಡಿ ಎಂದು ನಿಮಗೆ ಅದನ್ನೇ ಹೇಳತಕ್ಕದ್ದು.

ಡಾ॥ಎಂ.ಪಿ. ಕರ್ಕಿ : ಅದನ್ನು ಮಾಡಬಹುದು. ನಾವು ಸಾಮಾನ್ಯ ಆಡಳಿತದಲ್ಲಿ ಮಾಡುತ್ತೇವೆ. ಅದರ ಬಗ್ಗೆ ನಾನು ಸೂಚನೆಯನ್ನೂ ಕೂಡ ಕೊಡುವವನಿದ್ದೇನೆ.

ಅಧ್ಯಕ್ಷರು : ಅದೇ ಸೆಕ್ಷನ್ ಆಫೀಸರ್, ಅದೇ ಕೇಸ್ ವರ್ಕರೇ, ಅದೇ ನೋಟ್, ಅದೇ ಅಂಡರ್ ಸೆಕ್ರೆಟರೀನೇ, ಅದೇ ಡೈರೆಕ್ಟರ್.

ಡಾ॥ಎಂ.ಪಿ. ಕರ್ಕಿ : ಈಗ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ ಅಷ್ಟೇ ಕತೆ ಹೇಳುತೇನೆ. ಸಾಮಾನ್ಯ ಆಡಳಿತಕ್ಕೆ ಬಂದಾಗ ಅದರ ಬಗ್ಗೆ ಹೆಚ್ಚಿನ ಮಾತುಗಳನ್ನು ಆಡುವವನಿದ್ದೇನೆ. ಹಾಗಾಗಿ ಈ ಒಂದು ವರ್ಷದ ಅವಕಾಶದಲ್ಲಿ ನಿಮಗೆ ಕೊಟ್ಟಿರತಕ್ಕಂಥಹ ಹಣವನ್ನೆ ಅನಾವಶ್ಯಕವಾಗಿ ಖರ್ಚು ಮಾಡಿದ್ದೀರಿ. ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ಯಾರನ್ನೂ ಆಕರ್ಷಿಸಲು ನಿಮಗೆ ಸಾಧ್ಯವಾಗಲಿಲ್ಲ. ಜನರು ಇರತಕ್ಕ ಕಡೆ ಓಂ ಬೀಚ್‌ಗಳು ಇದ್ದಾವೆ. ನೀವೇನೂ ಅದನ್ನು ಪ್ರತ್ಯೇಕ ಮಾಡಿಲ್ಲ. ಅಲ್ಲಿ ಐದು ಲಕ್ಷ ಅತಿಥಿಗಳು ಎಂದು ಹೇಳಿ ಕೊಟ್ಟಿದ್ದೀರಿ. ಅಲ್ಲಿ ಶೌಚಾಲಯ ಕಟ್ಟಿದ್ದೇವೆಂದು ಹೇಳಿದ್ದೀರಿ. ಅಷ್ಟೇ ಸಾಕಾ? ನಮ್ಮ ಸಿ.ಆರ್. ಜೆಡ್ ಸಹ ಅಲ್ಲಿ ಅಡ್ಡ ಬರುತ್ತದೆ. ನಮ್ಮ ಸಿ.ಆರ್.ಜೆಡ್. ಪ್ರಕಾರ 500 ಮೀಟರ್ ಹೊರಗೆ ನಿಮ್ಮ ಕೆಲವು ಹೋಟೆಲ್‌ಗಳು ಇರಬೇಕಾಗುತ್ತದೆ. ಅಲ್ಲೇನೂ ಮಾಡುವುದಕ್ಕೆ ಬರುವುದಿಲ್ಲ. ಅಥವಾ ಏನು ಮಾಡಿದ್ದೀರಾ? ಎಕ್ಸಂಪ್‌ಷನ್ ತೆಗೆದುಕೊಳ್ಳುವುದಕ್ಕೆ ಅದರ ಸಲುವಾಗಿ ಪ್ರಯತ್ನ ಮಾಡಿದ್ದೀರಾ? ಟೂರಿಸಂಗೆ ವಿಶೇಷವಾಗಿ ಬೀಚ್ ಟೂರಿಸಂ ಬಗ್ಗೆ ಅದು ಅಪ್ಪೈ ಆಗದ ಹಾಗೆ ನೋಡಿಕೊಂಡಿದ್ದೀರಾ? ಅದೇನೂ ಇಲ್ಲ. ಸುಮ್ಮನೆ ಡಿಪಾರ್ಟ್‌ಮೆಂಟ್ ನಿದ್ರೆ ಮಾಡುತ್ತಿದೆ. ಅಷ್ಟು ದುಡ್ಡು ಕೊಟ್ಟು ಏನೂ ಪ್ರಯೋಜನ ಆಗಿಲ್ಲ. ಇದನ್ನು ನಾವು ಏಕೆ ಪಾಸ್ ಮಾಡಬೇಕು? ಯಾವ ಪುರುಷಾರ್ಥಕ್ಕಾಗಿ ನಾವು ಪಾಸ್ ಮಾಡಬೇಕಂದು ಕೇಳುತ್ತಿದ್ದೇನೆ. ಅದಕ್ಕಾಗಿ ಪ್ರವಾಸೋದ್ಯಮ ಇಲಾಖೆಗೆ ದುಡ್ಡು ಕೊಟ್ಟು ದಂಡ ಮಾಡುವುದಕ್ಕಿಂತ ಬೇರೆ ಏನಾದರೂ ಒಳ್ಳೆಯ ಕೆಲಸ ಮಾಡಿದರೆ ಚಲೋ ಆಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನನ್ನ ಕ್ಷೇತ್ರ ಆಗುಂಬೆಯಲ್ಲಿ 35 ಲಕ್ಷ ರೂಪಾಯಿಗಳ ಕಟ್ಟಡ ಕಟ್ಟಿ ಇಟ್ಟಿದ್ದೀರಿ. ಬಾಗಿಲು ಕಿಟಕಿಯನ್ನೆಲ್ಲಾ ಹೊತ್ತುಕೊಂಡು ಹೋಗುತ್ತಿದ್ದಾರೆ. ಯಾರಾದರೂ ನಿಮ್ಮ ಅಧಿಕಾರಿಗಳಿಗೆ ಜೀವ ಇದೆಯಾ ಅಥವಾ ಬದುಕಿದ್ದಾರಾ ಎಂದು ನಾನು ಕೇಳುತ್ತೇನೆ. 35-40 ಲಕ್ಷ ರೂಪಾಯಿಗಳನ್ನು ಅಲ್ಲಿ ಇನ್‌ವೆಸ್ಟ್‌ಮೆಂಟ್

ಮಾಡಿ ಹೋಟೆಲ್ ನಡೆಸಲು ಏನಾದರೂ ಅವರಿಗೆ ವಹಿಸಿಕೊಟ್ಟು ನಡೆಸಬೇಕು ಎಂದು ಹೇಳಿ ಕಟ್ಟಿದ್ದಾರೆಯೇ ಅಥವಾ ಯಾರಿಗೋಸ್ಕರ ಕಟ್ಟಿದ್ದೀರಿ ಹೇಳಿ? ಗ್ಲಾಸು, ಹೆಂಚು, ಕಿಟಕಿ ಎಲ್ಲವನ್ನೂ ಒಂದು ಕಡೆಯಿಂದ ಕಿತ್ತುಕೊಂಡು ಹೋಗುತ್ತಿದ್ದಾರೆ. ಇದು ಬಹಳ ಅವಮಾನಕರ ಸಂಗತಿ ಅದು ರೋಡ್ ಸೈಡ್‌ನಲ್ಲಿದೆ. ಜನ ನೋಡಿ ಸರ್ಕಾರದ ಬಗ್ಗೆ ಹಗುರವಾಗಿ ತಿಳಿದುಕೊಳ್ಳುತ್ತಾರೆ. ಕಟ್ಟಡ ನೋಡಿದರೆ ಸರ್ಕಾರ ಹಗುರವಾಗುತ್ತದೆ ಜನರ ದೃಷ್ಟಿಯಲ್ಲಿ. ಅಲ್ಲಿ ಏನಾದರೂ ಮಾಡಬೇಕಲ್ಲಾ ಇಲ್ಲದಿದ್ದರೆ ಇನ್‌ವೆಸ್ಟ್‌ಮೆಂಟ್ ಮಾಡಿ ತಾನೇ ಏನು ಪ್ರಯೋಜನ?

ಡಾ|| ಎಂ.ಪಿ. ಕರ್ಕಿ : ಈ ಹೋಟೆಲನ್ನು ಕಟ್ಟತಕ್ಕದ್ದು, ಬಾರನ್ನು ನಡೆಸತಕ್ಕದ್ದು, ಸರ್ಕಾರದ ಕೆಲಸವಲ್ಲ. ಅದಕ್ಕೆ ಬೇರೆಯವರಿಗೆ ಕೊಡಬೇಕು. ಬೇರೆಯವರಿಗೆ ಅಲ್ಲಿ ಹೋಟೆಲ್ ಮಾಡಲು ಆಸ್ಪದ ಕೊಡಬೇಕು. ಆ ರೀತಿಯಾದಂತಹ ವಾತಾವರಣ ಕಲ್ಪನೆ ಮಾಡಬೇಕು. ಅದಲ್ಲದೇ ನಾನೇ ಹೋಟೆಲ್ ಕಟ್ಟುತ್ತೇನೆ, ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಸರ್ಕಾರದಿಂದ ಸಾಧ್ಯವಾಗುವುದಿಲ್ಲ. ಎಲ್ಲಿ ಈ ಪ್ರವಾಸಿ ಮಂದಿರಗಳಲ್ಲಿ ನಾವು ಹೋಗಿ ಕೇಳಿ ಫುಲ್ ಆಗಿದೆ, ಜಾಗ ಇಲ್ಲ ಎಂದು ಹೇಳುತ್ತಾರೆ. ರಿಜಿಸ್ಟರ್‌ನಲ್ಲಿ ದಾಖಲೆ ಇರುತ್ತದೆ, ಒಬ್ಬರೂ ಇರುವುದಿಲ್ಲ. ಅಂತಹ ಅನೇಕ ಪ್ರಸಂಗಗಳನ್ನು ನಾವು ನೋಡುತ್ತೇವೆ. ಹಾಗಾಗಿ ಸರ್ಕಾರ ಯಾವುದನ್ನು ಮಾಡಬೇಕೋ ಅದನ್ನು ಮಾಡಬೇಕೇ ಹೊರತಾಗಿ ನಮ್ಮ ಹತ್ತಿರ ಸಾಧ್ಯ ಆಗದೇ ಇರುವುದನ್ನು ಮಾಡಬಾರದು. ತಾವು ಪ್ರೇರಪಣೆ ಕೊಡಿ. ಏನು ಮಾಡಬೇಕು ಎಂದು ಹೇಳಿ. ಜನ ಬರಲು ಅವಕಾಶ ಕೊಡಿ. ಒಮ್ಮೆ ಜನ ಬಂದರೆ ತನ್ನಷ್ಟಕ್ಕೇ ತಾನೇ ಉದ್ಯಮಿಗಳು ಹೋಟೆಲನ್ನು ಸ್ಥಾಪನೆ ಮಾಡುತ್ತಾರೆ. ಅವರಿಗೆ ಅನುಕೂಲತೆ ಮಾಡಿಕೊಡಿ. ಅದನ್ನು ಮಾಡಬೇಕೇ ಹೊರತಾಗಿ ನಾವೆ ಹೋಟೆಲನ್ನು ಮಾಡುತ್ತೇವೆ, ನಾವೇ ಹೋಟೆಲನ್ನು ನಡೆಸುತ್ತೇವೆ, ನಾನೇ ಫಾರೆಸ್ಟ್ ರೆಸಾರ್ಟ್ ಮಾಡುತ್ತೇನೆಂದು ಹೇಳುವುದು ಸರಿಯಾದುದು ಅಲ್ಲ. ಇದು ಸರಿಯಾದ ನೀತಿ ಅಲ್ಲ. ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಮಾಡಬೇಕು. ಹೋಗಿ ಕಾಪಿ ಮಾಡಬೇಕು. ಪ್ರಚಾರ ಮಾಡಬೇಕು. ಜನ ಬರಬೇಕು ಅಲ್ಲಿ. ಜನ ಅಲ್ಲಿ ನೋಡಬೇಕು. ಅಂತಹದಕ್ಕೆ ಹೆಚ್ಚು ಖರ್ಚು ಮಾಡಬೇಕೇ ಹೊರತಾಗಿ ಹೋಟೆಲನ್ನು ಕಟ್ಟುವುದು, ಮೋಟೆಲನ್ನು ಕಟ್ಟುವುದು, ಫಾರೆಸ್ಟ್ ರೆಸಾರ್ಟನ್ನು ಕಟ್ಟುವುದು, ಇವೆಲ್ಲಾ ಸರ್ಕಾರದ ಕೆಲಸವಲ್ಲ. ಸರ್ಕಾರ ಇಂತಹ ಕೆಲಸವನ್ನು ಎಲ್ಲಿ ಮಾಡಿದೆ, ಅಲ್ಲೆಲ್ಲಾ ಕೈ ಸುಟ್ಟುಕೊಂಡಿದೆ. ಅದಾದ ನಂತರ ನಾವು ಡೆಮಾಕ್ರಸಿಯಲ್ಲಿದ್ದೇವೆ. Democrary is the "Government of the people, by the people and for the people". 'ಬೈ' ಎಂದು ಹೇಳುವುದಕ್ಕೆ ನಮ್ಮ ಮಾನ್ಯ ಸುರೇಶ್ ಕುಮಾರ್ ಅವರು ಅದನ್ನು ಬೇರ ರೀತಿ ಹೇಳುತ್ತಾರೆ. ಬಿವೈ ಅಲ್ಲ ಬಿಯುವೈ ಎಂದು ಹೇಳುತ್ತಾರೆ. ಹಾಗೆ it is by the people and for the people. ನಾವು ಅದನ್ನು ಅನೇಕ ಸಾರಿ ಮರೆತು ಬಿಟ್ಟಿರುತ್ತೇವೆ. ನಾವು ನಮಗಾಗಿಯೇ ಸರ್ಕಾರ, ನಮ್ಮದೇ ಸರ್ಕಾರ, ನಾನೇ ಸರ್ಕಾರ. ಎಲ್ಲವೂ ನನಗಾಗಿಯೇ ಎಂದು ಹೇಳಿ ಚಿಂತನೆ ಮಾಡತಕ್ಕಂಥ ಪ್ರಸಂಗಗಳನ್ನು ನೋಡುತ್ತಿದ್ದೇವೆ. ನಾವು ಆಡಳಿತ ಮಾಡತಕ್ಕವರು, ಯಾವಾಗಲೂ ಕಣ್ಣು ಮುಂದೆ ಇಟ್ಟುಕೊಳ್ಳಬೇಕು. ಅದೇನಂದರೆ ನಾವು ಹೇಳತಕ್ಕದ್ದು ಪ್ರಜೆಗಳಿಗಾಗಿ, ಪ್ರಜೆಗಳು ಕೊಟ್ಟಿರತಕ್ಕ ದುಡ್ಡಿನಿಂದ ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಈ ಸರ್ಕಾರ ಜನರ ಸಲುವಾಗಿ ಇರಬೇಕು ಎಂದು ಹೇಳುವುದನ್ನು ನಾವು ಕಣ್ಣು

ಮುಂದೆ ಯಾವಾಗಲೂ ಇಟ್ಟುಕೊಳ್ಳಬೇಕಾಗುತ್ತದೆ. ಒಂದು ಕಾಲ ಇತ್ತು ಪ್ರಜೆಗಳು, ಗುಲಾಮರಾಗಿ ಇದ್ದರು. ಈಗಲೂ ಪ್ರಜೆಗಳು ಗುಲಾಮರಾಗಿಯೇ ಇದ್ದಾರೆ. ಆದರೆ ಪ್ರಜೆಗಳ ರಿಫ್ಲೆಕ್ಟರ್ಸ್ ಯಾರು ಇದ್ದಾರೆ. ಪ್ರಜೆಗಳಿಂದ ಆರಿಸಲ್ಪಟ್ಟಿರತಕ್ಕಂಥ ಜನ, ಅವರು ತಾವು ರಾಜರು ಎಂದು ಹೇಳಿಕೊಳ್ಳುತ್ತಿದ್ದರು. ಆ ದಿನ ಹೋಯಿತು. ಆ ರಾಜರ ಸ್ಥಾನದಲ್ಲಿ ಬ್ಯೂರೋಕ್ರ್ಯಾಟ್ಸ್ ಈ ಅಧಿಕಾರಿಗಳು ಬಂದರು. ಈಗ ಅಧಿಕಾರಿಗಳು ಟಾಪ್ ಕ್ಲಾಸ್‌ಗೆ ಹೋಗಿ ಕೊನೆಯ ಮಟ್ಟದ ಅಧಿಕಾರಿಗಳಾದ ಕ್ಲಾಸ್ ಸಿ ಅಂಡ್ ಡಿ ಅಧಿಕಾರಿಗಳು ಈ ರಾಜ್ಯವನ್ನು ನಡೆಸುತ್ತಿದ್ದಾರೆ, not even secretaries, not even IAS Officers. ಈಗ ರಾಜ್ಯ ಸರ್ಕಾರವನ್ನು ನಡೆಸತಕ್ಕವರು ಸಿ ಅಂಡ್ ಡಿ ಅಧಿಕಾರಿಗಳು. ನಾನು ಹೇಗೆ ಎಂದು ಹೇಳುತ್ತೇನೆ. ನಾವು ಆಡಳಿತ ಮಾಡಬೇಕಾದರೆ, ಆರಿಸಿ ಬರಬೇಕಾದರೆ ನಮ್ಮ ಜಾತಿ, ಪಕ್ಷ, ಪಂಥ, ಕುಲ ಎಲ್ಲವನ್ನೂ ನೋಡಿಕೊಳ್ಳುತ್ತೇವೆ. ನಾವು ಅದೇ ಪ್ರಚಾರ ಮಾಡುತ್ತೇವೆ. ಅದೇ ಪ್ರಕಾರ ಆರಿಸಿ ಬರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಜನತೆಯನ್ನು ವಿಭಜಿಸಿ ನಾವು ಆಡಳಿತಕ್ಕೆ ಬರಲು ಪ್ರಯತ್ನ ಮಾಡುತ್ತೇವೆ. ಆಡಳಿತಕ್ಕೆ ಬಂದ ಮೇಲೆ ಮಂತ್ರಿಮಂಡಲ ಮಾಡಬೇಕಾದರೂ ಕೂಡ ನಾವು ಏನು ನೋಡುತ್ತೇವೆ? ಮಂತ್ರಿಮಂಡಲ ಏತಕ್ಕಾಗಿ ಇರಬೇಕು? ಮಂತ್ರಿ ಮಂಡಲ ನಮ್ಮ ಜನರಿಗೆ ಅಲ್ಲಿ ಸ್ಥಾನ ಕೊಡಲಿಕ್ಕೆ ಅಲ್ಲ. ನಾವು ಇರತಕ್ಕದ್ದು ಪ್ರಜೆಗಳಿಗೆ ಸರಿಯಾದ ಸರ್ಕಾರ ಕೊಡಲಿಕ್ಕೆ. ಪ್ರಜೆಗಳ ಹಿತದೃಷ್ಟಿಯಿಂದ ಇರತಕ್ಕ ಸಂಪನ್ಮೂಲಗಳನ್ನು ಬಳಸಿ ಎಷ್ಟು ಹಿತ ಸಾಧನೆ ಮಾಡಲಿಕ್ಕೆ ಆಗುತ್ತದೋ ಅಷ್ಟು ಹಿತ ಸಾಧನೆ ಮಾಡಲಿಕ್ಕೆ ಆಗಿ ಇರತಕ್ಕದ್ದು. ಈ ಮಂತ್ರಿಮಂಡಲ ರಚನೆ ಮಾಡಬೇಕಾದರೆ ಪ್ರಾಮಾಣಿಕರು, ಕಾರ್ಯಕ್ಷಮತೆ ಉಳ್ಳವರು ಸರಿಯಾಗಿ ಇರತಕ್ಕ ಜನ, ಸರಿಯಾದ ಆಟಿಟ್ಯೂಡ್ ಇರತಕ್ಕ ಜನ, ಅವರನ್ನು ಆಶ್ರಯಿಸಿ ಇತರರು ಅವರನ್ನು ಆರಿಸಿ ಮಂತ್ರಿಮಂಡಲ ಮಾಡಬೇಕು. ನಾವು ಏನು ಮಾಡುತ್ತಿದ್ದೇವೆ? ಮಂತ್ರಿ ಮಂಡಲ, ಆ ಜಾತಿ, ಆ ಪಂಥ, ಆ ಕುಲ, ಆ ಗೋತ್ರ, ಆ ಜಿಲ್ಲೆ, ಆ ಜಿಲ್ಲೆಯ ಆರ್ಥೋಡೈಸ್ಡ್. ಇವರನ್ನು ಆಯ್ಕೆ ಮಾಡುತ್ತಾ ಹೋಗುತ್ತೇವೆ. ಇದರಿಂದಾಗಿ ಅನೇಕ ಜಟಿಲತೆಗಳು ಇರುತ್ತವೆ. It will flow out. ಸರ್ಕಾರ ಏನು ಕೊಡುವುದಕ್ಕೆ ಆಗುವುದಿಲ್ಲ. ಆಡಳಿತ ಸುಧಾರಣಾ ಆಯೋಗ ಇದೆ. ನಮಗೇನು ಹೇಳುತ್ತದೆ? 1/10th of the total number of legislators shall form the Government. ಇದು ಆಗುತ್ತಿದೆಯಾ? ನಮ್ಮಲ್ಲಿ 224 ಶಾಸಕರು ಇದ್ದಾರೆ.

ಅಧ್ಯಕ್ಷರು : ಎಆರ್‌ಸಿ ರಿಪೋರ್ಟ್ ಇದೆ. ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಟಿ ರಿಪೋರ್ಟ್ ಬಂದಿದ್ದು, ಮಾನ್ಯ ಹನುಮಂತಯ್ಯನವರು ಛೇರ್ಮನ್ ಆಗಿದ್ದಾಗ. 1968ನೇ ಇಸವಿಯಲ್ಲಿ ಬಂತು. 1968ರಿಂದ ಇಲ್ಲಿಯವರೆಗೆ ಅಂದರೆ ಸುಮಾರು 31 ವರ್ಷ ಕಳೆದಿದೆ. ಸರ್ಕಾರ ಕೆಲಸ ಮಾಡತಕ್ಕ ರೂಪರೇಷೆಗೂ, ಅವತ್ತಿನಿಂದ ಇವತ್ತಿಗೆ ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಹೊಸ ಹೊಸ ಇಲಾಖೆಗಳು, ಹೊಸ ಹೊಸ ಜವಾಬ್ದಾರಿಗಳನ್ನೆಲ್ಲಾ ಸರ್ಕಾರಗಳು ಹೊರುತ್ತಿವೆ. ಹಾಗಾಗಿ that advise may not totally relevant but it is not totally irrelevant to the size of the ministry.

ಡಾ|| ಎಂ.ಪಿ. ಕರ್ಕಿ : ಅದು ಎಷ್ಟು ಹೇಳಿದರೂ ಕೂಡ ಇದೇ ತರಹ ಇದೆ. ಇನ್ನೂ ಮೂರು ನಾಲ್ಕು ಹೆಚ್ಚು ಕಡಿಮೆ ಆಗಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದಾದ ಮೇಲೆ ಡೀಸೆಂಟ್ರಲೈಜೇಷನ್ ಕಾನ್‌ಸೆಫ್ಟ್ ತೆಗೆದುಕೊಂಡು ಬಂದು ಜಿಲ್ಲೆಗೆ ಇಬ್ಬಿಬ್ಬರು ಮಂತ್ರಿಗಳನ್ನು ಮಾಡಿದೆವು. ತಾಲ್ಲೂಕಿಗೆ ಒಬ್ಬೊಬ್ಬರು ಮಂತ್ರಿಗಳನ್ನು ಮಾಡಿದ್ದೇವೆ. ನಿಮ್ಮ ಎಲ್ಲಾ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಅನ್ನು ಜಿಲ್ಲೆಗಳ ಅಧಿಕಾರಿಗಳು ನೋಡಿಕೊಳ್ಳುತ್ತಿರುವಾಗ, ಜಿಲ್ಲಾ ಪಂಚಾಯಿತಿಗಳು ನೋಡಿಕೊಳ್ಳುತ್ತಿರಬೇಕಾದರೆ, ಇಷ್ಟೊಂದು ಸಂಖ್ಯೆಯ ಮಂತ್ರಿಗಳು ಬೇಕೇ?

ಅಧ್ಯಕ್ಷರು : ಈ ಬಗ್ಗೆ ಸರ್ಕಾರ ಇಲ್ಲಿ ಉತ್ತರ ಹೇಳುತ್ತದೆ.

ಡಾ|| ಎಂ.ಪಿ. ಕರ್ಕಿ : ತಾವು ಹೇಳಿದಿರಿ, ಡೆವಲಪ್‌ಮೆಂಟ್ ಆಗಬೇಕು, ಆಗುತ್ತದೆ ಎಂದು ಹೇಳಿದಿರಿ. ಎಜ್ಯುಕೇಷನ್‌ಗೆ ಐದು ಜನ ಮಂತ್ರಿಗಳ ಅಗತ್ಯ ಇಲ್ಲ. ಇದರ ಅಗತ್ಯ ಇದೆಯಾ? ಹೈಯರ್ ಎಜ್ಯುಕೇಷನ್, ಲೋಯರ್ ಎಜ್ಯುಕೇಷನ್, ಅಡಲ್ಟ್ ಎಜ್ಯುಕೇಷನ್, ಮೆಡಿಕಲ್ ಎಜ್ಯುಕೇಷನ್, ಟೆಕ್ನಿಕಲ್ ಎಜ್ಯುಕೇಷನ್ ಎಂದು ಈ ರೀತಿ ಬೇಕೇ? ಹಾಗೆಯೇ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ್ಯಾವ ಮಂತ್ರಿಗಳು ಯಾರು ಎಂದು ಗೊತ್ತಾಗುವುದಿಲ್ಲ. ಪೌರಾಡಳಿತಕ್ಕೆ ಯಾವ್ಯಾವ ಮಂತ್ರಿಗಳು ಯಾವ್ಯಾವುದಕ್ಕೆ ಎಂಬುದು ಗೊತ್ತಾಗುತ್ತಾ ಇಲ್ಲ. ವಿಭಜನೆ ಎಲ್ಲಿಂದ ಶುರು ಆಗುತ್ತದೆ? ಯಾರಿಗೆ ನಾವು ಪ್ರಶ್ನೆ ಕೇಳಬೇಕು ಎಂದು ಸ್ವಲ್ಪ ಕನ್‌ಫ್ಯೂಷನ್ ಆಗುತ್ತದೆ. ಅಂತಹ ರೀತಿಯ ಮಂತ್ರಿಮಂಡಲ ಸರಿ ಇಲ್ಲ. ಇರತಕ್ಕದ್ದು ಜಾಸ್ತಿ. 8ಕ್ಕೆ ಒಬ್ಬರನ್ನು ತೆಗೆದುಕೊಳ್ಳಿ, ಇದೇನು ಇದು? ಇದೇನು ಕಥೆ ಇದು? 50 ಜನ ಮಂತ್ರಿಗಳು.

ಅಧ್ಯಕ್ಷರು : ಸೀನಿಯರ್ ಬ್ಯೂರೋಕ್ರಟ್ ಒಬ್ಬರು ಒಂದು ಕಾಮೆಂಟ್ ಮಾಡಿದ್ದಾರೆ. Earlier there were five Secretaries attached to one minister. Now five ministers are attached to one Secretary.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಈ ಕಡೆಗೆ ಬಂದರೆ ಏನಾದರೂ ಅರ್ಥ ಆಗುತ್ತದೆ. ಈಗ ಆ ಕಡೆಯಲ್ಲಿ ಇದ್ದಾರೆ. ಇಲ್ಲಿ ಅವರು ತತ್ವಗಳನ್ನೆಲ್ಲಾ ಹೇಳುತ್ತಾರೆ. ಮಾನ್ಯ ಮಾಧುಸ್ವಾಮಿ ಮತ್ತು ಮಾನ್ಯ ಕರ್ಕಿಯವರೆಲ್ಲಾ ಹೇಳುತ್ತಾರೆ. ಅವರಿಗೆ ಈ ಕಡೆ ಬಂದು ಗೊತ್ತೇ ಇಲ್ಲ. ಹೇಗೆ ಏನು ಎಂದು ಸಹ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಫೈಲೇ ಹೋಗದಿರುವಂತಹ ಮಂತ್ರಿಗಳ ಲಿಸ್ಟನ್ನು ಹೇಳಿಬಿಡುತ್ತೇನೆ. ಮಾನ್ಯ ಬಚ್ಚೇಗೌಡರು ಆಮೇಲೆ ಉತ್ತರ ಹೇಳಲಿ. ಯಾವ್ಯಾವ ಮಂತ್ರಿಗಳಿಗೆ ಫೈಲೇ ಹೋಗುವುದಿಲ್ಲ ಎಂಬುದನ್ನು ಹೇಳುತ್ತೇನೆ. ಫೈಲೇ ಹೋಗದಂತಹ ಮಂತ್ರಿಗಳು ಈ ಸದನದಲ್ಲಿ ಇದ್ದಾರೆ. ಅದೂ ವಾರಕ್ಕೆ ಒಂದು ಫೈಲ್ ಸಹ ಅವರಿಗೆ ಹೋಗುವುದಿಲ್ಲ. ತಿಂಗಳಿಗೆ ಒಂದು ಫೈಲ್ ಕೂಡ ಹೋಗುವುದಿಲ್ಲ, ಆದರೆ ಮಂತ್ರಿಗಳಾಗಿದ್ದಾರೆ. ಅದಕ್ಕೇನು ಹೇಳುತ್ತೀರಿ?

ಡಾ|| ಎಂ.ಪಿ. ಕರ್ಕಿ : ಕರ್ನಾಟಕ ವಿಧಾನಸಭೆಯಲ್ಲಿ ಏನು ಆಗುತ್ತದೆ ಅದನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯ ಸರ್ಕಾರ ಇದೆ, ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಈ

ರಾಜಕೀಯದ ಬಗ್ಗೆ ಅನಂತರ ಮಾತನಾಡೋಣ. ಬೇಕಾದರೆ ಚರ್ಚೆ ಮಾಡೋಣ. ಚರ್ಚೆಗೆ ಇದು ಅವಕಾಶ ಅಲ್ಲ. ಇಷ್ಟು ಜನ ಮಂತ್ರಿಗಳು ಏನಿದ್ದಾರೆ ಈ ಮಂತ್ರಿಗಳ ನೇಮಕ ಯಾವ ಆಧಾರದ ಮೇಲೆ ಆಗಿದೆ? ಅವರೇನು ಒಳ್ಳೆಯವರು ಎಂದು ಹೇಳಿಯಾ? ಅವರು ಪ್ರಾಮಾಣಿಕರು ಎಂದರೆ ಅವರು ಸರಿಯಾಗಿದ್ದಾರೆ ಎಂದು ಹೇಳಿಯಾ? ಅವರ ಇತಿಹಾಸವನ್ನು ತೆಗೆದುಕೊಳ್ಳುತ್ತಾರಾ? ಏನೇನು ಮಾಡಿದ್ದಾರೆ ಎಂದು ನೋಡುತ್ತಾರಾ? ಅವರ ಅನುಭವವನ್ನು ತೆಗೆದುಕೊಳ್ಳುತ್ತಾರಾ? ಏನೂ ಇಲ್ಲ. ಇದಕ್ಕೆಲ್ಲಾ ಜಾತಿ ಆಧಾರ, ಉಪ ಜಾತಿ ಆಧಾರ, ಜಿಲ್ಲೆ ಆಧಾರ, ಏತಕ್ಕಾಗಿ ಹೀಗೆ ಎಂದು ಹೇಳಬೇಕು. ಅನೇಕ ಮಂತ್ರಿಗಳು ನಾವು ರಾಜ್ಯಕ್ಕೆ ಮಂತ್ರಿಗಳು ಎಂಬುದನ್ನು ಮರೆತು ಬಿಡುತ್ತಾರೆ. ನಾನು ಈ ಜಿಲ್ಲೆಯ ಮಂತ್ರಿ. ನಾನು ಈ ಕಾನ್‌ಸ್ಟಿಟ್ಯೂಯೆನ್ಸಿ ಮಂತ್ರಿ, ಕಾನ್‌ಸ್ಟಿಟ್ಯೂಯೆನ್ಸಿ ಒಳಗೇ ಇರುತ್ತಾರೆ. ಒಂದು ವಾರದಲ್ಲಿ ನಾನು ಅನೇಕ ಮಂತ್ರಿಗಳನ್ನು ನೋಡಿದ್ದೇನೆ. ನಮ್ಮ ಜಿಲ್ಲೆಗೆ ಯಾರೂ ಬಂದಿಲ್ಲ.

5.50 ಪಿ.ಎಂ.

ಕೆಲವು ಜನ ಮಂತ್ರಿಗಳು ಗೋವಾದಿಂದ ಕಾರವಾರಕ್ಕೆ ಬಂದು ಮತ್ತೆ ವಿಮಾನದಲ್ಲಿ ಗೋವಾಕ್ಕೆ ಹೋಗುತ್ತಾರಷ್ಟೆ. ಆ ಜಿಲ್ಲೆಗಳ ಬಗ್ಗೆ ಅವರಿಗೆ ಕಲ್ಪನೆಯೇ ಇರುವುದಿಲ್ಲ. ಆ ಜಿಲ್ಲೆಯಲ್ಲಿ ಏನು ಜರುಗುತ್ತಿದೆ, ಜಿಲ್ಲಾ ಆಡಳಿತ ಸುಧಾರಿಸುವುದಕ್ಕೆ ಏನು ಮಾಡಬೇಕೆಂಬುದರ ಸ್ಪಷ್ಟ ಕಲ್ಪನೆಯೇ ಇಲ್ಲ. ತಾವು ಜಿಲ್ಲೆಗೆ ಒಬ್ಬರಂತೆ ಉಸ್ತುವಾರಿ ಮಂತ್ರಿಗಳನ್ನು ನೇಮಿಸಿರುವುದೇನೋ ಸರಿ, ಅವರು ಜಿಲ್ಲೆಯ ಉಸ್ತುವಾರಿ ನೋಡಿಕೊಳ್ಳಲಿ. ಆದರೆ, ತಾವು ಈ ರಾಜ್ಯದ ಮಂತ್ರಿಗಳೆಂಬ ಕಲ್ಪನೆ ತಮ್ಮ ಮಂತ್ರಿಮಂಡಲದಲ್ಲಿರುವ ಅನೇಕರಿಗೆ ಗೊತ್ತಿಲ್ಲ. ಕೆಲವರು ಆ ಬಗ್ಗೆ ದೂರುತ್ತಾರೆ. ಆದುದರಿಂದ, ತಾವು ಇಷ್ಟು ದೊಡ್ಡ ಮಂತ್ರಿಮಂಡಲ ರಚಿಸಿ ಜನತೆಗೆ ಹೊರೆಯಾಗಿರುವುದು ಸರಿಯಲ್ಲ ಹಾಗಾದರೆ, ಮಂತ್ರಿಮಂಡಲವನ್ನು ಸಾರಾಸಗಟಾಗಿ ತಿರಸ್ಕರಿಸುವಿರಾ ಎಂದರೆ ಅದೂ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮೇಧಾವಿಗಳಾಗಿದ್ದು, ಪ್ರಜ್ಞಾವಂತರಾಗಿದ್ದು, ಜೊತೆಗೆ ಓದಿದವರೂ ಆಗಿದ್ದು ಸಮರ್ಥವಾಗಿ ಉತ್ತರ ಕೊಡುವವರಾಗಿದ್ದಾರೆ. ಅವರು ಬಹಳ ವರ್ಷಗಳ ಬಳಿಕ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದರು. ಹದಿನೈದು ವರ್ಷಗಳ ಹಿಂದೆಯೇ ಮುಖ್ಯಮಂತ್ರಿಗಳಾಗಿದ್ದಿದ್ದರೆ ಬಹುಶಃ ಇಡೀ ರಾಷ್ಟ್ರದಲ್ಲಿಯೇ ಒಬ್ಬ ಒಳ್ಳೆಯ ಮುಖ್ಯಮಂತ್ರಿಗಳು ತಾವೆಂದು ಹೇಳಿಸಿಕೊಳ್ಳಬಹುದಾಗಿತ್ತು. ಆದರೆ, ಬಹಳ ವರ್ಷಗಳ ಹಿಂದೆಯೇ ಮುಖ್ಯಮಂತ್ರಿಗಳಾಗುವುದಕ್ಕೆ ತಮಗೆ ಆರೋಗ್ಯ ಸರಿ ಇರಲಿಲ್ಲವೇ ಅಥವಾ ಏನು ಕಾರಣವೋ ಗೊತ್ತಿಲ್ಲ. ಮತ್ತು ಅವರ ಶಕ್ತಿಗನುಸಾರವಾಗಿ ಕಾರ್ಯವನ್ನು ಸಾಧಿಸಲಾಗದಿರುವುದಕ್ಕಾಗಿ ನಾನು ವ್ಯಥೆಪಡುತ್ತೇನೆ. ಅವರಲ್ಲಿ ಯಾವುದೇ ರೀತಿಯ ಪಕ್ಷಪಾತವಿಲ್ಲ. ಕೆಲಸದ ವಿಷಯವಾಗಿ ಅವರ ಬಳಿಗೆ ಯಾರೇ ಹೋಗಲಿ ಸಾಧ್ಯವಾದರೆ ಸೈ ಎನ್ನುತ್ತಾರೆ ಇಲ್ಲದಿದ್ದರೆ ಇಲ್ಲವೆನ್ನುತ್ತಾರೆ. ಅದಕ್ಕೋಸ್ಕರ ನಾನು ಅವರನ್ನು ಅಭಿನಂದಿಸುತ್ತೇನೆ. ತಮ್ಮ ಮಂತ್ರಿಮಂಡಲದಲ್ಲಿ ಮಾನ್ಯ ಬಚ್ಚೇಗೌಡರು, ಮಾನ್ಯ ಗೋವಿಂದೇಗೌಡರು, ಶ್ರೀ ಮಹದೇವಪ್ಪನವರು ಹಾಗೂ ಇನ್ನು ಕೆಲವು ಒಳ್ಳೆಯ ಮಂತ್ರಿಗಳಿದ್ದು, ತಮಗೆ ವಹಿಸಿದ ಖಾತೆಯ ಕೆಲಸವನ್ನು ಅವರು ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ. ಇಷ್ಟು ಜನ ಒಳ್ಳೆಯ ಮಂತ್ರಿಗಳ ಜೊತೆಗೆ ಪ್ರಯೋಜನವಿಲ್ಲದಿರುವಂಥ ಅನೇಕ ಮಂತ್ರಿಗಳನ್ನು ನಾವು ನೋಡುತ್ತಿದ್ದೇವೆ. ಕೆಲಸ ಮಾಡಿಸುವ ನಿಮಿತ್ತ ಅವರ ಬಳಿಗೆ ಹೋದಾಗ ನೋಡುತ್ತೇವಲ್ಲಾ, ಪ್ರಯೋಜನವಿಲ್ಲದಿರುವ ಮಂತ್ರಿಗಳಿಂದ ಈ

ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿದ್ದು ಅವರುಗಳಿಂದ ಈ ರಾಜ್ಯದ ಜನತೆ ಮೇಲೆ ತಮ್ಮ ಇಂಪ್ರೆಷನ್ ಅನ್ನು ಮೂಡಿಸುವುದಕ್ಕಾಗಲಿಲ್ಲ. ಮಾಡಿರುವ ಸಾಧನೆ ಕುರಿತು ಹೇಳುವುದಾದರೆ, ಕೆಲವೊಂದು ಸಾಧನೆ ಮಾಡಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ಸಾಧನೆಯ ಪ್ರಯೋಜನ ಜನರಿಗೆ ಮುಟ್ಟಿಲ್ಲ. ನೀವು ಮಾಡಿರುವ ಸಾಧನೆ ಜನರಿಗೆ ಗೊತ್ತಾಗದಿರುವಂಥ ಪರಿಸ್ಥಿತಿ ಇದೆ. ತಾವು ಮಂತ್ರಿಮಂಡಲ ರಚಿಸಿ ವಿವಿಧ ಖಾತೆಗಳನ್ನು ಮಂತ್ರಿಗಳಿಗೆ ಹಂಚಿದ್ದರೂ ತಮಗೇಕೆ ಖಾತೆ ಕೊಟ್ಟಿದ್ದಾರೆ, ನನ್ನ ಕರ್ತವ್ಯವೇನು, ನಾನೇನು ಮಾಡಬೇಕಾಗಿದೆ ಎಂಬ ಕರ್ತವ್ಯದ ಅರಿವೇ ಅನೇಕ ಮಂತ್ರಿಗಳಿಗಿರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಒಂದು ತೆಂಗಿನ ಕಾಯಿ ಇರುತ್ತದೆ, ಹೊರಗೆ ಸಿಪ್ಪೆ, ಶೆಲ್ ಇದ್ದರೆ ಅದರೊಳಗಡೆ ಕೊಬ್ಬರಿ, ನೀರು ತುಂಬಿರುತ್ತದೆ, ನೀರು, ಕೊಬ್ಬರಿ ಮತ್ತು ಶೆಲ್ ಅನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಸಿಪ್ಪೆ ಇರುತ್ತದೆ. ಆ ರೀತಿ ನಮ್ಮ ಮಂತ್ರಿಮಂಡಲ ಇರಬಹುದು.

ಡಾ|| ಎಂ.ಪಿ. ಕರ್ಕಿ : ತಮ್ಮ ಮಂತ್ರಿಮಂಡಲ ಆ ತರಹ ಇದ್ದಿದ್ದರೆ ಜನರು ಮೆಚ್ಚುತ್ತಿದ್ದರು. ದುರ್ದೈವವಶಾತ್ ಆ ರೀತಿ ಇಲ್ಲ. ತಮ್ಮ ಮಂತ್ರಿಮಂಡಲವನ್ನು ಭಾರತದ ಕ್ರಿಕೆಟ್ ತಂಡಕ್ಕೆ ಹೋಲಿಸುವುದು ಸೂಕ್ತವೆನಿಸುತ್ತದೆ. ಭಾರತದ ಕ್ರಿಕೆಟ್ ತಂಡದಲ್ಲಿ ವಿಶ್ವವಿಖ್ಯಾತ ಬ್ಯಾಟ್ಸ್‌ಮನ್‌ಗಳಾದ ಶ್ರೀ ಸಚಿನ್ ತೆಂಡೂಲ್ಕರ್, ಶ್ರೀ ಸೌರವ್ ಗಂಗೂಲಿ, ಶ್ರೀ ರಾಹುಲ್ ದ್ರಾವಿಡ್, ಶ್ರೀ ಅಜಯ್ ಜಡೇಜಾ ಇರುವಂತೆ ಉತ್ತಮ ಬೌಲರ್‌ಗಳೂ ಸಹ ಇದ್ದಾರೆ. ಆದರೆ ಪ್ರದರ್ಶನ! ಅದೇ ತರಹ ತಮ್ಮ ಮಂತ್ರಿಮಂಡಲವಿದೆ. ಜನರಿಗೆ ಬೇಕಾಗಿರುವುದು ಫಲಿತಾಂಶ. Not, what you are, what you have. ಹಾಗಾಗಿ ತಾವು ಇದರಲ್ಲಿ ವಿಫಲರಾಗಿದ್ದೀರಿ. With all the good things in you, you have not been able to carry the people with you and convince the people of the State that this is a good government. Unfortunately, it is true.

MR. SPEAKER : Unfortunately, our experience is people do not travel anywhere. They are static where they are. It is we who keep travelling from here to there. It is an irony.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಆಡಳಿತದ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಇಷ್ಟು ದೊಡ್ಡದಾಗಿ ಕಟ್ಟಿಸಿದ ಸಂದರ್ಭದಲ್ಲಿ ಇಷ್ಟೊಂದು ಹಣ ಖರ್ಚು ಮಾಡಿ, ಇಷ್ಟು ದೊಡ್ಡ ಕಟ್ಟಡ ಕಟ್ಟುವ ಅಗತ್ಯವೇನಿದೆ ಎಂದು ಆ ಕಾಲದಲ್ಲೇ ಅನೇಕ ರಾಜಕೀಯ ನಾಯಕರುಗಳು ಪ್ರಶ್ನಿಸಿರುವುದನ್ನು ಕೇಳಿದ್ದೇನೆ. ನಾನು ಆಗ ರಾಜಕೀಯದಲ್ಲಿ ಇರಲಿಲ್ಲ. ಆದರೆ, ಇಷ್ಟು ದೊಡ್ಡ ಕಟ್ಟಡ ಕಟ್ಟಿದರೂ ಸಹ ಇಲಾಖೆಗಳು ಕಾರ್ಯನಿರ್ವಹಿಸಲು ಕೊಠಡಿಗಳೇ ಸಾಕಾಗುತ್ತಿಲ್ಲ. ಬಹು ಮಹಡಿಗಳ ಕಟ್ಟಡದ 1ನೇ, 2ನೇ, 3ನೇ, 4ನೇ ಮತ್ತು 5ನೇ ಹಂತದ ನಿರ್ಮಾಣಗಳಾದರೂ ಕೂಡ ಅನೇಕ ಇಲಾಖೆಗಳು ಈಗಲೂ ವಿಧಾನಸೌಧದಿಂದ ಹೊರಗಡೆ ಇವೆ. ಉದಾಹರಣೆಗೆ, ಪಿಯುಸಿ ಬೋರ್ಡ್, ಕಾಲೇಜು ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಇತ್ಯಾದಿ. ಈ ಇಲಾಖೆಗಳು ವಿಧಾನಸೌಧದ ಒಳಗಡೆಯೇ

ಬಂದಿಲ್ಲ. ಇದಕ್ಕೆ ನೀವಿನ್ನೂ ವ್ಯವಸ್ಥೆಯೇ ಮಾಡಿಲ್ಲ. ವಿಧಾನಸೌಧದ ಹೊರಗಡೆ ಇರುವ ಇಲಾಖೆಗಳಲ್ಲಿ ಸಿಬ್ಬಂದಿಗಳೂ ಸಹ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ತಾವು ಹೊರಗಡೆಯಿರುವ ಸೆಕ್ರೆಟೇರಿಯಟ್ ಅನ್ನು ನೋಡಿಲ್ಲ, ಆಗಾಗ್ಗೆ ನಾನು ಸೆಕ್ರಟೇರಿಯಟ್‌ಗೆ ಹೋಗುತ್ತಿರುತ್ತೇನೆ. ವಾರದಲ್ಲಿ ಎರಡು ದಿವಸ ಸಭೆ ಕರೆದಾಗ ಬಹು ಮಹಡಿಗಳ ಕಟ್ಟಡದಲ್ಲಿ ಕೆಲಸದ ನಿಮಿತ್ತ ಒಂದೂವರೆ ದಿವಸ ಇರುತ್ತೇನೆ. ಮೀಟಿಂಗ್ ಮುಗಿದ ಬಳಿಕ ಬಹುಮಹಡಿಗಳ ಕಟ್ಟಡದಲ್ಲಿ ಒಂದೂವರೆ ದಿವಸ ಅಥವಾ ಕನಿಷ್ಠ ಒಂದು ದಿವಸವಾದರೂ ಕೆಲಸ ಮಾಡಿಸುವ ಸಲುವಾಗಿ ತಿರುಗಾಡುತ್ತಿರುತ್ತೇನೆ. ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರನ್ನು ಕಾಣಲು ಕಛೇರಿಗೆ ಹೋದರೆ ಕುಳಿತುಕೊಳ್ಳಲು ಅಲ್ಲಿ ಜಾಗವೇ ಇಲ್ಲ. ಶಾಸಕರಾದವರು ಹೋದರೆ ಎಲ್ಲಿ ಕುಳಿತುಕೊಳ್ಳಬೇಕು? ಅಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಕುರ್ಚಿಯಲ್ಲೇ ಕುಳಿತುಕೊಳ್ಳಬೇಕು. ತಾವು ಇಷ್ಟು ವ್ಯವಸ್ಥೆ ಮಾಡಿದರೂ ಕೂಡ ಅವ್ಯವಸ್ಥೆ ಇದೆ. ಕಛೇರಿ ತುಂಬಾ ಟೇಬಲ್ಲುಗಳೇ ತುಂಬಿದ್ದು, ನೀವು ಯಾವುದೇ ಸಮಯದಲ್ಲಿ ಕಛೇರಿಗೆ ಹೋಗಿ ನೋಡಿದರೂ ಅರ್ಧಕ್ಕರ್ಧ ಕುರ್ಚಿಗಳು ಖಾಲಿ ಇರುತ್ತವೆ. ಕಾರ್ಯದರ್ಶಿಯವರನ್ನು ಕಾಣುವ ಸಲುವಾಗಿ ದೂರವಾಣಿ ಮುಖಾಂತರ ಕರೆ ಮಾಡಿದರೂ ಯಾರೂ ಸರಿಯಾಗಿ ಉತ್ತರಿಸುವುದಿಲ್ಲ. ಕಾರ್ಯದರ್ಶಿಯವರನ್ನು ಖುದ್ದಾಗಿ ಕಾಣಲು ಅನೇಕ ಸಲ ಹೋದರೂ ಅವರು ಇರುವುದಿಲ್ಲ. ಅದೇ ರೀತಿ ಬೇರೆ ಬೇರೆ ಇಲಾಖೆಗಳ ಕಾರ್ಯದರ್ಶಿಯವರನ್ನು ಕಾಣುವುದು ತುಂಬಾ ಕಷ್ಟವಾಗಿರುತ್ತದೆ. ಉದಾಹರಣೆಗೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿರುವ ಶ್ರೀ ಹರೀಶಗೌಡರು ಪ್ರಾಮಾಣಿಕರು, ನಿಷ್ಠರು ಹಾಗೂ ದಕ್ಷತೆಯಿಂದ ಕೆಲಸ ಮಾಡತಕ್ಕಂಥವರಾಗಿದ್ದು, ಅವರನ್ನು ಭೇಟಿಯಾಗಲು ಕಳೆದ ಒಂದು ವಾರದಿಂದ ಪ್ರಯತ್ನಿಸುತ್ತಿದ್ದರೂ ಸಾಧ್ಯವಾಗಿಲ್ಲ. ಮಧ್ಯಹ್ನ ಭೋಜನ ವಿರಾಮದ ಸಮಯದಲ್ಲಿ ಅವರ ಬಳಿಗೆ ಹೋಗುತ್ತೇನೆ, ಸುಮಾರು ಒಂದೂವರೆ ಗಂಟೆ ಕಾಲ ಕಛೇರಿಗೆ ತಿರುಗಾಡುತ್ತೇನೆ. ಶ್ರೀ ಹರೀಶಗೌಡರನ್ನು ಭೇಟಿಯಾಗುವುದಕ್ಕೆ ಒಂದು ವಾರದಿಂದ ಪ್ರಯತ್ನಿಸುತ್ತಿದ್ದರೂ ಸಿಗುತ್ತಿಲ್ಲ. ಆದುದರಿಂದ, ಸಂಜೆ 3 ಗಂಟೆಯಿಂದ 5 ಗಂಟೆವರೆಗೆ ಇಲಾಖಾ ಕಾರ್ಯದರ್ಶಿಗಳು ಕಛೇರಿಯಲ್ಲಿರುವಂತೆ ತಾವು ಸೂಚಿಸಬೇಕು. ಅಲ್ಲದೆ, ಕಛೇರಿಯಲ್ಲಿ 'ಸಂದರ್ಶನ ವೇಳೆ' ಎಂದು ಹಾಕಿರುತ್ತೀರಿ, ಯಾರಿಗೆ ಸಂದರ್ಶನ? ಜನರಿಗಾಗಿ ಸಂದರ್ಶನವೇ? ಜನರು ಒತ್ತಟ್ಟಿಗಿರಲಿ, ಇಲಾಖಾ ಮುಖ್ಯಸ್ಥರು ಶಾಸಕರುಗಳನ್ನೇ ಕಾಣುವುದಕ್ಕಾಗುತ್ತಿಲ್ಲ. ಈ ಕುರಿತು ನಾನೊಮ್ಮೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ತಕರಾರು ಮಾಡಿ ನೋಡಿ, ನಾನು ಕಳೆದ ಮೂರು ದಿವಸಗಳಿಂದ ಸತತವಾಗಿ ಕಾರ್ಯದರ್ಶಿಯವರನ್ನು ಕಾಣಲು ಹೋಗುತ್ತಿದ್ದರೂ ಅವರನ್ನು ಭೇಟಿಯಾಗಲು ಸಾಧ್ಯವಾಗುತ್ತಿಲ್ಲವೆಂದಾಗ 'ಇಲಾಖಾ ಮುಖ್ಯಸ್ಥರು ಸಂಜೆ 3 ರಿಂದ 5 ಗಂಟೆ ಸಮಯದಲ್ಲಿ ಕಛೇರಿಯಲ್ಲಿರಲು ನಿರ್ದಿಷ್ಟ ಸೂಚನೆಯಿದೆ' ಎಂದು ಹೇಳಿದರು.ಇಲಾಖಾ ಮುಖ್ಯಸ್ಥರು ಎಲ್ಲಿ ಹೋಗಿದ್ದಾರೆಂದು ಕೇಳಿದರೆ, ಮಂತ್ರಿಗಳು ಕರೆದಿರುವುದರಿಂದ ಹೋಗಿರುತ್ತಾರೆಂದು, ಯಾವುದೋ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾರೆಂದು ಅಥವಾ ಇನ್ನೆಲ್ಲಿಯೋ ಹೋಗಿದ್ದಾರೆಂದು ಹೇಳುತ್ತಾರೆ. ಅವರು ಎಷ್ಟು ಹೊತ್ತಿಗೆ ಬರುತ್ತಾರೆಂದರೆ ಮಾಹಿತಿಯೂ ಇಲ್ಲ. ಹೋಗಲಿ ಅವರನ್ನು ಕಾಣಲು ನಾನು ಎಷ್ಟು ಹೊತ್ತಿಗೆ ಬರಲಿ? ನಾಲ್ಕು ಗಂಟೆಗೆ ಬರಲೇ? ಐದು ಗಂಟೆಗೆ ಬರಲೇ ಎಂದಾಗ 'ಗೊತ್ತಿಲ್ಲ, ನೀವು ಬರುವಾಗ ಫೋನ್ ಮಾಡಿ ಬನ್ನಿ' ಎನ್ನುತ್ತಾರೆ. ಮತ್ತು ಎಷ್ಟು ಫೋನ್ ಮಾಡಿದರೂ ಕೂಡ

ಇಲಾಖಾ ಮುಖ್ಯಸ್ಥರು ಇದ್ದಾರೆಂದು ಹೇಳುವುದಿಲ್ಲ. ಅಲ್ಲದೆ, ಮತ್ತೆ ಅವರು ನಮಗೆ ಫೋನ್ ಸಹ ಮಾಡುವುದಿಲ್ಲ. ಕೆಲವು ಕಛೇರಿಗಳಲ್ಲಿ ಹೇಳುತ್ತಾರೆ. ಉದಾಹರಣೆಗೆ, ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿರುವ ಅಧಿಕಾರಿಗಳನ್ನು ಕಾಣಲು ಹೋದಾಗ ಇರಲಿಲ್ಲವೆಂದರೆ 'ತಮ್ಮ ಫೋನ್ ನಂಬರ್ ಕೊಡಿ, ಅವರು ಬಂದಾಗ ತಮಗೆ ಫೋನ್ ಮಾಡಿ ತಿಳಿಸುತ್ತೇವೆ' ಎನ್ನುತ್ತಾರೆ.

ಅಧ್ಯಕ್ಷರು : ಇದಕ್ಕಿಂತಲೂ ಆಸಕ್ತಿದಾಯಕವಾಗಿರುವುದೇನೆಂದರೆ, ನೀವು ಒಂದು ಕಛೇರಿಗೆ ಫೋನ್ ಮಾಡಿದ ತಕ್ಷಣವೇ ಅತ್ತ ಕಡೆ ಇರುವವರು ಫೋನ್ ಕೈಗೆತ್ತಿಕೊಂಡು ಇಂತಹ ಕಾರ್ಯದರ್ಶಿಯವರ ಕಛೇರಿ ಎಂದು ಹೇಳದೆ 'ನಮಸ್ಕಾರ ಸಾರ್, ನಾನು ಮುನಿಯಪ್ಪ ಮಾತನಾಡುತ್ತಿರುವುದು' ಎಂದು ಹೇಳುತ್ತಾನೆ. ಯಾವ ಮುನಿಯಪ್ಪ, ನಾವು ಮಾಡಿದ ಫೋನ್ ಕರೆ ಯಾವ ಆಫೀಸಿಗೆ ಹೊರಟು ಹೋಯಿತು ಎಂದು ಸಂಶಯಿಸಿ 'ಇದು ಇಂತಹ ಕಾರ್ಯದರ್ಶಿಯವರ ಕಛೇರಿಯೇ' ಎಂದು ಕೇಳಿದರೆ ಆತ 'ಹೂಂ' ಎನ್ನುತ್ತಾನೆ, ಯಾರು ಮಾತನಾಡುತ್ತಿರುವುದು ಎಂದರೆ 'ನಾನು ಜವಾನ' ಎಂದೆನ್ನುತ್ತಾನೆ. ಪಿ.ಎ. ಇದ್ದಾರೆಯೇ ಎಂದರೆ ಅವರು ಇಲ್ಲವೆಂದು, ಸಾಹೇಬರು ಇದ್ದಾರೆಯೇ ಎಂದರೆ ಅವರು ಮೀಟಿಂಗ್‌ಗೆ ಹೋಗಿದ್ದಾರೆಂದೂ ಅವರು ಯಾವಾಗ ಬರುತ್ತಾರೆಂದರೆ, ಗೊತ್ತಿಲ್ಲವೆನ್ನುತ್ತಾನೆ. ಇಷ್ಟಕ್ಕೆ ನಾವು ಒಂದು ಫೋನ್ ಮಾಡಬೇಕು.

ಡಾ|| ಎಂ.ಪಿ. ಕರ್ಕಿ : ತಮಗೂ ಕೂಡ ಆ ಅನುಭವ ಆಗಿದೆ ಎಂದಾಯಿತು.

ಅಧ್ಯಕ್ಷರು : ಅದೆಲ್ಲವನ್ನೂ ಮುಗಿಸಿಕೊಂಡೇ ನಾನು ಇಲ್ಲಿಗೆ ಬಂದಿರುವುದು. Those are all inherent deficiencies ಈ ಸರ್ಕಾರ, ಆ ಸರ್ಕಾರ ಎನ್ನುವ ಪ್ರಶ್ನೆಯಲ್ಲ. ನಾವು ಇದಕ್ಕೆ ಒಂದು ನಿಶ್ಚಿತವಾದ ವ್ಯವಸ್ಥೆ ಮಾಡಬೇಕು. This has come through for a last time. It is unfortunate. ವಿಸಿಟರ್ಸ್ ಮಂತ್ರಿಗಳನ್ನು ನೋಡುವುದಕ್ಕೆ ಬರುತ್ತಾರೆ. ಯಾರಾದರೂ ಮಂತ್ರಿಗಳಾಗಿದ್ದವರಿಗೆ ಅವರ ಅನುಭವ ಇದೆ. It is terrible.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರೂ ಇಲ್ಲೇ ಇದ್ದಾರೆ. ಇದು ಯಾವುದೇ ಪಾರ್ಟಿ ಎಂದು ಮಾತನಾಡದೆ, should we resign to this fate? ಅವರು ಯಾರಿಗೂ ಕೂಡ, ಯಾರ ಬಗ್ಗೆಯೂ ಯಾರಿಗೂ ಭಯವಿಲ್ಲ. ಸರ್ಕ್ಯುಲರ್ ಕಳುಹಿಸುತ್ತಾರೆ, ಮೂರರಿಂದ ಐದು ಗಂಟೆಯವರೆಗೆ ಇರಬೇಕೆಂದು ಹೇಳುತ್ತಾರೆ, ಯಾರೂ ಇರುವುದಿಲ್ಲ. ಒಬ್ಬ ಸಾಮಾನ್ಯ ಪ್ರಜೆ ಏನು ಮಾಡಬೇಕು? What is the remedy left to him? ಯಾರ ಹತ್ತಿರ ಹೋಗಬೇಕು? ತಾವು ಹೇಳಿದ ಹಾಗೆ ಇದು ಮೊದಲಿನಿಂದಲೂ ಬಂದು ಬಿಟ್ಟಿದೆ. ಈ ವ್ಯವಸ್ಥೆ ಹದಗೆಟ್ಟಿದೆ ಎಂದು ಹೇಳುವುದು, should we resign to our fate? ಇದನ್ನು ಯಾರು ಮಾಡಬೇಕು?

ಅಧ್ಯಕ್ಷರು : ಜನರ ಆಟಿಟ್ಯೂಡ್ಸ್ ನೋಡಿ, ಮಂತ್ರಿಗಳು ನಾನ್ ಅಫಿಷಿಯಲ್ಸ್ ಹತ್ತಿರ ಅವರಿಗೆ ಟೈಮ್ ಇರುವುದಿಲ್ಲ, ಅಲ್ಲಿ ಏನು ಡಿಸಿಪ್ಲೀನ್ ಇರುವುದಿಲ್ಲ. ಬೆಳಿಗ್ಗೆ, ರಾತ್ರಿ, ಭಾನುವಾರ ಮತ್ತು ರಜಾದಿನಗಳಲ್ಲೂ ಬರುತ್ತಾರೆ. ಅರ್ಧ ರಾತ್ರಿಗೂ ಬರುವುದೇ. ಯಾವಾಗ ಬೇಕಾದರೂ ಫೋನ್

ಮಾಡುತ್ತಾರೆ. ಅವನು ಬಂದ ತಕ್ಷಣ ಇವರು ರೆಡಿ ಇರಬೇಕು. ಇವರು ಯಾರ ಜೊತೆ ಮಾತನಾಡುವ ಹಾಗೆ ಇಲ್ಲ, ಮೀಟಿಂಗ್ ಇಟ್ಟುಕೊಳ್ಳುವ ಹಾಗಿಲ್ಲ, ಅವನ ಕುಟುಂಬ ಇಲ್ಲ, ಅವನು ಬೇರೆ ಫೈಲ್ ನೋಡಬಾರದು, ಯಾವ ಕೆಲಸ ಅಟೆಂಡ್ ಮಾಡಬಾರದು, ಇವರು ಬಂದಿರುವುದು ಏತಕ್ಕೆ ಟ್ರಾನ್ಸ್‌ಫರ್ ಮಾಡಿಸಿ, ಉದ್ಯೋಗ ಕೊಡಿ ಇಲ್ಲ ಸಸ್ಪೆಂಡ್ ಆಗಿರುವವರಿಗೆ ರೀಇನ್‌ಸ್ಟೇಟ್ ಮಾಡಿಸಿ, ಇಲ್ಲ ಸೀಟ್ ಕೊಡಿಸಿ, ಇದಕ್ಕಾಗಿಯೇ ಅವರು ಬರುವುದು. ಕಾನ್‌ಸ್ಟಿಟ್ಯೂಯನ್ಸಿ ಜನ ಬರುವುದಿಲ್ಲ, ಸಾರ್ವಜನಿಕರ ಸಮಸ್ಯೆಗೆ ಬರುವುದಿಲ್ಲ. ಈ ಅಪಕೀರ್ತಿ ಎಷ್ಟೆಂದರೆ ಅವರಿಗೆ ಮೀಟ್ ಮಾಡದೆ ಸೀದಾ ಹೋದರೆ you should see the way they carry on the propoganda. It is a vicious circle. ಆಫೀಸರ್ಸ್ ಹತ್ತಿರ ಬಂದರೆ ಹಾಗೆ ಮಾಡುತ್ತಾರೆ, ನಾನ್ ಅಫೀಷಿಯಲ್ಸ್ ಹತ್ತಿರ ಈ ರೀತಿ ಎಕ್ಸ್‌ಪೆಕ್ಟ್ ಮಾಡುತ್ತಾರೆ, ಭೈಛಾನ್ಸ್ ನಾಳೆ ನಿಮ್ಮ ಪಾರ್ಟಿ ಪವರ್‌ಗೆ ಬರುತ್ತದೆ, ನೀವು ಮಿನಿಸ್ಟರ್ ಎಂದು ತಿಳಿದುಕೊಳ್ಳಿ, ನೀವು ರಾಜ್ಯದ ಮಂತ್ರಿ ಅಲ್ಲ, you are a bonded labour. That cannot happen. He is also an individual. He also has some private life. It is an agony. ಶಾಸಕರಿಗೂ ಅದೇ ಕೆಲಸ ಕೊಡುತ್ತಾರೆ. ಶಾಸಕರ ಭವನದ ಹತ್ತಿರ ಎಷ್ಟು ಕಷ್ಟಪಟ್ಟ ಏನೇನು ಪ್ರಯತ್ನ ಮಾಡಿ, ಸ್ವಲ್ಪ ಡಿಸಿಪ್ಲೀನ್ ಮೈನ್‌ಟೇನ್ ಮಾಡೋಣ ಎಂದರೆ, ಲೆಜಿಸ್ಲೇಟರ್ಸ್‌ದ್ದು ಏನೂ ಸಮಸ್ಯೆ ಇಲ್ಲ, ಲೆಜಿಸ್ಲೇಟರ್ಸ್ ಅಲ್ಲದೆ ಇರುವವರು ಗಿಜಿಸ್ಲೇಟರ್ಸ್ ಇವರದೇ ಕಾಟ. ಅವರಿಗೆ ಕಂಟ್ರೋಲ್ ಮಾಡುವುದು ಸಾಕಾಗಿದೆ. ಒಂದು ತಿಂಗಳಿಗೆ ಒಂಭತ್ತು ಲಕ್ಷ ರೂಪಾಯಿಗಳ ವಾಟರ್ ಬಿಲ್ ಕಟ್ಟುತ್ತಿದ್ದೆವು, ಒಂದು ಸರ್ಕ್ಯುಲರ್ ಕಳುಹಿಸಿ ಕಂಟ್ರೋಲ್ ಮಾಡಿದ ಮೇಲೆ 60 ರಿಂದ 70 ಸಾವಿರವಾಗಿದೆ. ನಲ್ಲಿ ಬಿಟ್ಟು ಹೋಗುತ್ತಿರುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ನೀನು ಯಾರಪ್ಪ ಎಂಎಲ್‌ಎನೇ ಅಲ್ಲ, ಎಂಎಲ್‌ಸಿ ನೇ ಅಲ್ಲ, ಎಂಪಿ ನೇ ಅಲ್ಲ, ಎಂಎಲ್‌ಹೆಚ್ ಮೆಂಬರ್ ಆಫ್ ದಿ ಲೆಜಿಸ್ಲೇಟರ್ಸ್ ಹೋಮ್, ಎಂಎಲ್‌ಎ ಹೋದರೂ ಬಿಡುವ ಹಾಗಿಲ್ಲ. ಮೆಂಬರ್ ಆಫ್ ಲೆಜಿಸ್ಲೇಟರ್ ಹೋಮ್ ಬಹಳ ಜನ ಆಗಿ ಬಿಟ್ಟಿದ್ದಾರೆ.

ಅಧ್ಯಕ್ಷರು : ಯಾವ ಕ್ಯಾಂಟೀನನ್ನೂ ನಾವು ಅಲ್ಲಿ ಸಕ್ಸಸ್‌ಫುಲ್ ಆಗಿ ನಡೆಸುವುದಕ್ಕಾಗಲಿಲ್ಲ. ಕ್ಯಾಂಟೀನ್ ಸಮಸ್ಯೆ ಬರುವುದೇ ಗೆಸ್ಟ್‌ಗಳಿಂದ. ಇವರ ಕಾಟದಿಂದ ರೂಮ್ ಬಾಯ್‌ಗಳನ್ನು ತೆಗೆದೆವು. ಎಷ್ಟು ಡಿಸಿಪ್ಲೀನ್ ಎನ್‌ಫೋರ್ಸ್ ಮಾಡುವುದು ಹೇಳಿ, ಕಾರಿಗೆ ಬಾಡಿಗೆ ಗಲಾಟೆ ಮಾಡುವುದೂ ಅವರೇ. ಎಲ್ಲಾ ಗೆಸ್ಟ್‌ಗಳ ಕಡೆಯಿಂದ ರಾಮಾಯಣ. ಇವೆಲ್ಲಾ ಕಾಮನ್ ಎಂದು ನಾನು ಹೇಳುವುದು. ಎಲ್‌ಹೆಚ್‌ನಲ್ಲಿ ಹೀಗೆ, ಮಿನಿಸ್ಟರ್ ಮನೆಯಲ್ಲಿ ಹೀಗೆ, ಸೆಕ್ರೆಟರಿ ಹತ್ತಿರ ಹೋದರೆ ಹೀಗೆ. These things have been continuing for a number of years.

Dr. M.P. Karki : Some remedy has to be done. We have to search and find out as to how to do it? ಇವತ್ತೂ ಐಎಎಸ್ ಆಫೀಸರ್ಸ್, ದೊಡ್ಡ ಆಫೀಸರ್ಸ್ ಅವರ ಬಗ್ಗೆ ಮಾತನಾಡುತ್ತೇವೆ. ಅವರೂ ಕೂಡ ಕೆಲಸ ಮಾಡತಕ್ಕಂತಹ ಸ್ಥಿತಿಯಲ್ಲಿದ್ದಾರಾ? ನಾನು ಒಬ್ಬ ಐಎಎಸ್

ಆಫೀಸರ್‌ಗೆ ಕಾಣುವುದಕ್ಕೆ ಹೋಗಿದ್ದೆ, ಒಳ್ಳೆಯ ಜನ, ಬೆಲ್ ಮಾಡಿದರೂ ಯಾರೂ ಬರಲಿಲ್ಲ. ಮತ್ತೆ ಬೆಲ್ ಮಾಡಿದರೂ ಐದು ನಿಮಿಷ ಬೆಲ್ ಮಾಡಿದರೂ ಯಾರೂ ಬರಲಿಲ್ಲ. ನಾನು ಹೇಳಿದೆ ಏನು ಸಾರ್ ಹೀಗೆ ಬೆಲ್ ಮಾಡುತ್ತಿದ್ದೀರಿ, ಯಾರೂ ಬರಲಿಲ್ಲವೆಂದು ಹೇಳಿದೆ, ಅವರು ಹೇಳಿದರು ಡಾ. ಕರ್ಕಿಯವರೇ, ಹೇಗಿದ್ದರೂ ನಾವು ಸಹಿಸಬೇಕಾಗುತ್ತದೆ. ನಾನು ಒಂದು ವೇಳೆ ಮೆಮೋ ಕೊಟ್ಟರೆ ನಾಳೆಗೆ ಒಂದು ರಜ ಕೊಡಿ ಎಂದು ಲೆಟರ್ ತೆಗೆದುಕೊಂಡು ಬರುತ್ತಾರೆ. ರಜ ತೆಗೆದುಕೊಂಡು ರಜೆ ಮೇಲೆ ಹೋಗುತ್ತಾನೆ. ಐದು ದಿವಸವಾದ ಮೇಲೆ ಬಂದು ನನಗೆ ಟ್ರಾನ್ಸಫರ್ ಆಗಿದೆ ಒಪ್ಪಿಗೆ ಕೊಡಿ ಎಂದು ಬರುತ್ತಾನೆ. That is the fate. ಅದಕ್ಕಾಗಿ ನಾನು ಹೇಳಿದೆ, ಸಿ ಮತ್ತು ಡಿ ವರ್ಗದ ನೌಕರರು ಈ ರಾಜ್ಯವನ್ನು ಆಳುತ್ತಿದ್ದಾರೆ not the IAS Officers. ನಾವು ಏನಾದರೂ ರೆಪ್ರಸೆಂಟೇಷನ್ ತೆಗೆದುಕೊಂಡು ಹೋದರೆ, ಐಎಎಸ್ ಆಫೀಸರ್ಸ್ ಮತ್ತು ಹೈಯರ್ ಆಫೀಸರ್ಸ್ ಸಿಗ್ನೇಚರ್ ಹಾಕಿ ಕೆಳಗೆ ಕಳುಹಿಸುತ್ತಾರೆ, ಜಾಯಿಂಟ್ ಸೆಕ್ರೆಟರಿ ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಸೆಕ್ಷನ್ ಆಫೀಸರ್ ಕೇಸ್ ವರ್ಕರ್‌ಗೆ ಹೋಗುತ್ತದೆ. ಆ ಕೇಸ್ ವರ್ಕರ್ ಸರಿ ಇದ್ದರೆ ಖಾಯಂ ಆಗುತ್ತದೆ. ಆ ಕೇಸ್ ವರ್ಕರ್ ಏನು ಬರೆಯುತ್ತಾನೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಪೌರಾಣಿಕ ನಾಟಕದಲ್ಲಿ ಮಧ್ಯದಲ್ಲಿ ಬಂದು 100-200 ನೋಟು ನೇತು ಹಾಕಿಕೊಳ್ಳುತ್ತಾರಲ್ಲಾ, ಆ ರೀತಿ 100-200 ನೋಟು ನೇತು ಹಾಕಿಕೊಂಡು ಯಾವುದಾದರೂ ಫೈಲ್ ಮೂವ್ ಮಾಡುವುದಕ್ಕೆ ನಿನಗೆ ಯಾವುದು ಬೇಕು ಕಿತ್ತುಕೋ ಎಂದು ಹೇಳಿದರೆ ಫೈಲ್ ತನ್ನಷ್ಟಕ್ಕೆ ತಾನೇ ಮೂವಾಗುತ್ತದೆ. ಇನ್ನು ಮೇಲೆ ಹಾಗೆ ಮಾಡಬೇಕು. ಕೈಯಲ್ಲಿ ದುಡ್ಡು ಕೊಡಬಾರದು, 100-200, 500ರ ನೋಟು ಹಾಕಿಕೊಂಡು ಸುಮ್ಮನೆ ನಿಂತುಕೊಳ್ಳುವುದು, ಈ ತರಹ ಇಲ್ಲಿ ಯಾರೂ ಕೇಳದೆಯೇ ಒಂದೊಂದು ಫೈಲ್ ಮೂವಾಗುತ್ತದೆ. ನಾವೇ ದುರ್ಯೋಧನನ ಪಾರ್ಟ್ ಮಾಡಿದ್ದೇವೆ, 100 ರೂಪಾಯಿಗೆ 10-15 ಪಾರ್ಟ್ ಮಾಡುವುದಕ್ಕಾಗುತ್ತಿಲ್ಲ. ಹೇಗೆಂದರೆ, 100 ರೂಪಾಯಿ ಬಿದ್ದು ಹೋಗುತ್ತದೆ ಎಂದು ನೋಡುತ್ತಾನೆ, ಇದು ಬಹಳ ಗಂಭೀರವಾಗಿದೆ. ಅದು ದೊಡ್ಡ ಪಾತ್ರ. ಜಾಸ್ತಿ ಅಲುಗಾಡಿದರೆ ದುಡ್ಡು ಬಿದ್ದು ಹೋಗುತ್ತದೆ.

ಡಾ|| ಎಂ.ಪಿ. ಕರ್ಕಿ : ಅದರಲ್ಲಿ ಕೊಡುವ ಪ್ರಶ್ನೆ ಇಲ್ಲ, ಕಿಸೆಗೆ ಕೈ ಹಾಕಿ ಕಿತ್ತುಕೊಳ್ಳುತ್ತಾರೆ. ಆ ಸ್ಥಿತಿಗೆ ನಾವು ಬಂದಿದ್ದೇವೆ.

ಅಧ್ಯಕ್ಷರು : ಕೋಸ್ಟಲ್ ಏರಿಯಾದಲ್ಲಿ ಲಿಟ್ರಸಿ ಪರ್ಸೆಂಟೇಜ್ ಜಾಸ್ತಿ, ಅದಕ್ಕೆ ಹಾಗೆ ಮಾಡುತ್ತಾರೆ. ಮಂಡ್ಯದಲ್ಲಿ ಅಷ್ಟು ಲಿಟ್ರಸಿ ಇಲ್ಲ ಅದಕ್ಕಾಗಿ ಹೀಗಿದ್ದಾರೆ.

ಡಾ|| ಎಂ.ಪಿ. ಕರ್ಕಿ : ನಾನು ನಮ್ಮ ಉತ್ತರ ಕರ್ನಾಟಕದ ಸ್ಥಿತಿ ಹೇಳುತ್ತಿಲ್ಲ, ಬೆಂಗಳೂರು ಸಚಿವಾಲಯದ ಪರಿಸ್ಥಿತಿ ಹೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಎಂ.ಎಸ್. ಬಿಲ್ಡಿಂಗ್ ಹತ್ತಿರ ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಸಾರಿ ಹೋಗಿ ಬರಬೇಕು. ಭಾರೀ ಮಾರ್ಕೆಟ್ ಇದೆ, ಸಿಟಿ ಮಾರುಕಟ್ಟೆಯಲ್ಲಿ ಅಷ್ಟು ಬಿಸಿನೆಸ್

ಆಗುವುದಿಲ್ಲ, ಜವಳಿ ಅಂಗಡಿ ಇದೆ, ಸೀರೆ ವ್ಯಾಪಾರ, ಪೆಟ್ಟಿಕೋಟ್ ವ್ಯಾಪಾರ ಎಲ್ಲಾ ಇದೆ. ಮಹಿಳಾ ಉದ್ಯೋಗಿಗಳು ಯಾರಿದ್ದಾರೆ ಹೆಚ್ಚಿನ ಸಮಯ ಅಲ್ಲಯೇ ಇರುತ್ತಾರೆ. ಪುಸ್ತಕದ ಅಂಗಡಿ ಇದೆ, ಹೋಗುವಾಗ ಪುಸ್ತಕ ತೆಗೆದುಕೊಂಡು ಕಛೇರಿಗೆ ಹೋಗುತ್ತಾರೆ, ಬರುವಾಗ ಅಲ್ಲಿ ಕೊಟ್ಟು ಬರುತ್ತಾರೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳನ್ನು ನಾವು 1978ರಿಂದ ಕಾಣುತ್ತಿದ್ದೇವೆ. ಅವರು ಆಗಲೂ ಹಾಗೆಯೇ ಇದ್ದರು, ಈಗಲೂ ಹಾಗೆಯೇ ಇದ್ದಾರೆ. ಅವರು ಯಾವಾಗಲೂ ಆಫೀಸಿಗೆ ಹೋಗುವುದಿಲ್ಲ. ಅವರು ಇದ್ದಲೇ ಜನ ಹೋಗಿ ಮಾತನಾಡಬೇಕು. ನಾನು ನೀವು ಹೇಳಿದ ಎಲ್ಲಾ ಜಾಗವನ್ನೂ ನೋಡಿದ್ದೇವೆ. ನನಗೆ ಹೇಳಬೇಕಾಗಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ ಕ್ಯಾಂಟೀನ್‌ನಲ್ಲಿರುತ್ತಾರೆ, ಇಲ್ಲ ಅಂಗಡಿಯಲ್ಲಿ ಇರುತ್ತಾರೆ. ಇನ್ನೊಂದು ಗುಂಪು ಅವರ ಇನ್‌ಕ್ರಿಮೆಂಟ್ ಬಗ್ಗೆ ಮಾತನಾಡುತ್ತಿರುತ್ತಾರೆ. ನಾವು ಯಾರು ಹೋದರೂ ನಮ್ಮ ಕಡೆ ನೋಡುವುದಿಲ್ಲ. ನಮ್ಮ ಹತ್ತಿರ ಮಾತನಾಡುವುದಿಲ್ಲ. ಒಂದು ವೇಳೆ ಕಾರ್ಯದರ್ಶಿಗಳನ್ನು, ಐಎಎಸ್ ಅಧಿಕಾರಿಗಳನ್ನು ನೋಡಬಹುದು, ನಾವು ಹೋದ ತಕ್ಷಣ ಸೀಟು ಬಿಟ್ಟು ಕೊಡುತ್ತಾರೆ. ನಮಗೆ ಮರ್ಯಾದೆ ಸಿಗುವುದಾದರೆ ಆ ಛೇಂಬರ್‌ನಲ್ಲಿ ನಿಮ್ಮ ಗುಮಾಸ್ತರಿಗೆ ಯಾರಿಗೂ ನೋಡುವುದಕ್ಕಾಗುವುದಿಲ್ಲ. ಅವರಿಗೆ ಏನಾದರೂ ಕಂಟ್ರೋಲ್ ಮಾಡದೇ ಹೋದರೆ, ಬಹಳ ಕಷ್ಟ. ಇವರು ನಮ್ಮ ವಿಲೇಜ್ ಅಕೌಂಟೆಂಟ್‌ಗೆ ಮಾದರಿಯಾಗಿ ಇರಬೇಕು. ಅವನು ಅಲ್ಲಿ ಐದು ರೂಪಾಯಿ ತೆಗೆದುಕೊಳ್ಳುತ್ತಾನೆಂದರೆ, ಆದರ್ಶ ಯಾವಾಗಲೂ ಮೇಲಿನಿಂದ ಕೆಳಗೆ ಇಳಿಯಬೇಕು.

ಡಾ|| ಎಂ.ಪಿ. ಕರ್ಕಿ : ನಮ್ಮ ಆಫೀಸ್ ಟೈಮ್ 10.30 ರಿಂದ 5.30. 10.30ಕ್ಕೆ ಯಾರೂ ಬಂದಿರುವುದಿಲ್ಲ. 11.00ಗಂಟೆಗೆ ಬರುತ್ತಾರೆ, 12.15ಕ್ಕೆ ಕಾಫಿ ಟೈಮ್, 12ಕ್ಕೆ ಹೊರಟು ಬಿಡುತ್ತಾರೆ, ಬರುವುದು ಮತ್ತೆ ಅರ್ಧ ಗಂಟೆ ಮೇಲೆ. ಒಂದೂವರೆ ಗಂಟೆಗೆ ಪುನಃ ಲಂಚ್ ಟೈಮ್. ಒಂದು ಗಂಟೆಗೆ ಹೋದರೆ ಬರುವುದು ಮೂರು ಗಂಟೆಗೆ. ನಾಲ್ಕು ಗಂಟೆಗೆ ಕಾಫಿ ಟೈಮ್, ಐದು ಗಂಟೆಗೆ ಆಫೀಸ್‌ನಲ್ಲಿ ಯಾರೂ ಇರುವುದಿಲ್ಲ. ಎಲ್ಲಾ ಬಸ್ಸಿಗಾಗಿ ಕ್ಯೂ ನಿಂತಿರುತ್ತಾರೆ. ತಾವು ನೋಡಬೇಕು, ಆಫೀಸ್‌ನಲ್ಲಿ ಹೋದವರಿಗೆ ಕೆಲಸಗಳು ಹೇಗೆ ಆಗಬೇಕು? ಯಾವ ರೀತಿ ಕೆಲಸ ಮಾಡುತ್ತಾರೆ, ತನಗೆ ಏನಾದರೂ ಒಂದು ಕ್ರೆಡಿಟ್ ಬರುವುದಿದ್ದರೆ, ಅವರು ಕೆಲಸ ಮಾಡಿದರೆ ಕ್ರೆಡಿಟ್ ಬರುತ್ತದೆ. ನೀವು ಮಂತ್ರಿ ಮಂಡಲದಲ್ಲಿ ಏನೇ ನಿರ್ಣಯ ಮಾಡಿ, ಏನು ಸರ್ಕಸ್ ಮಾಡಿದರೂ ಕೂಡ ಒಳ್ಳೆಯ ಹೆಸರು ಬರುವುದಿಲ್ಲ. I am coming to that at a later stage.

ಶ್ರೀ ಜೆ.ಹೆಚ್. ಪಟೇಲ್ : ಒಬ್ಬ ಆಫೀಸರ್ ಮನೆಗೆ ಫೋನ್ ಮಾಡಿದರೆ ಅವರ ಪತ್ನಿ ಹೇಳಿದರು, ಸಾಹೇಬರು ಆಫೀಸಿಗೆ ಹೋಗಿದ್ದಾರೆ ಎಂದು ಅರ್ಧ ಗಂಟೆ ಬಿಟ್ಟು ಮತ್ತೆ ಫೋನ್ ಮಾಡಿದರೆ ಆಫೀಸರ್ ಮಲಗಿದ್ದಾರೆ, ಎಂದು ಹೇಳಿದರು ಅದಕ್ಕೆ ನಾನು ಆಫೀಸ್‌ಗೆ ಹೋಗಿದ್ದಾರೆ ಎಂದು ಹೇಳಿದಿರಿ. ಈಗ ಮಲಗಿದ್ದಾರೆ ಎಂದು ಹೇಳುತ್ತೀರಿಲ್ಲಿ, ಎಂದರೆ ಅಲ್ಲಿಯೇ ಮಲಗಿದ್ದಾರೆ ಎಂದು ಹೇಳಿದ್ದರು

(ನಗು)

ಶ್ರೀ ಕೆ.ಎಸ್. ಪುಟ್ಟಣ್ಣಯ : ಸನ್ಮಾನ್ಯ ಸಭಾಧ್ಯಕ್ಷರೇ, ಕೆಲವು ಐ.ಎ.ಎಸ್ ಅಧಿಕಾರಿಗಳು ಗೌರವಯುತವಾಗಿ ನಗು ನಗುತ್ತಾ ನೀವು ಬಂದ ಕೆಲಸವೇನೆಂದು ಕೇಳುತ್ತಾರೆ. ಆ ಕೆಲಸ ಆಗುತ್ತದೋ ಬಿಡುತ್ತದೋ ಆ ವಿಷಯ ಬೇರೆ, ಆದರೆ ಕೆಲವು ಐ.ಎ.ಎಸ್. ಅಧಿಕಾರಿಗಳು ಒಂದು ತರಹ ವಾಲಗದ ಕಂಪನಿಯವರ ತರಹ ಇರುತ್ತಾರೆ. ಮನೆಯಲ್ಲಿ ಅವರ ಹೆಂಗಸರ ಗತಿ ಏನೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ಕೆಲವರಿಗೆ ನಗುವುದೂ ಗೊತ್ತಿಲ್ಲ. ನಗಿಸುವುದೂ ಗೊತ್ತಿಲ್ಲ. ಯಾವಾಗಲೂ ಮುಖ ಗಂಟು ಹಾಕಿಕೊಂಡಿರುತ್ತಾರೆ. ಏನು ಮಾಡೋಣ? ನಮ್ಮ ಮಧ್ಯೆ ಇವರೂ ಕೂಡ ಶಾಪದಿಂದ ಹುಟ್ಟಿದ್ದಾರೆ ಎಂದು ಕೊಂಡು ನಾವು ಸುಮ್ಮನೆ ಕಾಲ ತಳ್ಳಬೇಕಷ್ಟೇ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಕಾರ್ಯದರ್ಶಿಗಳ ಕಾರ್ಯವೈಖರಿ ಬಗ್ಗೆ ನಾನು ಹೇಳುತ್ತಿದ್ದೆ. ಕಾರ್ಯದರ್ಶಿಗಳಿಗಾಗಲೀ ಅಥವಾ ಬೇರೆ ಯಾರಿಗಾದರೂ ಆಗಲೀ ಫೋನ್ ಮಾಡಿ ಅವರು ಎಲ್ಲಿಗೆ ಹೋಗಿದ್ದಾರೆ ಎಂದು ಕೇಳಿದರೆ, 'ಅವರು ಆಚೆಗೆ ಹೋಗಿದ್ದಾರೆ ಸಾರ್' 'ಕಾಫಿಗೆ ಹೋಗಿದ್ದಾರೆ' 'ಈಗ ಬರುತ್ತಾರೆ, ಸೀಟಿನಲ್ಲಿ ಇಲ್ಲ' ಇದೇ ರೀತಿಯ ಉತ್ತರಗಳು ಬರುತ್ತವೆ. ಅವರು ಆ ಸೀಟಿನಲ್ಲಿ ಇರುವುದು ಯಾವಾಗ? ಜನರ ಕೆಲಸ ಮಾಡುವುದು ಯಾವಾಗ? ಜನರ ಕೆಲಸ ಮಾಡಲಿಕ್ಕಾಗಿಯೇ ತಾನೇ ಅವರು ಇರುವುದು? ಆ ಕೆಲಸವನ್ನು ಅವರು ಯಾವಾಗ ಮಾಡುತ್ತಾರೆ? ಏತಕ್ಕಾಗಿ ಅವರು ಇದ್ದಾರೆ? ಅಂತಹವರನ್ನು ಏಕೆ ಇರಲು ಬಿಟ್ಟಿದ್ದೀರಿ ಎಂಬ ಯೋಚನೆಯನ್ನು ಇವತ್ತು ನಾವು ಮಾಡಬೇಕಾಗುತ್ತದೆ. ನಮ್ಮಲ್ಲಿ ಅನೇಕ ಅಧಿಕಾರಿಗಳಿದ್ದಾರೆ. ನಾನು ಒಂದು ಲೆಟರ್ ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಯವರೇ ಅದಕ್ಕೆ ಸಿಗ್ನೇಚರ್ ಹಾಕಿ ಸಂಬಂಧಪಟ್ಟವರಿಗೆ ಕಳುಹಿಸಿದರು. ಆ ಪತ್ರ ಅವರ ಕಛೇರಿಯಿಂದ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ಗೆ ಹೋಯಿತು. 'ಅರ್ಜೆಂಟ್' ಎಂಬ ಲೇಬಲ್ ಅನ್ನು ಹಚ್ಚಿಕೊಂಡು ಆ ಪತ್ರ ಹೋಯಿತು. In the H.U.D., it was there for a month, without disposal. ಕೇಳಿದರೆ ಮಂತ್ರಿಗಳು ಬೇರೆ ಹೇಳಿದ್ದಾರೆ ಎಂದರು. I had to threaten them of dire consequences. ನಾನು ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ ಎಂದು ಅವರಿಗೆ ಹೇಳಬೇಕಾಯಿತು. ನಾನು ಆ ರೀತಿ ಎಚ್ಚರಿಸಿದ ಮೇಲೆಯೇ ಅದರ ಮೇಲೆ ಕ್ರಮ ಜರುಗಿಸಲಾಗಿದೆ. ಈ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರತಕ್ಕ ಲೆಟರ್ ಅನು ಫುಟಪ್ ಮಾಡಿದ ಫೈಲ್‌ನಲ್ಲಿ ಅಲ್ಲಿನ ಅಂಡರ್‌ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿಯವರು ಅದನ್ನು ಕ್ಲೋಸ್ ಮಾಡಿ ಎಂದು ಬರೆದಿದ್ದರು. ನಾನು ಇಂದು ಈ ವಿಚಾರವನ್ನು ಅನಿವಾರ್ಯವಾಗಿ ವಿಧಾನಸಭೆಯಲ್ಲಿ ಪ್ರಸ್ತಾಪಿಸಬೇಕಾಯಿತು. ಸೆಕ್ರೆಟರಿಯವರು ಕ್ಲೋಸ್ ಮಾಡಿ ಎಂದು ಹೇಳಿ ಬರೆದರೆ ಅದಕ್ಕೆ ಜೀವದಾನ ಕೊಡತಕ್ಕಂಥ ಅಶ್ವಿನಿ ಕುಮಾರರು ಅಲ್ಲಿದ್ದಾರೆ. ಆ ಫೈಲ್ ಕ್ಲೋಸ್ ಮಾಡಿ ಎಂದು ಹೇಳಿದರೂ ಕೂಡ ಅದಕ್ಕೆ ಖಾಯಂ ಆಗಿ ಜೀವದಾನ ಕೊಡತಕ್ಕಂಥ ಅಶ್ವಿನಿಕುಮಾರರು ಅಲ್ಲಿದ್ದಾರೆ. ಒಬ್ಬರು 'ಅಮರನಾರಾಯಣ' ಎನ್ನುವವರು, ಮತ್ತೊಬ್ಬರು, 'ಗಣಾಚಾರಿ' ಎನ್ನುವವರು. ನಾನು

ಇವತ್ತು ಅನಿವಾರ್ಯವಾಗಿ ಈ ಇಬ್ಬರು ಅಧಿಕಾರಿಗಳ ಹೆಸರುಗಳನ್ನು ಹೇಳಲೇಬೇಕಾಯಿತು. ನಾನು ಎಷ್ಟು ಬಾರಿ ಹೇಳಿದರೂ ಕೂಡ ಕಾರ್ಯದರ್ಶಿಯವರ ಹತ್ತಿರ ಡಿಸ್ಕಸ್ ಮಾಡಬೇಕು ಎನ್ನುತ್ತಿದ್ದರು. ನಾನು ಒಮ್ಮೆ ಕಾರ್ಯದರ್ಶಿಯವರು ಇದ್ದಾಗಲೇ ಇವತ್ತು ಡಿಸ್ಕಸ್ ಮಾಡಿ ಎಂದು ಹೇಳಿದೆ. ಆಗ ಅವರು 'ಇಲ್ಲ' ಎಂದು ಹೇಳಿ ಜಾರಿಕೊಂಡರು. ಕಾರ್ಯದರ್ಶಿಯವರು ಫೈಲ್ ಮೇಲೆ close the file ಎಂದು ಬರೆದರೂ ಕೂಡ they don't bother about it. ಎಲ್ಲಾದರೂ ಸ್ವಲ್ಪ ದಕ್ಷಿಣೆ-ಗಿಕ್ಷಿಣೆ ಬಿದ್ದೀತು ಎಂಬ ನಿರೀಕ್ಷೆ ಅವರಿಗಿತ್ತೋ ಏನೋ ಅದು ನನಗೆ ಗೊತ್ತಿಲ್ಲ. ಒಂದು ಮುನಿಸಿಪಾಲಿಟಿಗೆ 90 ಲಕ್ಷ ರೂ.ಗಳು ಬಿಡುಗಡೆ ಮಾಡಿದರೆ, ಮತ್ತೊಂದು ಮುನಿಸಿಪಾಲಿಟಿಗೆ 2 ಲಕ್ಷ ರೂ. ಬಿಡುಗಡೆ ಮಾಡುತ್ತಾರೆ. ಈ ರೀತಿ ಎಲ್ಲಾದರೂ ತಾರತಮ್ಯ ಮಾಡುವುದುಂಟೇ? ದಕ್ಷಿಣೆ ಬಿದ್ದರೆ ಈ ರೀತಿ ಮಾಡುವುದೇ? ಇವರು ಎಲ್ಲಾ ಮುನಿಸಿಪಾಲಿಟಿಗಳನ್ನು ಕೊಲ್ಲುತ್ತಾರೆ ಅಷ್ಟೇ. ಇದಕ್ಕೆ ಸಂಬಂಧಪಟ್ಟವರ ಹೆಸರುಗಳನ್ನು ನಾನು ಆಗಲೇ ಹೇಳಿದೆ. ನಾನು ಅವರ ಹೆಸರುಗಳನ್ನು ವಿಧಿ ಇಲ್ಲದೆ ಹೇಳಬೇಕಾಯಿತು, ನಾನು ಬಾಕಿ ಯಾರ ಹೆಸರನ್ನೂ ಕೂಡ ಹೇಳಲಿಕ್ಕೆ ಹೋಗಲಿಲ್ಲ. ಅನಿವಾರ್ಯವಾಗಿ ನಾನು ಹೇಳಬೇಕಾಗಿ ಬಂದಿದ್ದರಿಂದ ಇಲ್ಲಿ ಅದನ್ನು ಹೇಳುತ್ತಿದ್ದೇನೆ. ಅಂತಹ ಅಧಿಕಾರಿಗಳು ಎಲ್ಲಿದ್ದಾರೆ ಎಂಬುದನ್ನು ಹುಡುಕಿ ನೋಡಿ, ಅವರಿಗೆ ಏನು ಮಾಡಬೇಕೋ ಆ ಶಿಕ್ಷೆ ಕೊಡಿ, ಅಂತಹವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಿ. ಒಂದೆರಡು ಫೈಲ್‌ಗಳು ನನ್ನ ಹತ್ತಿರ ಇವೆ.....

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಕರ್ಕಿಯವರೇ, ದಯವಿಟ್ಟು ಒಂದು ನಿಮಿಷ. ಒಂದು ಸಣ್ಣ ಉದಾಹರಣೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ದಿನಾಂಕ 31.3.1999ಕ್ಕೆ ಮಂಗಳೂರು ಮಹಾನಗರ ಪಾಲಿಕೆ 30 ಲಕ್ಷ ರೂ.ಗಳ ಸ್ಪೆಷಲ್ ಗ್ರಾಂಟ್ ಸರ್ಕಾರದ ಹೆಚ್‌ಯುಡಿ ಇಲಾಖೆಯಿಂದ ಮಂಜೂರಾಗಿತ್ತು. ಅದಕ್ಕೆ ಸಂಬಂಧಪಟ್ಟ ಚೆಕ್‌ನ ಡೇಟ್ ಆಗಿ ಹೋಯಿತೋ ಏನೋ ಗೊತ್ತಿಲ್ಲ. ಟ್ರೆಜರಿಗೆ ಚೆಕ್ ನಗದಿಗೆ ಸ್ಟೇ ಬಂದಿತು. ಆ ಚೆಕ್ ಅನ್ನು ಪಾಸ್ ಮಾಡಲಿಕ್ಕಾಗಲಿಲ್ಲ. ಅದರ ನಂತರ ಕರೆಸ್ಪಾಂಡೆನ್ಸ್ ಶುರುವಾಯಿತು. ಇವತ್ತು ನಾವು ಜುಲೈ ತಿಂಗಳಿನಲ್ಲಿದ್ದೇವೆ. ಇವತ್ತಿನತನಕ ಆ ಸ್ಟೇ ಬಂದಿದ್ದನ್ನು ವೆಕೇಟ್ ಮಾಡಲಿಕ್ಕೆ, ಟ್ರೆಜರಿಗೆ ಒಂದು ಮಾಹಿತಿ ನೀಡಿ ಆ ಚೆಕ್ ಅನ್ನು ಪಾಸ್ ಮಾಡಬೇಕು ಎಂದು ಸೂಚನೆ ಕೊಡಲಿಕ್ಕೆ ಆಗಿಲ್ಲ. ಮಹಾನಗರ ಪಾಲಿಕೆಯ ಮೇಯರ್‌ರವರು ಮತ್ತು ಇತರ ಅಧಿಕಾರಿಗಳು ಬಂದರೂ ಕೂಡ ಇದನ್ನು ಕ್ಲಿಯರ್ ಮಾಡಲಿಕ್ಕಾಗಲಿಲ್ಲ. ಯಾವುದೋ ಕೇಸ್ ವರ್ಕರ್‌ನ ಹತ್ತಿರ ಸಂಬಂಧಪಟ್ಟ ಲೆಟರ್ ಸಿಕ್ಕಿಹಾಕಿಕೊಂಡಿತ್ತು. ಒಬ್ಬ ಸೆಕ್ರೆಟರಿಯನ್ನು ಕಾಂಟ್ಯಾಕ್ಟ್ ಮಾಡಿದರೂ ಆ ಕೆಲಸ ಆಗಲಿಲ್ಲವೆಂದರೆ ನಾವು ಇವತ್ತು ಯಾವ ದುರಾವಸ್ಥೆಯಲ್ಲಿದ್ದೇವೆ ಎಂಬುದನ್ನು ತೋರಿಸುತ್ತದೆ ಎಂದು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ಫೈಲ್‌ಗಳಿಗೆ ಸಂಬಂಧಪಟ್ಟ ಹಾಗೆ ಹೇಳಲಿಚ್ಛಿಸುತ್ತೇನೆ. ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿಯ ಕಾಂಪೌಂಡರ್ಸ್‌ಗಳ ಸೇವೆಯನ್ನು ಸರ್ಕಾರ ಮುಂದುವರೆಸಿತು. ಅವರಿಗೆ ಸರ್ಕಾರ ಪಗಾರವನ್ನೂ ಕೂಡ ನೀಡಿತು. ಅವರಿಗೆ ಸ್ಕೇಲ್ ಕೊಟ್ಟು ಇಂಕ್ರಿಮೆಂಟ್ ಕೊಟ್ಟು ಅವರಿಗೆ ಪ್ರಮೋಷನ್ ಕೂಡ ಆಯಿತು. ಕೆಲವು ಜನರಿಗೆ ರಿಟೈರ್‌ಮೆಂಟ್ ಆದಾಗ ಪೆನ್‌ಷನ್ ಸಿಗದೇ ಆಘಾತವಾಯಿತು. They have not been

absorbed in the Government service, inspite of having received their remuneration pay and everything from the Government. Their services were not regularised. ಈ ಫೈನಲ್ 1987ರಲ್ಲಿ ಪ್ರಾರಂಭವಾಯಿತು. ನಾನು ಇದರ ಬಗ್ಗೆ 1996ರಿಂದ ಪ್ರಯತ್ನ ಮಾಡುತ್ತಿದ್ದೇನೆ. I have been after this file so that 47 people would get something for their livelihood. ಪಾಪ ರಿಟೈರ್ ಆಗಿರುವವರಲ್ಲಿ ಅನೇಕ ಜನ ಕೂಡ ಸತ್ತು ಹೋದರು. ಪೆನ್‌ಷನ್ ನಿರೀಕ್ಷೆಯಲ್ಲೇ ಅವರು ಸತ್ತು ಹೋದರು. ಅವರು ಸತ್ತು ವರ್ಷದ ಮೇಲಾಯಿತು. ಇದಕ್ಕೆ ಸಂಬಂಧಪಟ್ಟ ಫೈಲ್ ವಿಲೇವಾರಿ ಆಗುವುದು ಯಾವಾಗ? ಅದಕ್ಕಾಗಿ ಎಷ್ಟು ಕಡೆ ಓಡಾಡಬೇಕು? ಆರೋಗ್ಯ ಇಲಾಖೆಯಿಂದ ಕಡತ ಹೊರಗೆ ಬರಬೇಕಾದರೆ ಹೆಚ್ಚು ಕಡಿಮೆ ಒಂದು ವರ್ಷವಾಯಿತು. ಅಲ್ಲಿಂದ ಆ ಕಡತ ಕಾನೂನು ಇಲಾಖೆ, ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹೋಯಿತು. ಕಾಂಪೌಂಡರನ್ನು ಕೆಪಿಎಸ್‌ಸಿ ನೇಮಕಾತಿ ಮಾಡುವುದಿಲ್ಲ. ಹೀಗಿರುವಾಗ ಇದಕ್ಕೆ ಸಂಬಂಧಪಟ್ಟ ಕಡತ ಒಪ್ಪಿಗೆಗಾಗಿ ಕೆಪಿಎಸ್‌ಸಿ ಹೋದಾಗ ನನಗೆ ಆಶ್ಚರ್ಯವಾಯಿತು. ಕಡತ ಅಲ್ಲಿಗೇಕೆ ಹೋಗಬೇಕು? ಕಡತ ಅಲ್ಲಿಗೆ ಹೋಗಿ ಅಲ್ಲಿ ಎರಡು ತಿಂಗಳು ಕಳೆಯಿತು. Now I hope it will be disposed of within this month. ನಾನು ಈಗಾಗಲೇ ಇದರ ಬಗ್ಗೆ ಡಿಪಿಎಆರ್ ಸೆಕ್ರೆಟರಿಗೆ ದಯವಿಟ್ಟು ಇದನ್ನು ಮಾಡಿಕೊಡಿ, ಕೆಲವರು ಈಗಾಗಲೇ ಸತ್ತು ಹೋದರು, ಇನ್ನು ಕೆಲವು ಜನ ಪೆನ್‌ಷನ್ ಯಾವಾಗ ಬರುತ್ತದೆಂದು ಕಾತುರದಿಂದ ಕಾಯುತ್ತಿದ್ದಾರೆ ಎಂದು ಹೇಳಿದ್ದೇನೆ. ಆ ಜನ ತೀರಾ ಬಡವರು. 1987-99ರವರೆಗೆ ಕಳೆದ 12 ವರ್ಷಗಳಿಂದ ಅವರು ಪಿಂಚಣಿಗಾಗಿ ಕಾಯುತ್ತಿದ್ದಾರೆ. ನಾನು ಪ್ರಯತ್ನ ಮಾಡಿದರೂ ಕೂಡ it has not seen the light of the day. 1996ರಿಂದ ನಾನು ಆ ಫೈಲನ ಹಿಂದೆ ಇದ್ದೇನೆ. I am after that file.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರು ಕೇವಲ ರೋಗದ ಬಗ್ಗೆಯೇ ವರ್ಣನೆ ಮಾಡುತ್ತಿದ್ದೀರಿ. ಈ ರೋಗ ಬಹಳ ದಿವಸಗಳಿಂದ ಇದೆ. ಈ ರೋಗವನ್ನು ದೆಹಲಿಯಿಂದ ಬೆಂಗಳೂರಿನವರೆಗೆ ಅಥವಾ ದೆಹಲಿಯಿಂದ ಚೆನ್ನೈಯವರೆಗೆ ಸರಿಪಡಿಸುವುದಕ್ಕೆ ಏನು ಮಾಡಬೇಕು? ಈಗ ನಾವು ಬೇರೆ ರಾಷ್ಟ್ರಗಳಲ್ಲಿ ಅಲ್ಲಿ ಆಡಳಿತ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿದ್ದೇವೆ. ಅಧಿಕಾರಿಶಾಹಿಗಳ ಡ್ಯೂಟಿ ಏನು? ಜನಪ್ರತಿನಿಧಿಗಳ ಡ್ಯೂಟಿ ಏನು? ಮತದಾರರ ಡ್ಯೂಟಿ ಏನು ಎಂಬ ಬಗ್ಗೆ ಅಲ್ಲಿನ ರಾಷ್ಟ್ರಗಳಲ್ಲಿ ಒಂದು ಸಿಸ್ಟಮ್ ಇದೆ. ಇಂತಹ ಒಂದು ಸಿಸ್ಟಮ್ ನಮ್ಮಲ್ಲಿ ಬಹಳ ದಿವಸಗಳಿಂದ ಕೆಟ್ಟು ಹೋಗಿರುವುದರಿಂದ, ಅದಕ್ಕೆ ನಾವೇನು ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನು ನೀಡಲು ಮಾನ್ಯ ಅಧ್ಯಕ್ಷರು ಆಗಲೇ ಹೇಳಿದರು. ಮಾನ್ಯ ಸದಸ್ಯರು ಡಾಕ್ಟರ್‌ರಾಗಿದ್ದಾರೆ. ನಾವು ನಿಮಗೆ ಔಷಧಿ ಏನು ಎಂದು ಕೇಳಿದರೆ, ನೀವು ರೋಗವನ್ನೇ ಹೇಳುತ್ತಾ ಹೋಗುತ್ತಿದ್ದೀರಿ. ನಮಗೆ ಈಗ ಔಷಧಿ ಏನು ಎಂಬುದು ಬೇಕಾಗಿದೆ.

ಡಾ॥ ಎಂ.ಪಿ. ಕರ್ಕಿ : ರೋಗದ ವರ್ಣನೆಯನ್ನು ಮಾಡದ ಹೊರತು ಅದಕ್ಕೆ ಔಷಧಿಯನ್ನು ಕೊಡಲಿಕ್ಕಾಗುವುದಿಲ್ಲ. ಮೊದಲು ರೋಗದ ವರ್ಣನೆಯಾಗಬೇಕು, ಅದು ಏನೇನು ಆಗಿದೆ, ಏನು

ಹೋಗಿದೆ, ಅವರೇನು ಹೇಳುತ್ತಾರೆ, ರೋಗದ ಲಕ್ಷಣಗಳು ಚಿಹ್ನೆಗಳು ವರ್ಣನೆಯಾದ ಮೇಲೆಯೇ ಅದಕ್ಕೆ ಔಷಧಿ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ರೋಗವನ್ನು ಎಕ್ಸ್‌ಪ್ಲೈನ್ ಮಾಡಿದರೆ ಈ ಡಾಕ್ಟರ್ ಏನಾದರೂ ಔಷಧಿ ಕೊಟ್ಟು ರೋಗವನ್ನು ನಿವಾರಣೆ ಮಾಡುತ್ತಾರೋ ಏನೋ ಎಂಬುದು ಮಾನ್ಯ ಕರ್ಕಿಯವರ ಅಭಿಪ್ರಾಯವಾಗಿದೆ. ಆದರೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ತಿರುಗಿ ಅವರಿಗೆ ಏನು ಔಷಧಿ ಕೊಡಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಡಾಕ್ಟರ್‌ರಾಗಿದ್ದಾರೆ, ಅವರೇನಾದರೂ ಖಾಯಿಲೆಗೆ ರೂಪುರೇಷೆಯನ್ನೇನಾದರೂ ಕೊಡುತ್ತಾರೆಂದು ಹೇಳಿದರೆ, ಅವರು ಅದಕ್ಕೆ ನಮ್ಮಲ್ಲಿ ಏನೂ ಕೂಡ ಔಷಧಿ ಇಲ್ಲ ನಿಮ್ಮಲ್ಲಿ ಏನಿದೆ ಎಂಬುದನ್ನು ಹೇಳಿ ಎಂದು ಹೇಳಿದರೆ ಹೇಗೆ?

ಶ್ರೀ ಜೆ.ಹೆಚ್. ಪಟೇಲ್ : ನಾನು, ನೀವು ಮತ್ತು ಈ ಇಡೀ ಸದನ ಇದಕ್ಕೇನಾದರೂ ಒಂದು ಮಾರ್ಗ ಕಂಡುಹಿಡಿಯಬೇಕೇ ಹೊರತು ಏಕಾಏಕಿಯಾಗಿ ದೆಹಲಿಯಲ್ಲಿರತಕ್ಕಂಥ ಮಾನ್ಯ ಪ್ರಧಾನ ಮಂತ್ರಿ ಅಥವಾ ರಾಜ್ಯದಲ್ಲಿರತಕ್ಕಂಥ ಮಾನ್ಯ ಮುಖ್ಯಮಂತ್ರಿ ಅಥವಾ ಆ ಮಂತ್ರಿ ಮಂಡಲವೇ ಪರಿಹಾರ ಕಂಡುಹಿಡಿಯುವುದಕ್ಕಾಗುವುದಿಲ್ಲ. ಮಾನ್ಯ ಎಸ್.ಎಸ್. ಪಾಟೀಲರು ಆಗಲೇ ಉತ್ತರ ಪ್ರದೇಶದ ವಿಷಯ ಹೇಳಿದರು. ನಮಗೆ ಅದು ಬೇಡ, ಉತ್ತರ ಪ್ರದೇಶದ ಸುದ್ಧಿಯನ್ನು ನಾವು ತೆಗೆದುಕೊಳ್ಳುವುದು ಬೇಡ. ಅಲ್ಲಿ 10-11 ಜನರಿಗೆ ಖಾತೆಗಳೂ ಕೂಡ ಇಲ್ಲ, ಕೆಲಸವೂ ಇಲ್ಲ. ಸುಮ್ಮನೆ ಅಲ್ಲಿ 100 ಜನ ಇದ್ದಾರೆ. ಈ ಸಿಸ್ಟಮ್ ಅನ್ನು ಹೇಗೆ ಇಂಪ್ರೂವ್ ಮಾಡಬಹುದು? ಅದಕ್ಕೇನು ಮಾರ್ಗವಿದೆ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

ಡಾ|| ಎಂ.ಪಿ. ಕರ್ಕಿ : ನಾನು ಈಗ ಅದನ್ನು ಅಂತಿಮವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಕುಮುಟಾ ತಾಲ್ಲೂಕಿನ ನಾಡುಮಾಸ್ಕೇರಿ ಗ್ರಾಮದಲ್ಲಿ 47 ಕುಟುಂಬಗಳು 40 ವರ್ಷಗಳಿಂದ ಅಲ್ಲಿ ವಾಸವಾಗಿದೆ. ಅದು ಮೀನುಗಾರಿಕೆ ಇಲಾಖೆಗೆ ಸೇರಿರತಕ್ಕಂಥ ಜಾಗ. ಆ ಜಾಗವನ್ನು ಅವರಿಗೆ ಕೊಟ್ಟಿದ್ದಾರೆ, ಆದರೆ ಅವರಿಗೆ ಪಟ್ಟಾ ಕೊಟ್ಟಿಲ್ಲ. ಆ ಪಟ್ಟಾವನ್ನು ಅವರಿಗೆ ಕೊಡಿಸಬೇಕೆಂದು ನಾನು ಕಳೆದ 2 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಕಡತ ಮೀನುಗಾರಿಕಾ ಇಲಾಖೆಯಿಂದ ಕಂದಾಯ ಇಲಾಖೆಗೆ ಹೋಗಿದೆ. ಕಂದಾಯ ಇಲಾಖೆಯಲ್ಲಿ ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ಎಷ್ಟು ಹುಡುಕಿದರೂ ಸಿಗುತ್ತಾ ಇಲ್ಲ. ಯಾರೋ ಗಣೇಶ ಅಥವಾ ರಮೇಶ್ ಎಂಬುವವನು ಆ ಕಾಗದ ಪತ್ರಗಳನ್ನು ರಿಸೀವ್ ಮಾಡಿದ್ದಾನೆ ಎಂದು ಮಾಹಿತಿ ಬಂದಿದೆ. ಆ ರಮೇಶ್ ಯಾರು, ಆ ಗಣೇಶ್ ಯಾರು ಎಂದು ನಾನು ಈಗ ಹುಡುಕಬೇಕಾಗಿದೆ. ತನ್ಮೂಲಕ ಸಂಬಂಧಪಟ್ಟ ಕಡತವನ್ನು ಹುಡುಕಬೇಕಾಗಿದೆ. ಈ ಪಟ್ಟಾ ಕೊಡುವುದಕ್ಕೇನೂ ಬಹಳ ದೊಡ್ಡ ತೊಂದರೆ ಇರಲಿಕ್ಕಿಲ್ಲ. ಅದಕ್ಕಾಗಿ ಸೆಕ್ರೆಟೇರಿಯೇಟ್‌ಗೆ ಬಂದು ಎಲ್ಲಾ ಕಡೆ ತಿರುಗಾಡಿ ಹೋಗತಕ್ಕಂಥ ಅವಶ್ಯಕತೆ ಇಲ್ಲ. ಇದು ಸರಳವಾಗಿದೆ. ಇದು ಮೀನುಗಾರಿಕೆ ಇಲಾಖೆಗೆ ಸೇರಿಸತಕ್ಕದ್ದು. I had to search for the file.

6.20 ಪಿ.ಎಂ.

ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಏಕೆ ಹೋಗಬೇಕು, why should it go? ಒಮ್ಮೆ ಒಂದೊಂದು ಡಿಪಾರ್ಟ್‌ಮೆಂಟ್‌ಗೆ ಹೋದರೆ ಮೂರು - ನಾಲ್ಕು ತಿಂಗಳು ಇರತಕ್ಕಂತಹ ಸಂದರ್ಭದಲ್ಲಿ ಏತಕ್ಕಾಗಿ ಆ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುತ್ತೀರಿ. It belongs to the Department. People are there for the last 40 years. 40 ವರ್ಷಗಳಿಂದ ಬೇಡಿಕೆ ಇದೆ, ಕೊಡುವುದಕ್ಕೆ ನಿಮಗೇನಾಗಿದೆ? ಒಂದು ಡಿಪಾರ್ಟ್‌ಮೆಂಟ್‌ನಿಂದ ಇನ್ನೊಂದು ಡಿಪಾರ್ಟ್‌ಮೆಂಟ್‌ಗೆ ಸಾಗಿಸಿ why should the people suffer? ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒಂದು ಉಪಾಯ ಕೂಡ ಹೇಳಿ ಕೊಡುತ್ತಿದ್ದೇನೆ. ಗ್ರಾಮದಲ್ಲಿ 40 ವರ್ಷದಿಂದ ಫಿಷರೀಸ್ ಡಿಪಾರ್ಟ್‌ಮೆಂಟ್‌ಗೆ ಸೇರಿದ ಜಾಗದಲ್ಲಿ ಅವರಿಗೆ ಇಷ್ಟು ಜಾಗ ಎಂದು ಕೊಟ್ಟಿದ್ದಾರೆ. ಆ ಬಗ್ಗೆ ರೆಕಾರ್ಡ್ಸ್ ಸಹ ಇದೆ. ಪಟ್ಟಾ ಅವರ ಹತ್ತಿರ ಇಲ್ಲ. ಪಟ್ಟಾ ಇಲ್ಲದಿದ್ದರೆ ಏನೂ ಸಿಗುವುದಿಲ್ಲ. ಹೀಗಿದ್ದಾಗ when it belongs to the Fisheries Department, when fishermen are staying there, when it has been allotted 40 years ago, what is the difficulty for you to give it to them? Why should it go to other departments? Can't the fisheries department give land to them directly? It is part of the Ministry. Why should it go to the Revenue Department. Why should it go to the law Department or other departments? Can you divest them of the property? You can't. ಮೂರು ಜನರೇಷನ್ ಆಗಿದೆ ಆ ಫೈಲ್ ಏಕೆ ಓಡಾಡಬೇಕು? These things you can rectify. ಮತ್ತೊಂದು ಐಸ್ ಫ್ಯಾಕ್ಟರಿ ಕಟ್ಟಬೇಕು, ನಮ್ಮ ಕೋ-ಆಪರೇಟಿವ್ ಸೊಸೈಟಿಯವರು ಸಾಲಸೌಲಭ್ಯ ಪಡೆದುಕೊಂಡಿದ್ದಾರೆ. ಫಿಷರ್‌ಮೆನ್ ಕೋ-ಆಪರೇಟಿವ್ ಸೊಸೈಟಿ ಪೋರ್ಟ್‌ನಲ್ಲಿ ಒಂದು ಐಸ್ ಫ್ಯಾಕ್ಟರಿ ಕಟ್ಟಬೇಕೆಂದು ಇದ್ದಾರೆ. ತಮಗೆ ಗೊತ್ತಿದೆ, ಐಸ್ ಫ್ಯಾಕ್ಟರಿ ಬಗ್ಗೆ ತಿಳಿಯಲು ನಾನು ಫಿಷರೀಸ್ ಡಿಪಾರ್ಟ್‌ಮೆಂಟ್‌ನಿಂದ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಹೋದೆ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಪಿಡಬ್ಲ್ಯುಡಿ ಡಿಪಾರ್ಟ್‌ಮೆಂಟಿಗೆ ಹೋಗಿ ಎಂದು ಹೇಳುತ್ತಾರೆ. ನಾನು ನಮ್ಮ ಮಂತ್ರಿಗಳ ಹತ್ತಿರ ಮಾತನಾಡಿದೆ, ಪಿಡಬ್ಲ್ಯೂಡಿ ಇಲಾಖೆಗೆ ಕೋಸ್ಟಲ್ ರೆಗ್ಯುಲೇಟರಿ ಜೋನ್ ಕಮಿಟಿ 1991ರಲ್ಲಿ ಫಾರ್ಮೇಷನ್ ಆದರೂ ಕೂಡ 1997ರಲ್ಲಿ ಕಮಿಟಿ ರಚನೆ ಆಗಿದೆ ಎಂಬ ಉತ್ತರ ಬಂತು. No law should come in the way of development, in the way of well being of the people. Then why should it go to the P.W.D? ಅಬ್ಜೆಕ್ಷನ್ ಏಕೆ ಹಾಕಬೇಕು? Is there any necessity to go through all these processes? ಯಾರೋ ಹೇಳಿದರು ರೆವಿನ್ಯೂ ಇಲಾಖೆ ಈ ದೇಶ ಕಾಯುತ್ತಿರುವ ಇಲಾಖೆ ಎಂದು. ಯಾರ್‍ಯಾರೋ ಹೇಗೇಗೋ ಕೊಟ್ಟು ಬಿಡುತ್ತಾರೆ. ಸಿಕ್ಕಾಪಟ್ಟೆ ಮಿಸ್‌ಯೂಸ್ ಆಗುತ್ತಿದೆ. You are part of the Government. Fisheries Department is part of your Government. If the Fisheries says, 'yes', the Government should say 'yes'. ಸುಮ್ಮನೆ ಓಡಾಡಿಸಿ ಮೂರು ನಾಲ್ಕು ವರ್ಷ ಏಕೆ ಕಳೆಯುತ್ತೀರಿ? The factory has

to come into existence with a matter of months. ಒಂದೂವರೆ ಎರಡು ವರ್ಷವಾಯಿತು ಆದರೂ ಐಸ್ ಫ್ಯಾಕ್ಟರಿ ಮಾಡುವುದಕ್ಕಾಗುತ್ತಿಲ್ಲ. ಇದನ್ನು ತಾವು ಮಾಡಬಹುದು. ಕಡತ ಮಾಡುವುದು, ಒಂದೊಂದು ಕಡತ ಹೋಗುವುದು, ಒಮ್ಮೆ ಕಾರ್ಯದರ್ಶಿಯವರಿಗೆ ಕಾಗದ ಕೊಟ್ಟರೆ ಕೆಳಗೆ ಬರುತ್ತದೆ. ಹಾವು ಏಣಿ ಆಟ ಎಲ್ಲಾ ದಾಳ ಹಾಕಿ ಏಣಿ ಹತ್ತಿ ಹತ್ತಿ ಮುಟ್ಟುತ್ತೇವೆ ಎಂದು ಹೇಳಬೇಕಾದರೆ ಏನೋ ಒಂದು ಅಬ್ಜೆಕ್ಷನ್ ಫಾರ್ಮ್ ಮಾಡಿ ಕೇಸ್ ವರ್ಕರ್ ಹತ್ತಿರ ಬರುತ್ತದೆ. ಮತ್ತೆ ಅದು ಹೊಸದಾಗಿ ಏಣಿ ಹತ್ತಿಕೊಂಡು ಹೋಗಬೇಕು. ಎಷ್ಟು ಸಲ ಏಣಿ ಹತ್ತಬೇಕು, ಎಷ್ಟು ಸಲ ಹಾವಿನ ಬಾಯಿಗೆ ತುತ್ತಾಗಿ ಕೆಳಗಿಳಿಯಬೇಕು. ಏಕೆ ಹೀಗಾಗುತ್ತಿದೆ? Should a case worker write the decision of the Government? Should he write? And you have to say 'yes'? The secretary has to say 'yes'. Can't you take decision? ನಿಮಗೆ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ? ಒಂದು ಕೋ-ಆಪರೇಟಿವ್ ಸೊಸೈಟಿ ಆಕ್ಟ್ ಪ್ರಕಾರ ಮಾಡಿ ಎಂದು ನಮ್ಮ ರಿಜಿಸ್ಟ್ರಾರ್ ಬರೆದು ಕೊಟ್ಟರು. ಸೆಕ್ರೆಟರಿ ಹತ್ತಿರ ಹೋದಾಗ ಯಾರ ವಿಧಾನದಲ್ಲಿ ಯಾವ ನಿಯಮದ ಪ್ರಕಾರ ಇದನ್ನು ಮಾಡಬೇಕೆಂದು ಹೇಳಿದರು. ಇದನ್ನು ನಾನು ಅವರಿಗೆ ಹೇಳಬೇಕಾ? Should I tell him? Should the Secretary ask me about it? He has said in that letter. If it is right, you do it. He just signs and it comes back to the case worker. Case worker, Section Officer, Under Secretary, Deputy Secretary ಎಲ್ಲರೂ ಓದುವುದು ಒಂದೇ ಪುಸ್ತಕ ತಾನೇ ಎರಡು ಪುಸ್ತಕ ಓದುವುದಿಲ್ಲ. Why so many staff, why so many ladders, why so many stages? ಏತಕ್ಕಾಗಿ ಇದೆಲ್ಲಾ ಬೇಕು? ಒಂದು ನಿರ್ಧಾರ ತೆಗೆದುಕೊಳ್ಳತಕ್ಕಂತಹ ಸ್ಟೇಜನ್ನು ಫಿಕ್ಸ್ ಮಾಡಿ. "The Secretary shall take decision at this stage", "The Deputy Secretary shall take decision at this stage. Under Secretary shall take decision at this stage". Give one or two people for his help. ಸೆಕ್ರೆಟರಿ ಕೆಳಗೆ ಎರಡು ಡೆಪ್ಯುಟಿ ಸೆಕ್ರೆಟರಿಗಳಿಗೆ ಹಾಕಿ. Let them discuss and take decision. Decision must be fast.

MR. SPEAKER : Time bound.

DR. M.P. KARKI : ಡಿಸಿಷನ್ ಕೂಡ ಫಾಸ್ಟಾಗಿರಬೇಕು. ಒಂದು ಪೇಪರ್ ಬಂದರೆ, ಬನ್ನಿ ಕೂತುಕೊಳ್ಳಿ, ಕಾನೂನು ಏನಿದೆ ಎನ್ನುವುದನ್ನು ನಾವು ಡಿಸ್ಕಸ್ ಮಾಡೋಣ. ಕಾನೂನು ಏನಿದೆ, ಏನಾಗುತ್ತದೆ, can't they do it? Should it go to the case worker and case worker to write. And again on that the Section Officer and again on that the Under Secretary and Deputy Secretary should say 'yes' or 'no'. Otherwise it goes back. ಕೆಲವು ಸಾರಿ ಲೆಜಿಟಿಮೇಟ್ ಆಗಿದ್ದರೂ ಸಹ ಅವರು ಕಾನೂನು ಎಂದೆಲ್ಲಾ ಹೇಳಿ ನಮ್ಮ ಆಫೀಸರ್ ರವರ ಕೈ ಕಟ್ಟುತ್ತಾರೆ. Probably the Under Secretary does not know the rules. Those people know the rules some time. If you have two people as

advisers to the Secretary, they can discuss and take decision and the decision shall be for the benefit of the people and not otherwise. This is a democratic country. ಹೇಗೆ ಕೆಲಸ ಮಾಡಬೇಕು ಜನರಿಗೆ ಹೇಗೆ ಅನುಕೂಲ ಮಾಡಿ ಕೊಡಬೇಕು ಎಂದು ನೋಡಬೇಕೇ ಹೊರತಾಗಿ, ಹೇಗೆ ಅನುಕೂಲ ಮಾಡಬಾರದು, ಹೇಗೆ ಅಡಚಣೆ ತಂದು ಹಾಕಬೇಕು, ಆ ರೀತಿಯಾಗಿ ಇವರು ಮಾಡುವುದು ಸರಿಯಲ್ಲ. ಇಷ್ಟು ಆಡಳಿತ ಮಾಡಿದರೆ ಸಾಕು. Your half of the staff is surplus, superfluous. ಎಲ್ಲೆಲ್ಲಿ ಸ್ಟಾಫ್ ಇಲ್ಲ, ನೀವು ಯಾವುದೇ ರಿಕ್ರೂಟ್‌ಮೆಂಟ್ ಮಾಡಬೇಕಾಗಿಲ್ಲ. You redeploy them. You need not remove them ನಮ್ಮಲ್ಲಿ ಮೊದಲನೇ ಪ್ರಮೋಷನ್‌ಗೆ ಎಫಿಷಿಯನ್ಸಿ ಬಾರ್ ಎಂದು ಇರುತ್ತಿತ್ತು. There used to be efficiency Bar for promotions. Scale was for example, Rs. 200-10-500 EB. That is efficiency bar. ಪ್ರಮೋಷನ್‌ಗೆ ನೀವು ಎಫಿಷಿಯನ್ಸಿ ಬಾರ್ ಹಾಕಿದ್ದೀರಾ? They have removed the Efficiency Bar. Why did you remove? ಅವರು ಹೇಗೆ ಸರ್ವೀಸ್ ಮಾಡಿದರೂ ಕೂಡ ಅವರಿಗೆ ಪ್ರಮೋಷನ್ ಕೊಟ್ಟು ಬಿಡುವುದೇ? The Efficiency Bar was there in the olden times. I have seen the Advertisements. ಎಫಿಷಿಯೆನ್ಸಿ ಬಾರ್ ಇಲ್ಲ. 10 ವರ್ಷ ಆದಮೇಲೆ ಒಂದು ಪ್ರಮೋಷನ್, 15 ವರ್ಷಗಳಾದ ಮೇಲೆ ಮತ್ತೊಂದು ಪ್ರಮೋಷನ್. ಮತ್ತು ಟೈಮ್ ಬೌಂಡ್ ಇದಕ್ಕೆಲ್ಲಾ ತಾವು ಈಲ್ಡ್ ಆಗಿದ್ದೀರಿ. ಸರ್ಕಾರ ಈಲ್ಡ್ ಆಗಿದೆ. The system has become rotten. ಅದನ್ನು ಏಕೆ ಮಾಡಿದಿರಿ? Has any effort been made by you? ಏನೂ ಎಫರ್ಟ್ಸ್ ಇಲ್ಲ. ಒಂದೊಂದು ಟ್ರಾನ್ಸಫರ್‌ಗೆ ಎರಡು ಲಕ್ಷ, ನಾಲ್ಕು ಲಕ್ಷ ರೂ.ಗಳು. ಅದರಲ್ಲೂ ವಿಶೇಷವಾಗಿ ಫಾರೆಸ್ಟ್ ರೇಂಜ್ ಆಫೀಸರ್‌ಗೆ ಎರಡು ಲಕ್ಷ, ನಾಲ್ಕು ಲಕ್ಷ ಕೇಳುತ್ತಿದ್ದಾರೆ. ಈ ವ್ಯಾಪಾರ ನಡೆಯುತ್ತಿದೆ. Can't you frame certain rules and regulations for the transfers and abide them strictly and thoroughly? ಇದನ್ನು ಏಕೆ ಮಾಡುವುದಕ್ಕಾಗುವುದಿಲ್ಲ? No it cannot be done and this shall not be done. If you have got the will, you have got the way. ನಮ್ಮಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡತಕ್ಕಂತಹ ಐಎಎಸ್ ಆಫೀಸರ್ಸ್ ಇದ್ದಾರೆ. ನಾವು ಆರು ತಿಂಗಳಿಗೆ, ಮೂರು ತಿಂಗಳಿಗೆ ಟ್ರಾನ್ಸ್‌ಫರ್ ಮಾಡಿದರೆ ಏನಾಗುತ್ತದೆ? What is the fate? There could be surplus IAS Officers also. For lottery Section, you have put an IAS Officer. ಲಾಟರಿ ಸೆಕ್ಷನ್‌ಗೆ ಐಎಎಸ್ ಆಫೀಸರ್ ಬೇಕಾಗಿಲ್ಲ. You are wasting the talents and paying them more. ಎರಡು ಮೂರು ವರ್ಷಗಳ ಹಿಂದೆ ಹಾಕಿದಿರಿ, ಏನು ಬೆನಿಫಿಟ್ ಆಯಿತು? There was no benefit. On the contrary, it was declining. Because he has no interest. ಕೇಂದ್ರ ಸರ್ಕಾರ ಐ.ಎ.ಎಸ್. ಅಧಿಕಾರಿಗಳನ್ನು ಹೇಗೆ ರಾಜ್ಯಗಳಿಗೆ ನೇಮಕ ಮಾಡುತ್ತದೋ ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರವೇ ಇಂಥಿಂಥವರೇ ಇಂಥ ರಾಜ್ಯಗಳಿಗೆ ಐ.ಎ.ಎಸ್ ಅಧಿಕಾರಿಗಳಾಗಿ ಹೋಗಬೇಕು ಎಂದು ಹೇಳುತ್ತದೆಯೋ ಅಥವಾ ಇಂಥಿಂಥವರನ್ನೇ ನಮ್ಮ ರಾಜ್ಯಕ್ಕೆ ಐ.ಎ.ಎಸ್. ಅಧಿಕಾರಿಗಳನ್ನಾಗಿ ಕಳುಹಿಸಿ ಎಂದು ರಾಜ್ಯ ಸರ್ಕಾರ ಕೇಳುತ್ತದೆಯೋ,

ಅದರ ಬಗ್ಗೆ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ನಾನು ಹೇಳುವುದೇನೆಂದರೆ, ರಾಜ್ಯ ಸರ್ಕಾರಕ್ಕೆ ಎಷ್ಟು ಐ.ಎ.ಎಸ್. ಅಧಿಕಾರಿಗಳ ಅವಶ್ಯಕತೆ ಇದೆಯೋ ಅಷ್ಟನ್ನು ಮಾತ್ರ ಕೇಳಬೇಕೇ ಹೊರತು ಅದಕ್ಕಿಂತ ಹೆಚ್ಚಿನ ಅಧಿಕಾರಿಗಳನ್ನು ಕೇಳಬಾರದು. ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೇಳಿ. ಇನ್ನು ಐ.ಎ.ಎಸ್. ಅಧಿಕಾರಿಗಳ ವರ್ಗಾವಣೆ ಬಗ್ಗೆ ನಾನು ಹೇಳುವುದೇನೆಂದರೆ let us know how much we want. There is one more important thing. An IAS Officer shall not be transferred within three years to another place. Let him show his skill. Let him show his merit. Let him be evaluated. ಆ ಐ.ಎಸ್.ಎಸ್. ಅಧಿಕಾರಿ ಸರಿಯಾಗಿ ಕೆಲಸ ಮಾಡುತ್ತಾನೋ ಇಲ್ಲವೋ ಎಂಬ ಬಗ್ಗೆ ನೀವು ಇವ್ಯಾಲ್ಯುಯೇಷನ್ ಮಾಡಿ. ಇದಕ್ಕೆ ಪೂರ್ವಭಾವಿಯಾಗಿ ಮೂವತ್ತು ವರ್ಷ ಸೇವೆ ಸಲ್ಲಿಸುವಂಥದ್ದರ ಬಗ್ಗೆ ವಿಷಯ ಬಂದಾಗ what is your speciality, where do you want to work, give them the option. ಮಾನ್ಯ ಅಧ್ಯಕ್ಷರು ಹಿಂದೆ ಮಾತನಾಡಿದಾಗ ಅಧಿಕಾರಿಗಳು ಇಂಟರೆಸ್ಟ್ ಇಲ್ಲದೆಯೇ ಹೋಗುತ್ತಾರೆ ಎಂದು ಹೇಳಿದರು. There could be an IAS Officer who wants to do some work in the Tourism Department.

ಅಧ್ಯಕ್ಷರು : ಇಪ್ಪತ್ತು ವರ್ಷಗಳ ಕೆಳಗೆ ಐ.ಎ.ಎಸ್. ಅಧಿಕಾರಿಗಳಲ್ಲಿ ಎರಡು ವರ್ಗಗಳಿತ್ತು. ಒಂದನೆಯದು ಅಕ್ಟೈರ್ಡ್ ಐ.ಎ.ಎಸ್ ಆಫೀಸರ್ಸ್‌ಗಳು, ಎರಡನೆಯದು ಕನ್‌ಫರ್ಡ್ ಐ.ಎ.ಎಸ್. ಆಫೀಸರ್ಸ್ ಎಂದು ಇತ್ತು. ಸಾಮಾನ್ಯವಾಗಿ ಕನ್‌ಫರ್ಡ್ ಐ.ಎ.ಎಸ್. ಆಫೀಸರ್ಸ್ ಸ್ವಲ್ಪ ಇನ್‌ಫೀರಿಯರ್ ಮತ್ತು ಅಕ್ಟೈರ್ಡ್ ಐ.ಎ.ಎಸ್ ಆಫೀಸರ್ಸ್ ಸುಪೀರಿಯರ್ಸ್ ಎನ್ನತಕ್ಕಂಥ ಫೀಲಿಂಗ್ ಇರುತ್ತಿತ್ತು. ಇನ್ನು ಇವರ ಹಾನೆಸ್ಟಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಇಪ್ಪತ್ತು ವರ್ಷಗಳ ಹಿಂದಿನ ಅವಧಿಗಳಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಅಲ್ಲೋ ಇಲ್ಲೋ ನಾಲ್ಕೈದು ಜನರ ಹೆಸರುಗಳ ಬಗ್ಗೆ ಮಾತುಗಳು ಕೇಳಿಬರುತ್ತಿತ್ತು. ಅವರು ಹಾಗಂತೆ, ಇವರು ಹಾಗಂತೆ ಎಂದು ಮಾತನಾಡಿಕೊಳ್ಳುತ್ತಿದ್ದರೇ ವಿನಃ ಉಳಿದವರ ಬಗ್ಗೆ ಮಾತುಗಳನ್ನು ಯಾರೂ ಆಡುತ್ತಿರಲಿಲ್ಲ. ಆದರೆ ಈಗೇನಾಗಿದೆಯೆಂದರೆ ಇನ್ನೂ 28 ರಿಂದ 30 ವರ್ಷ ಆಗಿರುವುದಿಲ್ಲ ಮತ್ತು ಐ.ಎ.ಎಸ್ ಅಧಿಕಾರಿಗಳಾಗಿ ಇನ್ನೂ 4 ರಿಂದ 5 ವರ್ಷ ಕೂಡ ಆಗಿರುವುದಿಲ್ಲ, ಆದರೆ they are worse than your Rangers and Sub Inspectors. ಆದುದರಿಂದ ನಾನು ಹೇಳುವುದೇನೆಂದರೆ, qualifying in an examination does not confer all authority and intelligence on them to administer. They need to have the wisdom, maturity, commitment, worldly experience everything. Above all these things, humility. ಆ ವಿಧಾನ ಸೌಧಕ್ಕೆ ಶಾಸಕರುಗಳಾಗಿ ಆಯ್ಕೆಯಾಗಿ ಬರುವಂಥ ಮಾನ್ಯ ಸದಸ್ಯರುಗಳಿಗೆ, ಈ ವಿಧಾನ ಸೌಧವನ್ನು ಯಾವ ಕಲ್ಲುಗಳಿಂದ ಕಟ್ಟಲಾಗಿದೆಯೋ ಆ ಕಲ್ಲಿನಲ್ಲಿ ಏನು ಮಹತ್ವವಿದೆಯೋ ಗೊತ್ತಿಲ್ಲ, ನಾವುಗಳು ದಿನನಿತ್ಯ ನಮ್ಮದೇ ಆದಂಥ ಮಾಮೂಲಿ ಜನಗಳಾಗಿ ಇದ್ದುಬಿಡುತ್ತೇವೆ. ಕಾರಣಾಂತರಗಳಿಂದ ಒಂದು ಸನ್ನಿವೇಶಕ್ಕೆ ಅನುಗುಣವಾಗಿ ನಾವುಗಳು ಶಾಸಕರಾಗಿ ಆಯ್ಕೆಯಾಗಿ ಬಂದು ವಿಧಾನಸೌಧದ ಮೆಟ್ಟಿಲನ್ನು ಹತ್ತಿದ ತಕ್ಷಣ ಸೂಪರ್ ಹ್ಯೂಮನ್ ಎನ್ನುವ ಒಂದು ಫೀಲಿಂಗ್ ನಮಗೆ ಬಂದು ಬಿಡುತ್ತದೆ. ನಾವು ಭೂಮಿಯ ಮೇಲೆ ಹೋಗುವುದಕ್ಕೆ ನಮಗೆ

ಆಗುವುದಿಲ್ಲ. ಅದೇ ರೀತಿ ಈ ಐ.ಎ.ಎಸ್. ಅಧಿಕಾರಿಗಳಿಗೂ ಕೂಡ ಟ್ರೈನಿಂಗ್ ಇನ್ಸ್‌ಟ್ಯೂಟ್‌ನಿಂದ ಟ್ರೈನಿಂಗ್ ಮುಗಿಸಿಕೊಂಡು ಬಂದತಕ್ಷಣ ಹ್ಯುಮಿಲಿಟಿ ಎನ್ನುವುದು ಇರುವುದೇ ಇಲ್ಲ. ಇದ್ದರೂ ಬಹಳ ಕಡಿಮೆ ಜನರಲ್ಲಿ ಮಾತ್ರ ಆ ಹ್ಯುಮಿಲಿಟಿ ಇರುವುದು. These are all the diseases of the system as I have been telling, we must find a solution for this. What was there 20 years ago, per se, when we speak outside, you can name people who are very honest. You can discuss and identify. All the remaining are under cloud. The number is dwindling.

ಡಾ|| ಎಂ.ಪಿ. ಕರ್ಕಿ : ಆದರೆ ಆ ರೀತಿಯಾಗಲು ಕಾರಣವೇನು ಎಂಬುದನ್ನು ನಾನು ಹೇಳಬಯಸುತ್ತೇನೆ. Suppose a rider is there. Horse is ready, but the rider is fit or not. ನಮ್ಮಲ್ಲಿ ಕೆಲಸ ಮಾಡಲು ಬಾರದ ಮಂತ್ರಿಗಳ ಮತ್ತು ಫೈಲ್ ನೋಡುವುದಕ್ಕೆ ಬಾರದ ಮಂತ್ರಿಗಳು ಇದ್ದರೆ ಐ.ಎ.ಎಸ್. ಆಫೀಸರ್ಸ್‌ಗಳು ಹೇಳಿದ ಹಾಗೆ ಕೇಳಬೇಕಾಗುತ್ತದೆ. They would dominate among them.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಕೆಲಸಕ್ಕೆ ಬಾರದ ಮಂತ್ರಿಗಳಿದ್ದಾರೆ ಎನ್ನುತ್ತಿದ್ದಾರೆ. ಅದು ಕಡತಕ್ಕೆ ಹೋಗಬಾರದು. It is not in good taste.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಕೆಲಸಕ್ಕೆ ಬಾರದ ಮಂತ್ರಿಗಳು ಇದ್ದಾರೆ ಎಂಬುದನ್ನು ಮಾತ್ರ ಹೇಳಿರುವುದು. ನಿಮ್ಮಲ್ಲಿ ಅಂಥವರು ಇದ್ದರೆ ನೀವೇ ಹೇಳಿ.

MR. SPEAKER : Many things that we hear and do are not in good taste. Alright let it also be.

ಡಾ|| ಎಂ.ಪಿ. ಕರ್ಕಿ : ಮಾನ್ಯ ಮಂಜುನಾಥ್‌ರವರೇ, ಕೆಲಸಕ್ಕೆ ಬಾರದ ಮಂತ್ರಿಗಳು ಇದ್ದಾರೆ ಎಂದು ಹೇಳಿದ್ದೇ ತಪ್ಪಾಯಿತೇ? ನಿಜವಾಗಿಯೂ ಅನೇಕ ಜನರು ಅಂಥವರು ಇದ್ದಾರೆ. ಆದರೆ ನಾನು ಅಂಥವರ ಹೆಸರುಗಳನ್ನು ಇಲ್ಲಿ ಹೇಳಲು ಬಯಸುವುದಿಲ್ಲ.

ಅಧ್ಯಕ್ಷರು : ಕೆಲಸಕ್ಕೆ ಬಾರದ ಮಂತ್ರಿಗಳು ಇರುತ್ತಾರೆ, ಕೆಲಸಕ್ಕೆ ಬಾರದ ಶಾಸಕರುಗಳೂ ಸಹ ಇರುತ್ತಾರೆ, ಕೆಲಸಕ್ಕೆ ಬಾರದ ಆಫೀಸರ್ಸ್‌ಗಳೂ ಸಹ ಇರುತ್ತಾರೆ, ಹಾಗೆಯೇ ಕೆಲಸಕ್ಕೆ ಬಾರದ ಜನಗಳೂ ಕೂಡ ಇರುತ್ತಾರೆ. ಹೀಗೆ ಇಂಥವರೆಲ್ಲಾ ಈ ಸಮಾಜದಲ್ಲಿ ಎಲ್ಲಾ ಕಾಲದಲ್ಲೂ ಇದ್ದೇ ಇರುತ್ತಾರೆ. ಇಂಥವರಿದ್ದರೆ ತಾನೆ ಈ ಸಮಾಜ ನಡೆದುಕೊಂಡು ಹೋಗುವುದು. ಎಲ್ಲಾ ಕೆಲಸ ಮಾಡುವವರು ಬುದ್ಧಿವಂತರಾಗಿ ಬಿಟ್ಟರೆ ಈ ಸಮಾಜ ಹೇಗೆ ನಡೆದುಕೊಂಡು ಹೋಗುವುದು? ಮಾನ್ಯ ಮಂಜುನಾಥ್‌ರವರೇ, ಬಹಳ ಹಿಂದೆ ಈ ಸದನದ ಪ್ರೊಸೀಡಿಂಗ್ಸ್‌ನಲ್ಲಿ ನೀವು ಬೇಕಾದರೆ ನೋಡಿ, ಯಾವ ವರ್ಷದ್ದು ಎಂಬುದು ನನಗೆ ಮರೆತುಹೋಗಿದೆ, ಆದರೆ ಅದರಲ್ಲಿ ಮಾನ್ಯ ಶಾಂತವೇರಿ ಗೋಪಾಲಗೌಡರು ಶ್ರೀ ನಿಜಲಿಂಗಪ್ಪನವರನ್ನು ಕುರಿತಾಗಿ ಏನು ಹೇಳಿದ್ದಾರೆಂದರೆ, ನಿಮ್ಮನ್ನು ಮುಂಡೇ

ಮಕ್ಕಳು ಎಂದು ನಾನು ಕರೆದರೆ ತಪ್ಪಾಗುತ್ತದೆ, ಅಸಭ್ಯವೂ ಆಗುತ್ತದೆ ಮತ್ತು ಅದು ಅನ್‌ಪಾರ್ಲಿಮೆಂಟರಿ ವರ್ಡ್ ಆಗುತ್ತದೆಯಾದ ಕಾರಣ, ಹಾಗೆ ನಿಮ್ಮನ್ನು ಕರೆಯುವುದಕ್ಕೆ ಆಗುವುದಿಲ್ಲವಾದ ಕಾರಣ ಮುತ್ತೈದೆಯರಿಗೆ ಇಂಥ ಮಕ್ಕಳು ಇರುತ್ತಾರೆಯೇ ಎಂದು ಕೇಳಿದ್ದಾರೆ, that is the language used by late Shantaveri Gopalagowda. ಇವೆಲ್ಲಾ ಪಾರ್ಲಿಮೆಂಟರಿ ಪ್ರೊಸೀಡಿಂಗ್ಸ್‌ನಲ್ಲಿ ಇದ್ದದ್ದೇ give and take.

ಡಾ|| ಎಂ.ಪಿ. ಕರ್ಕಿ : ನೀವು ಕಮಿಟ್‌ಮೆಂಟ್ ಎನ್ನುವ ಮಾತನ್ನು ಹೇಳಿದಿರಿ. ನಮ್ಮ ದೇಶದಲ್ಲಿ ಈ ಸರ್ಕಾರಿ ನೌಕರರಿಗೆ ಸೆಕ್ಯುರಿಟಿ ಇರಬೇಕೆಂದು ಹೇಳುತ್ತೇವೆ. There should be security. That very concept is wrong. ಆದರೆ ಸೆಕ್ಯುರಿಟಿ ಯಾರಿಗಿದೆ? ಸೆಕ್ಯುರಿಟಿ ರೈತರುಗಳಿಗಿದೆಯೇ? ವ್ಯಾಪಾರಗಳಿಗಿದೆಯೇ? ಡಾಕ್ಟರ್‌ಗಳಿಗಿದೆಯೇ ಅಥವಾ ಲಾಯರ್‌ಗಳಿಗಿದೆಯೇ? ಅವರೆಲ್ಲರೂ ಅವರವರ ಎಫಿಶಿಯನ್ಸಿ ಮೇಲೆ ಮೇಲಕ್ಕೆ ಬರುತ್ತಾರೆಯೇ ಹೊರತಾಗಿ there is no security for anybody in this country except the Government Servants. ಅಮೇರಿಕಾದಲ್ಲಿ ಎಲ್ಲಾ ಹುದ್ದೆಗಳೂ ಕೂಡ 5 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಇರುತ್ತದೆ ಎಂದು ನಾನು ಕೇಳಿದ್ದೇನೆ. If you do well, you will be continued. If you don't do it, get out, take the salary and get out. ಆ ಪದ್ಧತಿ ಅಲ್ಲಿದೆ ಎಂಬುದನ್ನು ನಾನು ಕೇಳಿದ್ದೇನೆ. ಅದೇ ರೀತಿ ನಮ್ಮ ದೇಶದಲ್ಲೂ ಅನುಸರಣೆ ಮಾಡುವುದಕ್ಕೆ ಆಗುತ್ತದೆಯೇ?

MR. SPEAKER : Japan, they are still ahead. ಜಪಾನ್‌ನಲ್ಲಿ ಒಂದು ಮೇಜರ್ ಪ್ರಾಜೆಕ್ಟನ್ನು ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಂಡರೆ it is the responsibility of the person who takes the contract to employ engineers and to execute the work. He has to give them salaries. ಅವರು ಖಾಯಂ ಆದ ರೀತಿಯಲ್ಲಿ ವರ್ಕ್ಸ್ ಡಿಪಾರ್ಟ್‌ಮೆಂಟ್ ಇಟ್ಟುಕೊಂಡು ಜೆ.ಇ., ಎ.ಇ., ಇ.ಇ., ಎಸ್.ಇ., ಎಂದು ಹೆಸರಿಗೆ ಇಟ್ಟುಕೊಂಡು, ಅಕೌಂಟ್ಸ್ ಸೂಪರಿಂಟೆಂಡೆಂಟ್‌ರವರನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ಬಿಸಿನೆಸ್‌ನ್ನು ಅವರು ಇಟ್ಟುಕೊಂಡಿಲ್ಲ.

DR. M.P. KARKI : They should be made accountable to the Government and the people at large by that way. ತಾವು ಹೇಳಿದ ಹಾಗೆ ಜಪಾನ್‌ನಲ್ಲಿ ಮಾಡಿದ ಹಾಗೆ ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲವೇ?

MR.SPEAKER:Remedial measures,structural changes..?

Dr.M.P.KARKI : You can very well do it. ಇತ್ತೀಚೆಗೆ ಮುನಿಸಿಪಾಲಿಟಿಗಳಲ್ಲಿ ನಾಲ್ಕನೇ ದರ್ಜೆ ನೌಕರಿಯಾದ ಈ ಸ್ವೀಪರ್ಸ್ ಹುದ್ದೆಗಳನ್ನು ಕಾಂಟ್ರ್ಯಾಕ್ಟ್ ಮೇಲೆ ನೇಮಕ ಮಾಡುತ್ತಿದ್ದಾರೆ. ಇದು ಒಳ್ಳೆಯ ಪದ್ಧತಿ. ಅಲ್ಲಿ ಸ್ವೀಪರ್ಸ್ ನೇಮಕವಾಗಿ ಕಾಂಟ್ರ್ಯಾಕ್ಟ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಇನ್ನು ಈ ಐ.ಎ.ಎಸ್. ಆಫೀಸರ್ಸ್‌ಗಳಿಗೆ ಮೊದಲನೇ ಚಾಯ್ಸ್ ಕೊಡಬೇಕು ಎಂದು ಹೇಳುತ್ತೇನೆ. ಈ

ರೀತಿಯಲ್ಲಿ ಇವರಿಗೆ ಮೊದಲು ಚಾಯ್ಸ್ ಕೊಟ್ಟಮೇಲೆ ten positings will be there for 30 years. You post them only to two or three sections. Let them show their proficiency. ಅವರು ಅವರ ತಾಕತ್ತನ್ನು ಅಲ್ಲಿ ತೋರಿಸಲಿ. ಅವರು ಕೆಲಸದಲ್ಲಿ ತೋರಬೇಕಾದ ತಾಕತ್ತನ್ನು ಅಲ್ಲಿ ತೋರಿಸಿದರೆ ಅವರನ್ನು ಅದೇ ಸ್ಥಳದಲ್ಲಿ ಮೂರು ವರ್ಷವಲ್ಲ. ಹತ್ತು ವರ್ಷ ಬೇಕಾದರೂ ಇರಲಿ. Let them be there. Education Secretaries have been transfered may be on their request or otherwise. ಮೂರು ವರ್ಷಕ್ಕೆ ಅವರನ್ನು ಟ್ರಾನ್ಸಫರ್ ಮಾಡಬೇಕೆಂದೇನೂ ಇಲ್ಲ. ಆದರೆ ಅಲ್ಲಿಯೇ ಪ್ರಭುತ್ವವನ್ನು ಕಾರ್ಯದಕ್ಷತೆಯನ್ನು ತೋರಿಸಿದರೆ ಅಂಥವರನ್ನು ನೀವು ಅಲ್ಲಿಯೇ ಇರಿಸಿಕೊಳ್ಳುವುದಕ್ಕೆ ನಿಮಗೆ ಏನು ತೊಂದರೆ? ಮೂರು ತಿಂಗಳಿಗೆ ಆರು ತಿಂಗಳಿಗೆ ಅವರನ್ನು ಟ್ರಾನ್ಸಫರ್ ಮಾಡುತ್ತೀರಿ. ಅವರು ಅಲ್ಲಿಗೆ ಹೋಗಿ ಅಧಿಕಾರ ವಹಿಸಿಕೊಳ್ಳುವುದರೊಳಗೆ ಮತ್ತೊಂದು ಕಡೆಗೆ ಟ್ರಾನ್ಸಫರ್ ಆಗಿರುತ್ತದೆ. ಇದು ಸರಿಯೇ? ಯಾರು ತಪ್ಪು ಮಾಡಿದ ಅಧಿಕಾರಿಗಳಾಗಿರುತ್ತಾರೋ they should be punished adequately. severely and strictly. All these criteria should be there. ಇಂಥ ಎಷ್ಟು ಜನರ ಮೇಲೆ ನೀವು ಸೀವಿಯರ್ ಆಕ್ಷನ್ ತೆಗೆದುಕೊಂಡಿದ್ದೀರಿ? ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಸದಸ್ಯನಾಗಿದ್ದಾಗ ನೋಡಿದ್ದೇನೆ. ಕೋಟ್ಯಾಂತರ ರೂಪಾಯಿಗಳನ್ನು ನುಂಗಿಹಾಕಿರುವವರಿಗೆ ಹಾಗೆಯೇ ಬಿಟ್ಟುಕೊಂಡು ಹೋಗಿದ್ದಾರೆ, ಅಂಥವರಿಗೆ ಯಾವ ಪನಿಷ್ ಮೆಂಟ್ ಕೂಡ ಆಗಿಲ್ಲ. ಅವರ ಅಪರಾಧ ರುಜುವಾತಾಗುವುದು ನಮ್ಮ ಕಣ್ಣಿಗೆ ಕಾಣುತ್ತದೆ. ಆದರೂ ಕೂಡ ಅವರಿಗೆ ಯಾವ ಪನಿಷ್ ಮೆಂಟ್ ಆಗಿಲ್ಲ. ಏತಕ್ಕೆ ಆಗುವುದಿಲ್ಲವೆಂದರೆ the higher officers want to protect the lower officer. ಈ ರೀತಿಯ ವ್ಯವಸ್ಥೆ ಏಕೆ ಬೇಕು? ನಾನು ಒಬ್ಬ ಆಫೀಸರ್‌ಗೆ ಕೇಳಿದೆ can you defend this Act ಎಂದು ಆತ "ಇಲ್ಲ" ನನಗೆ ಡಿಫೆಂಡ್ ಮಾಡುವುದಕ್ಕೆ ಆಗುವುದಿಲ್ಲ. Off the -record ಡಿಫೆಂಡ್ ಮಾಡುವುದಕ್ಕೆ ಆಗುವುದಿಲ್ಲವಾದ ಕಾರಣ ಅದನ್ನು ನಾನು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ ನಮ್ಮ ಮೇಲೆ ಕಾಂಟೆಫ್ಟ್ ಕೇಸ್‌ಹಾಕುತ್ತಾರೆ. ನಮ್ಮ ಆಫೀಸರ್ಸ್‌ಗೆ ಕೇಸ್ ಹಾಕುತ್ತಾರೆ ಎಂದು ಹೇಳಿದರು, because I have not defended properly. Many of the officers have to depend on them. ಶಿಕ್ಷಣ ಇಲಾಖೆಯಲ್ಲಿ ಕಾರ್ಯದರ್ಶಿ ಒಬ್ಬರಿಗೆ ಪನಿಷ್‌ಮೆಂಟ್ ಕೊಡಬೇಕೆಂದು ಹೇಳಿ ಒಂದು ಫೈಲನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿದರು. ಆ ಮಂತ್ರಿಗಳು ಆ ಫೈಲನ್ನು ಕೊನೆಯವರೆಗೂ ಇಟ್ಟುಕೊಂಡು ಪನಿಷ್‌ಮೆಂಟ್ ಆಗಬೇಕಾದ ವ್ಯಕ್ತಿ ರಿಟೈರ್ ಆದ ಮಾರನೇ ದಿನ ಕಳುಹಿಸಿದರು. ಏಕೆ ಹೀಗೆ ಮಾಡಬೇಕಿತ್ತು? ಅವನಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಹೀಗೆ ಮಾಡಿದರಾ? Why should they protect the culprit? Why should anybody protect the culprit? ಒಳ್ಳೆಯದನ್ನು ಮಾಡಿದವರಿಗೆ ನೀವು ಶಹಭಾಸ್‌ಗಿರಿ ಕೊಡಿ, ಅವರಿಗೆ ಶಹಭಾಸ್‌ಗಿರಿ ಕೊಟ್ಟು, ಗೌರವ ಕೊಟ್ಟು ಪ್ರಮೋಷನ್ ಕೂಡ ಕೊಡಿ. ಆದರೆ ತಪ್ಪನ್ನು ಮಾಡಿದವರಿಗೆ ಪ್ರಮೋಷನ್ ಕೂಡ ಆಗುತ್ತಿದೆ, ಮೇಲ್ದರ್ಜೆಗೂ ಕೂಡ ಆತನಿಗೆ ಬಡ್ತಿ ಕೊಡುತ್ತೀರಿ, ಕೋಟ್ಯಾಂತರ ರೂಪಾಯಿಗಳ ಹಣ ದುರುಪಯೋಗದ ಕೇಸ್‌ನಲ್ಲಿ ಸೆಕ್ರೆಟರಿಯೊಬ್ಬರು ಸಿಕ್ಕಿಬಿದ್ದರೂ ಕೂಡ ಅವರಿಗೆ ಪುನರ್ ನೇಮಕ ಮಾಡಿ ಪ್ರಮೋಷನ್

ಕೊಟ್ಟಿರುವ ಸರ್ಕಾರದ ನೀತಿ ಸರಿಯಲ್ಲ. This can be done provided you have got the will and not that it cannot be done. ಅದನ್ನು ತೋರಿಸುತ್ತೀರಾ? ಅದನ್ನು ತೋರಿಸುವುದಿಲ್ಲ. It has gone worse, from bad to worse ಇದು ಏತಕ್ಕಾಗಿ? ತಾಲ್ಲೂಕು ಆಡಳಿತ, ಜಿಲ್ಲಾ ಆಡಳಿತ ಬಹುತೇಕ ಇದಕ್ಕಿಂತ ಸ್ವಲ್ಪಮಟ್ಟಿಗೆ ಚೆನ್ನಾಗಿ ಇದೆ. ನೀವು ಏನಾದರೂ ಬುದ್ಧಿವಾದ ಹೇಳಿದರೆ ಕೇಳುತ್ತಾರೆ. ಸರಿಯಾಗಿ ಇದ್ದಾಗ ಮಾಡಪ್ಪ ಎಂದರೆ ಕೇಳುತ್ತಾರೆ, ಅಂದರೆ ಯಾವ ಶಾಸಕನೂ ಕೂಡ ಅನ್ಯಾಯ ಆಗಿದ್ದನ್ನು ಹೇಳಬಾರದು, ಅನ್ಯಾಯವನ್ನು ಯಾರೂ ಮಾಡಬಾರದು, that is the code for us and we should follow, ಅದನ್ನು ಮಾಡುವುದಕ್ಕೆ ಬರುತ್ತದೆ. Provided all of us are good, Ministers should know the responsibility to decide. ಆ ರೀತಿ ಮಾಡಬೇಕಾಗುತ್ತದೆ. ಆ ರೀತಿ ಮಾಡಿದರೆ no effort has been put by the Government, absolutely no effort, ನಾನು 2-3 ಫೈಲ್‌ಗಳ ಬಗ್ಗೆ ಹೇಳಿದೆ. ನಾನು ಅಲ್ಲಿಗೆ ಹೋಗದೇ ಇದ್ದಿದ್ದರೆ ಆ ಫೈಲ್ ಅಲ್ಲೇ ಕೊಳೆಯುತ್ತಾ ಬಿದ್ದಿರುತ್ತಿತ್ತು, ಅಲ್ಲಿಗೆ I move from Secretary to Deputy Secretary, from one table to other, ಅಷ್ಟು ಲೆಟರ್ ಬರೆದರೂ ಕೂಡ ಮೂವ್ ಆಗುತ್ತಿಲ್ಲ. ಅದು ಮೂವ್ ಆಗುವುದಿಲ್ಲ. ಇದು ಏನು ಸರ್ಕಾರವೇ. ನೀವು ಹೇಳಿ ಬೇಡಿಕೆಗಳಿಗೆ ನಾವು ಮಾನ್ಯತೆ ಕೊಡಬೇಕೇ? ಏತಕ್ಕೆ ಮಾನ್ಯತೆ ಕೊಡಬೇಕು? ಏತಕ್ಕಾಗಿ ಪಾಸ್ ಮಾಡಿ ಕೊಡಬೇಕು? Your recocrd is shaby? ಅಂತಾದ್ದಕ್ಕೆ ಮಾನ್ಯತೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಮಂತ್ರಿಗಳು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಚಾರಕ್ಕೆ ಅವರು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದಾರೆ. ನನಗೆ ಆ ಬಗ್ಗೆ ಅವರಿಂದ ಉತ್ತರವನ್ನು ಕೊಡಿಸಿ.

ಶ್ರೀ ಬಿ.ಎ. ಮೊಹಿದ್ದೀನ್ : ಮಾನ್ಯ ಅಧ್ಯಕ್ಷರೇ, ಬಿ.ಇಡಿ ಕೋರ್ಸ್‌ಗೆ ನಿಗದಿಪಡಿಸಿರುವ ಪ್ರವೇಶ ಪರೀಕ್ಷೆಗೆ ಕನ್ನಡ ಭಾಷೆಯನ್ನು ಸೇರಿಸದೆ ಇರುವಂತಹ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆ ಬಗ್ಗೆ ಒಂದು ಹೇಳಿಕೆಯನ್ನು ನೀಡಬಯಸುತ್ತೇನೆ. ನನ್ನ ಹೇಳಿಕೆ ಈ ರೀತಿ ಇದೆ. ಬಿ.ಇಡಿ ಮತ್ತು ಟಿ.ಸಿ.ಹೆಚ್ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಅತ್ಯಧಿಕ ಶುಲ್ಕವನ್ನು ಅಭ್ಯರ್ಥಿಗಳಿಂದ ಕಾಲೇಜುಗಳಲ್ಲಿ ಪಡೆಯುತ್ತಿರುವುದನ್ನು ಗಮನಿಸಿ ಸರ್ಕಾರವು ಇಂತಹ ಕೋರ್ಸುಗಳ ಪ್ರವೇಶವನ್ನು ನಿರ್ಬಂಧಿಸುವುದು ಉಚಿತವೆಂದು ನಾನು ಭಾವಿಸುತ್ತೇನೆ. ಅದನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಕರ್ನಾಟಕದಲ್ಲಿ ಟಿ.ಸಿ.ಹೆಚ್ ಮತ್ತು ಬಿ.ಇಡಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳನ್ನು ಪ್ರಪ್ರಥಮವಾಗಿ 1995-96ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಜಾರಿಗೆ ತರಲಾಗಿತ್ತು. ಅದನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿತ್ತು. ಹಾಗೂ ಅದನ್ನು ಪರಿಷ್ಕರಿಸಲಾಗಿತ್ತು. ಈ ಬಿ.ಇಡಿ ಕೋರ್ಸುಗಳ ಪ್ರವೇಶಕ್ಕೆ ರಾಜ್ಯದಲ್ಲಿರುವ ಆರು ವಿಶ್ವವಿದ್ಯಾನಿಲಯಗಳಿಂದ ಬಿ.ಎ, ಬಿ.ಎಸ್.ಸಿ, ಪದವೀಧರರು ಪ್ರವೇಶ ಪಡೆಯುತ್ತಿದ್ದು, ಅವರುಗಳು ಪಡೆದಿರುವ ಅರ್ಹತಾ ಅಂಕಗಳಲ್ಲಿ ವ್ಯತ್ಯಯ ಇರುವುದನ್ನು ಗಣನೆಗೆ ತೆಗೆದುಕೊಂಡು ಏಕಸ್ವಾಮ್ಯವನ್ನು ಸಾಧಿಸಲು ವೈದ್ಯಕೀಯ, ಇಂಜಿನಿಯರಿಂಗ್

ಮತ್ತು ದಂತ ಕೋರ್ಸುಗಳ ಪ್ರವೇಶಕ್ಕೆ ನಡೆಯುತ್ತಿರುವ ಸಾಮಾನ್ಯ ಪರೀಕ್ಷೆಯ ಮಾದರಿಯಲ್ಲೇ ಈ ಸಾಮಾನ್ಯ ಪರೀಕ್ಷೆಯನ್ನು ನಡೆಸಲು 1999ರ ಕರ್ನಾಟಕ ಟಿ.ಸಿ.ಹೆಚ್ ಮತ್ತು ಬಿ.ಇಡಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳನ್ನು ಜಾರಿಗೆ ತರಲಾಗಿದೆ. ಸದರಿ ನಿಯಮಾವಳಿಗಳ 3ನೇ ನಿಯಮದ ಅಡಿಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ವಿನ್ಯಾಸ ರೂಪಿಸಲಾಗಿದೆ. ಮೊದಲನೇ ಪತ್ರಿಕೆ ಕಡ್ಡಾಯವಾಗಿರುತ್ತದೆ. ದ್ವಿತೀಯ ಪತ್ರಿಕೆಯಲ್ಲಿ ವಿಜ್ಞಾನ ಪದವೀಧರರು ಎರಡು ಗುಂಪುಗಳ ಪೈಕಿ ಒಂದನ್ನು ಮಾತ್ರ ಆಯ್ಕೆ ಮಾಡಬೇಕಾಗಿದೆ. 'ಎ' ಗುಂಪಿನಲ್ಲಿ ಪಿ.ಸಿ.ಎಂ ಮತ್ತು 'ಬಿ' ಗುಂಪಿನಲ್ಲಿ ಸಿ.ಬಿ.ಜೆಡ್ ಇರುತ್ತದೆ. ಹಾಗೆ 'ಸಿ' ಗುಂಪಿನಲ್ಲಿ ಹೆಚ್.ಎಸ್.ಪಿ ಮತ್ತು 'ಡಿ' ಗುಂಪಿನಲ್ಲಿ ಹೆಚ್.ಇ.ಜಿ ಇರುತ್ತದೆ. ಈ ಗುಂಪುಗಳಲ್ಲಿ ಇರುವ ಪ್ರತಿಯೊಂದು ಐಚ್ಛಿಕ ವಿಷಯವೂ ಪ್ರೌಢಶಾಲೆಯ ವಿಷಯದ ಪಠ್ಯಕ್ರಮಕ್ಕೆ ಕೋಡ್ಸ್ ಸಬ್ಜೆಟ್‌ಗಳಾದ ಗಣಿತ, ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಕ್ಕೆ ಅನುಗುಣವಾಗಿರುತ್ತದೆ. ಇವುಗಳನ್ನು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಉತ್ತರಿಸಬಹುದಾಗಿದೆ. ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಇರುತ್ತದೆ. ಬೋಧನ ವಿಧಿಗೆ ಸಂಬಂಧಿಸಿದಂತೆ ಮೇಲಿನ ವಿಷಯಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಸೇರಿಸಿರುವುದರಿಂದ ಕನ್ನಡ ಹಾಗೂ ಮತ್ತಿತರ ಭಾಷೆಗಳನ್ನು ಅಭ್ಯರ್ಥಿಯು ಬಿ.ಎ., ಬಿಎಸ್,ಸಿ ಪದವಿಯಲ್ಲಿ ಕಡ್ಡಾಯವಾಗಿ ವ್ಯಾಸಂಗ ಮಾಡಿರುವುದರಿಂದ ಅಂತಹ ಭಾಷೆಗಳನ್ನು ಪ್ರಸ್ತುತ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಸೇರಿಸುವ ಅಗತ್ಯವಿಲ್ಲವೆಂದು ಸಮಿತಿ ನಿರ್ಧರಿಸಿರುತ್ತದೆ. ಒಂದು ವೇಳೆ ಕನ್ನಡ ಭಾಷೆಯನ್ನು ಸೇರಿಸಿದಲ್ಲಿ ಅದಕ್ಕೆ ಪೂರಕವಾದ ಭಾಷೆಗಳಾದ ಸಂಸ್ಕೃತ, ಹಿಂದಿ, ಉರ್ದು, ತೆಲುಗು ಮತ್ತು ತಮಿಳು ಸೇರಿಸುವ ಒತ್ತಾಯ ಉದ್ಭವಿಸಬಹುದೆಂದು ಭಾವಿಸಲಾಗಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ನಮ್ಮ ರಾಜ್ಯ ಭಾಷೆ ಕನ್ನಡ ಕಡ್ಡಾಯವಾಗಿ ಇರುವಾಗ ಕನ್ನಡಕ್ಕೆ ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಇಲ್ಲವೆಂದರೆ ಇದರ ಬಗ್ಗೆ ಬಹಳ ದೊಡ್ಡ ಹೋರಾಟ ಪ್ರಾರಂಭವಾಗುತ್ತದೆ. ಕನ್ನಡ ರಾಜ್ಯ ಭಾಷೆಯಾಗಿರುವಾಗ, ಅದಕ್ಕೆ ಆದ್ಯತೆ ಕೊಟ್ಟು ಆಡಳಿತ ಭಾಷೆ ಕನ್ನಡ ಇರುವಾಗ ಇದಕ್ಕೆ ತಾವು ಪ್ರೋತ್ಸಾಹ ಕೊಡಬೇಕೆಂದು ಆಗ್ರಹ ಮಾಡುತ್ತೇನೆ. ಇಲ್ಲದೇ ಇದ್ದರೆ ರಾಜ್ಯದಲ್ಲಿ ಹೋರಾಟ ಪ್ರಾರಂಭವಾಗುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎ. ಮೊಹಿದ್ದೀನ್ : ಖಂಡಿತವಾಗಿ ಕೂಡ ನಾನು ಈ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ. ಮತ್ತು ಕನ್ನಡಕ್ಕೆ ಈ ರಾಜ್ಯದಲ್ಲಿ ಪ್ರಾಮುಖ್ಯತೆ ಕೊಡಬೇಕೆನ್ನುವುದೇ ಈ ಸರ್ಕಾರದ ಇಚ್ಛೆ. ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಏನು ಮಾಡಬೇಕು ಅದನ್ನು ಮಾಡುತ್ತೇವೆ. ಇದನ್ನು ಪುನರ್ ಪರಿಶೀಲನೆ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಈ ವಿಚಾರದಲ್ಲಿ ಹೆಚ್ಚಿನ ಸಹಾನುಭೂತಿ ಬೇಡ, ಈಗಾಗಲೇ ಆಗಸ್ಟ್ ತಿಂಗಳಿನಿಂದ ಪರೀಕ್ಷೆಗಳು ಪ್ರಾರಂಭವಾಗುತ್ತಿವೆ.